ಭಾನುವಾರ, ಡಿಸೆಂಬರ್ 28, 2025 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಚಾರಣೆಗೆ ಹಾಜರು

ಮಹಿಳೆಯರ ಉಡುಪಿನ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದ ತೆಲುಗು ನಟ ಶಿವಾಜಿ ಅವರು ತೆಲಂಗಾಣ ಮಹಿಳಾ ಆಯೋಗದ ಮುಂದೆ ಶನಿವಾರ ವಿಚಾರಣೆಗೆ ಹಾಜರಾದರು



ತಿಲೋತ್ತಮಾಗೆ ತ್ರಿವಳಿ ಚಿನ್ನ

ಬೆಂಗಳೂರಿನ ಶೂಟರ್ ತಿಲೋತ್ತಮಾ ಸೇನ್ ಭೋಪಾಲ್‌ನಲ್ಲಿ ನಡೆದ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದರು



ಭೀಮ Pure Since 1925

100

ಇಯರ್ಸ್ ಆಫ್ ಭೀಮ

ಟುಗೆದರ್ ಫ್ಯೂರೆವರ್

‘ಟುಗೆದರ್ ಫ್ಯೂರೆವರ್’ ಎಂಬುದು ಭೀಮ ತನ್ನ ಗೌರವಾನ್ವಿತ ಗ್ರಾಹಕರು ಮತ್ತು ಸಹಯೋಗಿಗಳೊಂದಿಗೆ ಕಳೆದ 100 ವರ್ಷಗಳ ಪಯಣದಲ್ಲಿ ಹೇಗೆ ಜೊತೆಯಾಗಿ ಸಾಗಿದೆಯೆಂಬ ಕಥೆಯಾಗಿದೆ. ಈ "ಜೊತೆಗೂಡುವಿಕೆ"ಯೇ ಭೀಮದ ಶಾಶ್ವತ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗುವಂತೆ ಮಾಡಿದೆ. 1925 ರಿಂದಲೂ ಭೀಮದ ಮೂಲ ಮೌಲ್ಯವಾದ “ಶುದ್ಧತೆ” ಈ ಬಾಂಧವ್ಯವನ್ನು ಮತ್ತಷ್ಟು ಬಲವಾಗಿ ಅಳವಡಿಸಿಕೊಂಡಿದೆ, ನೂರು ವರ್ಷಗಳಿಂದ, “ಭೀಮ” ಕೇವಲ ಆಭರಣದ ವ್ಯಾಪಾರವಷ್ಟೇ ಅಲ್ಲ, ಅದು ಅನೇಕ ಕುಟುಂಬಗಳ ಸಂಯುಕ್ತ ಕಥೆಗಳ ಅವಿಭಾಜ್ಯ ಭಾಗವಾಗಿದೆ. ಹೊಳೆಯುವ ವಧುವಿನ ಕಣ್ಣಿನಿಂದ ಹಿಡಿದು ನವಜಾತ ಶಿಶುವಿನ ಮೊದಲ ಆಭರಣದ ಅಲಂಕಾರದವರೆಗೂ, ಭೀಮದ ಕೃತಿಗಳು ಪೀಳಿಗೆಗಳ ಸಂಭ್ರಮ, ಪ್ರೀತಿ ಮತ್ತು ಪರಂಪರೆಯ ಕ್ಷಣಗಳಿಗೆ ಸಾಕ್ಷಿಯಾಗಿವೆ. 1925 ರಿಂದ ವಿಶ್ವಾಸ ಮತ್ತು ಶುದ್ಧತೆಯ ಆಧಾರದ ಮೇಲೆ ನಿರ್ಮಿತವಾದ ಈ ಶಾಶ್ವತ ಬಾಂಧವ್ಯವು ಭೀಮ ವನ್ನು ಕೇವಲ ಒಂದು ಹೆಸರು ಅಲ್ಲ, ಪ್ರತಿಯೊಂದು ಕುಟುಂಬದ ಅತ್ಯಂತ ಅಮೂಲ್ಯ ಕ್ಷಣಗಳ ಭಾಗವನ್ನಾಗಿ ಮಾಡಿದೆ.

ತನ್ನ 100ನೇ ವರ್ಷದಲ್ಲಿ, ಭೀಮ ಈ ‘ಜೊತೆಗೂಡುವಿಕೆ’ ಮತ್ತು ‘ಶುದ್ಧತೆ’ ತತ್ವದ ಮೇಲೆ ಶಾಶ್ವತವಾಗಿಯೂ ತನ್ನ ಬದ್ಧತೆಯನ್ನು ಪುನರುಚ್ಚರಿಸುತ್ತಿದೆ - ಎಂದೆಂದಿಗೂ ಜೊತೆಯಾಗಿರಲು ಮತ್ತು ಯಾವಾಗಲೂ ಶುದ್ಧವಾಗಿರಲು ಒಂದು ಬದ್ಧತೆ. ಹಾಗಾಗಿ ನಾವು 'ಟುಗೆದರ್ ಫ್ಯೂರೆವರ್ - ನಿಮ್ಮೊಂದಿಗೆ.

100 ವರ್ಷಗಳ ಅದ್ಭುತ
ಭೀಮ ಚಿತ್ರದ ವೀಕ್ಷಣೆಗೆ ಸ್ಕ್ಯಾನ್ ಮಾಡಿ



BHIMA

FORMERLY BHIMA

ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ | bhimagold.com

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಮಿರ್ಚಿ ಗರುಡ
ಹಾವೇರಿ ಹುಕ್ಕೇರಿಮಠದ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ವಸ್ತುಪ್ರದರ್ಶನದಲ್ಲಿ ಗಮನಸೆಳೆದ ಮೆಣಸಿನಕಾಯಿ ಗರುಡ



ಅಸ್ಸಾಂ: 10.56 ಲಕ್ಷ ಮತದಾರರಿಗೆ ಕೊಕ್ 9
ಸಂಕ್ರಾಂತಿ ಬಳಿಕ ಸಂಪುಟ ಪುನರ್‌ರಚನೆ? 6

ಗಾನವಿ ಪ್ರಕರಣ ಪತಿಯೂ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಚನ್ನಸಂದ್ರ ನಿವಾಸಿ, ನವ ವಿವಾಹಿತೆ ಗಾನವಿ (24) ಅವರ ಆತ್ಮಹತ್ಯೆ ಪ್ರಕರಣವು ತಿರುವು ಪಡೆದಿದ್ದು, ಅವರ ಪತಿ ಸೂರಜ್ ಸಹ ಮಹಾರಾಷ್ಟ್ರದ ನಾಗ್ಪುರದ ವಿಲ್ಲಾದಲ್ಲಿ ಶುಕ್ರವಾರ ರಾತ್ರಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಸೂರಜ್

ಸೂರಜ್ ಅವರ ತಾಯಿ ಜಯಂತಿ ಸಹ ಆತ್ಮಹತ್ಯೆಗೆ ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಅವರ ಸ್ಥಿತಿಯೂ ಗಂಭೀರವಾಗಿದೆ ಎಂದು ಮೂಲಗಳು ಹೇಳಿವೆ. 9

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆನೆ ಕಾರಿಡಾರ್ 'ಕಣ್ಮರೆ'

ಅಭಿವೃದ್ಧಿ ಒತ್ತಡಕ್ಕೆ ಗಜ ಪಥಗಳು ಶಿಥಿಲ ಹೆಚ್ಚಿದ ಮಾನವ–ಕಾಡಾನೆ ಸಂಘರ್ಷ

● ಸೂರ್ಯನಾರಾಯಣ ವಿ.

ಬೆಂಗಳೂರು: ಡಿಸೆಂಬರ್ 20 ಶನಿವಾರ, ನಸುಕು 2.17ರ ಹೊತ್ತು. ಅಸ್ಸಾಂನ ಹೋಜಾಯಿ ಜಿಲ್ಲೆಯಲ್ಲಿ ಮಿಜೋರಾಂನ ಸಾಯಿರಂಗ್ ಮತ್ತು ನವದೆಹಲಿ ನಡುವೆ ಸಂಚರಿಸುವ ರಾಜಧಾನಿ ಎಕ್ಸ್‌ಪ್ರೆಸ್ ರೈಲು ವೇಗವಾಗಿ ಸಂಚರಿಸುತ್ತಿತ್ತು. ಅಂದಾಜು 100 ಸಂಖ್ಯೆಯಲ್ಲಿದ್ದ ಆನೆಗಳ ಹಿಂಡೊಂದು ಮಾರ್ಗದ ಇನ್ನೊಂದು ಬದಿಗೆ ಇದ್ದ ಭತ್ತದ ಗದ್ದೆಯತ್ತ ನುಗ್ಗಲು ಹಳಿ ದಾಟುತ್ತಿತ್ತು. ದಟ್ಟ ಮಂಜು ಆವರಿಸಿದ್ದರಿಂದ ಲೋಕೋ ಪೈಲಟ್‌ಗೆ ದೂರದಿಂದ ಏನೂ ಕಾಣಿಸುತ್ತಿರಲಿಲ್ಲ. ರೈಲು ಹತ್ತಿರ ಹತ್ತಿರ ಬರುವಾಗ ಆನೆಗಳು ಹಳಿ ದಾಟುಸುತ್ತಿರುವುದು ಕಂಡಿತು. ತಕ್ಷಣವೇ ತುರ್ತು ಬ್ರೇಕ್ ಹಾಕಿದರೂ, ಮರಿಗಳ ಸಹಿತ ಏಳು ಆನೆಗಳು ಸ್ಥಳದಲ್ಲೇ ಮೃತಪಟ್ಟರೆ, ಇನ್ನೊಂದು ಆನೆ ನಂತರ ಕೊನೆಯುಸಿರೆಳೆಯಿತು.


ಅಪಘಾತ ನಡೆದ ಸ್ಥಳ ಅರಣ್ಯ ಪ್ರದೇಶ ದಲ್ಲಿದೆ. ರಾಜಧಾನಿ ಗುವಾಹಟಿಯಿಂದ 125 ಕಿ.ಮೀ ದೂರದಲ್ಲಿದೆ. ದೇಶದಲ್ಲೇ ಹೆಚ್ಚು ಆನೆಗಳನ್ನು ಹೊಂದಿರುವ ಎರಡನೇ ರಾಜ್ಯ ಅಸ್ಸಾಂ. ಹಾಗಾಗಿ, ಅಲ್ಲಿನ ಅರಣ್ಯ ಹಾಗೂ ಅದಕ್ಕೆ ಹೊಂದಿಕೊಂಡ ಪ್ರದೇಶದಲ್ಲಿ ಆನೆಗಳ ಓಡಾಟ ಸಾಮಾನ್ಯ. ಅಪಘಾತ ನಡೆದ ಸ್ಥಳವು ಆನೆಯ ಆವಾಸ ಸ್ಥಾನವಾಗಿ ಗುರುತಿಸಿಕೊಂಡಿದೆ. ಈ ಪ್ರದೇಶ ಘೋಷಿತ ಆನೆ ಕಾರಿಡಾರ್ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಅದಕ್ಕೆ ಹತ್ತಿರದಲ್ಲೇ ಇದೆ. 8

ಒಳನೋಟ

ಅಂಕಿ ಅಂಶಗಳು

22,446
ದೇಶದಲ್ಲಿರುವ ಆನೆಗಳ ಸಂಖ್ಯೆ

6,013
ರಾಜ್ಯದಲ್ಲಿರುವ ಗಜಗಳು



150
ದೇಶದಲ್ಲಿರುವ ಆನೆ ಕಾರಿಡಾರ್‌ಗಳು

9
ರಾಜ್ಯದಲ್ಲಿರುವ ಆನೆ ಕಾರಿಡಾರ್‌ಗಳು


ಬಂಡೀಪುರ ಹುಲಿಸಂರಕ್ಷಿತ ಪ್ರದೇಶದ ಕುಂದುಕೆರೆ ವಲಯದಲ್ಲಿ ಕಣಿಯನಪುರ ಆನೆ ಕಾರಿಡಾರ್‌ನಲ್ಲಿ ಆನೆಗಳ ಓಡಾಟದ ಸಂಗ್ರಹ ಚಿತ್ರ

ಮೂರು ತಿಂಗಳಲ್ಲಿ ವರದಿ: ಖಂಡ್ರೆ

'ರಾಜ್ಯದಲ್ಲಿರುವ ಕಾಡಾನೆ ಮಾನವ ಸಂಘರ್ಷ ತಗ್ಗಿಸುವ ನಿಟ್ಟಿನಲ್ಲಿ ಇಲಾಖೆ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಲೇ ಇದೆ. ಇದರಲ್ಲಿ ಆನೆ ಕಾರಿಡಾರ್‌ಗಳ ಸಂರಕ್ಷಣೆಯೂ ಒಂದು. ಆದರೆ ಒತ್ತುವರಿ, ಭೂಪ್ರದೇಶಗಳ ಅಡ್ಡಿ ಸೇರಿ ವಿವಿಧ ಕಾರಣಗಳಿಂದ ಕಾರಿಡಾರ್‌ಗಳು ಮುಕ್ತವಾಗಿಲ್ಲ. ಇವುಗಳನ್ನು ತೆರವುಗೊಳಿಸಲು ವೈಜ್ಞಾನಿಕ ಹಾಗೂ ತಾಂತ್ರಿಕವಾಗಿ ಹೇಗೆ ಯೋಜನೆ ರೂಪಿಸಬಹುದು ಎಂಬ ಬಗ್ಗೆ ಇಲಾಖೆಯು ಅಧ್ಯಯನ ನಡೆಸಲು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ತಜ್ಞರೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ' ಎಂದು ಹೇಳುತ್ತಾರೆ ಅರಣ್ಯ ಸಚಿವ ಈಶ್ವರ ಖಂಡ್ರೆ.

'ಆನೆ ತಜ್ಞರಾಗಿರುವ ಆರ್.ಸುಕುಮಾರ್ ನೇತೃತ್ವದ ತಜ್ಞರ ತಂಡವು ವರದಿ ನೀಡಲಿದೆ. ಪರಿಸರ ಸಂಶೋಧನೆ ಮತ್ತು ಕ್ಷೇತ್ರ ಅನುಷ್ಠಾನವನ್ನು ಸಮನ್ವಯಗೊಳಿಸುವ ಮೂಲಕ, ಆನೆಪಥ, ಆವಾಸಸ್ಥಾನಗಳ ಸಂರಕ್ಷಣೆಗೆ ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಏಷಿಯನ್ ಆನೆಗಳ ಭೂಪ್ರದೇಶ ನಿರ್ವಹಣೆಗಾಗಿ ಐದು ವರ್ಷಗಳ ಸಹಯೋಗದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಮಿತಿ ಮೂರು ತಿಂಗಳಲ್ಲಿ ವರದಿ ನೀಡಲಿದ್ದು, ವರದಿ ಆಧರಿಸಿ ಕಾರ್ಯ ಯೋಜನೆಯನ್ನು ಇಲಾಖೆ ರೂಪಿಸಲಿದೆ' ಎಂಬುದು ಅವರ ಮಾತು.

ಜ. 5ರಿಂದ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಕಾಂಗ್ರೆಸ್ ನಿರ್ಧಾರ

'ನರೇಗಾ'ಕ್ಕಾಗಿ ಹೋರಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಯುಪಿಎ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಮಹತ್ವಾಕಾಂಕ್ಷಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾನೂನನ್ನು ರಕ್ಷಿಸುವುದಾಗಿ ಪ್ರತಿಜ್ಞೆ ಮಾಡಿದ ಕಾಂಗ್ರೆಸ್, 'ನರೇಗಾ ಬಚಾವೊ ಅಭಿಯಾನ'ವನ್ನು ಜನವರಿ 5ರಿಂದ ರಾಷ್ಟ್ರವ್ಯಾಪಿ ನಡೆಸುವುದಾಗಿ ಪ್ರಕಟಿಸಿದೆ.

ಕೇಂದ್ರ ಸರ್ಕಾರ ತಂದಿರುವ ಹೊಸ ಕಾನೂನು, ಬಡವರಿಂದ ಹಣವನ್ನು ಕಿತ್ತುಕೊಂಡು ಅದಾನಿಯಂತಹ ಕೈಗಾರಿಕೋದ್ಯಮಿಗಳಿಗೆ ಹಸ್ತಾಂತರಿಸುವ ಗುರಿ ಹೊಂದಿರುವುದರಿಂದ ಬಿಜೆಪಿಯು ಜನರ ಕೋಪವನ್ನು ಎದುರಿಸಬೇಕಾಗುತ್ತದೆ ಎಂದು ಕಾಂಗ್ರೆಸ್ ಎಚ್ಚರಿಸಿದೆ. ನರೇಂದ್ರ ಮೋದಿ ಸರ್ಕಾರವು ತನ್ನ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದ ಮಾದರಿಯಲ್ಲೇ ಈ ಪ್ರತಿಭಟನೆ ನಡೆಯಲಿದೆ ಎಂದು ಪಕ್ಷ ಹೇಳಿದೆ.

ರಾಜ್ಯ, ಜಿಲ್ಲಾ, ಮಂಡಲ ಮತ್ತು ಗ್ರಾಮ ಮಟ್ಟದಲ್ಲಿ ಮೆರವಣಿಗೆಗಳು ಮತ್ತು ಇತರ ಕಾರ್ಯಕ್ರಮಗಳ ಮೂಲಕ ಪ್ರತಿಭಟನೆಗಳನ್ನು ನಡೆಸುವ ನಿರ್ಧಾರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ತೆಗೆದುಕೊಳ್ಳಲಾಯಿತು. ಈ ಸಭೆಯಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದ್ದರು. 10

ರಾಜ್ಯಕ್ಕೆ ₹20,000 ಕೋಟಿ ಹೊರೆ

ಬೆಂಗಳೂರು: ನರೇಗಾ ಯೋಜನೆಯ ಬದಲಾವಣೆ ಮೂಲಕ ಕೇಂದ್ರ ಸರ್ಕಾರ ರಾಜ್ಯಗಳ ಮೇಲೆ ಶೇ 40ರಷ್ಟು ಆರ್ಥಿಕ ಹೊರೆ ಹಾಕಿದೆ. ಇದರಿಂದ ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕ ₹20,000 ಕೋಟಿ ವೆಚ್ಚ ಮಾಡಬೇಕಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.


ಪ್ರಿಯಾಂಕ್ ಖರ್ಗೆ


ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಯೋಜನೆಯಲ್ಲಿ ಇದುವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿಗಳನ್ನು ನಿರ್ಮಾಣ ಮಾಡಬಹುದಾಗಿತ್ತು. ಗ್ರಾಮಸ್ಥರಿಗೆ ಹಾಗೂ ಪಂಚಾಯಿತಿಗಳಿಗೆ ಏನು ಬೇಕು ಎಂದು ಗ್ರಾಮಸಭೆಗಳಲ್ಲಿ ನಿರ್ಧಾರ ಮಾಡಬಹುದಿತ್ತು. ಕಳೆದ ಎರಡೂವರೆ ವರ್ಷದಲ್ಲಿ 17 ಲಕ್ಷ ಹಳ್ಳಿಗಳಲ್ಲಿ ಆಸ್ತಿ ಸೃಜನೆ ಮಾಡಲಾಗಿದೆ. 80 ಲಕ್ಷ ಕುಟುಂಬಗಳಿಗೆ ಜೀವನೋಪಾಯ ನೀಡಲಾಗಿದೆ. ಅದಕ್ಕಾಗಿ ₹21,144 ಕೋಟಿ ವೆಚ್ಚ ಮಾಡಿದ್ದೇವೆ. ಕೇಂದ್ರದ ಹೊಸ ಕಾಯ್ದೆಯಿಂದಾಗಿ ರಾಜ್ಯಗಳ ಮೇಲೆ ಭಾರಿ ಆರ್ಥಿಕ ಒತ್ತಡ ಬೀಳಲಿದೆ. ನಿರುದ್ಯೋಗ ಸಮಸ್ಯೆಯೂ ಹೆಚ್ಚಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

'ಎರಡು ದಶಕಗಳಿಂದ ಗ್ರಾಮಿಣ ಜನರಿಗೆ ಉದ್ಯೋಗದ ಗ್ಯಾರಂಟಿ ನೀಡಿದ್ದ ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ಕಿತ್ತುಕೊಂಡಿದೆ. ಆ ಮೂಲಕ ಜೀವನೋಪಾಯದ ಹಕ್ಕು, ಪಂಚಾಯಿತಿಗಳ ಹಕ್ಕು ಕಸಿದುಕೊಂಡಿದೆ' ಎಂದರು. 10

'ಸಂಘ'ಕ್ಕೆ ದಿಗ್ವಿಜಯ್ ಶ್ಲಾಘನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನೆಲದ ಮೇಲೆ ಕುಳಿತುಕೊಳ್ಳುವ ತಳಮಟ್ಟದ ಕಾರ್ಯಕರ್ತರು ಸಂಘ ಪರಿವಾರ ಮತ್ತು ಬಿಜೆಪಿಯ ರಾಜಕೀಯ ಪರಿಸರದಲ್ಲಿ ಹೇಗೆ ಬೆಳೆದು ಮುಖ್ಯಮಂತ್ರಿ ಮತ್ತು ಪ್ರಧಾನಿ ಆಗಬಹುದು ಎಂಬುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರೇ ನಿದರ್ಶನ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ದಿಗ್ವಿಜಯ್ ಸಿಂಗ್ ಶ್ಲಾಘಿಸಿದ್ದಾರೆ.


ದಿಗ್ವಿಜಯ್ ಸಿಂಗ್

ಇದಕ್ಕೆ ಪೂರಕವಾಗಿ ಅವರು, 1990ರ ದಶಕದಲ್ಲಿ ಗುಜರಾತಿನ ಕಾರ್ಯಕ್ರಮವೊಂದರಲ್ಲಿ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಅವರ ಮುಂದೆ ನೆಲದ ಮೇಲೆ ಕುಳಿತಿದ್ದ ನರೇಂದ್ರ ಮೋದಿ ಅವರ ಕಪ್ಪು ಬಿಳುಪಿನ ಫೋಟೊವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಆಂತರಿಕವಾಗಿ ಸುಧಾರಣೆಗಳ ಅಗತ್ಯವಿದೆ ಎಂದು ಪ್ರತಿಪಾದಿಸಿ ದಿಗ್ವಿಜಯ್ ಸಿಂಗ್ ಅವರು ವಾರದ ಹಿಂದೆಯಷ್ಟೇ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದರು. ಅದರ ಬೆನ್ನಲ್ಲೇ ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ಹೊಗಳಿ ಅವರು ಮಾಡಿರುವ ಪೋಸ್ಟ್ ವಿವಾದ ಹುಟ್ಟುಹಾಕಿದೆ.

'ಇದು ಮನಮುಟ್ಟುವ ಚಿತ್ರವಾಗಿದ್ದು, ಆರ್‌ಎಸ್‌ಎಸ್‌ನ ತಳಮಟ್ಟದ ಸ್ವಯಂ ಸೇವಕರು ಮತ್ತು ಜನಸಂಘದ ಕಾರ್ಯಕರ್ತರು ತಮ್ಮ ನಾಯಕರ ಪಾದಗಳ ಬಳಿ, ನೆಲದ ಮೇಲೆ ಕುಳಿತುಕೊಂಡು ಪ್ರೀತಿ, ಗೌರವ ವ್ಯಕ್ತಪಡಿಸುವುದನ್ನು ತೋರಿಸುತ್ತದೆ. ನಂತರ ಅವರು ಶ್ರಮದಿಂದ ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿಯೂ ಬೆಳೆಯುತ್ತಾರೆ ಎಂಬುದನ್ನು ಈ ಫೋಟೊ ಬಿಂಬಿಸುತ್ತದೆ. ಇದು ಸಂಘಟನೆಯ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ, ಜೈ ಸಿಯಾ ರಾಮ್' ಎಂದು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಸಿಂಗ್ ಹೇಳಿದ್ದಾರೆ.

ಸಿಂಗ್ ಅವರ ಈ ಪೋಸ್ಟ್ ವಿವಾದಕ್ಕೆ ಕಾರಣವಾದ ಬೆನ್ನಲ್ಲೇ ಸ್ಪಷ್ಟೀಕರಣ ನೀಡಿರುವ ಅವರು, 'ನಾನು ಸಂಘಟನೆಯನ್ನಷ್ಟೇ ಹೊಗಳಿದ್ದೇನೆ. ಆದರೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ವಿರೋಧಿಸುವುದನ್ನು ಮುಂದುವರಿಸುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. 10

ಗೋಮಾಂಸ ಸಾಗಾಟ ಆರೋಪ: ಹಲ್ಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ತಾಲ್ಲೂಕಿನ ಮಳಲಿ ನಾರ್ಲಪದವು ಬಳಿ ಮಗಳ (11) ಜೊತೆ ಬೈಕಿನಲ್ಲಿ ತೆರಳುತ್ತಿದ್ದ ವ್ಯಕ್ತಿಯನ್ನು ಟಾಟಾ ಸುಮೊ ವಾಹನದಲ್ಲಿ ಬಂದ ಯುವಕರಿಬ್ಬರು ಅಡ್ಡಗಟ್ಟಿ ಹಲ್ಲೆ ನಡೆಸಿದ್ದು, ಬಜಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆ ಬೈಕಿನಲ್ಲಿ ಗೋಮಾಂಸ ಪತ್ತೆಯಾಗಿದ್ದು, ಈ ಬಗ್ಗೆಯೂ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಮೂಲರಪಟ್ಣದ ಅಬ್ದುಲ್ ಸತ್ತಾರ್ ಹಲ್ಲೆಗೆ ಒಳಗಾದವರು. ಎಡಪದವಿನ ಸುಮಿತ್ ಭಂಡಾರಿ (21), ರಜತ್ ನಾಯ್ಕ್ (30) ಹಲ್ಲೆ ನಡೆಸಿದ ಆರೋಪಿಗಳು. ಸುಮಾರು 19 ಕೆ.ಜಿ. ಗೋಮಾಂಸವನ್ನು ಅಧಿಕೃತ ದಾಖಲೆಗಳಿಲ್ಲದೆಯೇ ಬೈಕಿನಲ್ಲಿ ಸಾಗಿಸಿದ್ದಕ್ಕೆ ಆರೋಪಿ ಅಬ್ದುಲ್ ಸತ್ತಾರ್ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದಾರೆ.

ಘಟನೆ ವೇಳೆ ಬೈಕ್ ರಸ್ತೆಗೆ ಬಿದ್ದಿದ್ದು, ಬಿಸಿಯಾಗಿದ್ದ ಸೈಲೆನ್ಸರ್ ತಾಗಿ ಬಾಲಕಿಗೆ ಕಾಲಿನಲ್ಲಿ ಸುಟ್ಟ ಗಾಯಗಳಾಗಿವೆ. ಘಟನೆ ಬಳಿಕ ಅಬ್ದುಲ್ ಸತ್ತಾರ್ ಪರಾರಿಯಾಗಿದ್ದಾರೆ. ಬಾಲಕಿಯನ್ನು ಸ್ಥಳೀಯರು ಆಸ್ಪತ್ರೆಗೆ ಸೇರಿಸಿದ್ದರು.

'ಆರೋಪಿಗಳಾದ ಸುಮಿತ್ ಭಂಡಾರಿ ಹಾಗೂ ರಜತ್ ನಾಯ್ಕ್‌ನನ್ನು ಠಾಣೆಗೆ ಕರೆಸಿ ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗಿದೆ. ಅಬ್ದುಲ್ ಸತ್ತಾರ್ ಗೋಮಾಂಸ ಸರಬರಾಜು ಮಾಡುತ್ತಿದ್ದ ಮಾಹಿತಿ ಇದೆ. ಆತ ಸಿಕ್ಕಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಮತ್ತೊಬ್ಬ ಯುವಕನ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡು, 'ಆತನೂ ಹಲ್ಲೆ ನಡೆಸಿದ್ದ' ಎಂದು ಸುದ್ದಿ ಹಬ್ಬಿಸಲಾಗಿದೆ. ಈ ಪ್ರಕರಣದಲ್ಲಿ ಆ ಯುವಕನ ಪಾತ್ರವಿರುವುದು ಖಚಿತವಾಗಿಲ್ಲ. ಆತನ ಪಾತ್ರ ಇಲ್ಲದಿದ್ದರೆ, ಈ ಬಗ್ಗೆ ಸುದ್ದಿ ಹಬ್ಬಿಸಿದವರ ವಿರುದ್ಧವೂ ಕ್ರಮಕೈಗೊಳ್ಳಲಿದ್ದೇವೆ' ಎಂದು ಕಮಿಷನರ್ ಸ್ಪಷ್ಟಪಡಿಸಿದ್ದಾರೆ.

ಈ ಘಟನೆ ನಡೆದ ಸ್ಥಳದಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಮಂಜು ಕವಿದ ವಾತಾವರಣ ಇರಲಿದೆ

ಕಾವೇರಿ 5ನೇ ಹಂತ: ಶೇ 40ರಷ್ಟೂ ಬಳಕೆ ಇಲ್ಲ

ನೀರು ಸರಬರಾಜು ಸಂಪರ್ಕಕ್ಕೆ ಹಲವು ಅಡ್ಡಿ
ಮಾಹಿತಿ ಕೊರತೆ, ಮಧ್ಯವರ್ತಿಗಳ ಹಾವಳಿ

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಸಂಪೂರ್ಣ ಕಾವೇರಿ ನೀರು ಒದಗಿಸಲು ಜಲಮಂಡಳಿ ಆರಂಭಿಸಿರುವ ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆ ಜಾರಿಗೊಂಡು ಒಂದು ವರ್ಷವಾದರೂ ಶೇ 40ರಷ್ಟು ನೀರನ್ನು ಜನ ಬಳಕೆ ಮಾಡಿಕೊಂಡಿಲ್ಲ.

ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಕುಡಿಯುವ ನೀರು ಒದಗಿಸಲು, ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯಿಂದ(ಜೈಕಾ) ₹4,300 ಕೋಟಿ ಸಾಲ ಪಡೆದು ಈ ಯೋಜನೆ ಜಾರಿಗೊಳಿಸಿ 14 ತಿಂಗಳು ಕಳೆದಿವೆ.

ಯೋಜನೆ ಸಂಪೂರ್ಣ ಜಾರಿಗೆ 2028ರವರೆಗೂ ಅವಕಾಶವಿದೆ. ಅಷ್ಟರೊಳಗೆ ಸಂಪರ್ಕ ಪ್ರಮಾಣ ಪೂರ್ಣಗೊಳಿಸುವ ಗುರಿಯನ್ನು ಜಲಮಂಡಳಿ ಹೊಂದಿದ್ದರೂ, ಈವರೆಗೂ ನಿರೀಕ್ಷಿತ ಮಟ್ಟದಲ್ಲಿ ಸಂಪರ್ಕ ಕಲ್ಪಿಸಲು ಆಗಿಲ್ಲ. ಇದರಿಂದ ನೀರಿನ ಲಭ್ಯತೆಗೆ ಹೋಲಿಸಿದರೆ ಬಳಕೆ ಪ್ರಮಾಣ ಕಡಿಮೆಯಾಗಿದೆ.

ದುಬಾರಿ ಸಂಪರ್ಕ ಶುಲ್ಕ, ಅಗತ್ಯ ಮಾಹಿತಿ ಅಲಭ್ಯ, ಮಧ್ಯವರ್ತಿಗಳ ಹಾವಳಿಯ ಆರೋಪಗಳಿಂದ ಹೆಚ್ಚಿನ ಜನ, ಅಧಿಕೃತವಾಗಿ ನೀರಿನ ಸಂಪರ್ಕ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ.

ಪೈಪ್‌ಲೈನ್ ಬಹುತೇಕ ಪೂರ್ಣ: ನಗರದಾದ್ಯಂತ ಸ್ಟೀಲ್ ಟ್ರಂಕ್ ರೂಪಿಸಿ ಮುಖ್ಯ ಪೈಪ್‌ಲೈನ್ ಅಳವಡಿಸಲಾಗಿದೆ. ಗೊಟ್ಟಿಗೆರೆ, ದೊಡ್ಡಕನಹಳ್ಳಿ, ಲಿಂಗಧೀರನಹಳ್ಳಿ, ಎಸ್‌ಎಂವಿ 6ನೇ ಬ್ಲಾಕ್‌ಗಳಲ್ಲಿ ಸಂಗ್ರಹಗಾರಗಳನ್ನೂ ನಿರ್ಮಿಸಲಾಗಿದೆ. ಇಲ್ಲಿಂದ ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ, ಯಶವಂತಪುರ, ಟಿ. ದಾಸರಹಳ್ಳಿ, ಬ್ಯಾಟರಾಯನಪುರ, ಮಹದೇವಪುರ, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರಗಳ ಪ್ರದೇಶಗಳಿಗೆ ನೀರು ಹರಿಸಲಾಗುತ್ತಿದೆ. ಇದರಿಂದ ಪ್ರಮುಖ ಬಡಾವಣೆಗಳು ಹಾಗೂ 100 ಹಳ್ಳಿಗಳಿಗೆ ನೀರಿನ ಸಂಪರ್ಕ ಜಾಲ ಸೃಷ್ಟಿಸಲಾಗಿದೆ. ಆದರೆ ಕಾಡುಗೋಡಿ ಮತ್ತು ಚೊಕ್ಕನಹಳ್ಳಿ ಸಂಗ್ರಹಾಗಾರ ನಿರ್ಮಾಣ ಪ್ರಕ್ರಿಯೆ ಭೂವ್ಯಾಜ್ಯದಿಂದ ವಿಳಂಬವಾಗಿ ಈ ಭಾಗದ 10 ಹಳ್ಳಿಗಳಿಗೆ ಸಂಪರ್ಕ ಇನ್ನೂ ಸಾಧ್ಯವಾಗಿಲ್ಲ.

'ಹೊಸದಾಗಿ ಜಲ ಸಂಪರ್ಕ ಪಡೆಯುವವರ ಪ್ರಮಾಣವೇ ಕೊಂಚ ಕಡಿಮೆಯಿದೆ. ನೀರು ಲಭ್ಯ ಇರುವಷ್ಟು ಬಳಕೆಯಾಗುತ್ತಿಲ್ಲ. ಸಂಪರ್ಕ, ಅಕ್ರಮವಿದ್ದರೆ ಸಕ್ರಮ ಮಾಡಿಕೊಳ್ಳಲು ಜಲಮಂಡಳಿ ಜಾಗೃತಿ ಮೂಡಿಸುತ್ತಿದೆ. 2026ರಲ್ಲಿ ಸಂಪರ್ಕ ಪ್ರಮಾಣ, ನೀರಿನ ಬಳಕೆ ಪ್ರಮಾಣ ಹೆಚ್ಚಬಹುದು' ಎಂದು ಪ್ರಧಾನ ಎಂಜಿನಿಯರ್ ಬಿ.ಎಸ್. ದಲಾಯತ್ ತಿಳಿಸಿದರು.

ಸಮಸ್ಯೆ ಸ್ವರೂಪ: 3 ತಿಂಗಳ ಹಿಂದೆಯೇ ಮನೆ ಕಟ್ಟಿ ಮುಗಿಸಿರುವ ರಮೇಶ್, 'ಆನ್‌ಲೈನ್‌ನಲ್ಲಿ ಕಾವೇರಿ ನೀರಿನ ಸಂಪರ್ಕ ಪಡೆಯಲು ಪ್ರಯತ್ನಿಸಿದಾಗ ಮಾಹಿತಿ ಸಿಗಲಿಲ್ಲ. ಮಧ್ಯವರ್ತಿಗಳು ಏನೇನೋ ಹೇಳಿ, ಸಾವಿರಾರು ರೂಪಾಯಿ ಕೇಳುತ್ತಿದ್ದಾರೆ' ಎಂದು ದೂರಿದರು.

'ಸಂಪರ್ಕ ಪಡೆಯಲು ವಿಚಾರಿಸಿದರೆ ₹50 ಸಾವಿರ ನೀಡಬೇಕು ಎಂದು ಮಧ್ಯವರ್ತಿಗಳು ಬೇಡಿಕೆ ಇಡುತ್ತಿದ್ದಾರೆ. ಹಿರಿಯ ಅಧಿಕಾರಿಗಳು ಮಧ್ಯವರ್ತಿಗಳ ಹಾವಳಿಗೆ ತಡೆ ಹಾಕಿ ಮನೆ ಮನೆ ಸಮೀಕ್ಷೆ ನಡೆಸಬೇಕು. ಜನಸಾಮಾನ್ಯರಿಗೆ ವ್ಯವಸ್ಥೆ ಸರಳಗೊಳಿಸಬೇಕು' ಎಂದು ಲಗ್ಗೆರೆಗೆ ಹೊಂದಿಕೊಂಡಂತಿರುವ ನರಸಿಂಹಸ್ವಾಮಿ ಲೇಔಟ್‌ನ ಕರಿಷ್ಮಾ ಹೇಳಿದರು.

'ಕೆಲವು ಬಡಾವಣೆಗಳಲ್ಲಿ ಹೆಚ್ಚು ನೀರಿನ ಶುಲ್ಕ ಭರಿಸಬೇಕು, ಠೇವಣಿ, ಇತರೆ ಶುಲ್ಕಗಳನ್ನು ಪಾವತಿಸಬೇಕು ಎಂದು ಕೆಲವರು ಸುಳ್ಳು ಮಾಹಿತಿ ಹರಡುತ್ತಿದ್ದಾರೆ. ಜಲಮಂಡಳಿ ಗುರಿ ನಿಗದಿಪಡಿಸಿ ಉಪವಿಭಾಗ ಮಟ್ಟದಲ್ಲಿ ಜಾಗೃತಿ ಶಿಬಿರ ಆಯೋಜಿಸಿ ಗೊಂದಲ ಬಗೆಹರಿಸಲು ಪ್ರಯತ್ನಿಸುತ್ತಿದೆ' ಎಂದು ಜಲಮಂಡಳಿ ಎಂಜಿನಿಯರ್‌ಗಳು ಹೇಳಿದರು.

ಅಂಕಿ ಅಂಶಗಳು

775 ಎಂಎಲ್‌ಡಿ – ಕಾವೇರಿ 5ನೇ ಹಂತದಲ್ಲಿ ಲಭ್ಯವಿರುವ ನೀರು

300 ಎಂಎಲ್‌ಡಿ – ಬಳಕೆಯಾಗುತ್ತಿರುವ ನೀರು

4 ಲಕ್ಷ – ಹೊಸ ಸಂಪರ್ಕದ ಗುರಿ

1 ಲಕ್ಷ – ಡಿಸೆಂಬರ್ ಅಂತ್ಯಕ್ಕೆ ನೀಡಲಾಗಿರುವ ಸಂಪರ್ಕ



ಕಾವೇರಿ 5ನೇ ಹಂತದ ಯೋಜನೆಯ ಮುಖ್ಯ ಘಟಕ

'ಟ್ಯಾಂಕರ್‌ಗಿಂತ ದರ ಕಡಿಮೆ'

ಟಿ.ದಾಸರಹಳ್ಳಿ ಹಾಗೂ ಸುತ್ತಮುತ್ತಲಿನ ಕೆಲವು ಬಡಾವಣೆಗಳ ಜನ ಎರಡು ದಶಕದಿಂದ ನೆಲಸಿದ್ದರೂ ಬೋರ್‌ವೆಲ್ ನೀರನ್ನು ಅವಲಂಬಿಸಿದ್ದರು. ಈಗ ಆ ಸಮಸ್ಯೆ ದೂರವಾಗಿ ಕಾವೇರಿ ನೀರು ಬಳಸುತ್ತಿದ್ದಾರೆ.

'ನಮ್ಮದೇ ಎರಡು ಮಹಡಿ ಮನೆ ಇದೆ. ತಿಂಗಳಿಗೆ 18 ಸಾವಿರ ಲೀಟರ್ ನೀರು ಬಳಸುತ್ತಿದ್ದೇವೆ. ಇದಕ್ಕೆ ತಿಂಗಳಿಗೆ ₹700 ವರೆಗೂ ಬಿಲ್ ಬರುತ್ತದೆ. ಹಿಂದೆಲ್ಲಾ ಬರೀ 5 ಸಾವಿರ ಲೀಟರ್ ಟ್ಯಾಂಕರ್ ನೀರಿಗೆ ₹800 ಪಾವತಿಸುತ್ತಿದ್ದೆವು. ಈಗ, ಕಾವೇರಿ ನೀರಿನ ಸಂಪರ್ಕ ಪಡೆದಿರುವುದರಿಂದ ಹೊರೆಯೇನೂ ಅನ್ನಿಸುತ್ತಿಲ್ಲ' ಎಂದು ಸೌಂದರ್ಯ ನಗರದ ನಿವಾಸಿ ಶೈಲಾ ರಮೇಶ್ ತಿಳಿಸಿದರು.

'ನೇರವಾಗಿ ಸಂಪರ್ಕಿಸಿ'



ರಾಮ್‌ಪ್ರಸಾತ್

'ನಗರದಲ್ಲಿ ಕಾವೇರಿ ನೀರಿನ ಸಂಪರ್ಕ ಪಡೆಯಲು ಬಯಸುವ ಜನರು ನೇರವಾಗಿ ಜಲಮಂಡಳಿಯ ಕಚೇರಿಗೆ ಭೇಟಿ ನೀಡಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು. ಅಲ್ಲದೆ, ಆನ್‌ಲೈನ್‌ನಲ್ಲೇ (https://owc.bwssb.gov.in/) ಅರ್ಜಿ ಸಲ್ಲಿಸುವ ಅವಕಾಶವನ್ನು ಜಲಮಂಡಳಿ ನೀಡಿದೆ' ಎಂದು ಜಲಮಂಡಳಿಯ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು. 'ಠೇವಣಿಯನ್ನು ಇಎಂಐ ಮೂಲಕ ಪಾವತಿಸಲೂ ಅವಕಾಶವಿದೆ. ಜನಸ್ನೇಹಿ ವ್ಯವಸ್ಥೆ ಮಾಡುತ್ತೇವೆ. ಕೆಲವು ಕಡೆ ಯೋಜನೆ ಅನಿವಾರ್ಯ ಕಾರಣಗಳಿಂದ ಸಂಪರ್ಕ ನೀಡುವುದು ವಿಳಂಬವಾಗಿದೆ. ಅದನ್ನೂ ಶೀಘ್ರ ಪರಿಹರಿಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಡಿ.31ರ ಬೆಳಿಗ್ಗೆ 6ರಿಂದ ತಡರಾತ್ರಿ 1ರವರೆಗೆ ಮದ್ಯದ ವಹಿವಾಟು

ಬೆಂಗಳೂರು: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಬೆಂಗಳೂರು ನಗರಕ್ಕೆ ಅನ್ವಯ ಆಗುವಂತೆ ವಿಶೇಷ ಸಾಂದರ್ಭಿಕ ಅಬಕಾರಿ ಸನ್ನದುದಾರರಿಗೆ (ಸಿಎಲ್-5) ಡಿ.31ರಂದು ಬೆಳಿಗ್ಗೆ 6ರಿಂದ ತಡರಾತ್ರಿ 1ರವರೆಗೆ ಮದ್ಯದ ವಹಿವಾಟು ಮತ್ತು ಮದ್ಯ ಸೇವನೆಗೆ ಅನುಮತಿ ನೀಡಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಆದೇಶ ಹೊರಡಿಸಿದ್ದಾರೆ.

ಸಿಎಲ್-5ಗೆ ಸಾಮಾನ್ಯ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ರಾತ್ರಿ 12ರವರೆಗೆ ಮಾತ್ರ ಮದ್ಯದ ವಹಿವಾಟು ನಡೆಸಲು ಅವಕಾಶ ಇದೆ. ಆದರೆ, ಹೊಸ ವರ್ಷಾಚರಣೆ ಕಾರಣಕ್ಕೆ ಬುಧವಾರ ಸಮಯ ವಿಸ್ತರಣೆ ಮಾಡಿ ಮದ್ಯದ ವಹಿವಾಟಿಗೆ ಅವಕಾಶ ಕಲ್ಪಿಸಲಾಗಿದೆ.

ಮದುವೆ, ಜನ್ಮದಿನ ಆಚರಣೆ, ಔತಣಕೂಟ ಸೇರಿದಂತೆ ವಿಶೇಷ ಸಂದರ್ಭಗಳಲ್ಲಿ ಬಳಕೆ ಸಿಎಲ್-5 ತಾತ್ಕಾಲಿಕ ಸನ್ನದು ಅಗತ್ಯ. ಒಂದು ದಿನದ ಮಟ್ಟಿಗೆ ಅಬಕಾರಿ ಇಲಾಖೆ ಈ ಸನ್ನದು ನೀಡುತ್ತದೆ. ಸಿಎಲ್-5 ಸನ್ನದುದಾರರು ಅಬಕಾರಿ ಇಲಾಖೆ ನಿಯಮಗಳ ಪ್ರಕಾರವೇ ಮದ್ಯದ ಸರಕು ಖರೀದಿಸಬೇಕು ಮತ್ತು ಮಾರಾಟ ಮಾಡಬೇಕು ಎಂದು ಮೂಲಗಳು ಹೇಳಿವೆ.



'ಅವರೆಕಾಯಿಗೆ ಜಾಗತಿಕ ಮನ್ನಣೆ ಸಿಗಲಿ'

ಬೆಂಗಳೂರು: 'ಬೆಂಗಳೂರು ಹಾಗೂ ಸುತ್ತಮುತ್ತಲ ಅವರೆಕಾಯಿ ಸೊಗಡು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಕರ್ಷಣೆಯಾಗಬೇಕು. ಅದಕ್ಕೆ ಇಂತಹ ಮೇಳಗಳು ನೆರವಾಗಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ವಾಸವಿ ಸಂಸ್ಥೆ ಆಯೋಜಿಸಿರುವ ಅವರೆಬೇಳೆ ಮೇಳ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹಣ್ಣುಗಳ ರಾಜ ಮಾವು, ಕಾಳುಗಳ ರಾಜ ಅವರೆಕಾಯಿ. ಮಾಗಡಿ ಅವರೆಕಾಯಿ ತನ್ನ ಸೊಗಡಿಗೆ ಬಹಳ ಪ್ರಸಿದ್ಧಿ. ನನಗೂ ಅವರೆಕಾಳು ಎಂದರೆ ಬಹಳ ಇಷ್ಟ. ಬೆಂಗಳೂರಿನ ನಾಗರಿಕರಿಗೆ, ರೈತರಿಗೆ ಅನುಕೂಲವಾಗಬೇಕು. ಉದ್ಯೋಗ ಸೃಷ್ಟಿಯಾಗಬೇಕು ನಮ್ಮ ರೈತರ ಬೆಳೆಗೆ ಉತ್ತಮ ಬೆಲೆ ಸಿಗಬೇಕು. ಬೆಂಗಳೂರಿನ ಸುತ್ತಮುತ್ತಲ ಭಾಗದಲ್ಲಿ ಮಾತ್ರ ಇದನ್ನು ಬೆಳೆಯಲಾಗುತ್ತದೆ. ಹೀಗಾಗಿ ಇದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕು' ಎಂದರು.

'ಕರ್ನಾಟಕದ ಈ ಖಾದ್ಯಗಳು, ರುಚಿ ಎಲ್ಲರಿಗೂ ತಲುಪುವಂತಾಗಬೇಕು. ರಾಜ್ಯದ ರೈತರಿಗೆ ಒಳ್ಳೆಯದಾಗಬೇಕು. ವಾಸವಿ ಸಂಸ್ಥೆಯವರು 26 ವರ್ಷಗಳಿಂದ ಈ ಕಾರ್ಯಕ್ರಮ ಮಾಡಿಕೊಂಡು ಬಂದಿದ್ದಾರೆ. ನಾಗರಿಕರು ಬಂದು ರುಚಿ ಸವಿಯಲಿ' ಎಂದು ಹೇಳಿದರು.

'ಸನಾತನ ಧರ್ಮ ಜೀವನ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸನಾತನ ಧರ್ಮ ಎನ್ನುವುದು ಕೇವಲ ಆಚರಣೆಗಳ ಸಂಕಲನವಾಗಿರದೆ ಅದು ಜೀವನದ ದರ್ಶನವಾಗಿದೆ. ಕಾಲಕ್ಕೆ ಒಳಪಡದ, ಮಾನವೀಯ ಮೌಲ್ಯಗಳ ಮೇಲೆ ನಿಂತಿರುವ ಶಾಶ್ವತ ಚಿಂತನೆಯೇ ಸನಾತನ ಧರ್ಮ' ಎಂದು ವಾಗ್ಮಿ ದುಷ್ಯಂತ್ ಶ್ರೀಧರ್ ಅಭಿಪ್ರಾಯಪಟ್ಟರು.

ಪಾಂಚಜನ್ಯ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 13ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಪಾಂಚಜನ್ಯ ಪುರಸ್ಕಾರ' ಸ್ವೀಕರಿಸಿ, ಮಾತನಾಡಿದರು.

'ಇಂದಿನ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮಗಳ ನಡುವೆ ಬೆಳೆದ ಯುವಕರು, ಸನಾತನ ಧರ್ಮದ ತತ್ವಗಳಿಂದ ಆಂತರಿಕ ಸ್ಥೈರ್ಯ, ನೈತಿಕ ಸ್ಪಷ್ಟತೆ ಮತ್ತು ಸಮತೋಲನದ ಬದುಕು ಕಲಿಯಬಹುದು. ಯೋಗ, ಧ್ಯಾನ, ಪರಿಸರ ಸಂರಕ್ಷಣೆ, 'ವಸುದೈವ ಕುಟುಂಬಕಂ' ಎಂಬ ತತ್ವಗಳು ಇಂದು ಜಗತ್ತೇ ಒಪ್ಪಿಕೊಂಡ ಮೌಲ್ಯಗಳಾಗಿವೆ' ಎಂದರು.

ಪ್ರತಿಷ್ಠಾನ ಹೊರತಂದಿರುವ ನೂತನ ದಿನದರ್ಶಿಕೆಯನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು. ವಕೀಲ ಅಶೋಕ್ ಹಾರನಹಳ್ಳಿ, ಪ್ರತಿಷ್ಠಾನದ ಸ್ಥಾಪಕ ಟ್ರಸ್ಟಿ ಮುರಳಿ ಕಾಕೋಳು, ಟ್ರಸ್ಟಿಗಳಾದ ಎಸ್.ವಿ.ಸುಬ್ರಹ್ಮಣ್ಯ, ಅನಂತ ವೇದಗರ್ಭಂ, ವಿ.ಆರ್.ವೆಂಕಟೇಶ್ ಹಾಗೂ ಸಲಹೆಗಾರ ಕೆ ಎಸ್. ಸಮೀರಸಿಂಹ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ದುಷ್ಯಂತ್ ಶ್ರೀಧರ್ ಅವರಿಗೆ 'ಪಾಂಚಜನ್ಯ ಪುರಸ್ಕಾರ' ಪ್ರದಾನ ಮಾಡಲಾಯಿತು. ಅಶೋಕ್ ಹಾರನಹಳ್ಳಿ, ಮುರಳಿ ಕಾಕೋಳು, ಎಸ್.ವಿ.ಸುಬ್ರಹ್ಮಣ್ಯ, ಅನಂತ ವೇದಗರ್ಭಂ, ವಿ.ಆರ್.ವೆಂಕಟೇಶ್, ಕೆ.ಎಸ್.ಸಮೀರಸಿಂಹ ಉಪಸ್ಥಿತರಿದ್ದರು

ಮದ್ಯ ಖರೀದಿಗೆ ಹಣ ಕೊಡುವಂತೆ ಬೆದರಿಸಿ ಹಲ್ಲೆ

ಕನಕಪುರ: ಬೈಕ್‌ನಲ್ಲಿ ಹೊರಟಿದ್ದ ಪೌರಕಾರ್ಮಿಕನನ್ನು ಅಡ್ಡಗಟ್ಟಿ ಮದ್ಯ ಖರೀದಿಸಲು ಹಣ ನೀಡುವಂತೆ ಕೊಲೆ ಬೆದರಿಕೆ ಹಾಕಿದ ಇಬ್ಬರು ಅಪರಿಚಿತ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ರಸ್ತೆಯ ರಿಲಯನ್ಸ್ ಪೆಟ್ರೋಲ್ ಬಂಕ್ ಬಳಿ ಡಿ.22 ರಂದು ಪೌರಕಾರ್ಮಿಕ ನಾಗೇಶ್ ಎಂಬುವರನ್ನು ಅಡ್ಡಗಟ್ಟಿದ ಆರೋಪಿಗಳಿಬ್ಬರು ಕುಡಿಯಲು ಹಣ ಕೊಡುವಂತೆ ಕೇಳಿದರು. ಹಣ ಕೊಡಲು ನಿರಾಕರಿಸಿದಾಗ ಬೈಕ್‌ನಿಂದ ಕೆಳಗಿಳಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದರು.

ಅವರಿಂದ ತಪ್ಪಿಸಿಕೊಂಡು ಹೊರಟ ನಾಗೇಶ್ ಅವರನ್ನು ಹಿಂಬಾಲಿಸಿಕೊಂಡು ಬಂದು ಕಲ್ಲಿನಿಂದ ಹೊಡೆದು ಪರಾರಿಯಾಗಿದ್ದಾರೆ. ಪುರ ಪೊಲೀಸ್ ಠಾಣೆಗೆ ನಾಗೇಶ್ ದೂರು ನೀಡಿದ್ದಾರೆ.

ರಸ್ತೆಯಲ್ಲೇ ವಾಹನ ನಿಲುಗಡೆ: ತೊಂದರೆ

ಜಿಕೆವಿಕೆ ಕ್ರಾಸ್–ಜಕ್ಕೂರು, ಕೆ.ವಿ.ಜಯರಾಂ ರಸ್ತೆಯಲ್ಲಿ ದಟ್ಟಣೆ

• ಡಿ.ಸುರೇಶ್

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಿಕೆವಿಕೆ ಕ್ರಾಸ್ ಮೂಲಕ ಜಕ್ಕೂರು ಕಡೆಗೆ ಹಾದುಹೋಗುವ ಕೆ.ವಿ. ಜಯರಾಂ ರಸ್ತೆಯ ಪಕ್ಕದಲ್ಲಿ (ಶನೈಶ್ಚರಸ್ವಾಮಿ ದೇವಾಲಯದ ಸಮೀಪ) ಕೋಳಿ ಸಾಗಾಣಿಕೆ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ.

ಜಿಕೆವಿಕೆ ಕ್ರಾಸ್‌ನಿಂದ ಜಕ್ಕೂರು, ಹೆಗಡೆ ನಗರದ ಮೂಲಕ ಕೆ.ಆರ್. ಪುರ ಹಾಗೂ ಹೊಸಕೋಟೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿದ್ದು, ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಜಕ್ಕೂರು ಬಡಾವಣೆಯ ಏರೋಡ್ರೋಮ್ ಕಾಂಪೌಂಡ್‌ಗೆ ಹೊಂದಿಕೊಂಡಿರುವ ರಸ್ತೆಯ ಪಕ್ಕದಲ್ಲಿ ಕೋಳಿ ಸಾಗಾಣಿಕೆ ವಾಹನಗಳೂ ಸೇರಿದಂತೆ ಹಲವು ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಸುಗಮ ಸಂಚಾರ ಸಾಧ್ಯವಾಗದೆ ಪ್ರಯಾಸದಿಂದ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

'ಪೀಕ್-ಅವರ್'ನಲ್ಲಿ ವಾಹನಗಳು ಮಂದಗತಿಯಲ್ಲಿ ಚಲಿಸುತ್ತವೆ. ರಸ್ತೆಯ ಪಕ್ಕದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಅಪಘಾತಗಳೂ ಆಗುತ್ತಿವೆ. ಸರ್ಕಾರದ ಹಲವು ಹಿರಿಯ ಅಧಿಕಾರಿಗಳೂ ಸೇರಿದಂತೆ ಸಂಚಾರ ಪೊಲೀಸರು ನಿತ್ಯ ಇದೇ ರಸ್ತೆಯಲ್ಲಿ ಸಂಚರಿಸಿದರೂ ವಾಹನಗಳ ತೆರವಿಗೆ ಕ್ರಮ ಕೈಗೊಂಡಿಲ್ಲ' ಎಂದು ಜಕ್ಕೂರು ಗ್ರಾಮದ ನಿವಾಸಿ ನಾರಾಯಣಪ್ಪ ದೂರಿದರು.

ಜಿಕೆವಿಕೆ ಕ್ರಾಸ್‌ನಿಂದ ಜಕ್ಕೂರು ಬಡಾವಣೆಯವರೆಗೆ ಹಾಗೂ ಶ್ರೀರಾಮ ವಿದ್ಯಾಲಯದ ಕಡೆಗೆ ತೆರಳುವ ರಸ್ತೆಯಲ್ಲೂ ಎರಡೂ ಕಡೆಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡಲಾಗಿರುತ್ತದೆ' ಎಂದು ಸ್ಥಳೀಯ ನಿವಾಸಿ ಬೈಲನರಸಯ್ಯ ಹೇಳಿದರು.

'ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಿರುವವರ ವಿರುದ್ಧ ಈಗಾಗಲೇ ದೂರು ದಾಖಲಿಸಲಾಗಿದೆ. ಈಗ ಮತ್ತೆ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದರೆ ಪರಿಶೀಲಿಸಿ, ತಕ್ಷಣ ತೆರವುಗೊಳಿಸುವುದರ ಜೊತೆಗೆ ದೂರು ದಾಖಲಿಸಲಾಗುವುದು' ಎಂದು ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮಧುಸೂದನ್ ಅವರು ಭರವಸೆ ನೀಡಿದರು.



ಕೆ.ವಿ.ಜಯರಾಂ ರಸ್ತೆಯ ಪಕ್ಕದಲ್ಲಿ ವಾಹನಗಳನ್ನು ನಿಲುಗಡೆ ಮಾಡಿರುವುದು

ಮುಖ್ಯಾಂಶಗಳು
- ಕೋಳಿ ಸಾಗಾಣಿಕೆ ವಾಹನ ನಿಲುಗಡೆ
- ಹೆಚ್ಚುತ್ತಿರುವ ಅಪಘಾತ

ಪೊಲೀಸ್ ಠಾಣೆ ಸ್ಥಳಾಂತರ ವಿರೋಧಿಸಿ ಸಹಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಸ್ತೆ ವಿಸ್ತರಣೆಗಾಗಿ ವರ್ತೂರು ಪೊಲೀಸ್ ಠಾಣೆಯನ್ನು ಗುಂಜೂರಿಗೆ ಸ್ಥಳಾಂತರ ಮಾಡಿರುವುದನ್ನು ವಿರೋಧಿಸಿ, ವರ್ತೂರು ಹಿತರಕ್ಷಣಾ ವೇದಿಕೆ ಹಾಗೂ ಜಾಗೃತ ನಾಗರಿಕರು ಮತ್ತು ಗ್ರಾಮಸ್ಥರು ಸಹಿ ಸಂಗ್ರಹ ಅಭಿಯಾನ ನಡೆಸಿದರು.

'ವರ್ತೂರು ಒಂದು ಪ್ರಮುಖ ಹೋಬಳಿ ಕೇಂದ್ರವಾಗಿದ್ದು, ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಗೆ ವ್ಯಾಪಾರ ಮತ್ತು ಸಂಪರ್ಕದ ಕೊಂಡಿಯಾಗಿದೆ. ಹೀಗಾಗಿ ಪೊಲೀಸ್ ಠಾಣೆಯನ್ನು ಬೇರೆಡೆಗೆ ಸ್ಥಳಾಂತರ ಮಾಡದೆ ವರ್ತೂರಿನಲ್ಲಿ ಉಳಿಯುವಂತೆ ಮಾಡಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

'ವರ್ತೂರು ಗ್ರಾಮದ ಸರ್ವೆ ನಂಬರ್ 52ರಲ್ಲಿ ಸುಮಾರು 28 ಗುಂಟೆ ಜಮೀನು ಲಭ್ಯವಿದ್ದು, ಈ ಜಾಗದಲ್ಲಿ ಪೊಲೀಸ್ ಠಾಣೆ ಕಟ್ಟಡ ನಿರ್ಮಿಸಬೇಕು. ಠಾಣೆ ಬೇರೆಡೆಗೆ ಸ್ಥಳಾಂತರವಾಗಬಾರದು ಎಂದು ಸಹಿ ಸಂಗ್ರಹ ಅಭಿಯಾನವನ್ನು ಕೈಗೊಂಡು, ಜಿಲ್ಲಾಧಿಕಾರಿ, ಪೊಲೀಸ್ ಕಮಿಷನರ್ ಅವರಿಗೆ ಮನವಿ ನೀಡಲಾಗುತ್ತದೆ' ಎಂದು ಕಾಂಗ್ರೆಸ್ ಮುಖಂಡ ಕುಪ್ಪಿ ಮಂಜುನಾಥ್ ಹೇಳಿದರು. ಮುಖಂಡರಾದ ಜಗದೀಶ್, ಇಕ್ಬಾಲ್ ಅಹ್ಮದ್, ಪಿ.ಕೃಷ್ಣಪ್ಪ, ಸುಬ್ಬಣ್ಣ, ಶ್ರೀಧರ್ ಟಿ., ಪೋಲಿಸ್ ನಾಗರಾಜ್ ಇದ್ದರು.

ಸನ್ಮಾನ



ಬೆಂಗಳೂರು ದಕ್ಷಿಣ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಸಂಘ ಹಮ್ಮಿಕೊಂಡಿದ್ದ ಪ್ರಾಂಶುಪಾಲರ ಸಮಾಲೋಚನಾ ಸಭೆ ಮತ್ತು ಸನ್ಮಾನ ಸಮಾರಂಭದಲ್ಲಿ ಸಾಹಿತಿ ಗೊ.ರು. ಚನ್ನಬಸಪ್ಪ ಅವರನ್ನು ಸನ್ಮಾನಿಸಲಾಯಿತು. ಸಿ.ಎಸ್. ಷಡಕ್ಷರಿ, ಜಿ. ಶೋಭಾ, ಮನೋಜ್ ಕುಮಾರ್ ಕೊಳ್ಳಾ, ಪ್ರಸನ್ನ ಕುಮಾರ್, ಹೊ.ನ. ನೀಲಕಂಠೇಗೌಡ, ಎಸ್.ಎನ್. ನಟರಾಜ್, ತಿಮ್ಮಯ್ಯ, ಶೀಲಾ ಪ್ರಕಾಶ್ ಎಸ್.ಎನ್. ಉಪಸ್ಥಿತರಿದ್ದರು

ನಗರದಲ್ಲಿ ಇಂದು

ವಿಶ್ವಮಾನವ ದಿನಾಚರಣೆ, ಪ್ರಶಸ್ತಿ ಪ್ರದಾನ: ಅತಿಥಿಗಳು: ಶಂಕರ್ ಹಾಲಪ್ಪ ಹೆಗಡೆ, ಅನಂತ್ ನಾಯಕ್ ಎನ್., ಭರಮಣ್ಣ ಲಕ್ಷ್ಮಣ ಉಪ್ಪಾರ, ನಾಗರಾಜ್ ಎ.ಜಿ., ರಮೇಶ ದೊರೆ ಅಲ್ಲಾಳ, ರಾಜು ಮಹಾದೇವ ನಾಶಿಪುಡಿ, ಆಯೋಜನೆ: ಅನ್ನಪೂರ್ಣೇಶ್ವರಿ ಹ್ಯುಮಾನಿಟಿ ಫೌಂಡೇಷನ್, ವಿಶ್ವಕರ್ಮ ಅಭಿವೃದ್ಧಿ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9

ದ್ವಿತೀಯ ಆಯುರ್ವೇದ ವಿಶ್ವ ಸಮ್ಮೇಳನ: ಬೆಳಿಗ್ಗೆ 9 ಗಂಟೆ ಸಮಾರಂಭ: ಸಾನ್ನಿಧ್ಯ: ಜಯೇಂದ್ರ ಸರಸ್ವತಿ ಶಂಕರಾಚಾರ್ಯ ಸ್ವಾಮೀಜಿ, ಅತಿಥಿಗಳು: ಯು.ಟಿ.ಖಾದರ್, ಸಿ.ಎನ್. ಅಶ್ವತ್ಥನಾರಾಯಣ, ಬಲವೀರ ರೆಡ್ಡಿ, ಮಹೇಶ ಜೋಶಿ, ಹುಣಸವಾಡಿ ರಾಜನ್, ವಿನಾಯಕ ಭಟ್ ಮುರೂರು, ಕೆ.ಪಿ. ಪುತ್ತೂರಾಯ, ಮಹೇಶ್ ವಾಳ್ವೇಕರ್, ಭಾಸ್ಕರ್ ಎ., ಮುಖ್ಯ ಭಾಷಣ: ವೆಂಕಟ ನಾರಾಯಣ ಜೋಶಿ, ಸಂಜೆ 5ಕ್ಕೆ ಸಮಾರೋಪ ಸಮಾರಂಭ: ರಾಘವೇಶ್ವರ ಭಾರತೀ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಬಸವರಾಜ ಹೊರಟ್ಟಿ, ಸಂತೋಷ್ ಹೆಗ್ಡೆ, ಆರ್. ಅಶೋಕ್, ವಿಶ್ವೇಶ್ವರ ಭಟ್, ಪಿ.ಜಿ. ಆರ್. ಸಿಂಧ್ಯ, ರವಿ ಕುಮಾರ್, ಮೋಹನ್ ಆಳ್ವ, ಜಯಪ್ರಕಾಶ ನಾರಾಯಣ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ: ಆನೂರು ಅನಂತ ಕೃಷ್ಣ ಶರ್ಮ ಮತ್ತು ತಂಡ, ಆಯೋಜನೆ: ಕಜೆ ಆಯುರ್ವೇದಿಕ್ ಚಾರಿಟೇಬಲ್ ಫೌಂಡೇಷನ್, ಸ್ಥಳ: ರಾಯಲ್ ಸೆನೆಟ್ ಆ್ಯಂಡ್ ದಿ ಗ್ರ್ಯಾಂಡ್ ಕ್ಯಾಸಲ್, ಅರಮನೆ ಮೈದಾನ (ಗೇಟ್ ಸಂಖ್ಯೆ 6)

1000ನೇ ಪುಸ್ತಕ ಬಿಡುಗಡೆ, 30ನೇ ವಾರ್ಷಿಕೋತ್ಸವ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಜೋಗಿ ಅವರ 'ದಕ್ಷಿಣಾಯನ' ಪುಸ್ತಕ ಬಿಡುಗಡೆ: ಜಯಂತ್ ಕಾಯ್ಕಿಣಿ, ಪುಸ್ತಕ ಪರಿಚಯ: ಹರೀಶ್ ಕೇರ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30



ಬರಗೂರು ರಾಮಚಂದ್ರಪ್ಪ

41ನೇ ವಾರ್ಷಿಕೋತ್ಸವ: ಅಧ್ಯಕ್ಷತೆ: ಎಂ. ಸೂರ್ಯಪ್ರಸಾದ್, ಸಂಗೀತ ಕಲಾರವಿಂದ ಪ್ರಶಸ್ತಿ ಸ್ವೀಕರಿಸುವವರು: ಬಿ. ಹುಸೇನ್‌ಸಾಬ್ ಕನಕಗಿರಿ, ಕೆ. ಗುರುರಾಜ್, ದಾಸವಾಣಿ ಸೌರಭ: ಗಾಯನ: ಬಿ. ಹುಸೇನ್‌ಸಾಬ್ ಕನಕಗಿರಿ, ಹಾರ್ಮೋನಿಯಂ: ಕೆ. ಗುರುರಾಜ್, ತಬಲಾ: ಸಂತೋಷ್ ಕೊಡ್ಲಿ, ಲಯವಾದ್ಯ: ಶಾಮದತ್, ತಾಳ: ವೀರೇಂದ್ರ, ಪ್ರಸಾದ್, ಆಯೋಜನೆ: ಸಂಗೀತ ಕೃಪಾ ಕುಟೀರ, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾಶಾಲಾ, ಹನುಮಂತನಗರ, ಬನಶಂಕರಿ ಒಂದನೇ ಹಂತ, ಬೆಳಿಗ್ಗೆ 9.30


ವಿಎಸ್‌ಕೆ ಮೀಡಿಯಾ ಕಾನ್‌ಕ್ಲೇವ್–2025: ಬೆಳಿಗ್ಗೆ 10ಕ್ಕೆ 'ಡಿಕೋಲೈಸಿಂಗ್ ಭಾರತೀಯ ಮೈಂಡ್ಸ್' ಗೋಷ್ಠಿಯಲ್ಲಿ ಭಾಗವಹಿಸುವವರು: ರಾಕೇಶ್ ಸಿನ್ಹಾ, ವಿಶ್ವೇಶ್ವರ ಭಟ್, ಪ್ರಫುಲ್ಲ ಕೇಟ್ಕರ್, ಎಂ.ಎಸ್. ಚೈತ್ರ, ಬೆಳಿಗ್ಗೆ 11.45ಕ್ಕೆ 'ಮೀಡಿಯಾ– ಭಾರತೀಯ ಇತೋಸ್, ಕಾನ್‌ಸ್ಟಿಟ್ಯೂಷನ್, ಡೆಮಾಕ್ರಸಿ' ಗೋಷ್ಠಿಯಲ್ಲಿ ಭಾಗವಹಿಸುವವರು: ಎ. ಸೂರ್ಯಪ್ರಕಾಶ್, ಅನುಪಮಾ ಗೋಯಲ್, ಕೆ.ಬಿ. ಸಿಬಂತಿ ಪದ್ಮನಾಭ, ಮಧ್ಯಾಹ್ನ 2ಕ್ಕೆ 'ಮೀಡಿಯಾ ಆ್ಯಂಡ್ ವಾರ್ ಆಫ್ ನೆರೇಟಿವ್ಸ್' ಗೋಷ್ಠಿ: ಅಜಿತ್ ಹನುಮಕ್ಕನವರ್, ವಾದಿರಾಜ್, ನಂದಕಿಶೋರ್, ರೋಹಿಣಾಕ್ಷ ಶಿರ್ಲಾಲು., ಸಮಾರೋಪ ಸಮಾರಂಭ: ಸುದರ್ಶನ್ ಚನ್ನಂಗಿಹಳ್ಳಿ, ಚನ್ನೇಗೌಡ ಕೆ.ಎನ್., ಶ್ರೀಲಕ್ಷ್ಮಿ ಅಭಿಜಿತ್, ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಹೋಟೆಲ್ ದಿ ಕ್ಯಾಪಿಟಲ್, ರಾಜಭವನ, ರಸ್ತೆ.

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ವಿ. ವಿಶ್ವನಾಥನ್, ಹ. ನಾಗರಾಜು, ಉಪಸ್ಥಿತಿ: ರಾಜಕುಮಾರಿ ಬಿ.ಎಸ್., ಗೋಪಾಲ್, ಆಯೋಜನೆ ಮತ್ತು ಸ್ಥಳ: ಸಹಮತ, ಹೇಮ ಸದನ, ಏಳನೇ ಮುಖ್ಯರಸ್ತೆ, ಸಹಕಾರನಗರ, ಬೆಳಿಗ್ಗೆ 10

'ಸೋಪಾನ–2025' ವಾರ್ಷಿಕೋತ್ಸವ: ಆಯೋಜನೆ: ಎಲೆನ್, ಸ್ಥಳ: ಕ್ರೈಸ್ಟ್ ಯೂನಿವರ್ಸಿಟಿ ಆಡಿಟೋರಿಯಂ, ಸದ್ದುಗುಂಟೆಪಾಳ್ಯ, ಬೆಳಿಗ್ಗೆ 10

ರಾಮಲಿಂಗಪ್ಪ ಟಿ. ಬೇಗೂರು ಅವರ 'ಆಚಾರ ವಿಚಾರ' ಮತ್ತು 'ವಿಚಾರಣೆ' ಪುಸ್ತಕ ಬಿಡುಗಡೆ: ಕೆ.ವಿ. ನಾರಾಯಣ, ಪುಸ್ತಕದ ಬಗ್ಗೆ ಮಾತು: ದೇವು ಪತ್ತಾರ, ಎಚ್.ಎಲ್.ಪುಷ್ಪ, ಆಯೋಜನೆ: ಗುಣ ಪ್ರಕಾಶನ, ಸ್ಥಳ: ದೇವರಾಜ್ ಅರಸ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿಯ ಮಾಜಿ ಅಧ್ಯಕ್ಷ ಸತೀಶ್ ಈ. ವಾಗಲೆ ಅವರ ಭಾವಚಿತ್ರ ಅನಾವರಣ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣೆ: ಉದ್ಘಾಟನೆ: ಅಶ್ವಥನಾರಾಯಣ, ಎಂ. ಕೃಷ್ಣಪ್ಪ, ಎಸ್.ಎನ್. ಶ್ರೀನಿವಾಸಮೂರ್ತಿ, ಶ್ರೀನಿವಾಸ್ ಶ್ರೀಹರಿ ಖೋಡೆ, ಕೆ. ಹೇಮಾವತಿ, ಎಸ್. ಅನಂತ್, ಸತ್ಯಚರಣ್ ವಾಗಲೆ, ಆಯೋಜನೆ: ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಸ್ಥಳ: ಕಾಸಿಯಾ ಭವನ, ವಿಜಯನಗರ, ಬೆಳಿಗ್ಗೆ 10.30



ಬಿಳಿಮಲೆ

ಕುವೆಂಪು ಮಹೋತ್ಸವ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಕುವೆಂಪು ಕುರಿತು: ಅಪ್ಪಗೆರೆ ಸೋಮಶೇಖರ್, ಸನ್ಮಾನಿತರು: ವಿ. ಗೋಪಾಲಗೌಡ, ಎಚ್.ಎಂ. ವೆಂಕಟಪ್ಪ, ವೆಂಕಟೇಶಮೂರ್ತಿ, ಸು.ತ. ರಾಮೇಗೌಡ, ಶಂಕರೇಗೌಡ, ಆಯೋಜನೆ: ನವಕರ್ನಾಟಕ ಯುವಶಕ್ತಿ, ಸ್ಥಳ: ಶ್ರೀಆದಿಚುಂಚನಗಿರಿ ಸಮುದಾಯಭವನ, ವಿಜಯನಗರ, ಮಧ್ಯಾಹ್ನ 3

ಸ್ವರಪಾನ ಸಂಗೀತ ಕಛೇರಿ: ಆಯೋಜನೆ: ಕ್ರಿಯೇಟಿವ್‌ಕ್ಲಾನ್, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ಚೌಡಯ್ಯ ಸ್ಮಾರಕ ಸಭಾಂಗಣದ ಹಿಂಭಾಗ, ಮಲ್ಲೇಶ್ವರ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಅನ್ಯಾ ರಾವ್, ಆಯೋಜನೆ: ಕಾವೇರಿ ನಾಟ್ಯಯೋಗ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 4

ಕಪ್ಪಣ್ಣ ಅಂಗಳ ದಶಮಾನೋತ್ಸವ: 'ಕುವೆಂಪು ಬರಹ ಬದುಕು' ಉಪನ್ಯಾಸ: ಎಚ್.ಎಲ್. ಪುಷ್ಪ, ಟಿ. ವೆಂಕಟೇಶ್, 'ಸ್ವಪ್ನ ಸಿದ್ಧಿ' ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್ ನೀನಾಸಂ, ಉಪಸ್ಥಿತಿ: ಲಲಿತಾ ಶ್ರೀನಿವಾಸ್, ಸ್ನೇಹ ಕಪ್ಪಣ್ಣ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಸಂಜೆ 5.30

ಡಾ.ಸಿ. ಅಶ್ವಥ್ ಅವರ ಜನ್ಮದಿನದ ಸಂಭ್ರಮ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಟಿ.ಎನ್. ಸೀತಾರಾಂ, ಚಂದ್ರಾ ಅಶ್ವತ್ಥ್, ಕಿಕ್ಕೇರಿ ಕೃಷ್ಣಮೂರ್ತಿ, ವೈ.ಕೆ. ಮುದ್ದುಕೃಷ್ಣ, ಬಿ.ಆರ್. ಲಕ್ಷ್ಮಣರಾವ್, ಶ್ರೀನಿವಾಸ್ ಜಿ. ಕಪ್ಪಣ್ಣ, ಲಹರಿ ವೇಲು, ಶ್ರೀನಿವಾಸ ಉಡುಪ, ಆಯೋಜನೆ: ಸಂಸ್ಕೃತಿ ಫೌಂಡೇಷನ್, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5.30

ಇಂಚರ–131: 'ಮಹಾ ಪ್ರಯಾಣ' ಗಮಕ ವಾಚನ: ಕಾವ್ಯ ಪರಿಚಯ: ಭ.ರಾ. ವಿಜಯಕುಮಾರ್, ವಾಚನ: ಜಿ.ಎಸ್. ನಾರಾಯಣ, ವ್ಯಾಖ್ಯಾನ: ಮೃತ್ಯುಂಜಯ ತೇಜಸ್ವಿ, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 6.05

ಮಾರ್ಗಶೀರ್ಷೋತ್ಸವ: ಸಂಗೀತ ಕಾರ್ಯಕ್ರಮ: ಶಿವಶ್ರೀ ಸ್ಕಂದಪ್ರಸಾದ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಬೆಂಗಳೂರು ಜಿಲ್ಲಾ ನಾಟಕ ಸಂಭ್ರಮದ ಉದ್ಘಾಟನೆ: ವೂಡೇ ಪಿ. ಕೃಷ್ಣ, ಅತಿಥಿ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, 'ಮಹಾತ್ಮರ ಬರವಿಗಾರಿ' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಕಾಂತ್ ಎನ್. ವಿ., ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಯಕ್ಷ ರಂಗಾಯಣ, ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಕಸ್ತೂರಬಾ ಆಪ್ತ ರಂಗಮಂದಿರ, ಮಹಾತ್ಮ ಗಾಂಧಿ ಉದ್ಯಾನ, ಭಾರತ್‌ನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ.. nagaradalli_indu@prajavani.co.in

ಸಂಧಾನ: ಕಂದಾಯ ಸಿಬ್ಬಂದಿ ಧರಣಿ ಅಂತ್ಯ

ತುಷಾರ್ ಗಿರಿನಾಥ್, ಮಹೇಶ್ವರ್ ರಾವ್ ಮಧ್ಯಪ್ರವೇಶ: ಸಮಸ್ಯೆಗೆ ಪರಿಹಾರದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಾಂಶ ಸಮಸ್ಯೆ ಸರಿಪಡಿಸಬೇಕು, ಅಮಾನತು ಶಿಫಾರಸು ವಾಪಸ್ ಪಡೆಯಬೇಕು, ಮೇಲಧಿಕಾರಿ ಅವಾಚ್ಯ ಪದ ಬಳಕೆ ನಿಲ್ಲಿಸಬೇಕು' ಎಂದು ಜಿಬಿಎ ನೌಕರರು ನಡೆಸುತ್ತಿದ್ದ ಮೌನ ಪ್ರತಿಭಟನೆಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರ ಮಧ್ಯಪ್ರವೇಶದಿಂದ ಅಂತ್ಯಗೊಂಡಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ–ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮತ್ತು ಪದಾಧಿಕಾರಿಗಳೊಂದಿಗೆ ತುಷಾರ್ ಗಿರಿನಾಥ್ ಮತ್ತು ಮಹೇಶ್ವರ್ ರಾವ್ ಅವರು ಶನಿವಾರ ತುರ್ತು ಸಭೆ ನಡೆಸಿದರು.

ಇ–ಖಾತಾ ವಿತರಣೆ ತಂತ್ರಾಂಶದಲ್ಲಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸಿದರೆ ಇ–ಖಾತಾ ತ್ವರಿತವಾಗಿ ವಿತರಣೆ ಮಾಡಲು ಸಾಧ್ಯ ಎಂದು ನೌಕರರು ಗಮನಕ್ಕೆ ತಂದರು. ಎನ್‌ಐಸಿ ಸಂಸ್ಥೆಯೊಂದಿಗೆ ಸಭೆ ನಡೆಸಿ ಇ–ಖಾತಾ ತಂತ್ರಾಂಶದಲ್ಲಿರುವ ನ್ಯೂನತೆಯನ್ನು ಸರಿಪಡಿಸುವುದಾಗಿ ಇಬ್ಬರು ಅಧಿಕಾರಿಗಳು ಭರವಸೆ ನೀಡಿದರು.


ತುಷಾರ್ ಗಿರಿನಾಥ್, ಎಂ. ಮಹೇಶ್ವರ್ ರಾವ್ ನೇತೃತ್ವದಲ್ಲಿ ಜಿಬಿಎ ಕಂದಾಯ ವಿಭಾಗದ ನೌಕರರೊಂದಿಗೆ ಶನಿವಾರ ಸಭೆ ನಡೆಯಿತು

ಉಪ ಆಯುಕ್ತ ಡಿ.ಕೆ. ಬಾಬು ಮತ್ತು ಕಂದಾಯ ಅಧಿಕಾರಿ ವರಲಕ್ಷ್ಮಮ್ಮ ಅವರ ಅಮಾನತಿಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವವನ್ನು ಹಿಂಪಡೆಯಲು ನೌಕರರು ಮನವಿ ಮಾಡಿದರು. ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ ನಂತರ ಕ್ರಮ ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಬೆಳಿಗ್ಗೆ 8.30ಕ್ಕೆ ನಡೆಸುವ ವಿಡಿಯೊ ಸಂವಾದದಲ್ಲಿ ನಿಂದನಾತ್ಮಕ ಪದಗಳನ್ನು ಬಳಸುತ್ತಿರುವ ಬಗ್ಗೆ ನೌಕರರು ಗಮನಕ್ಕೆ ತಂದರು. 'ಮುನೀಶ್ ಅವರು ನಾಗರಿಕರಿಗೆ ತ್ವರಿತವಾಗಿ ಇ–ಆಸ್ತಿ ಪ್ರಕ್ರಿಯೆ ನಡೆಸಿಕೊಡಲು ಸೂಚಿಸುವಾಗ ಕೆಲವು ಪದಗಳನ್ನು ಬಳಸಿರಬಹುದು. ಕಂದಾಯ ಇಲಾಖೆಯ ಕಾರ್ಯಗಳ ಹಿತದೃಷ್ಟಿಯಿಂದ ಎಲ್ಲ ಅಧಿಕಾರಿ, ನೌಕರರು ಕಂದಾಯ ಇಲಾಖೆಯ ಮುಖ್ಯಸ್ಥರಾಗಿರುವ ವಿಶೇಷ ಆಯುಕ್ತರಿಗೆ ಸಹಕಾರ ನೀಡುವಂತೆ ಅಧಿಕಾರಿಗಳು ಕೋರಿದರು. ಹೀಗಾಗಿ ಮೌನ ಪ್ರತಿಭಟನೆಯನ್ನು ವಾಪಸ್ ಪಡೆದಿದ್ದೇವೆ. ನಮ್ಮ ಬೇಡಿಕೆಗೆ ಸ್ಪಂದಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಿರಿಯ ಅಧಿಕಾರಿಗಳಿಗೆ ಧನ್ಯವಾದಗಳು' ಎಂದು ಸಂಘದ ಅಧ್ಯಕ್ಷರು ತಿಳಿಸಿದರು.

ಯುವತಿಗೆ ಕಿರುಕುಳ: ಮೂವರು ಯುವಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮುಗಿಸಿಕೊಂಡು ಸ್ಕೂಟಿಯಲ್ಲಿ ಮನೆಗೆ ತೆರಳುತ್ತಿದ್ದ ಯುವತಿಗೆ ಕಿರುಕುಳ ನೀಡಿದ್ದ ಮೂವರು ಆರೋಪಿಗಳನ್ನು ಆಗ್ನೇಯ ವಿಭಾಗದ ಸದ್ದುಗುಂಟೆಪಾಳ್ಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶೇಖ್ ಆಯಾನ್(19), ಶೇಖ್ ರೋಷನ್ (19) ಹಾಗೂ ರಿಹಾನ್ ಖಾನ್ (18) ಬಂಧಿತರು.

'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಡಿ.25ರ ರಾತ್ರಿ ಕೆಲಸ ಮುಗಿಸಿಕೊಂಡು ಮೈಕೋಲೇಔಟ್‌ನಲ್ಲಿರುವ ಮನೆಗೆ ತೆರಳುತ್ತಿದ್ದರು. ಮಾರ್ಗಮಧ್ಯೆ ಬಿಟಿಎಂಲೇಔಟ್‌ನ ಮುಖ್ಯರಸ್ತೆಯಲ್ಲಿ ಮೂವರು ಯುವಕರು, ಹೆಲ್ಮೆಟ್ ಧರಿಸದೆ ಒಂದೇ ದ್ವಿಚಕ್ರ ವಾಹನದಲ್ಲಿ ಸಂಚರಿಸಿ ಯುವತಿಯನ್ನು ಸುಮಾರು 2 ಕಿ.ಮೀ. ವರೆಗೂ ಹಿಂಬಾಲಿಸಿದ್ದರು. ಅಲ್ಲದೇ ಕಿರುಕುಳ ನೀಡಿದ್ದರು. ದ್ವಿಚಕ್ರ ವಾಹನದ ಹಿಂದೆಯೇ ಕಾರು ಚಲಾಯಿಸಿಕೊಂಡು ಬರುತ್ತಿದ್ದ ವ್ಯಕ್ತಿಯೊಬ್ಬರು, ಯುವಕರ ಕೃತ್ಯ ಗಮನಿಸಿ ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಮಾಡಿದ್ದರು. ಆ ವಿಡಿಯೊವನ್ನು ನಗರ ಪೊಲೀಸ್ 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿದ್ದರು. ಆ ವಿಡಿಯೊವನ್ನು ಪೊಲೀಸರು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.



ಶೇಖ್ ಆಯಾನ್ ಹಾಗೂ ಶೇಖ್ ರೋಷನ್ (ಎಡಚಿತ್ರ). ಯುವತಿಯನ್ನು ಹಿಂಬಾಲಿಸಿದ್ದ ಆರೋಪಿಗಳು

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಸ್ಕೂಟಿಯ ನೋಂದಣಿ ಸಂಖ್ಯೆ ಪತ್ತೆಯಾಗಿತ್ತು. ಅದನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಮೂವರನ್ನು ಬಂಧಿಸಿದ್ದೇವೆ. ಬೇಗೂರು ಚಿಕನ್ ಶಾಪ್‌ನಲ್ಲಿ ರೋಷನ್ ಹಾಗೂ ಬಿಟಿಎಂ ಮೊದಲ ಹಂತದ ಚಿಕನ್ ಶಾಪ್‌ನಲ್ಲಿ ಶೇಖ್ ಆಯಾನ್ ಕೆಲಸ ಮಾಡುತ್ತಿದ್ದರು. ಬಿಟಿಎಂ ಮೊದಲ ಹಂತದ ಗ್ಯಾರೇಜ್‌ನಲ್ಲಿ ರಿಹಾನ್ ಖಾನ್ ಕೆಲಸ ಮಾಡುತ್ತಿದ್ದ. ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.


ಕೆಲಸ ಬಿಡುವ ವಿಚಾರಕ್ಕೆ ಗಲಾಟೆ: ಪತ್ನಿ ಕೊಲೆ, ಆರೋಪಿ ಸೆರೆ

ಬೆಂಗಳೂರು: ಕೆಲಸ ಬಿಡುವ ವಿಚಾರಕ್ಕೆ ಗಲಾಟೆ ನಡೆದು, ಪತ್ನಿಯ ಕೊಲೆ ಮಾಡಿದ ಪತಿಯನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಗ್ರಹಾರ ಲೇಔಟ್‌ನ ಆಯೆಷಾ ಸಿದ್ದಿಕಿ ಕೊಲೆಯಾದವರು.

ಕೃತ್ಯ ಎಸಗಿದ ಆರೋಪದ ಅಡಿ ಸೈಯದ್ ಜಬಿ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಆಯೆಷಾ ಅವರು ಮೂರು ತಿಂಗಳ ಹಿಂದೆ ಸೈಯದ್‌ನನ್ನು ಮದುವೆ ಆಗಿದ್ದರು.

ಆಯೆಷಾ ಅವರ ಮೊದಲ ಪತಿ ಮೃತಪಟ್ಟಿದ್ದರಿಂದ ಎರಡನೇ ಮದುವೆ ಆಗಿದ್ದರು. ಎರಡನೇ ಪತಿಗೂ ವಿಚ್ಛೇದನ ನೀಡಿ ಆರೋಪಿ ಸೈಯದ್ ಜತೆಗೆ ಮದುವೆ ಆಗಿದ್ದರು. ಆಯೆಷಾ ಮಸಾಜ್ ಪಾರ್ಲರ್,


ಆಯೆಷಾ


ಸೈಯದ್

ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆ ಕೆಲಸ ಬಿಡುವಂತೆ ಸೈಯದ್ ಒತ್ತಾಯಿಸಿದ್ದರು. ಕೆಲಸದ ವಿಚಾರವಾಗಿ ಇಬ್ಬರ ಮಧ್ಯೆ ಜಗಳ ನಡೆದು ವಿಕೋಪಕ್ಕೆ ತಿರುಗಿ ಆಯೆಷಾ ಅವರನ್ನು ಆರೋಪಿ ಕೊಲೆ ಮಾಡಿದ್ದಾನೆ. ಕೃತ್ಯ ಎಸಗಿದ ಬಳಿಕ ಯಲಹಂಕ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದ ಎಂದು ಮೂಲಗಳು ಹೇಳಿವೆ.

ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಳೆ ನೀರು ಸಂಗ್ರಹಿಸಿ, ಕೆರೆ ವ್ಯವಸ್ಥೆ ಉತ್ತಮಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರನ್ನು ಹೆಚ್ಚಾಗಿ ಸಂಗ್ರಹಿಸಲು ಕೆರೆಗಳ ವ್ಯವಸ್ಥೆಯನ್ನು ಉತ್ತಮಪಡಿಸಬೇಕಾದ ಅಗತ್ಯವಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಜನ ಅರ್ಬನ್ ಸ್ಪೇಸ್ ಫೌಂಡೇಷನ್ ಆಯೋಜಿಸಿದ್ದ 'ಬೆಂಗಳೂರಿಗಾಗಿ ಪ್ರಕೃತಿ ಆಧಾರಿತ ಪರಿಹಾರಗಳು: ಒಳಚರಂಡಿ ವ್ಯವಸ್ಥೆಯ ಕುರಿತ ಪರಾಮರ್ಶೆಗಳು' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಚರಂಡಿಗಳಿಂದ ಕೊಳಚೆನೀರನ್ನು ಹೊರಗಿಡುವುದು, ಒಳಚರಂಡಿಯನ್ನು ಬಲಪಡಿಸುವುದು, ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಸೃಷ್ಟಿಸಬೇಕಿದೆ. ಸಾರ್ವಜನಿಕರು ಮಳೆ ನೀರು ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

'ನಗರ ಒಳಚರಂಡಿ ವ್ಯವಸ್ಥೆಗಳ ಪುನರ್ ನಿರ್ಮಾಣ: ಬೆಂಗಳೂರಿನ ನಲ್ಲೂರಹಳ್ಳಿ ನಾಲಾ ಪುನಶ್ಚೇತನದಿಂದ ಕಲಿತ ಪಾಠಗಳು' ಎಂಬ ಕರಡು ವರದಿಯನ್ನು ಮಹೇಶ್ವರ್ ರಾವ್ ಬಿಡುಗಡೆ ಮಾಡಿದರು.

ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಜನ ಅರ್ಬನ್ ಸ್ಪೇಸ್ ಫೌಂಡೇಷನ್ ನಿರ್ದೇಶಕಿ ನಿತ್ಯಾ ರಮೇಶ್, ಮರ್ಸಿಡಿಸ್–ಬೆನ್ಜ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಇಂಡಿಯಾದ ಉಪಾಧ್ಯಕ್ಷೆ ಶ್ವೇತಾ ಪಾಂಡೆ, ನ್ಯಾಷನಲ್ ಇ-ಗವರ್ನನ್ಸ್ ಸರ್ವೀಸಸ್ ಲಿಮಿಟೆಡ್ ಕಾರ್ಯನಿರ್ವಾಹಕ ನಿರ್ದೇಶಕಿ ಇ. ಪಿ. ನಿವೇದಿತಾ ಭಾಗವಹಿಸಿದ್ದರು.

'ಸಾಹಿತ್ಯವು ಪ್ರಜ್ಞೆಯ ಹಂತ ಎತ್ತರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ, ಧರ್ಮಗಳನ್ನು ಸೇರಿದಂತೆ ಎಲ್ಲ ತರಹದ ಭೇದಗಳು ಕೆಳಹಂತದಲ್ಲಿ ಮಾತ್ರ ಇರುತ್ತವೆ. ನಮ್ಮ ಪ್ರಜ್ಞೆ ಎತ್ತರಕ್ಕೆ ಹೋದ ಮೇಲೆ ಯಾವುದೇ ಭೇದ ಭಾವ ಇರುವುದಿಲ್ಲ. ಸಾಹಿತ್ಯವು ಪ್ರಜ್ಞೆಯನ್ನು ಎತ್ತರಿಸುವ ಕೆಲಸ ಮಾಡಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

70ನೇ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಸಪ್ನ ಬುಕ್ ಹೌಸ್ ಶನಿವಾರ ಹಮ್ಮಿಕೊಂಡಿದ್ದ 70 ಕನ್ನಡ ಪುಸ್ತಕಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ತನಗೆ ಎಂಥ ಸಮಾಜ ಬೇಕು ಎಂದು ದಾರ್ಶನಿಕ, ಬರಹಗಾರ ಬಯಸುತ್ತಾನೋ ಅಂಥದ್ದೇ ಸಾಹಿತ್ಯವನ್ನು ಸಮಾಜಕ್ಕೆ ನೀಡಬೇಕು. ಆಗ ಸಮಾಜದ ವಿಕಾಸ ಆಗಲು ಸಾಧ್ಯ. ಅಂಥ ಸಾಹಿತ್ಯ ನಮ್ಮನ್ನು ತಟ್ಟಲು ಸಾಧ್ಯ' ಎಂದು ತಿಳಿಸಿದರು.

ಸಾಹಿತಿ ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, 'ನಮ್ಮ ಬದುಕಿನಲ್ಲಿ ಪುಸ್ತಕಗಳು ವಹಿಸುವ ಪಾತ್ರ ಬಹಳ ದೊಡ್ಡದು. ದೇಹಕ್ಕೆ ಒಳ್ಳೆಯ ಆಹಾರ ಎಷ್ಟು ಮುಖ್ಯವೋ ಮನಸ್ಸಿಗೂ ಪುಸ್ತಕಗಳ ಓದು ಮುಖ್ಯ. ಆಗ ದೇಹ, ಮನಸ್ಸಿನ ಸ್ವಾಸ್ಥ್ಯವನ್ನು ಕಾಪಾಡಲು ಸಾಧ್ಯ. ಪುಸ್ತಕಗಳು ಇಲ್ಲದೇ ಹೋಗಿದ್ದರೆ ಮಾನವನ ಬದುಕು ಅಂಧಕಾರದಲ್ಲಿ ಮುಳುಗುತ್ತಿತ್ತು. ಜಗತ್ತಿನಲ್ಲಿ ಎಲ್ಲವೂ ನಾಶವಾಗಬಹುದು. ಅಕ್ಷರ, ಅದರಿಂದ ಮೂಡಿದ ಸಾಹಿತ್ಯ ನಾಶವಾಗದು' ಎಂದು ಹೇಳಿದರು.

ಕೃತಿಗಳ ಬಗ್ಗೆ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮಾತನಾಡಿ, 'ಇಂದು ರಾಜ್ಯದ 31 ಜಿಲ್ಲೆಗಳ 70 ಸಾಹಿತಿಗಳ ಕೃತಿಗಳು ಬಿಡುಗಡೆಯಾಗಿವೆ' ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಹಂಪ ನಾಗರಾಜಯ್ಯ, ಪತ್ರಕರ್ತ ಗಿರೀಶ್ ರಾವ್ ಹತ್ವಾರ್ ಹಾಗೂ ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಉಪಸ್ಥಿತರಿದ್ದರು.



ಚಿರತೆ ದಾಳಿಗೆ ಸಿಲುಕಿ ಸತ್ತು ಬಿದ್ದಿರುವ ನಾಯಿ

ಚಿರತೆ ದಾಳಿಗೆ ನಾಯಿ ಬಲಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಶಿವಗಂಗೆ ಪಂಚಾಯಿತಿ ವ್ಯಾಪ್ತಿಯ ಗೌರಾಪುರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಚಿರತೆಯೊಂದು ನಾಯಿಯನ್ನು ಸಾಯಿಸಿದೆ.

ಗ್ರಾಮದ ಬಸವಣ್ಣ ದೇವಾಲಯದ ಹಿಂಭಾಗದಲ್ಲಿ ಚಿರತೆಯು ನಾಯಿಯನ್ನು ಹಿಡಿದು, ಎಳೆದುಕೊಂಡು ಹೋಗಿ ಒಂದಷ್ಟು ದೂರದಲ್ಲಿ ಬಿಟ್ಟು ಹೋಗಿದೆ.

ನಾರಾಯಣಪ್ಪ ಅವರ ಮನೆಯ ಬೀದಿಯಲ್ಲಿ ಈ ನಾಯಿ ಇರುತ್ತಿತ್ತು. ಹೀಗಾದರೆ ದನ–ಕರು, ಕುರಿ–ಮೇಕೆ ಸಾಕುವುದು ಹೇಗೆ ಎಂದು ಗ್ರಾಮದ ರುದ್ರೇಶ್ ಪ್ರಶ್ನಿಸಿದರು.

‘ಇತ್ತೀಚೆಗೆ ಶಿವಗಂಗೆ ಸುತ್ತಮುತ್ತ ಚಿರತೆಗಳು ಕಾಣಿಸಿಕೊಳ್ಳುತ್ತಿದ್ದು, ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡುತ್ತಿವೆ. ಸಂಜೆಯ ನಂತರ ಒಂಟಿಯಾಗಿ ಓಡಾಡಲು ಭಯವಾಗುತ್ತಿದೆ’ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.

ನಗರದ ಗಾಳಿ ಗುಣಮಟ್ಟದಲ್ಲಿ ಕುಸಿತ

2020ರ ಎಕ್ಯೂಐ ದಾಟಿದ 2025; ಈ ವರ್ಷ ಎರಡು ದಿನ ಮಾತ್ರ ಉತ್ತಮ ಗಾಳಿ

• ಆರ್.ಮಂಜುನಾಥ್

ಬೆಂಗಳೂರು: ನಗರದಲ್ಲಿ 2025ರಲ್ಲಿ ಗಾಳಿ ಗುಣಮಟ್ಟ ಐದು ವರ್ಷ ಹಿಂದಿನ ವಾಯುಗುಣಮಟ್ಟ ಸೂಚ್ಯಂಕವನ್ನು (ಎಕ್ಯೂಐ) ಮೀರಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 22ರಷ್ಟು ಗಾಳಿ ಗುಣಮಟ್ಟ ಕುಸಿದಿದೆ.

ಬೆಂಗಳೂರಿನಲ್ಲಿ ಒಂದು ದಿನ ಸಾಮಾನ್ಯವಾಗಿ ಉಸಿರಾಡಿದರೂ ಅದು ಮೂರು ಸಿಗರೇಟ್ ಸೇದುವುದಕ್ಕೆ ಸಮನಾಗಿರುವಷ್ಟು ಗಾಳಿ ಗುಣಮಟ್ಟ ಹಾಳಾಗಿದೆ. 2020ರ ಫೆಬ್ರುವರಿಯಲ್ಲಿ ನಗರದಲ್ಲಿ ಎಕ್ಯೂಐ ಸರಾಸರಿ 131 ದಾಖಲಾಗಿತ್ತು. ಈ ವರ್ಷದ ಡಿಸೆಂಬರ್ 27ರ ವೇಳೆಗೆ ಎಕ್ಯೂಐ ಸರಾಸರಿ 143 ಆಗಿದೆ. ಡಿಸೆಂಬರ್ 21ರಂದು 175 ಎಕ್ಯೂಐ ದಾಖಲಾಗಿತ್ತು.

2025ರ ಅಕ್ಟೋಬರ್ ನಂತರ ನಗರದ ಗಾಳಿಯಲ್ಲಿ ಮಾಲಿನ್ಯ ಪ್ರಮಾಣ ಹೆಚ್ಚಾಗುತ್ತಿದ್ದು, ಡಿಸೆಂಬರ್ 5ರ ನಂತರ, ದಿನದ ಸರಾಸರಿ ಐಕ್ಯೂಐ 149ಕ್ಕಿಂತ ಹೆಚ್ಚೇ ಇದೆ. 2025ರಲ್ಲಿ ಎರಡನೇ ಬಾರಿಗೆ ಒಂದು ದಿನದ ಸರಾಸರಿ ಎಕ್ಯೂಐ (166) ಡಿ.15ರಂದು ದಾಖಲಾಗಿದ್ದು, ನವೆಂಬರ್ 28ರಂದು ಕೂಡ 167 ಎಕ್ಯೂಐ ದಾಖಲಾಗಿತ್ತು. ಅಕ್ಟೋಬರ್ 1ರಿಂದ ಡಿಸೆಂಬರ್ 15ರವರೆಗಿನ ಅವಧಿಯಲ್ಲಿ ನವೆಂಬರ್ 22ರಂದು ಮಾತ್ರ ಅತಿಕಡಿಮೆ ಎಕ್ಯೂಐ (52) ದಾಖಲಾಗಿತ್ತು.


2025ರ 361 ದಿನಗಳಲ್ಲಿ (ಡಿಸೆಂಬರ್ 27ರವರೆಗೆ) ಎರಡು ದಿನಗಳು ಮಾತ್ರ ಗಾಳಿ ಗುಣಮಟ್ಟ ಉತ್ತಮ ಮಟ್ಟದಲ್ಲಿತ್ತು. 253 ದಿನಗಳಲ್ಲಿ ಸಮಾಧಾನಕರ, 81 ದಿನಗಳಲ್ಲಿ ಮಧ್ಯಮ ಮತ್ತು 24 ದಿನ ಗಾಳಿ ಗುಣಮಟ್ಟದ ಸೂಚ್ಯಂಕ ಅನಾರೋಗ್ಯಕರ ಮಟ್ಟದಲ್ಲಿತ್ತು. ಕಳೆದ ಐದು ವರ್ಷಗಳಿಗೆ ಹೋಲಿಸಿದರೆ 2025ರಲ್ಲಿ ಗಾಳಿ ಅತಿಹೆಚ್ಚು ಮಾಲಿನ್ಯಗೊಂಡಿದೆ ಎಂದು ಮಾಪನ ಕೇಂದ್ರಗಳ ದತ್ತಾಂಶ ತಿಳಿಸಿದೆ.

175 ಎಕ್ಯೂಐ
ನಗರದಲ್ಲಿ ಡಿ.21ರಂದು ದಾಖಲಾದ (ಬೆಳಿಗ್ಗೆ 4.05) ಗರಿಷ್ಠ ಗಾಳಿ ಮಾಲಿನ್ಯ


71 ಎಕ್ಯೂಐ
ನಗರದಲ್ಲಿ ಡಿ.3ರಂದು ದಾಖಲಾದ (ಸಂಜೆ 4) ಕನಿಷ್ಠ ಗಾಳಿ ಮಾಲಿನ್ಯ

131 ಎಕ್ಯೂಐ
ಬೆಂಗಳೂರಿನಲ್ಲಿ 2020ರ ಫೆಬ್ರುವರಿಯಲ್ಲಿ ಅತಿಹೆಚ್ಚು ಗಾಳಿ ಮಾಲಿನ್ಯ ದಾಖಲಾಗಿತ್ತು

33 ಎಕ್ಯೂಐ
2023ರ ಜೂನ್‌ನಲ್ಲಿ ಅತಿ ಕಡಿಮೆ ಮಾಲಿನ್ಯ ದಾಖಲಾಗಿತ್ತು



ನಗರದಲ್ಲಿ 2025ರಲ್ಲಿ ದಾಖಲಾದ ಎಕ್ಯೂಐ



ಎಕ್ಯೂಐ ಮಾನದಂಡ	
ಉತ್ತಮ	0-50
ಸಮಾಧಾನಕರ	51-100
ಮಧ್ಯಮ	101-150
ಅನಾರೋಗ್ಯಕರ	151-200
ತೀವ್ರ ಅನಾರೋಗ್ಯಕರ	201-250
ಅಪಾಯಕಾರಿ	251-300

ಸುದ್ದಿ 2 ನಿಮಿಷ

‘ರೈತರು ಮಣ್ಣಿನ ಆರೋಗ್ಯಕ್ಕೆ ಒತ್ತು ಕೊಡಿ’

ದಾಬಸ್ ಪೇಟೆ: ‘ಕೃಷಿಯಲ್ಲಿ ಮಣ್ಣು ಮತ್ತು ನೀರು ಅತ್ಯಮೂಲ್ಯ. ಈ ಎರಡೂ ಕಲುಷಿತವಾಗದಂತೆ ನಮ್ಮ ರೈತರು ನೋಡಿಕೊಳ್ಳಬೇಕು. ಸರ್ಕಾರದಿಂದ ಕೃಷಿ ಭಾಗ್ಯ ಯೋಜನೆಯಡಿ ಸೌಲಭ್ಯ ಸಿಗಲಿದ್ದು, ರೈತರು ಅದನ್ನು ಬಳಸಿಕೊಳ್ಳಬೇಕು’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಪಂಕಜಾ ಹೇಳಿದರು. ದಾಬಸ್‌ಪೇಟೆಯಲ್ಲಿ ಆಯೋಜಿಸಿದ್ದ ‘ರೈತ ದಿನಾಚರಣೆ’ಯಲ್ಲಿ ಅವರು ಮಾತನಾಡಿದರು.

‘ಸರ್ಕಾರ ಅಭಿವೃದ್ಧಿ ಹೆಸರಲ್ಲಿ ರೈತರ ಫಲವತ್ತಾದ ಕೃಷಿ ಜಮೀನು ಕಬಳಿಸುತ್ತಿದೆ. ರೈತರ ಜಮೀನಿಗೆ ಉತ್ತಮ ಬೆಲೆಯೂ ಸಿಗುತ್ತಿಲ್ಲ. ಜಮೀನು ಕಳೆದುಕೊಳ್ಳುವ ರೈತರ ಹಿತ ಕಾಯುವ ಕೆಲಸವನ್ನು ಸರ್ಕಾರ ಮಾಡಬೇಕು’ ಎಂದು ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೆ.ಆರ್.ಚನ್ನೇಗೌಡ ಒತ್ತಾಯಿಸಿದರು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹನುಮಂತರಾಯ ಮಾತನಾಡಿ, ‘ರೈತರು ಸಮಗ್ರ ಕೃಷಿಯನ್ನು ಅಳವಡಿಸಿ-ಕೊಂಡಾಗ ಆರ್ಥಿಕವಾಗಿ ಸದೃಢರಾಗಲು ಸಾಧ್ಯ’ ಎಂದರು.

ಕೃಷಿ, ಮೀನುಗಾರಿಕೆ, ತೋಟಗಾರಿಕೆ, ರೇಷ್ಮೆ ಇಲಾಖೆಗಳು ಮಳಿಗೆ ತೆರೆದು, ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸಿದರು. ಉತ್ತಮ ರೈತರನ್ನು ಸನ್ಮಾನಿಸಲಾಯಿತು. ಜಿಕೆವಿಕೆಯ ಕೃಷಿ ವಿಜ್ಞಾನಿ ಸುರೇಶ್, ಪ್ರಭಾರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ರಾಘವೇಂದ್ರ, ಕೃಷಿಕ ಸಮಾಜದ ಜಿಲ್ಲಾ ಪ್ರತಿನಿಧಿ ಹೊನ್ನಸಿದ್ದಪ್ಪ ಭಾಗವಹಿಸಿದ್ದರು.

ಕೆ.ಆರ್.ಪುರ: ಸಾಂಸ್ಕೃತಿಕ ಕಲರವ



ಕೆ.ಆರ್.ಪುರ: ಕನ್ನಡ ಭಾಷೆಗೆ ಯಾವುದೇ ಜಾತಿ ಧರ್ಮದ ಹಂಗಿಲ್ಲ. ಪ್ರತಿಯೊಬ್ಬರೂ ಕನ್ನಡವನ್ನು ಪ್ರೀತಿಸಿ ಎಂದು ಸಂಗೀತ ನಿರ್ದೇಶಕ, ಗಾಯಕ ಶಶಿಧರ್ ಕೋಟೆ ಹೇಳಿದರು.

ಕೆ.ಆರ್.ಪುರದ ಶ್ರೀವೆಂಕಟೇಶ್ವರ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ ‘ಸಾಂಸ್ಕೃತಿಕ ಕಲರವ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾಷೆಯ ಸೊಗಡು, ಸಾಂಸ್ಕೃತಿಕ ಹಿನ್ನೆಲೆ, ಭೌಗೋಳಿಕ ಇತಿಹಾಸ ನಮ್ಮ ನಾಡಿನ ಸಾಂಸ್ಕೃತಿಕ ಗರಿಮೆಯನ್ನು ಎತ್ತರಕ್ಕೆ ಕೊಂಡೊಯ್ಯುತ್ತವೆ. ಕನ್ನಡ ಬಗ್ಗೆ ಅಭಿಮಾನ ಹೊಂದಿ ಕನ್ನಡ ಪ್ರೀತಿಸುವ ಕೆಲಸವಾಗಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳೂ ಹೆಚ್ಚಾಗಬೇಕು’ ಎಂದರು.

ದಕ್ಷಿಣ ಜಿಲ್ಲೆಯ ಪದವಿಪೂರ್ವ ಶಾಲಾ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ಹೊ.ನ.ನೀಲಕಂಠೇಗೌಡ, ‘ತಂತ್ರಜ್ಞಾನಗಳಿಂದ ಜೀವನ ಹಾಳು ಮಾಡಿಕೊಳ್ಳದೆ, ಉತ್ತಮ ರೀತಿಯಲ್ಲಿ ಬಳಕೆ ಮಾಡಿಕೊಳ್ಳಿ. ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಿರಿ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಕಾಲೇಜು ಸಂಸ್ಥಾಪಕ ಡಾ.ಕೆ.ವಿ.ಮುನಿಸ್ವಾಮಿ, ನಿರ್ದೇಶಕ ಪ್ರೊ.ವಿ.ಎಂ.ರವಿ, ಆಡಳಿತಾಧಿಕಾರಿ ಪುಟ್ಟರಾಜು, ಪ್ರಾಂಶುಪಾಲ ಜಿ.ಇ.ಪ್ರಕಾಶ್, ಸತ್ಯಶೀಲಾನಾಯರ್ ಉಪಸ್ಥಿತರಿದ್ದರು.



ಎಲ್‌ಎನ್‌ಆರ್ ಶಾಲೆಯ ವಾರ್ಷಿಕೋತ್ಸವದಲ್ಲಿ ನಟ ರಮೇಶ್ ಭಟ್ ಅವರನ್ನು ಸನ್ಮಾನಿಸಲಾಯಿತು

ಮಕ್ಕಳ ಆಸಕ್ತಿ ಗುರುತಿಸಿ ಪ್ರೋತ್ಸಾಹಿಸಿ: ರಮೇಶ್ ಭಟ್

ಪ್ರಜಾವಾಣಿ ವಾರ್ತೆ

ಕೆಂಗೇರಿ: ಮಕ್ಕಳ ಕಲಿಕೆಯ ಆಸಕ್ತಿ ಗುರುತಿಸಿ ಅದನ್ನು ಪ್ರೋತ್ಸಾಹಿಸಬೇಕು. ಪೋಷಕರು ಒತ್ತಡ ಹೇರದಂತೆ ನೋಡಿಕೊಳ್ಳಬೇಕು ಎಂದು ಚಲನಚಿತ್ರ ನಟ ರಮೇಶ್ ಭಟ್ ಹೇಳಿದರು.

ರಾಮೋಹಳ್ಳಿ ಗ್ರಾಮದ ಎಲ್‌ಎನ್‌ಆರ್ ಶಾಲೆಯ 17ನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಿ, ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಪಠ್ಯ ಚಟುವಟಿಕೆ ಅಷ್ಟೇ ಅಲ್ಲದೆ ಮಕ್ಕಳಲ್ಲಿರುವ ವಿಶೇಷ ಕಲೆ ಗುರುತಿಸಿ, ಪ್ರೋತ್ಸಾಹಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಗೆ ಕಾರಣಕರ್ತರಾಗಬೇಕು. ಅಂಕ ಒಂದೇ ಮಾನದಂಡ ಆಗಬಾರದು ಎಂದು ಹೇಳಿದರು.

ಸಮಾರಂಭದಲ್ಲಿ ಚಲನಚಿತ್ರ ನಟಿ ಭವ್ಯ, ಶಿಕ್ಷಣ ತಜ್ಞೆ ಗೀತಾ ರಾಮಾನುಜಮ್, ಚಲನಚಿತ್ರ ನಟಿ ರಂಜಿನಿ, ರಾಣಾ, ಕಿರುತೆರೆ ನಟ ಪ್ರಕಾಶ್, ಪತ್ರಕರ್ತ ಸುಧೀಂದ್ರ ಕುಮಾರ್, ಯುದ್ಧಭೂಮಿ ಹೋರಾಟ ಸೇನೆ ಅಧ್ಯಕ್ಷ ಹೇಮಂತರಾಜ್, ಶಿಕ್ಷಣ ಸಂಸ್ಥೆ ಸಂಸ್ಥಾಪಕ ಲಕ್ಷ್ಮೀನಾರಾಯಣ ಅರಸು, ಪ್ರಾಂಶುಪಾಲೆ ಅರುಣ ಉಪಸ್ಥಿತರಿದ್ದರು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಅವರು ಶ್ರೀನಿವಾಸ ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಜನಾರ್ಪಣೆ ಮಾಡಿದರು. ಮುಖಂಡರಾದ ಬಿ.ಚರಣ್ ಗೌಡ, ಸಾಕಮ್ಮ ಎನ್‌.ಶೇಖರ್, ಗಿರೀಶ್ ಗೌಡ, ಜಿ.ಮೋಹನ್ ಕುಮಾರ್ ಉಪಸ್ಥಿತರಿದ್ದರು

ರೈತಸಂತೆ, ರೈತ ದಿನಾಚರಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

‘ಹಳ್ಳಿ ಬದುಕಿನ ಪಠ್ಯಕ್ರಮ ರೂಪಿಸಿ’

ಪ್ರಜಾವಾಣಿ ವಾರ್ತೆ

ಯಲಹಂಕ: ನಗರದ ವಿದ್ಯಾರ್ಥಿಗಳಿಗೆ ಹಳ್ಳಿ ಬದುಕಿನ ಬಗ್ಗೆ ಅರಿವು ಮೂಡಿಸಲು ಪಠ್ಯಕ್ರಮ ರೂಪಿಸಬೇಕು. ಈ ಬಗ್ಗೆ ಕೃಷಿ ಸಚಿವರು ಹಾಗೂ ಕೃಷಿ ವಿಶ್ವವಿದ್ಯಾಲ-ಯದ ಕುಲಪತಿಗಳು ರೂಪುರೇಷೆ ಸಿದ್ಧ-ಪಡಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದರು.

ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಶನಿವಾರ ಏರ್ಪಡಿಸಿದ್ದ ರೈತಸಂತೆ ಹಾಗೂ ರೈತ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜಸ್ಥಾನ ಬಿಟ್ಟರೆ ಕರ್ನಾಟಕದಲ್ಲೇ ಹೆಚ್ಚು ಕೃಷಿ ಭೂಮಿ ಇದೆ. ಕೃಷಿಗೆ ಉತ್ತೇಜನ ನೀಡಲು ನಮ್ಮ ಸರ್ಕಾರ ರೈತರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಪೂರೈಸುತ್ತಿದೆ. ಇದಕ್ಕಾಗಿ ವಾರ್ಷಿಕ ₹20 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ. ಕೆರೆಗೆ ನೀರು ತುಂಬಿಸುವ ಯೋಜನೆಯ ವಿದ್ಯುತ್ ಬಿಲ್ ಮೊತ್ತ ₹3 ಸಾವಿರ ಕೋಟಿ ಕಟ್ಟಬೇಕಿದೆ. ರೈತರಿಗೆ ಹಲವಾರು ಸಂಕಟಗಳು ಬರುತ್ತಿರುತ್ತವೆ. ನಾವು ಅದನ್ನು ಸವಾಲಾಗಿ ಸ್ವೀಕರಿಸಿ ಬಗೆಹರಿಸುತ್ತೇವೆ’ ಎಂದರು.

‘ರೈತ ಸಂತೆಯಲ್ಲಿ ಒಂದು ಪ್ಯಾಕೆಟ್ ಅಣಬೆಗೆ ₹50 ಇದ್ದು, ಇದೇ ಅಣಬೆಯನ್ನು ಮಾಲ್‌ಗಳಲ್ಲಿ ₹250ಕ್ಕೆ ಮಾರಾಟ ಮಾಡುತ್ತಿದ್ದಾರೆ. ರೈತನಿಂದ ಮಾರುಕಟ್ಟೆಗೆ ತಲುಪುವವರೆಗೆ ಕೈ ಬದಲಾಗುವುದರೊಳಗೆ ಬೆಲೆ ಐದು ಪಟ್ಟು ಹೆಚ್ಚಾಗುತ್ತದೆ. ಈ ದಿಸೆಯಲ್ಲಿ ರೈತರಿಗೆ ನೆರವಾಗಲು ಈ ರೈತಸಂತೆ ಆಯೋಜಿಸಿರುವುದು ಶ್ಲಾಘನೀಯ’ ಎಂದು ಹೇಳಿದರು.

ಕೃಷಿ ಸಚಿವ ಎನ್. ಚಲುವರಾಯ-ಸ್ವಾಮಿ ಮಾತನಾಡಿ, ‘ಕರ್ನಾಟಕವು ಕೃಷಿ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲೇ ಮುಂಚೂಣಿಯಲ್ಲಿದೆ. ಹಲವಾರು ವಿನೂತನ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದೆ. ಇದಕ್ಕೆ ನಮ್ಮ ರೈತರು, ಕೃಷಿ ವಿಶ್ವವಿದ್ಯಾಲಯಗಳು, ವಿಜ್ಞಾನಿಗಳು ಹಾಗೂ ಸಂಶೋಧಕರು ಕಾರಣಕರ್ತರಾಗಿದ್ದಾರೆ. ಕೃಷಿಯು ಭಾರತದಲ್ಲಿ ಕೇವಲ ಉದ್ಯೋಗವಲ್ಲ, ಅದು ಜೀವನಶೈಲಿ ಮತ್ತು ಸಂಸ್ಕೃತಿಯ ಪ್ರತಿಬಿಂಬವಾಗಿದೆ. ರೈತನು ಭೂಮಿಯನ್ನು ಹದಮಾಡಿ, ಬೆಳೆಗಳನ್ನು ಬೆಳೆಸಿ, ರಾಷ್ಟ್ರದ ಆಹಾರ ಭದ್ರತೆಯನ್ನು ಕಾಪಾಡುತ್ತಿದ್ದಾನೆ. ಹಸಿವಿಲ್ಲದ ಸಮಾಜವನ್ನು ನಿರ್ಮಿಸುವಲ್ಲಿ ರೈತನ ಪಾತ್ರ ಮಹತ್ವದ್ದು ಎಂದು ತಿಳಿಸಿದರು.

60 ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಕೃಷಿ ವಿಶ್ವವಿದ್ಯಾಲಯವು ಆರು ದಶಕಗಳ ಸುದೀರ್ಘ ಅವಧಿಯಲ್ಲಿ 337 ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಿದ್ದು, ಶೈಕ್ಷಣಿಕ ವರ್ಷ 2026–27ರಿಂದ ಹೊಸ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಿದೆ ಎಂದರು.

ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳ 9 ಜಿಲ್ಲೆಗಳ 18 ಪ್ರಗತಿಪರ ರೈತರನ್ನು ಸನ್ಮಾ-ನಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ, ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ. ಪ್ರಶಾಂತ್ ಉಪಸ್ಥಿತರಿದ್ದರು.



ರೈತ ದಿನಾಚರಣೆಯಲ್ಲಿ ಪ್ರಗತಿಪರ ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು. ಡಿ.ಕೆ. ಶಿವಕುಮಾರ್, ಎನ್. ಚಲುವರಾಯಸ್ವಾಮಿ, ಎಸ್‌.ವಿ.ಸುರೇಶ ಭಾಗವಹಿಸಿದ್ದರು

‘ಕೋಳಿ ಸಾಕಣೆ ತರಬೇತಿ ಪಡೆದಿದ್ದೆ’

‘ನಾನು ಕೂಡ ರೈತನ ಮಗ. ಖುದ್ದಾಗಿ ವ್ಯವಸಾಯ ಮಾಡದಿದ್ದರೂ ನೂರಾರು ಎಕರೆ ಆಸ್ತಿ ಹೊಂದಿದ್ದೇನೆ. ವಿದ್ಯಾರ್ಥಿಯಾಗಿದ್ದಾಗ ಈ ಕೃಷಿ ಕಾಲೇಜಿಗೆ ಬಂದು ಕೋಳಿ ಸಾಕಣೆ ಬಗ್ಗೆ ತರಬೇತಿ ಪಡೆದಿದ್ದೆ. ನಮ್ಮ ಊರಿನಲ್ಲಿ ರೇಷ್ಮೆ ಬೆಳೆಯುತ್ತಿದ್ದೇನೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನನ್ನ ತಮ್ಮ ರೇಷ್ಮೆ ನೂಲು ಕಾರ್ಖಾನೆ ಆರಂಭಿಸಿದ್ದಾನೆ. ನಮ್ಮ ಜಮೀನಿನಲ್ಲಿ ವೀಳ್ಯದೆಲೆ, ಮೆಣಸು ಹಾಕಿದ್ದೇವೆ. ನಮ್ಮ ಮಗನಿಗೂ ಕೃಷಿ ಬಗ್ಗೆ ತೊಡಗಿಸಿ ಕೊಳ್ಳುವಂತೆ ಉತ್ತೇಜನ ನೀಡುತ್ತಿದ್ದೇನೆ. ನನ್ನ ಮಗಳು ಕಾಫಿ ಬೆಳೆಗಾರರ ಮನೆಗೆ ಸೇರಿದ್ದಾಳೆ. ನಮ್ಮ ವ್ಯವಹಾರ ಏನೇ ಇದ್ದರೂ ರೈತರ ಕುಟುಂಬದಲ್ಲಿದ್ದೇವೆ. ನಮಗೆ ರೈತರ ಶ್ರಮದ ಬಗ್ಗೆ ಅರಿವಿದ್ದು, ಅವರಿಗೆ ಸಂಬಳ, ಪಿಂಚಣಿ, ಬಡ್ತಿ, ಲಂಚ ಯಾವುದೂ ಇಲ್ಲ’ ಎಂದು ಹೇಳಿದರು.

ರೈತಸಂತೆಗೆ ಉತ್ತಮ ಪ್ರತಿಕ್ರಿಯೆ

ರೈತ ಸಂತೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ನೂರಾರು ಕೃಷಿಕರು ಪಾಲ್ಗೊಂಡಿದ್ದರು. ಬೆಳೆದ ಸಸಿ, ಹಣ್ಣು-ತರಕಾರಿ, ಮಹಿಳೆಯರು ತಯಾರಿಸಿದ ಆಹಾರೋತ್ಪನ್ನಗಳು, ಅಮಟೆಕಾಯಿ, ಬೆಟ್ಟದ ನೆಲ್ಲಿಕಾಯಿ ತೊಕ್ಕುಗಳಿಂದ ತರಹೇವಾರಿ ಉಪ್ಪಿನಕಾಯಿ, ಸಾವಯವ ಬೆಲ್ಲ ಮತ್ತು ಕಬ್ಬು, ಅವರೇಕಾಯಿ ಸುಳಿಯುವ ಯಂತ್ರ, ಬೇಕರಿ ಪದಾರ್ಥಗಳು, ಎರೆಹುಳು ಗೊಬ್ಬರ, ನಾಟಿ ಕೋಳಿ, ಮೊಟ್ಟೆ, ತಿಂಡಿ-ತಿನಿಸುಗಳನ್ನು ಮಾರಾಟ ಮಾಡಿದರು.

ಇದರ ಜೊತೆಗೆ ಎತ್ತುಗಳು, ಹಸು, ಮೇಕೆ-ಕುರಿಗಳ ಪ್ರದರ್ಶನ, ರಾಗಿಯ ರಾಶಿಪೂಜೆ ಜನರ ಗಮನ ಸೆಳೆಯಿತು. ಜನರು ಎತ್ತಿನ ಬಂಡಿಯಲ್ಲಿ ಸವಾರಿ ಮಾಡಿ ಸಂಭ್ರಮಿಸಿದರು.

ಬಾಂಗ್ಲಾ ಹಿಂದೂಗಳ ಮೇಲಿನ ಹಿಂಸಾಚಾರ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ಹಿಂಸಾಚಾರ ಖಂಡಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ಕಾರ್ಯಕರ್ತರು ನಗರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬಾಂಗ್ಲಾದೇಶದ ಮೈಮನ್‌ಸಿಂಗ್ ಪ್ರದೇಶದಲ್ಲಿ ದೀಪುಚಂದ್ರ ದಾಸ್ ಅವರನ್ನು ಗುಂಪೊಂದು ಮರಕ್ಕೆ ಕಟ್ಟಿಹಾಕಿ ಜೀವಂತ ದಹನ ಮಾಡಿದೆ. ಅಲ್ಲದೇ ಬಾಂಗ್ಲಾದೇಶದಲ್ಲಿ ಹಿಂದೂ ಸಮಾಜದವರನ್ನು ಗುರಿಯಾಗಿಸಿ ಕೊಂಡು ಅವರ ಮನೆಗಳು ಹಾಗೂ ಅಂಗಡಿಗಳನ್ನು ಸುಟ್ಟು ಹಾಕಲಾಗುತ್ತಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಹಿಂದೂ ವಿರೋಧಿ ಹಿಂಸಾಚಾರವನ್ನು ತಡೆಯಲು ಭಾರತ ಸರ್ಕಾರವು ಬಾಂಗ್ಲಾದೇಶದ ಮೇಲೆ ಆರ್ಥಿಕ, ವ್ಯಾಪಾರ ಹಾಗೂ ರಾಜಕೀಯ ನಿರ್ಬಂಧಗಳನ್ನು ವಿಧಿಸಬೇಕು. ಬಾಂಗ್ಲಾದೇಶದ ಉಗ್ರ ಹಾಗೂ ಮತೀಯ ಗುಂಪುಗಳ ವಿರುದ್ಧ ಕಠಿಣ ಮಿಲಿಟರಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಾಂಗ್ಲಾದಲ್ಲಿನ ಹಿಂದೂಗಳ ಸುರಕ್ಷತೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಪ್ರಯತ್ನಿಸಬೇಕು. ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಾಂಗ್ಲಾದೇಶದ ಹೈ ಕಮಿಷನರ್ ಅವರಿಗೆ ಬೆಂಗಳೂರು ಜಿಲ್ಲಾಧಿಕಾರಿ ಮೂಲಕ ಮನವಿ ಪತ್ರ ಸಲ್ಲಿಸಿದರು. ಶ್ರೀರಾಮ ಸೇನೆಯ ಮುಖಂಡ ಸುಂದರೇಶ್ ನರ್ಗಲ್, ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನ ಗೌಡ, ಶ್ರೀರಾಮ ಸೇನೆಯ ನಗರ ಅಧ್ಯಕ್ಷ ಮಂಜುನಾಥ, ದುರ್ಗಾ ಸೇನೆಯ ಸರಸ್ವತಿ ಪ್ರವೀಣ, ಮಲ್ಲಿಕಾರ್ಜುನ ರಾಜು, ವಕೀಲರಾದ ಕೆ.ಕೃಷ್ಣಸ್ವಾಮಿ ಸೇರಿ ಇತರರು ಇದ್ದರು.

ಮುಖ್ಯಮಂತ್ರಿಗೆ ಸಲಹೆ ನೀಡಲು ಸಭಾಧ್ಯಕ್ಷ ಯು.ಟಿ. ಖಾದರ್ ಚಿಂತನೆ

ಹಾಜರಾತಿ ಅನುಸರಿಸಿ ಶಾಸಕರ ಅನುದಾನ

• ಸುಜಯ್ ಬಿ.ಎಂ



ಬೆಂಗಳೂರು: ವಿಧಾನಸಭೆಯಲ್ಲಿ ಶಾಸಕರ ಹಾಜರಾತಿ ಮತ್ತು ಅವರ ಕಾರ್ಯಕ್ಷಮತೆ ಆಧರಿಸಿ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡುವ ಕುರಿತು ಸರ್ಕಾರಕ್ಕೆ ಸಲಹೆ ನೀಡಲು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಚಿಂತನೆ ನಡೆಸಿದ್ದಾರೆ.

ಈ ಮೂಲಕ ವಿಧಾನಸಭೆಯಲ್ಲಿ ಶಾಸಕರ ಹಾಜರಾತಿ ಮತ್ತು ಕಲಾಪಗಳಲ್ಲಿ ಪಾಲ್ಗೊಳ್ಳುವಿಕೆ ಹೆಚ್ಚಿಸಲು ಸಾಧ್ಯ ಎಂಬುದು ಅವರ ಆಲೋಚನೆ. ಶಾಸಕರು, ಕಲಾಪ ಸಲಹಾ ಸಮಿತಿ ಸದಸ್ಯರು, ಸಚಿವರು, ವಿರೋಧ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿಯ ವರಿಗೂ ಅನ್ವಯವಾಗುವಂತೆ ಹಾಜರಾತಿ ಆಧರಿಸಿ ಅನುದಾನ ನೀಡುವ ವ್ಯವಸ್ಥೆ ಜಾರಿ ತರಲು ಸಲಹೆ ನೀಡಲು ಉದ್ದೇಶಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕಲಾಪದಲ್ಲಿ ಶಾಸಕರ ಹಾಜರಾತಿ ಹೆಚ್ಚಬೇಕು ಮತ್ತು ಚರ್ಚೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಕಾರಣಕ್ಕೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಶೇಷವಾಗಿ ಮೊದಲ ಬಾರಿ ಆಯ್ಕೆಯಾದವರು ಚರ್ಚೆಯಲ್ಲಿ ಪಾಲ್ಗೊಳ್ಳಬೇಕು ಮತ್ತು ಹಿರಿಯ ಸಂಸದೀಯ ಪಟುಗಳ ಚರ್ಚೆ ಆಲಿಸಬೇಕು ಎಂಬ ಕಾರಣಕ್ಕೆ ಪ್ರತಿ ಅಧಿವೇಶನದ ವೇಳೆಯೂ ಖಾದರ್ ಆಗ್ರಹಪಡಿಸುತ್ತಲೇ ಬಂದಿದ್ದಾರೆ.

‘ಕಲಾಪದಲ್ಲಿ ಶಾಸಕರ ಹಾಜರಾತಿ ಆಧರಿಸಿ ಅನುದಾನ ಹಂಚಿಕೆ ಮಾಡುವ ಪರಿಲ್ಪನೆ ಒಳ್ಳೆಯದೇ. ಹೆಚ್ಚಿನ ಚರ್ಚೆಗಾಗಿ ಅಧಿವೇಶನದ ದಿನಗಳನ್ನೂ ಹೆಚ್ಚಿಸಬೇಕು. ವರ್ಷಕ್ಕೆ 60 ದಿನ ಅಧಿವೇಶನ ನಡೆಯಬೇಕು ಎಂಬ ನಿಯಮವಿದೆ. ಹಿಂದೆ ಹೆಚ್ಚು ದಿನ ಕಲಾಪ ನಡೆಯುತ್ತಿತ್ತು. ಈಗ ನಡೆಯುತ್ತಿಲ್ಲ. ಬಜೆಟ್ ಅಧಿವೇಶನ ಹೆಚ್ಚು ದಿನ ನಡೆದರೆ ಮುಕ್ತ ಚರ್ಚೆಗೆ ಅವಕಾಶ ಸಿಗುತ್ತದೆ’ ಎನ್ನುತ್ತಾರೆ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ.

‘ಪ್ರತಿಯೊಬ್ಬ ಶಾಸಕರಿಗೂ ತಮ್ಮ ಕ್ಷೇತ್ರದ ಬಗ್ಗೆ, ಅಲ್ಲಿನ ಸಮಸ್ಯೆಗಳ ಬಗ್ಗೆ ಮಾತನಾಡಬೇಕು ಎಂಬ ತುಡಿತ ಇರುತ್ತದೆ. ಆದರೆ ಅವಕಾಶ ಸೀಮಿತ. ಸದನದಲ್ಲಿ ಉತ್ತರಿಸುವ ಪ್ರಶ್ನೆ ಬಂದರೆ ಅಥವಾ ಗಮನ ಸೆಳೆಯುವ ಸೂಚನೆಯಲ್ಲಿ ನಮ್ಮ ಪ್ರಶ್ನೆ ಬಂದರೆ ಮಾತ್ರ ಮಾತನಾಡಬಹುದು. ಇಲ್ಲದಿದ್ದರೆ ಸಾಧ್ಯವಿಲ್ಲ. ಬೆಳಿಗ್ಗೆಯಿಂದ ತಡ ರಾತ್ರಿವರೆಗೆ ಕಲಾಪ ನಡೆಸುವುದಕ್ಕಿಂತ ಹೆಚ್ಚು ದಿನ ನಡೆಸಿದರೆ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬಹುದು’ ಎಂದು ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿ ಶಾಸಕ ಸುರೇಶ್ ಗೌಡ, ‘ನಿರ್ಬಂಧ ಹೇರುವ ಬದಲು, ಕಲಾಪಕ್ಕೆ ಪ್ರತಿ ದಿನ ತಪ್ಪದೇ ಹಾಜರಾಗುವವರಿಗೆ ಹೆಚ್ಚುವರಿಯಾಗಿ ₹5 ಕೋಟಿ ಅನುದಾನ ನೀಡಬೇಕು. ಹಾಜರಾತಿ ಹಾಕಿ ಒಂದು ಕ್ಷಣ ಕೂತು ಹೋಗುವುದಕ್ಕಿಂತ ದಿನವಿಡೀ ಕಲಾಪದಲ್ಲಿ ಪಾಲ್ಗೊಳ್ಳುವುದು ಮುಖ್ಯ. ಶಾಸಕರು ಮಾತ್ರವಲ್ಲ ಪ್ರತಿಯೊಬ್ಬ ಸಚಿವನೂ ಕಡ್ಡಾಯವಾಗಿ ಹಾಜರಿರಬೇಕು’ ಎಂದರು.

ಅಕೇಶಿಯಾ ನೆಡುತೋಪು ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು ಪ್ರದೇಶದಲ್ಲಿರುವ ಅಕೇಶಿಯಾ ನೆಡುತೋಪನ್ನು ತೆರವು ಮಾಡಿ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

5,678 ಎಕರೆಯಷ್ಟು ವಿಸ್ತಾರವಾಗಿರುವ ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು ಪ್ರದೇಶಕ್ಕೆ ಶನಿವಾರ ಭೇಟಿ ನೀಡಿದ ಅವರು ಸ್ಥಳೀಯರು, ದನಗಾಹಿ ಮತ್ತು ಕುರಿಗಾಹಿಗಳ ಜತೆಗೆ ಮಾತುಕತೆ ನಡೆಸಿದರು. ಅರಣ್ಯೀಕರಣದ ಹೆಸರಿನಲ್ಲಿ ಅಕೇಶಿಯಾ ನೆಡುತೋಪುಗಳನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದರು.



ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು ಪ್ರದೇಶದಲ್ಲಿ ಇರುವ ಅಕೇಶಿಯಾ ನೆಡುತೋಪನ್ನು ಈಶ್ವರ ಬಿ.ಖಂಡ್ರೆ ಪರಿಶೀಲಿಸಿದರು

‘ಅಕೇಶಿಯಾವು ಜಾನುವಾರುಗಳಿಗೆ ಮೇವಾಗಿಯೂ ಉಪಯೋಗ ಆಗುವುದಿಲ್ಲ, ಪಕ್ಷಿಗಳಿಗೆ ಆಹಾರವನ್ನೂ ಒದಗಿಸುವುದಿಲ್ಲ. ಬದಲಿಗೆ ಸ್ಥಳೀಯ ಸಸ್ಯ ಪ್ರಭೇದಗಳನ್ನು ನಾಶಪಡಿಸುತ್ತವೆ. ಹೀಗಾಗಿ ಈ ನೆಡುತೋಪುಗಳನ್ನು ತೆರವು ಮಾಡಿ, ಹುಲ್ಲುಗಾವಲು ಬೆಳೆಸಲು ಕ್ರಮ ತೆಗೆದುಕೊಳ್ಳಿ. ಅಗತ್ಯವಿರುವೆಡೆ, ಪಕ್ಷಿಗಳಿಗೆ ಅನುಕೂಲವಾಗುವಂತೆ ಕಾಡುಹಣ್ಣಿನ ಸಸಿಗಳನ್ನು ಹಾಕಿ’ ಎಂದು ನಿರ್ದೇಶನ ನೀಡಿದರು.

‘10 ಲಕ್ಷ ಜನರಿಗೆ ನೀರು ಪೂರೈಸುವ ಸಾಮರ್ಥ್ಯವಿರುವ ಹೆಸರಘಟ್ಟ ಕೆರೆಗೆ ಗೃಹ ಮತ್ತು ಕೈಗಾರಿಕಾ ಕೊಳಚೆ ನೀರು ಹಾಗೂ ತ್ಯಾಜ್ಯ ಸೇರದಂತೆ ಎಚ್ಚರವಹಿಸಬೇಕು. ಅರ್ಕಾವತಿ ನದಿಯೂ ಮಲಿನವಾಗುವು-ದನ್ನು ತಡೆಯಬೇಕು. ಈ ಕಾರ್ಯಗಳಿಗೆ ಜಲಮಂಡಳಿ, ಸ್ಥಳೀಯ ಸಂಸ್ಥೆಗಳ ಅನುದಾನ ಹಾಗೂ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಿ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ ಅವರಿಗೆ ಸೂಚನೆ ನೀಡಿದರು.

ಕಾವ್ಯಲೋಕ ಕಟ್ಟಿದ ಐಪಿಎಸ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜಯ ಕುಮಾರ ಸಿಂಹ ಅವರು ಐಪಿಎಸ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಲೇ ಪ್ರಬುದ್ಧ ಚಿಂತನೆಗಳ ಮೂಲಕ ಕಾವ್ಯಲೋಕ ಕಟ್ಟಿದ್ದಾರೆ ಎಂದು ಕವಿ ನಾಟಕಕಾರ ಎಚ್.ಎಸ್. ಶಿವಪ್ರಕಾಶ್ ತಿಳಿಸಿದರು.

ಅಜಯ ಕುಮಾರ ಸಿಂಹ ಅವರ ಹಿಂದಿ ಕವಿತೆಗಳ ಅನುವಾದ ಕೃತಿ ‘ಹರಿಯಲು ಬಿಡು’ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಭಾರತೀಯ ಕಾವ್ಯ ಪರಂಪರೆಯಲ್ಲಿರುವ ವಚನಕಾರರನ್ನು, ಸೂಫಿಸಂತರನ್ನು ಅರಿತುಕೊಂಡಿರುವ ಸಿಂಹ ಅವರ ಕಾವ್ಯ ಶಕ್ತಿ ದೊಡ್ಡದು. ಎಲ್ಲ ಚಿಂತನೆಗಳನ್ನು ಹುದುಗಿಸಿಕೊಂಡಿರುವ ಅವರು ಕಾವ್ಯದ ಮೂಲಕ ಪ್ರಬುದ್ಧ ಚಿಂತನೆಗಳನ್ನು ಓದುಗರ ಮುಂದಿಟ್ಟಿದ್ದಾರೆ. ತರ್ಜುಮೆ ಮಾಡುವಾಗ ಈ ಕವನಗಳು ನನ್ನವೇ ಏನೋ ಎಂಬಂತೆ ಭಾಸವಾಗುತ್ತಿತ್ತು’ ಎಂದು ಅನುವಾದಕರೂ ಆದ ಶಿವಪ್ರಕಾಶ್ ಹೇಳಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಮಾತನಾಡಿ, ‘ಸಿಂಹ ಅವರು ಪೊಲೀಸ್ ಅಧಿಕಾರಿಯಾಗಿದ್ದರೂ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡಿ-ದ್ದಾರೆ. ಅವರ ಸಾಹಿತ್ಯ ರಚನೆ ಕಂಡು ವಿಸ್ಮಯವಾಯಿತು. ಇಂತಹ ಅಧಿಕಾರಿಗಳು ಕರ್ನಾಟಕದಲ್ಲಿ ಇದ್ದರು ಎಂಬುದೇ ನಮ್ಮ ಹೆಮ್ಮೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ನಿವೃತ್ತ ಐಪಿಎಸ್ ಅಧಿಕಾರಿ ಅಜಯಕುಮಾರ್ ಸಿಂಹ, ಅನುವಾದ ಸಾಹಿತಿ ವನಮಾಲಾ ವಿಶ್ವನಾಥ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಬಿ.ಎಲ್. ಶಂಕರ್ ಮಾತನಾಡಿದರು. ಕೆ.ವಿ ನಾಗರಾಜಮೂರ್ತಿ, ವನಮಾಲಾ ವಿಶ್ವನಾಥ್, ಎಚ್‌.ಎಸ್. ಶಿವಪ್ರಕಾಶ್, ಚಿರಂಜೀವಿ ಸಿಂಘ್, ಅಜಯ ಕುಮಾರ ಸಿಂಹ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಗರದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಶಿಕ್ಷಣ ತಜ್ಞ ನಿರಂಜನಾರಾಧ್ಯ

ಸರ್ಕಾರಿ ಶಾಲೆ ‘ಮುಚ್ಚುವಿಕೆ’ ವಿರುದ್ಧ ಚಳವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪಬ್ಲಿಕ್ ಶಾಲೆಗಳನ್ನು(ಕೆಪಿಎಸ್) ಪರಿಚಯಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಸರ್ಕಾರಿ ಶಾಲೆಗಳ ‘ಮುಚ್ಚುವಿಕೆ’ ಕ್ರಮದ ವಿರುದ್ಧ ಚಳವಳಿ ಸಂಘಟಿಸಬೇಕಿದೆ’ ಎಂದು ಶಿಕ್ಷಣ ತಜ್ಞ ನಿರಂಜನಾರಾಧ್ಯ ಕರೆ ನೀಡಿದರು.

ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರು ಜಿಲ್ಲಾ ಮಂಡಳಿಯು ನಗರದಲ್ಲಿ ಶನಿವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

‘ಶಾಲೆಗಳನ್ನು ಮುಚ್ಚುವುದು ಎಂದರೆ ಸಂವಿಧಾನದ ಬಾಗಿಲುಗಳನ್ನು ಮುಚ್ಚಿದಂತೆ. ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪರಿಚಯಿಸುವ ಮೊದಲು ರಾಜ್ಯ ಸರ್ಕಾರವು ಪಾಲುದಾರರೊಂದಿಗೆ ಯಾವುದೇ ಚರ್ಚೆ ನಡೆಸಿಲ್ಲ’ ಎಂದು ಆರೋಪಿಸಿದರು.

‘ಕರ್ನಾಟಕ ಪಬ್ಲಿಕ್ ಶಾಲೆಗಳು, ಸಕಾರಾತ್ಮಕ ಬದಲಾವಣೆಗಳನ್ನು ತಂದಿವೆಯೇ ಎಂಬುದನ್ನು ನಿರ್ಣಯಿಸಲು ಸಮಗ್ರ ಅಧ್ಯಯನ ನಡೆದಿತ್ತೇ’ ಎಂದು ಪ್ರಶ್ನಿಸಿದರು.

‘ಸಚಿವ ಮಧು ಬಂಗಾರಪ್ಪ ಅವರು ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ವಿಧಾನ ಸಭೆಯಲ್ಲಿ ಹೇಳಿಕೆ ನೀಡಿದ್ದರು. ಆದರೆ, ಏಳು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಆದೇಶವನ್ನು ಯಾವ ಕಾರಣಕ್ಕೆ ಹೊರಡಿಸಲಾಗಿದೆ’ ಎಂದು ಪ್ರಶ್ನಿಸಿದರು.



ಸರ್ಕಾರಿ ಶಾಲೆ ಮುಚ್ಚುವ ಕ್ರಮ ಖಂಡಿಸಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರು ಜಿಲ್ಲಾ ಮಂಡಳಿ ಶನಿವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ನಿರಂಜನಾರಾಧ್ಯ ಮಾತನಾಡಿದರು – ಪ್ರಜಾವಾಣಿ ಚಿತ್ರ

‘ಅನುದಾನ ಕಡಿಮೆ ಮಾಡುವುದು, ಸಾರ್ವಜನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವ ತಂತ್ರವನ್ನು ಸರ್ಕಾರ ಮಾಡುತ್ತಿದೆ’ ಎಂದು ಆರೋಪಿಸಿದರು.

ಶಿಕ್ಷಣ ತಜ್ಞ ಶ್ರೀಪಾದ್ ಭಟ್ ಮಾತನಾಡಿ, ‘ಸರ್ಕಾರಿ ಶಾಲೆಗಳ ಮುಚ್ಚುವಿಕೆಯ ವಿರುದ್ಧ ಶಿಕ್ಷಣ ಸಚಿವರು ವಿದ್ಯಾರ್ಥಿ ಸಂಘಟನೆಗಳ ಜತೆಗೆ ಸಭೆ ನಡೆಸಬೇಕು. ಶಿಕ್ಷಣ ವ್ಯವಸ್ಥೆಯನ್ನು ದುರ್ಬಲ ಮಾಡುತ್ತಿರುವವರ ವಿರುದ್ಧ ಹೋರಾಟ ನಡೆಸಬೇಕು’ ಎಂದು ಆಗ್ರಹಿಸಿದರು.


ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
NEW
ಮೆಗಾ ಡಿಸ್ಕೌಂಟ್ ಸೇಲ್
YEAR
ನಿಶ್ಚಿತ ಕಡಿಮೆ ಬೆಲೆಯಲ್ಲಿ
SALE
EXCHANGE BONANZA
UPTO ₹25,000
ಪರಿಚಯ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ
WELCOME 2026 WITH SAVINGS
UPTO 70% OFF
CASH BACK BONANZA
UPTO 20%
ಕ್ಯಾಶ್ ಬ್ಯಾಕ್*
AXIS BANK citi HDFC BANK HSBC ICICI Bank
IndusInd Bank kotak RBL BANK Union Bank YES BANK
Standard Chartered Bank of Baroda FEDERAL BANK SBI card
ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20000
ಫೈನಾನ್ಸ್ ಬೊನಾಂಜಾ Upto ₹15,000 ಕ್ಯಾಶ್ ಬ್ಯಾಕ್*
1 ಇ.ಎಮ್.ಐ ಉಚಿತ* BAJAJ FINANCE IDFC FIRST Bank
INSTANT LOAN APPROVAL UPTO ₹4,00,000*
HDFC BANK We understand your world
10% OFF INSTANT CASH BACK ON CC & DC EMI* MIN TXN ₹17,000 MAX CAP ₹2,500
*T&C
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
24 HOURS EXPRESS DELIVERY*
UNMATCHED AFTER SALES SERVICE
SAMSUNG 100 CLASS NEO ಕ್ಯೂಎಲ್ಇಡಿ SMART TV 100QN80F 10% CASH BACK ಇ.ಎಮ್.ಐ ₹43,528
SONY 75 4K ULTRA HD SMART ಎಲ್ಇಡಿ K-75S30 10% CASH BACK ಇ.ಎಮ್.ಐ ₹7,500
Haier 65 4K ULTRA HD SMART GOOGLE TV WITH HANDS FREE VOICE CONTROL 10% CASH BACK ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 65 4K ಓಎಲ್ಇಡಿ 65C56LA 20% CASH BACK ಇ.ಎಮ್.ಐ ₹6,999
NVY PRIDE OF INDIA LOWEST PRICE CHALLENGE 4K ಎಲ್ಇಡಿ 52% OFF 10% CASH BACK
Model | Price | EMI
43 4K SMART | ₹17,690 | ₹1,474
55 4K SMART | ₹28,990 | ₹2,416
vivo V60E 5G 8+256 10% CASH BACK SPECIAL PRICE ₹30,600* ಇ.ಎಮ್.ಐ ₹2,550
Redmi NOTE 14/NOTE 14 Pro 5G 10% CASH BACK STARTS FROM ₹16,499* ಇ.ಎಮ್.ಐ ₹1,375
SAMSUNG S25 12+256 10% CASH BACK SPECIAL PRICE ₹80,999* ಇ.ಎಮ್.ಐ ₹6,750
iPhone 17 17 256 10% CASH BACK SPECIAL PRICE ₹81,500* ಇ.ಎಮ್.ಐ ₹6,792
realme 15 5G 8+128 10% CASH BACK SPECIAL PRICE ₹25,300* ಇ.ಎಮ್.ಐ ₹2,108
oppo A6X 5G 4+128 10% CASH BACK SPECIAL PRICE ₹12,790* ಇ.ಎಮ್.ಐ ₹1,066
hp 15S 10% CASH BACK • 13TH GEN i3 • 12GB RAM, 512 GB SSD • 15.6 FHD • WIN 11 MSO 24 3 YEARS WARRANTY OFFER PRICE ₹42,990 ಇ.ಎಮ್.ಐ ₹3,583
DELL INS15 10% CASH BACK • CORE i3 • 16GB RAM,512 GB SSD • 15.6" FHD • WIN 11 MSO 24 OFFER PRICE ₹43,490 ಇ.ಎಮ್.ಐ ₹3,624
DELL 3530 10% CASH BACK • 13TH GEN i5 • 16GB RAM • 512GB SSD • 15.6 FHD • WIN 11 MSO 24 OFFER PRICE ₹52,990 ಇ.ಎಮ್.ಐ ₹4,416
Lenovo SLIM 3 10% CASH BACK • 13TH GEN i7-13620H • 16GB,512GB SSD • 15.3" WUXGA • WIN 11 MSO 24 OFFER PRICE ₹67,990 ಇ.ಎಮ್.ಐ ₹5,666
Lenovo LOQ 10% CASH BACK • RYZEN 5 7235HS • 24GB, 512GB SSD • RTX 3050 6GB • 15.6 FHD • WIN 11 MSO 24 OFFER PRICE ₹69,990 ಇ.ಎಮ್.ಐ ₹5,833
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
SAMSUNG 653ಲೀ ಸೈಡ್ ಬೈ ಸೈಡ್ RS76CB81A333HL 10% CASH BACK ಇ.ಎಮ್.ಐ ₹7,750
Godrej 600 LTRS TOUGHENED GLASS DOOR ಸೈಡ್ ಬೈ ಸೈಡ್ REFRIGERATOR 10% CASH BACK ಇ.ಎಮ್.ಐ ₹2,525
DAIKIN 2.02 TON 3 STAR INVERTER SPLIT AC 10% CASH BACK ಇ.ಎಮ್.ಐ ₹5,499
BOSCH 9 ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮಷೀನ್ 10% CASH BACK ಇ.ಎಮ್.ಐ ₹3,741
IFB DEEPCLEAN® 6.5 ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ 10% CASH BACK ಇ.ಎಮ್.ಐ ₹1,633
LG 14 PLACE SETTIN FREESTANDING DISHWASHER DFB532FP 20% CASH BACK ಇ.ಎಮ್.ಐ ₹4,875
Panasonic 23ಲೀ ಕನ್‌ವೆಕ್ಷನ್ ಮೈಕ್ರೋವೇವ್ ಇ.ಎಮ್.ಐ ₹1,249
HOT DEALS OFFER VALID TILL STOCK LAST | OFFER VALID TILL STOCK LAST HOT DEALS
GEYSER UPTO 60% OFF BAJAJ Haier V-GUARD Racold HAVELLS KENSTAR Symphony
MIXER GRINDER UPTO 63% OFF Preethi Panasonic V-GUARD Prestige WONDERCHEF BAJAJ BOSCH HÄFELE HAVELLS Butterfly Tefal
CHIMNEY UPTO 50% OFF KAFF FABER HÄFELE Crompton Prestige BOSCH
WATER PURIFIER UPTO 53% OFF EUREKA FORBES LG BRITA Livpure RO KA EXPERT HAVELLS
LG SOUND BAR SC9S 3.1.3CH, 400W, DOLBY ATMOS, DTS:X, AI SOUND PRO 5% CASH BACK OFFER PRICE ₹29,990 ಇ.ಎಮ್.ಐ ₹2,499 MRP ₹89,990
LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
180 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಸಂಕ್ರಾಂತಿ ಬಳಿಕ ಸಂಪುಟ ಪುನರ್‌ರಚನೆ?

ಹಬ್ಬ ಕಳೆದ ಮೇಲೆ ಹೈಕಮಾಂಡ್ ಭೇಟಿಗೆ ಸಿ.ಎಂ ಸಿದ್ದರಾಮಯ್ಯ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಕ್ರಾಂತಿ ಮುಗಿದ ಬಳಿಕ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ.


ಸಿದ್ದರಾಮಯ್ಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಬಂದ ಸಿದ್ದರಾಮಯ್ಯ ಅವರಿಗೆ ರಾಜ್ಯ ರಾಜಕಾರಣದ ಬಗ್ಗೆ ಹೈಕಮಾಂಡ್ ನಾಯಕರ ಜತೆಗೆ ಪ್ರತ್ಯೇಕವಾಗಿ ಮಾತುಕತೆ ಮಾಡಲು ಸಾಧ್ಯವಾಗಿಲ್ಲ. ಅವಕಾಶ ಸಿಕ್ಕರೆ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಬಗ್ಗೆ ರಾಹುಲ್ ಅವರೊಂದಿಗೆ ಚರ್ಚಿಸಲು ಮುಖ್ಯಮಂತ್ರಿ ಬಯಸಿದ್ದರು.

ರಾಹುಲ್ ಗಾಂಧಿ ಅವರು ಭಾನುವಾರ ವಿದೇಶ ಪ್ರವಾಸಕ್ಕೆ ತೆರಳಲಿದ್ದಾರೆ. ಅವರು ಜನವರಿ 8ಕ್ಕೆ ವಾಪಸಾಗಲಿದ್ದಾರೆ. ಕಾರ್ಯಕಾರಿ ಸಮಿತಿ ಸಭೆಯ ಬಳಿಕ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರೊಂದಿಗೆ ಸಮಾಲೋಚಿಸಿದ ಸಿದ್ದರಾಮಯ್ಯ, 'ರಾಹುಲ್ ಅವರು ಜನವರಿ 8ಕ್ಕೆ ಸ್ವದೇಶಕ್ಕೆ ಮರಳಲಿದ್ದಾರೆ. ಸಂಕ್ರಾಂತಿ ಮುಗಿದ ಬಳಿಕ ದೆಹಲಿಗೆ ಬಂದು ರಾಹುಲ್ ಅವರನ್ನು ಭೇಟಿಯಾಗೋಣ. ಸಂಪುಟ ಪುನರ್ ರಚನೆ ಬಗ್ಗೆ ಅವರಿಂದ ಒಪ್ಪಿಗೆ ಪಡೆಯೋಣ' ಎಂಬುದಾಗಿ ಹೇಳಿದ್ದಾರೆ.

ನವೆಂಬರ್ 15ರಂದು ರಾಷ್ಟ್ರ ರಾಜಧಾನಿಗೆ ಬಂದಿದ್ದ ಸಿದ್ದರಾಮಯ್ಯ ಅವರು ರಾಹುಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಸಚಿವ ಸಂಪುಟ ಪುನರ್ ರಚನೆ ಸೇರಿದಂತೆ ರಾಜ್ಯದ ವಿಷಯಗಳ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸಮಾಲೋಚಿಸುವಂತೆ ರಾಹುಲ್ ಸಲಹೆ ನೀಡಿದ್ದರು.

ಆ ಬಳಿಕ, ರಾಜ್ಯದಲ್ಲಿ ಸರ್ಕಾರದ 'ನಾಯಕತ್ವ'ಕ್ಕಾಗಿ ಗುದ್ದಾಟ, 'ಕೊಟ್ಟ ಮಾತು' ಕುರಿತ ವಾಗ್ವಾದ ತಾರಕಕ್ಕೆ ಏರಿತ್ತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆ 'ಅಧಿಕಾರ ಹಂಚಿಕೆಯ ಸೂತ್ರ'ದ ವಿಚಾರ ಮುನ್ನೆಲೆಗೆ ಬಂದಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ಪಠಿಸುತ್ತಿದ್ದ 'ನಾಯಕತ್ವ ಬದಲಾವಣೆ'ಯ ವಿಷಯಕ್ಕೆ ಪ್ರತಿಯಾಗಿ ಸಂಪುಟ ಪುನರ್‌ರಚನೆಯ ಅಸ್ತ್ರವನ್ನು ಸಿದ್ದರಾಮಯ್ಯ ಬಣ ಬಿಟ್ಟಿತ್ತು. ಪುನರ್ ರಚನೆಯ ವಿಷಯವನ್ನು ಸಿದ್ದರಾಮಯ್ಯ ಅವರೇ ದೃಢಪಡಿಸಿದ್ದರು.

ಸಂಪುಟಕ್ಕೆ ಸರ್ಜರಿಯಾದರೆ ಅಧಿಕಾರ ಹಸ್ತಾಂತರ ನನೆಗುದಿಗೆ ಬೀಳಲಿದೆ ಎಂದು ಆತಂಕಗೊಂಡ ಶಿವಕುಮಾರ್ ಬಣದ ಶಾಸಕರು ದೆಹಲಿಗೆ ದೌಡಾಯಿಸಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಯತ್ನಿಸಿದ್ದರು. ಈ ಎಲ್ಲ ಬೆಳವಣಿಗೆಯಿಂದಾಗಿ ಕಾಂಗ್ರೆಸ್‌ನಲ್ಲಿ ಭಿನ್ನಮತ ತೀವ್ರಗೊಂಡಿತ್ತು. ಹೈಕಮಾಂಡ್ ನಾಯಕರ ಸೂಚನೆ ಮೇರೆಗೆ ಸಿದ್ದರಾಮಯ್ಯ–ಡಿ.ಕೆ. ಶಿವಕುಮಾರ್ ಉಪಾಹಾರ ಕೂಟ ನಡೆಸಿ ಒಗ್ಗಟ್ಟಿನ ಮಂತ್ರ ಪಠಿಸಿದ್ದರು. ಆದರೆ, ಈ ಒಗ್ಗಟ್ಟು ಕೆಲವೇ ದಿನಗಳಿಗೆ ಸೀಮಿತವಾಗಿತ್ತು. ಬೆಳಗಾವಿ ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ಅಂತಃಕಲಹ ಮತ್ತೆ ಬೀದಿಗೆ ಬಂದಿತ್ತು. ಇದೀಗ ಸಿದ್ದರಾಮಯ್ಯ ಅವರು ಮತ್ತೆ ಸಂಪುಟ ಪುನರ್ ರಚನೆಯ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದಾರೆ.

ದಲಿತ ಸಿ.ಎಂಗಾಗಿ ಎಐಸಿಸಿ ಕಚೇರಿ ಮುಂದೆ ಪ್ರತಿಭಟನೆ

ಕರ್ನಾಟಕ ಮುಖ್ಯಮಂತ್ರಿಯಾಗಿ ದಲಿತರೊಬ್ಬರನ್ನು ನೇಮಿಸಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ಪ್ರಧಾನ ಕಚೇರಿಯ ಮುಂದೆ ಸುಮಾರು ಒಂದು ಡಜನ್ ಜನರು ಶನಿವಾರ ಪ್ರತಿಭಟನೆ ನಡೆಸಿದರು.

ಇಂದಿರಾ ಭವನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯುತ್ತಿದ್ದಾಗ ಬಾಬಾ ಸಾಹೇಬ್ ಅಂಬೇಡ್ಕರ್ ದಲಿತ ಸೇವಾ ಸಮಿತಿಯಿಂದ ಪ್ರತಿಭಟನೆ ನಡೆಯಿತು. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಡಬ್ಲ್ಯುಸಿ ಸಭೆಯಲ್ಲಿ ಹಾಜರಿದ್ದರು.

ಪ್ರತಿಭಟನಾಕಾರರು ಹಿಡಿದಿದ್ದ ಬ್ಯಾನರ್‌ನಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರ ಚಿತ್ರ ಹಾಗೂ ತೋಲ್ ತಿರುಮಾವಲವನ್ ಅವರ ಚಿತ್ರವಿತ್ತು. ಸುಮಾರು ಅರ್ಧ ಗಂಟೆ ಪ್ರತಿಭಟನೆ ನಡೆಸಿದ ಅವರು ಬಳಿಕ ಹೈಕಮಾಂಡ್‌ಗೆ ಮನವಿ ಸಲ್ಲಿಸಿದರು.

ಡಿ.ಕೆ. ಶಿವಕುಮಾರ್ ಅವರ ಬಣ ನಾಯಕತ್ವ ಬದಲಾವಣೆಗೆ ಪಟ್ಟು ಹಿಡಿದಿರುವ ಸಮಯದಲ್ಲೇ ಈ ಪ್ರತಿಭಟನೆ ನಡೆದಿದೆ.

'2023ರಲ್ಲಿ ಕಾಂಗ್ರೆಸ್ ಪಕ್ಷವು ಪ್ರಚಂಡ ಬಹುಮತ ಗಳಿಸಲು ದಲಿತರು ಪ್ರಮುಖ ಕಾರಣ. ಪಕ್ಷದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಕೆ.ಎಚ್.ಮುನಿಯಪ್ಪ, ಜಿ.ಪರಮೇಶ್ವರ, ಎಚ್.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ ಪೈಕಿ ಒಬ್ಬರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬೇಕು. ಈ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು' ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.



ರಾಜ್ಯದಲ್ಲಿ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಇಂದಿರಾ ಭವನದ ಎದುರು ಶನಿವಾರ ಪ್ರತಿಭಟನೆ ನಡೆಯಿತು

ಸುದ್ದಿ 2 ನಿಮಿಷ


ಜೆಡಿಎಸ್ ಜತೆ ಮೈತ್ರಿ ವರಿಷ್ಠರ ತೀರ್ಮಾನ: ವಿಜಯೇಂದ್ರ

ಬೆಂಗಳೂರು: 'ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳಬೇಕೇ ಎಂಬುದನ್ನು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಈಚೆಗೆ ನಾಲ್ಕು ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಗೆದ್ದಿದ್ದ ಬಿಜೆಪಿ ಅಭ್ಯರ್ಥಿಗಳನ್ನು ಗುರುವಾರ ಅಭಿನಂದಿಸಿ ಮಾತನಾಡಿದ್ದ ವಿಜಯೇಂದ್ರ ಅವರು, 'ಈಗಲೇ ಚುನಾವಣೆ ನಡೆದರೆ ನಾವು 130–140 ಸ್ಥಾನ ಗೆಲ್ಲಲಿದ್ದೇವೆ. ಬಿಜೆಪಿ ಸ್ವತಂತ್ರವಾಗಿ ಸರ್ಕಾರ ರಚಿಸಲಿದೆ' ಎಂದಿದ್ದರು.

ಮರುದಿನವೇ ತುರ್ತು ಸುದ್ದಿಗೋಷ್ಠಿ ಕರೆದಿದ್ದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು, 'ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಮಾತ್ರವೇ ಬಿಜೆಪಿ ಜತೆಗೆ ಮೈತ್ರಿ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಜತೆಗೆ ಹೊಂದಾಣಿಕೆ ಕಷ್ಟ. ನಾವು ಸ್ವತಂತ್ರವಾಗಿಯೇ ಸ್ಪರ್ಧಿಸುತ್ತೇವೆ' ಎಂದು ಹೇಳಿದ್ದರು.

ಶನಿವಾರ ದಿಢೀರ್ ಸುದ್ದಿಗೋಷ್ಠಿ ನಡೆಸಿದ ವಿಜಯೇಂದ್ರ ಅವರು, 'ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಜತೆಗೆ ಮೈತ್ರಿ ಇಲ್ಲ ಎಂದು ನಾವು ಎಲ್ಲಿಯೂ ಹೇಳಿಲ್ಲ. ಮೈತ್ರಿ ವಿಷಯವನ್ನು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ' ಎಂದರು.



'ದೇವೇಗೌಡರು ಮುತ್ಸದ್ದಿಗಳು. ಅವರ ಬಗ್ಗೆ ನಮಗೆ ಗೌರವವಿದೆ. ಸ್ಥಳಿಯ ಸಂಸ್ಥೆಗಳಲ್ಲಿ ಬಿಜೆಪಿ ಜತೆ ಮೈತ್ರಿ ಇಲ್ಲ ಎಂಬ ಅವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸುವ ಅಗತ್ಯವಿಲ್ಲ. ಈ ಬಗ್ಗೆ ನಮ್ಮ ವರಿಷ್ಠರು ದೇವೇಗೌಡ ಮತ್ತು ಕುಮಾರಸ್ವಾಮಿ ಅವರ ಜತೆಗೆ ಮಾತನಾಡಿ, ಗೊಂದಲಗಳನ್ನು ಪರಿಹರಿಸುತ್ತಾರೆ' ಎಂದು ಸ್ಪಷ್ಟಪಡಿಸಿದರು.

'ಎಂಎಸ್‌ಪಿ ಕಾನೂನು ಖಾತರಿಗೆ ಆಗ್ರಹಿಸಿ ಹೋರಾಟ'

ಬೆಂಗಳೂರು: 'ಕೃಷಿ ಉತ್ಪನ್ನಗಳಿಗೆ ನೀಡಲಾಗುವ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಿನ ಖಾತರಿ ಒದಗಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಹೋರಾಟ ನಡೆಸಲಾಗುವುದು' ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಜಗಜೀತ್ ಸಿಂಗ್ ದಲ್ಲೇವಾಲ್ ಅವರು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಲು, ಜನವರಿ 8ರಂದು ದೆಹಲಿಯಲ್ಲಿ ನಡೆಯಲಿರುವ ಸಭೆಗೆ ಎಲ್ಲ ರೈತ ಸಂಘಗಳ ಪ್ರಮುಖರನ್ನು ಕರೆಯಲಾಗಿದೆ' ಎಂದು ಮಾಹಿತಿ ನೀಡಿದರು.

'ಸುಪ್ರೀಂ ಕೋರ್ಟ್ ನೇಮಿಸಿದ್ದ ಉನ್ನತಾಧಿಕಾರ ಸಮಿತಿ ಮತ್ತು ಕೃಷಿ ವ್ಯವಹಾರಗಳ ಸಂಸದೀಯ ಸಮಿತಿ ವರದಿ ಸಲ್ಲಿಸಿವೆ. ಎಂಎಸ್‌ಪಿಗೆ ಕಾನೂನಿನ ಖಾತರಿ ಒದಗಿಸಬೇಕು ಎಂದು ಶಿಫಾರಸು ಮಾಡಿವೆ. ಆದರೆ ಕೇಂದ್ರ ಸರ್ಕಾರವು ಈ ಬಗ್ಗೆ ತುಟಿಬಿಚ್ಚುತ್ತಿಲ್ಲ. ಹೀಗಾಗಿ ಕೇಂದ್ರ ಸರ್ಕಾರದ ವಿರುದ್ಧ ಮತ್ತೊಂದು ಸುತ್ತಿನ ಹೋರಾಟ ನಡೆಸುವುದು ಅನಿವಾರ್ಯ' ಎಂದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, 'ರಾಜ್ಯ ಸರ್ಕಾರವು ಕಬ್ಬಿಗೆ ಹೆಚ್ಚುವರಿ ಬೆಲೆ ನಿಗದಿ ಮಾಡಿದ್ದರ ವಿರುದ್ಧ ಸಕ್ಕರೆ ಕಾರ್ಖಾನೆ ಮಾಲೀಕರು ನ್ಯಾಯಾಲಯಕ್ಕೆ ಹೋಗಿದ್ದರು. ನ್ಯಾಯಾಲಯವು ಅವರ ಅರ್ಜಿಯನ್ನು ತಿರಸ್ಕರಿಸಿದೆ. ಸಕ್ಕರೆ ಕಾರ್ಖಾನೆ ಮಾಲೀಕರು ಈಗಲಾದರೂ ಕಬ್ಬು ಬೆಳೆಗಾರರಿಗೆ ಅವರ ಪಾಲಿನ ಹಣವನ್ನು ಪಾವತಿ ಮಾಡಬೇಕು' ಎಂದು ಒತ್ತಾಯಿಸಿದರು.

ಚಟಕೆ ಸುದ್ದಿ

ಹೆರಿಗೆ ವೇಳೆ ಶಿಶುವಿಗೆ ಗಾಯ: ವೈದ್ಯೆಗೆ ನೋಟಿಸ್

ಹಾವೇರಿ: ಇಲ್ಲಿನ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ವೇಳೆ ಶಿಶುವಿನ ತಲೆಗೆ ಗಾಯವಾದ ಪ್ರಕರಣಕ್ಕೆ ಸಂಬಂಧಿಸಿ ವೈದ್ಯೆ ಡಾ. ಸ್ವಾತಿ ತಿಲಕ ಅವರಿಗೆ ಕಾರಣ ಕೇಳಿ ಜಿಲ್ಲಾ ಶಸ್ತ್ರಚಿಕಿತ್ಸಕ ಪಿ.ಆರ್.ಹಾವನೂರು ಅವರು ನೋಟಿಸ್ ನೀಡಿದ್ದಾರೆ.

'ರಾಣೆಬೆನ್ನೂರು ಬೀಬಿಆಪ್ಪಾ (19) ಅವರ ಹೆರಿಗೆ ವೇಳೆ ವೈದ್ಯರ ನಿರ್ಲಕ್ಷ್ಯದಿಂದ ಶಿಶುವಿಗೆ ಬ್ಲೇಡ್ ತಗುಲಿ ಗಾಯವಾಗಿದೆ ಎಂದು ಪೋಷಕರು ಆರೋಪಿಸಿದ್ದಾರೆ. ನೋಟಿಸ್ ತಲುಪಿದ 24 ಗಂಟೆಯೊಳಗೆ ಲಿಖಿತ ವಿವರಣೆ ನೀಡಬೇಕು' ಎಂದು ಅವರು ತಿಳಿಸಿದ್ದಾರೆ.

ಶಿಶುವಿಗೆ ಕತ್ತರಿ ತಾಗಿದೆ ಎಂದು ಪೋಷಕರು ಶುಕ್ರವಾರ ಆರೋಪಿಸಿದ್ದರು. ಆದರೆ, ಅದು ಬ್ಲೇಡ್ ಎಂದು ನಂತರ ಗೊತ್ತಾಗಿದೆ.

ನಿಧನ ವಾರ್ತೆ

ಸರಿತಾ ಜ್ಞಾನಾನಂದ



ಬೆಂಗಳೂರು: ಲೇಖಕಿ ಹಾಗೂ ಅನುವಾದಕಿ ಸರಿತಾ ಜ್ಞಾನಾನಂದ (82) ಅವರು ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಆರ್.ಆರ್.ನಗರದಲ್ಲಿರುವ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಶುಕ್ರವಾರ ಅವರು ನಿಧನರಾಗಿದ್ದಾರೆ.

ಬೆಂಗಳೂರು ಮತ್ತು ಕೆಜಿಎಫ್‌ನಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದ ಅವರು, ವಿವಿಧ ಭಾಷೆಗಳಲ್ಲಿನ ಕಥೆ–ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. 'ಒಂದೂರಲ್ಲಿ ಒಬ್ಬ ನಿರ್ಮಲಾ', 'ಬೆಂಕಿ ಹೂ', 'ಪರಿಪೂರ್ಣ', 'ಒಲಿದರೆ ನಾರಿ' ಸೇರಿ ಹಲವು ಕಾದಂಬರಿ ರಚಿಸಿದ್ದಾರೆ. 300ಕ್ಕೂ ಅಧಿಕ ಸಣ್ಣ ಕಥೆಗಳನ್ನು ರಚಿಸಿದ್ದು, ವಿವಿಧ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ತಮಿಳು, ತೆಲುಗು, ಉರ್ದು ಮತ್ತು ಮರಾಠಿ ಭಾಷೆಗಳಿಂದ 50ಕ್ಕೂ ಹೆಚ್ಚು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನವನ್ನೂ ಮಾಡಿದ್ದರು.

'ಮಾನವೀಯತೆಯಿಂದ ವಸತಿ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಗಿಲು ಬಡಾವಣೆಯಲ್ಲಿ ಅಕ್ರಮ ಒತ್ತುವರಿ ಪ್ರದೇಶ ನೆಲಸಮಗೊಳಿಸಿರುವ ಪ್ರಕರಣದಲ್ಲಿ ಮಾನವೀಯತೆ ದೃಷ್ಟಿಯಿಂದ ಒತ್ತುವರಿದಾರರಿಗೆ ಸೂಕ್ತ ವಸತಿ ವ್ಯವಸ್ಥೆ ಮಾಡಿಕೊಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ಭವನದಲ್ಲಿ ಶನಿವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕೋಗಿಲು ಬಡಾವಣೆಯ ತ್ಯಾಜ್ಯ ವಿಲೇವಾರಿ ಸ್ಥಳದಲ್ಲಿ ಹಲವರು ಅತಿಕ್ರಮವಾಗಿ ಗುಡಿಸಲು ನಿರ್ಮಿಸಿಕೊಂಡಿದ್ದರು. ಅದು ಜನ ವಸತಿಗೆ ಯೋಗ್ಯವಾದ ಸ್ಥಳವಾಗಿರಲಿಲ್ಲ. ಬೇರೆಡೆಗೆ ಸ್ಥಳಾಂತರ ಆಗುವಂತೆ ಅಲ್ಲಿನ ನಿವಾಸಿಗಳಿಗೆ ಹಲವು ಬಾರಿ ನೋಟಿಸ್ ನೀಡಿದ್ದರೂ ಅವರು ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ತೆರವುಗೊಳಿಸಲಾಗಿದೆ' ಎಂದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಮಿಷನರ್ ಅವರೊಂದಿಗೆ ಮಾತನಾಡಿ ಅವರೆಲ್ಲರಿಗೂ ತಾತ್ಕಾಲಿಕ ಆಶ್ರಯ, ಊಟ ಇನ್ನಿತರೆ ವ್ಯವಸ್ಥೆ ಮಾಡಿಕೊಡುವಂತೆ ಸೂಚನೆ ನೀಡಿದ್ದೇನೆ. ಅಲ್ಲಿ ಅತಿಕ್ರಮವಾಗಿ ವಾಸವಿದ್ದ ಬಹುತೇಕರು ವಲಸೆ ಕಾರ್ಮಿಕರು, ಸ್ಥಳೀಯ ನಿವಾಸಿಗಳಲ್ಲ' ಎಂದು ಸ್ಪಷ್ಟಪಡಿಸಿದರು.

ಬುಲ್ಡೋಜರ್ ನ್ಯಾಯಕ್ಕೂ, ಅಕ್ರಮ ಒತ್ತುವರಿ ತೆರವಿಗೂ ಅಜಗಜಾಂತರವಿದೆ. ಪಿಣರಾಯಿ ವಿಜಯನ್ ಅವರು ವಾಸ್ತವ ಸಂಗತಿಗಳ ಅರಿವಿಲ್ಲದೆ ರಾಜಕೀಯ ಕಾರಣಕ್ಕಾಗಿ ಟೀಕೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪಿಣರಾಯಿ ಹೇಳಿಕೆ ರಾಜಕೀಯ ಪ್ರೇರಿತ: ಡಿಕೆಶಿ

ಬೆಂಗಳೂರು: ಕೋಗಿಲು ಬಡಾವಣೆಯಲ್ಲಿ ಅಕ್ರಮ ಒತ್ತುವರಿ ಪ್ರದೇಶ ನೆಲಸಮಗೊಳಿಸಿರುವ ಪ್ರಕರಣದಲ್ಲಿ ಸತ್ಯಾಸತ್ಯತೆ ಅರಿಯದೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಹಸ್ತಕ್ಷೇಪ ಮಾಡಬಾರದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಾಕೀತು ಮಾಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಘನತ್ಯಾಜ್ಯ ವಿಲೇವಾರಿ ಮಾಡುವ ಜಾಗ ಅದಾಗಿದೆ. ಒಂಬತ್ತು ವರ್ಷಗಳ ಹಿಂದೆಯೇ ಅಧಿಸೂಚನೆ ಹೊರಡಿಸಲಾಗಿತ್ತು. ಈ ಪ್ರದೇಶದಲ್ಲಿ ಹಲವು ಆರೋಗ್ಯ ಸಮಸ್ಯೆಗಳಿವೆ. ಕೆಲವರು ಕಾನೂನುಬಾಹಿರವಾಗಿ ಅತಿಕ್ರಮಣ ಮಾಡಿದ್ದಾರೆ. ಕರ್ನಾಟಕ ಸರ್ಕಾರಕ್ಕೂ ಮಾನವೀಯತೆ ಇದೆ. ಅವರಿಗೆ ಬೇರೆ ಜಾಗಗಳಿಗೆ ಹೋಗಲು ಅವಕಾಶ ನೀಡಲಾಗಿತ್ತು. ಅಲ್ಲಿ ಕೆಲವರು ಮಾತ್ರ ಸ್ಥಳೀಯರಾಗಿದ್ದು, ಉಳಿದವರು ಅತಿಕ್ರಮಣ ಮಾಡಿದ್ದಾರೆ. ಪಿಣರಾಯಿ ಅಂಥವರು ರಾಜಕೀಯ ಪ್ರೇರಿತ ಹೇಳಿಕೆ ನೀಡುವುದು ಸರಿಯಲ್ಲ ಎಂದರು.

'ಭೂ ಮಾಫಿಯಾ ಹೊಸ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡಲು ಅವಕಾಶ ನೀಡುವುದಿಲ್ಲ. ಹೃದಯ ಭಾಗದ ಸರ್ಕಾರಿ ಜಮೀನಿನ ರಕ್ಷಣೆ ಮಾಡಲಾಗಿದೆ. ನಮ್ಮದು ಬುಲ್ಡೋಜರ್ ಸಂಸ್ಕೃತಿಯಲ್ಲ, ಸ್ಥಳೀಯರಿಗೆ ಹಾಗೂ ಅಗತ್ಯ ದಾಖಲೆಗಳನ್ನು ಹೊಂದಿರುವ ಜನರಿಗೆ ರಾಜೀವ್ ಗಾಂಧಿ ವಸತಿ ಯೋಜನೆ ಮೂಲಕ ಮನೆಗಳನ್ನು ನೀಡಲಾಗುವುದು. ಈ ಕುರಿತು ಕೇರಳದ ನಾಯಕರಿಗೆ ಮಾಹಿತಿ ನೀಡಲಾಗುವುದು' ಎಂದರು.

'ಕನ್ನಡ ಸಾಹಿತ್ಯಕ್ಕೆ ಧ್ವನಿ ತಂತ್ರಾಂಶಗಳ ಸೌಲಭ್ಯ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಪ್ರಮುಖ ಸಾಹಿತಿಗಳು, ಲೇಖಕರ ಕೃತಿಗಳನ್ನು ಧ್ವನಿ ತಂತ್ರಾಂಶಗಳ ಸಹಾಯದಿಂದ ಅವಲೋಕಿಸುವ ಸೌಲಭ್ಯವನ್ನು ಕಲ್ಪಿಸಬೇಕು. ಈ ಮೂಲಕ ಅಂಧ ಸಮುದಾಯದವರಿಗೂ ಕನ್ನಡ ಸಾಹಿತ್ಯ ಪರಿಚಯಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದು ಅಖಿಲ ಕರ್ನಾಟಕ ಅಂಧರ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ ಒಕ್ಕೊರಲಿನಿಂದ ಆಗ್ರಹಿಸಿತು.

ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತು, ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್, ಸಹಸ್ಪಂದನೆ ಕರ್ನಾಟಕ ಅಂಧರ ವಿಮೋಚನ ವೇದಿಕೆ, ಗಾನಯೋಗಿ ಪಂಚಾಕ್ಷರ ಪ್ರತಿಷ್ಠಾನ ಸಹಯೋಗದಲ್ಲಿ ಶನಿವಾರ ಸಮ್ಮೇಳನ ನಡೆಯಿತು.

ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಮಾತನಾಡಿ, 'ಇತ್ತೀಚೆಗೆ ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆ, ವಾಣಿಜ್ಯ, ಉದ್ಯಮ, ಕಾನೂನು, ಆಡಳಿತ ಹೀಗೆ ಹಲವು ಕ್ಷೇತ್ರಗಳಲ್ಲಿ ಪ್ರತಿಭಾನ್ವಿತ ಅಂಧರು ಯಶಸ್ವಿಯಾಗುತ್ತಿದ್ದಾರೆ. ಇದು ಈ ಸಮುದಾಯದ ಭವಿಷ್ಯದ ಭರವಸೆಯ ಬೆಳಕಾಗಿದೆ. ತಂತ್ರಜ್ಞಾನ, ಶಿಕ್ಷಣದ ಆಧುನಿಕ ಸೌಲಭ್ಯ ಸಾಧನಗಳಿಂದ ಅಂಧರು ಹೆಚ್ಚು–ಹೆಚ್ಚು ಜಾಗೃತವಾಗುವುದರ ಜೊತೆಗೆ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತಿದ್ದಾರೆ' ಎಂದು ಹೇಳಿದರು.

'ರಾಜಕೀಯ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯಮಿಕ, ಆರ್ಥಿಕ, ಸಾಂಸ್ಕೃತಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಜಾತಿ–ಮತ ಪಂಥ, ದ್ವಂದ್ವ, ಅಂಗ–ಲಿಂಗ ತಾರತಮ್ಯ ಇರುವುದು ಕಳವಳಕಾರಿ. ಅಂಧ ಸಮುದಾಯಕ್ಕೆ ಸಂಬಂಧಿಸಿದಂತೆ ಶಿಕ್ಷಣ, ತರಬೇತಿ, ಉದ್ಯೋಗ, ಮೀಸಲಾತಿ ಮತ್ತಿತರ ಸೌಲಭ್ಯಗಳಲ್ಲಿ ಸಮಾನ ಅವಕಾಶ ದೊರೆಯಬೇಕು. ಅಂಧರು ತಮ್ಮ ಅರಿವನ್ನು ವಿಸ್ತರಿಸಿಕೊಳ್ಳಲು ಅನುಕೂಲವಾಗುವಂತೆ ಬ್ರೈಲ್ ಪುಸ್ತಕಗಳು, ಸ್ಪರ್ಶತಂತ್ರದ ನಕ್ಷೆಗಳು, ಗ್ರಾಮಾಂತರ ಪ್ರದೇಶದಲ್ಲೂ ಗಣಕ ಸಾಧನ ಪ್ರಯೋಗಾಲಯಗಳು, ದೂರ ಶಿಕ್ಷಣ ಸೌಲಭ್ಯವನ್ನು ಒದಗಿಸಬೇಕು' ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಅಂಧ ಲೇಖಕರು ರಚಿಸಿದ ಏಳು ಪುಸ್ತಕಗಳು, ಬರಗೂರು ರಾಮಚಂದ್ರಪ್ಪ ಅವರು ಸಂಪಾದಿಸಿದ ಕುವೆಂಪು ವಿಚಾರ ಕ್ರಾಂತಿ ಪುಸ್ತಕದ ಬ್ರೈಲ್ ಲಿಪಿಯ ಕೃತಿ ಜನಾರ್ಪಣೆಗೊಳಿಸಲಾಯಿತು.


ಅಂಧರ ಕ್ರಿಕೆಟ್ ವಿಶ್ವಕಪ್ ಗೆದ್ದ ಭಾರತ ಅಂಧರ ಮಹಿಳಾ ತಂಡದ ನಾಯಕಿ ದೀಪಿಕಾ ಟಿ.ಸಿ., ಕಾವ್ಯಾ ಎನ್‌ಆರ್, ಕಾವ್ಯಾ ವಿ. ಅವರನ್ನು ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮುದಿಗೆರೆ ರಮೇಶ್ ಕುಮಾರ್, ಪ್ರೊ.ಬಿ. ಕೃಷ್ಣಪ್ಪ ಪ್ರತಿಷ್ಠಾನದ ಟ್ರಸ್ಟಿ ಇಂದಿರಾ ಕೃಷ್ಣಪ್ಪ, ನಾಟಕಕಾರ ಕೆ.ವೈ.ನಾರಾಯಣಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಬರಗೂರು ರಾಮಚಂದ್ರಪ್ಪ, ಸಮರ್ಥನಂ ಸಂಸ್ಥಾಪಕ ಟ್ರಸ್ಟಿ ಜಿ.ಕೆ. ಮಹಾಂತೇಶ್, ಸತೀಶ್ ಕುಮಾರ್ ಹೊಸಮನಿ, ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಮತ್ತು ಪ್ರಾಧ್ಯಾಪಕ ಕೃಷ್ಣ ಆರ್ ಹೊಂಬಳ್ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ

ಕನ್ನಡ ಸಾಹಿತ್ಯದ ಪ್ರಮುಖ ಕವಿಗಳು, ಸಾಹಿತಿಗಳ ಪ್ರಮುಖ ಕವಿತೆಗಳು ಮತ್ತು ಬರಹಗಳನ್ನು ಬ್ರೈಲ್ ಲಿಪಿಯಲ್ಲಿ ತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜನೆ ರೂಪಿಸಬೇಕು. ಇದರಿಂದ ಅಂಧರಿಗೆ ಕನ್ನಡ ಸಾಹಿತ್ಯ ಪರಂಪರೆಯ ಪಕ್ಷಿನೋಟ ಪರಿಚಯವಾಗಲಿದೆ
ಬರಗೂರು ರಾಮಚಂದ್ರಪ್ಪ, ಸಾಹಿತಿ

ಅಂಧರು ಸ್ವಾಭಿಮಾನದಿಂದ ಬದುಕುವ ತಂತ್ರಗಳನ್ನು ರೂಪಿಸಿಕೊಂಡಿದ್ದಾರೆ. ಇದರಲ್ಲಿ ಬರೆವಣಿಗೆಯು ಒಂದಾಗಿದ್ದು, ಇತರರಿಗೆ ಸಮಾನವಾಗಿ ಕಾವ್ಯ, ಸಾಹಿತ್ಯವನ್ನು ರಚಿಸಿರುವುದು ವಿಶೇಷ ಸಂಗತಿಯಾಗಿದೆ
ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸರ್ಕಾರವು ಅಂಧರ ದಂಡೇ ಆಗಿದೆ. ಆ ಅಂಧತ್ವಕ್ಕೆ ಶಸ್ತ್ರಚಿಕಿತ್ಸೆ ಮಾಡಿ, ಅಂಧ ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು
ಎಲ್. ಹನುಮಂತಯ್ಯ, ಕವಿ

ಕನ್ನಡದ ಎಲ್ಲ ಪುಸ್ತಕಗಳನ್ನು ಬ್ರೈಲ್ ಲಿಪಿಗೆ ಪರಿವರ್ತಿಸಲು ಆಗುವುದಿಲ್ಲ. ಅದಕ್ಕಾಗಿ ಕನ್ನಡ ಓದುವ ಎಂಜಿನ್ ಅನ್ನು ಅಭಿವೃದ್ಧಿಪಡಿಸಬೇಕು
ಬಂಜಗೆರೆ ಜಯಪ್ರಕಾಶ್, ಸಾಹಿತಿ

ನಿರ್ಣಯಗಳು

- ಅಂಗವಿಕಲರ ಸಮಗ್ರ ಅಧ್ಯಯನಕ್ಕಾಗಿ ಪ್ರತ್ಯೇಕ ಆಯೋಗ ರಚಿಸಬೇಕು
- ಗಾನಯೋಗಿ ಪುಟ್ಟರಾಜ ಗವಾಯಿಗಳ ಸಮಗ್ರ ಸಾಹಿತ್ಯದ ಪ್ರಕಟಿಸಬೇಕು
- ಕಬ್ಬನ್ ಉದ್ಯಾನದಲ್ಲಿರುವ ಬ್ರೈಲ್ ವಿಭಾಗವನ್ನು ಪ್ರತ್ಯೇಕ ಗ್ರಂಥಾಲಯವಾಗಿ ಉನ್ನತೀಕರಿಸಬೇಕು
- ರಾಜ್ಯ ಸರ್ಕಾರದ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳಲ್ಲಿ ಅಂಧ ಸದಸ್ಯರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅತ್ಯಾಚಾರ ಪ್ರಕರಣ: ಅಪರಾಧಿಯ ಶಿಕ್ಷೆ ರದ್ದು

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣದ ಅಪರಾಧಿಯ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಜತೆಗೆ ದೂರುದಾರೆ ಮತ್ತು ಅಪರಾಧಿ ವಿವಾಹವಾಗಿರುವುದನ್ನು ಗಮನಿಸಿದ ನ್ಯಾಯಪೀಠ, 'ಈ ಪ್ರಕರಣ ಹೀಗೆಯೇ ತಿರುವು ಪಡೆಯುತ್ತದೆ ಎಂಬುದನ್ನು ನಾವು ಊಹಿಸಿದ್ದೆವು' ಎಂದೂ ಹೇಳಿದೆ.

ಮದುವೆ ಆಗುವುದಾಗಿ ನಂಬಿಸಿ, ಅತ್ಯಾಚಾರ ಎಸಗಿದ್ದಾನೆ ಎಂದು ಆರೋಪಿಸಿ ಮಹಿಳೆಯೊಬ್ಬರು 2021ರಲ್ಲಿ ವ್ಯಕ್ತಿಯೊಬ್ಬರ ವಿರುದ್ಧ ದೂರು ದಾಖಲಿಸಿದ್ದರು. ಮಧ್ಯಪ್ರದೇಶ ಹೈಕೋರ್ಟ್ 2024ರ ಏಪ್ರಿಲ್‌ನಲ್ಲಿ ಆರೋಪಿಯನ್ನು ಅಪರಾಧಿ ಎಂದು ಪರಿಗಣಿಸಿ ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ, ವ್ಯಕ್ತಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹಾಗೂ ನ್ಯಾ.ಸತೀಶ್ ಚಂದ್ರ ಶರ್ಮಾ ಅವರ ಪೀಠವು ವಿಚಾರಣೆ ನಡೆಸಿ, ದೂರುದಾರೆ ಮತ್ತು ಅಪರಾಧಿಯ ಪೋಷಕರ ಸಮ್ಮುಖದಲ್ಲಿ ಅವರೊಂದಿಗೆ ಮಾತುಕತೆ ನಡೆಸಿತ್ತು. ಇಬ್ಬರಿಗೂ ಒಬ್ಬರನ್ನೊಬ್ಬರು ಮದುವೆಯಾಗುವ ಇರಾದೆ ಇರುವುದನ್ನು ಖಚಿತಪಡಿಸಿಕೊಂಡು, ವ್ಯಕ್ತಿಗೆ ಜಾಮೀನು ನೀಡಿತ್ತು. ಅದರಂತೆ 2025ರ ಜುಲೈನಲ್ಲಿ ಇಬ್ಬರೂ ಮದುವೆಯಾಗಿದ್ದಾರೆ.

ಡಿ.5ರಂದು ಪ್ರಕರಣದ ಅಂತಿಮ ತೀರ್ಪು ಹೊರಡಿಸಿದ ನ್ಯಾಯಪೀಠ, 'ಸಂವಿಧಾನದ 142ನೇ ವಿಧಿಯ ಅನ್ವಯ ಪ್ರಕರಣ ದಲ್ಲಿ ಸಂಪೂರ್ಣ ನ್ಯಾಯ ಒದಗಿಸಲು ಅರ್ಜಿದಾರರ ವಿರುದ್ಧದ ಎಲ್ಲಾ ಶಿಕ್ಷೆ ರದ್ದುಗೊಳಿಸುತ್ತಿದ್ದೇವೆ' ಎಂದಿದೆ.

ಸುಶ್ರುತ ಸಂಹಿತೆಯ 'ಪುಂಸವನ ವಿಧಿ' ನಿಷೇಧಕ್ಕೆ ವಿಶ್ವಸಂತೋಷ ಭಾರತಿ ಸ್ವಾಮೀಜಿ ಅಸಮಾಧಾನ

'ಇಚ್ಛೆಯ ಮಗುವಿಗಾಗಿ ಆಯುರ್ವೇದ ಔಷಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಯುರ್ವೇದ ಚಿಕಿತ್ಸಾ ಪದ್ಧತಿಯಡಿ ಸ್ವಇಚ್ಛೆಯ ಮಗು ಪಡೆಯಲೂ ಈ ಹಿಂದೆ ಔಷಧ ಒದಗಿಸಲಾಗುತ್ತಿತ್ತು. ನಮ್ಮ ದೇಶಕ್ಕೆ ಹಿರಿಮೆ ತರುವ ಈ ಔಷಧದ ಬಗ್ಗೆ ವೈಜ್ಞಾನಿಕ ಸಂಶೋಧನೆ ನಡೆಸುವ ಬದಲು, ಅದನ್ನು ನಿಷೇಧಿಸಲಾಗಿದೆ' ಎಂದು ಬಾರ್ಕೂರು ಮಹಾಸಂಸ್ಥಾನದ ವಿಶ್ವಸಂತೋಷ ಭಾರತಿ ಸ್ವಾಮೀಜಿ ಹೇಳಿದರು.

ಆಯುಷ್ ಸಚಿವಾಲಯ ಹಾಗೂ ರಾಜ್ಯ ಆಯುಷ್ ಇಲಾಖೆಯ ಸಹಯೋಗದಲ್ಲಿ ಕಜೆ ಆಯುರ್ವೇದಿಕ್ ಚಾರಿಟೇಬಲ್ ಫೌಂಡೇಷನ್ ಹಮ್ಮಿಕೊಂಡಿರುವ ದ್ವಿತೀಯ ಆಯುರ್ವೇದ ವಿಶ್ವ ಸಮ್ಮೇಳನದ ಮೂರನೆ ದಿನವಾದ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ಸುಶ್ರುತ ಸಂಹಿತೆಯ 'ಪುಂಸವನ ವಿಧಿ'ಯಲ್ಲಿ ಗಂಡು–ಅಥವಾ ಹೆಣ್ಣು ಮಗುವನ್ನು ಪಡೆಯಲು ಗಿಡಮೂಲಿಕೆಯ ಔಷಧದ ಬಗ್ಗೆ ಉಲ್ಲೇಖವಿದೆ. ರಾಜರ ಕಾಲದಲ್ಲಿ ಗಂಡು ಮಗು ಹೊಂದಿರುವವರಿಗೆ ಹೆಣ್ಣು ಮಗು ಪಡೆಯಲು, ಹೆಣ್ಣು ಮಗು ಹೊಂದಿರುವವರಿಗೆ ಗಂಡು ಮಗು ಪಡೆಯಲು ಸುಶ್ರುತ ಮತ್ತು ವಾಗ್ಭಟ ಔಷಧ ಸಂಶೋಧಿಸಿದ್ದರು. 'ಲಕ್ಷ್ಮಣ ಬೇರಿನ' ರಸವನ್ನು ನಿಗದಿತ ಮುಹೂರ್ತದಲ್ಲಿ ತೆಗೆದು, ಗರ್ಭಿಣಿಯ ಮೂಗಿನ ಮೂಲಕ ಆ ರಸವನ್ನು ಗೊತ್ತುಪಡಿಸಲಾದ ವಿಧಾನದಲ್ಲಿ ಹಾಕಲಾಗುತ್ತದೆ. ಈ ಬಗ್ಗೆ 10–12 ಶ್ಲೋಕಗಳನ್ನು ಬರೆಯಲಾಗಿದೆ. ಈ ರಸವು ವರ್ಣತಂತುಗಳಲ್ಲಿ (ಕ್ರೋಮೋಸೋಮ್) ವ್ಯತ್ಯಾಸ ಮಾಡಿ, ಇಚ್ಛೆಯ ಮಗು ಪಡೆಯಲು ಸಹಕಾರಿಯಾಗುತ್ತಿತ್ತು. ಈ ಔಷಧದ ಬಗ್ಗೆ ಸಂಶೋಧನೆಯಾಗಬೇಕು' ಎಂದು ಹೇಳಿದರು.

'ಮಿದುಳಿನಲ್ಲಿ 72 ಸಾವಿರ ನರತಂತುಗಳು ಇರುವ ಬಗ್ಗೆ ಮೂರು ಸಾವಿರ ವರ್ಷಗಳ ಹಿಂದೆಯೇ ಸುಶ್ರುತ ಸಂಹಿತೆಯಲ್ಲಿ ಉಲ್ಲೇಖಿಸಲಾಗಿದೆ. ಈಗ ಸಿಟಿ ಸ್ಕ್ಯಾನ್ ಮೂಲಕ ಹೇಳುವುದನ್ನು, ವಿದ್ಯುತ್ ಇಲ್ಲದ ಕಾಲದಲ್ಲಿಯೇ ಹೇಳಿರುವುದು ನಮ್ಮ ದೇಶದ ಹಿರಿಮೆ. ಸರ್ಪಸುತ್ತನ್ನು ಮೂರೇ ದಿನದಲ್ಲಿ ಗುಣಪಡಿಸುವ ಔಷಧ ಆಯುರ್ವೇದದಲ್ಲಿದೆ' ಎಂದರು.

ಹುಬ್ಬಳ್ಳಿಯ ಮೂರುಸಾವಿರ ಮಠದ ಪೀಠಾಧಿಪತಿ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, 'ಭಾರತೀಯ ಆರೋಗ್ಯ ಸಂಸ್ಕೃತಿಯ ಮೂಲ ಆಯುರ್ವೇದ. ಎಲ್ಲ ಗಿಡಮೂಲಿಕೆಗಳ ಜ್ಞಾನ ಎಲ್ಲರಿಗೂ ಲಭ್ಯವಾಗುವುದಿಲ್ಲ. ಅಷ್ಟು ಗಿಡಮೂಲಿಕೆ ಪ್ರಪಂಚದಲ್ಲಿದೆ. ಆಯುರ್ವೇದದಲ್ಲಿ ಎಲ್ಲ ರೋಗಕ್ಕೂ ಔಷಧಗಳಿವೆ. ನಮ್ಮ ಸಂಸ್ಕೃತಿಯ ಭಾಗವಾಗಿರುವ ಈ ಚಿಕಿತ್ಸಾ ಪದ್ಧತಿಯ ಉಪಚಾರದಿಂದ ಆರೋಗ್ಯ ವೃದ್ಧಿಯಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಕಜೆ ಆಯುರ್ವೇದಿಕ್ ಚಾರಿಟೇಬಲ್ ಫೌಂಡೇಷನ್ ಸಂಸ್ಥಾಪಕ ಡಾ.ಗಿರಿಧರ ಕಜೆ, 'ಈಗಾಗಲೇ ಇರುವ ಹಾಗೂ ಹೊಸದಾಗಿ ಕಾಣಿಸಿಕೊಳ್ಳುವ ರೋಗಗಳ ತಡೆಗೆ ಆಯುರ್ವೇದ ಸಹಕಾರಿ. ಕೋವಿಡ್ ಸಂದರ್ಭದಲ್ಲಿ ಆಯುರ್ವೇದದ ಮಹತ್ವ ಜನರ ಅರಿವಿಗೆ ಬಂದಿದೆ' ಎಂದು ಹೇಳಿದರು.

ವಿಶ್ವ ದಾಖಲೆ ನಿರ್ಮಾಣ

ಆಯುರ್ವೇದ ವಿಶ್ವ ಸಮ್ಮೇಳನದಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಮಂದಿ ಏಕಕಾಲದಲ್ಲಿ 'ಅಷ್ಟಾಂಗ ಹೃದಯ ಸಂಹಿತೆ'ಯ 'ದಿನಚರ್ಯೆ' ಅಧ್ಯಾಯವನ್ನು ಪಠಣ ಮಾಡಿದರು. ಈ ಪಠಣವು ಇಂಡಿಯನ್ ಬುಕ್ಸ್ ಆಫ್ ರೆಕಾರ್ಡ್ ಹಾಗೂ ಏಷ್ಯಾ ಬುಕ್ಸ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಯಿತು. ಡಾ. ಗಿರಿಧರ ಕಜೆ ಅವರಿಗೆ ಈ ಬಗ್ಗೆ ಪ್ರಮಾಣಪತ್ರವನ್ನು ಸಮಾರಂಭದಲ್ಲಿ ವಿತರಿಸಲಾಯಿತು.


ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರನ್ನು ಡಾ.ಗಿರಿಧರ ಕಜೆ ಗೌರವಿಸಿದರು. ವಿಶ್ವಸಂತೋಷ ಭಾರತಿ ಸ್ವಾಮೀಜಿ ಉಪಸ್ಥಿತರಿದ್ದರು

ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಸಂಬಂಧಿಸಿ ಸರಿಯಾದ ರೀತಿಯಲ್ಲಿ ಸಂಶೋಧನೆ ನಡೆಯಬೇಕು. ಆಯುರ್ವೇದ ವಿಜ್ಞಾನವು ಪಾಶ್ಚಾತ್ಯ ವಿಜ್ಞಾನಕ್ಕಿಂತ ಕಡಿಮೆಯಿಲ್ಲ
ಸ್ವಾಮಿ ನಿರ್ಭಯಾನಂದ ಸರಸ್ವತಿ, ರಾಮಕೃಷ್ಣ ವಿವೇಕಾನಂದ ಆಶ್ರಮ

ಆಯುರ್ವೇದದಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆದು, ಆರೋಗ್ಯ ಕ್ಷೇತ್ರದಲ್ಲಿ ಈ ಪದ್ಧತಿ ಮುನ್ನೆಲೆಗೆ ಬರಬೇಕು. ಇಡೀ ಜಗತ್ತಿಗೆ ಇದರ ಶಕ್ತಿ ಪರಿಚಯವಾಗಬೇಕು
ಬಿ.ಎ. ಪಾಟೀಲ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಹಸ್ತಪ್ರತಿ ರಕ್ಷಿಸಲು 'ಜ್ಞಾನಭಾರತ್ ಮಿಷನ್'

ರಾಜ್ಯದಲ್ಲಿವೆ 1,20,835 ಹಸ್ತಪ್ರತಿಗಳು; ಮಾಹಿತಿ ಸಂಗ್ರಹಿಸಿದ ಸಿಎಸ್

• ಎಂ.ಮಹೇಶ್

ಮೈಸೂರು: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳಲ್ಲಿರುವ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣಕ್ಕೆ ಸರ್ಕಾರ ಕ್ರಮ ವಹಿಸಿದೆ.

ಕೇಂದ್ರದ ನೀತಿ ಆಯೋಗದ ದಸ್ತಾವೇಜು ನಿರ್ವಹಣೆ, ಮೌಲ್ಯಮಾಪನ ಕಚೇರಿಯಿಂದ (ಡಿಎಂಇಒ) ದೇಶದಾದ್ಯಂತ 'ಜ್ಞಾನಭಾರತ್ ಮಿಷನ್' ಅನುಷ್ಠಾನಗೊಳಿಸಲಾಗುತ್ತಿದ್ದು, ಹಸ್ತಪ್ರತಿಗಳ ವಿವರ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿ ಒಟ್ಟು 1,20,835 ಹಸ್ತಪ್ರತಿಗಳಿರುವ ಮಾಹಿತಿ ಲಭ್ಯವಾಗಿದೆ.

ಏನಿದು ಯೋಜನೆ?: ದೇಶದಾದ್ಯಂತ ಲಭ್ಯವಿರುವ, ಕೈಬರಹದ ಪುರಾತನ ಪತ್ರಗಳು, ಹಸ್ತಪ್ರತಿಗಳು, ದಾಖಲೆಗಳ ಸಮೀಕ್ಷೆ ಹಾಗೂ ಸಂರಕ್ಷಣೆಗಾಗಿ ಡಿಜಿಟಲೀಕರಣ ಕಾರ್ಯ 'ಜ್ಞಾನಭಾರತ್ ಮಿಷನ್'ನಲ್ಲಿ ನಡೆದಿದೆ. ಮುಂದಿನ ಪೀಳಿಗೆಗಾಗಿ ಜ್ಞಾನ ಸಂಪತ್ತಿನ ಸಂರಕ್ಷಣೆಗೆ 'ಡಿಜಿಟಲ್ ರಕ್ಷೆ' ಪಡೆಯಲಾಗುತ್ತಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ 5ನೇ ಮುಖ್ಯ ಕಾರ್ಯದರ್ಶಿಗಳ ಸಮ್ಮೇಳನದಲ್ಲಿ ಚರ್ಚೆಯಾಗಿದೆ. ಈ ಕಾರಣ, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಎಲ್ಲ ವಿ.ವಿ.ಗಳಿಗೆ ಪತ್ರ ಬರೆದು, ಹಸ್ತಪ್ರತಿಗಳ ಮಾಹಿತಿ ಪಡೆದಿದ್ದಾರೆ.

ವೆಬ್, ಪೋರ್ಟಲ್: 'ಹಸ್ತಪ್ರತಿಗಳ ದಾಖಲೀಕರಣಕ್ಕಾಗಿ 'ಜ್ಞಾನಭಾರತ್ ವೆಬ್ ಮತ್ತು ಮೊಬೈಲ್ ಪೋರ್ಟಲ್' ಅಭಿವೃದ್ಧಿಪಡಿಸಲಾಗಿದೆ. ರಾಷ್ಟ್ರೀಯ ಹಸ್ತಪ್ರತಿಗಳ ಮಹೋತ್ಸವ, ವಸ್ತು ಪ್ರದರ್ಶನ ಆಯೋಜನೆ, ಪಾಡ್‌ಕಾಸ್ಟ್ ಮೂಲಕ ಪ್ರಚಾರ, ಅಂತರರಾಷ್ಟ್ರೀಯ ಸಮ್ಮೇಳನ ಆಯೋಜನೆಗೆ ಉದ್ದೇಶಿಸಲಾಗಿದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

> ಲಭ್ಯವಿರುವ ಹಸ್ತಪ್ರತಿಗಳಲ್ಲಿರುವ ಜ್ಞಾನ, ವಿವರವನ್ನು ಉಳಿಸಲು ಸಂರಕ್ಷಣೆ ಮತ್ತು ಡಿಜಿಟಲೀಕರಣ ಅತ್ಯಗತ್ಯವಾಗಿದೆ
> **ಶಾಲಿನಿ ರಜನೀಶ್,** ಸರ್ಕಾರದ ಮುಖ್ಯ ಕಾರ್ಯದರ್ಶಿ

'ಪೂರ್ವಜರ ಭೂರ್ಜಪತ್ರ, ತಾಳೆಗರಿ, ಕಾಗದ ಹಾಗೂ ಕಡತಗಳ ಬರವಣಿಗೆ ಪ್ರಮುಖ ದಾಖಲೆಗಳಾಗಿವೆ. ಹಸ್ತಪ್ರತಿಗಳು ಕನ್ನಡ, ತುಳು, ಮೋಡಿ (ತಿಗಳಾರಿ), ದೇವನಾಗರಿ, ಉರ್ದು, ಸಂಸ್ಕೃತ, ತೆಲುಗು, ಪರ್ಷಿಯನ್, ಇಂಗ್ಲಿಷ್ ಭಾಷೆಗಳಲ್ಲಿ ಇರುವುದನ್ನು ಗುರುತಿಸಲಾಗಿದೆ. ಇವುಗಳ ಸಂರಕ್ಷಣೆಯು ಸಾಂಸ್ಕೃತಿಕ ಪರಂಪರೆ ರಕ್ಷಿಸುವ ಪ್ರಕ್ರಿಯೆ' ಎಂದು ತಿಳಿಸಿದ್ದಾರೆ.

ಒಂದೇ ವೇದಿಕೆಯಲ್ಲಿ: 'ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಲ್ಯಾಮಿನೇಷನ್, ಆಮ್ಲೀಕರಣ ಕಡಿಮೆ ಮಾಡುವ ತಂತ್ರ ಅಳವಡಿಸಲಾಗುತ್ತದೆ.' ಎಂದಿದ್ದಾರೆ.

ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಒಂದೇ ರಾಷ್ಟ್ರೀಯ ವೇದಿಕೆಗೆ ತರುವ, ಸಾರ್ವಜನಿಕ ಪ್ರವೇಶಕ್ಕೆ ಅನುವು ಮಾಡಿಕೊಡಲು ಕೇಂದ್ರ ಸಂಸ್ಕೃತಿ ಸಚಿವಾಲಯ ಸಮಗ್ರ ಯೋಜನೆ ರೂಪಿಸುತ್ತಿದೆ ಎಂದು ಹೇಳಿದ್ದಾರೆ.

ವಿವಿಧ ವಿ.ವಿ, ಸಂಸ್ಥೆಗಳಲ್ಲಿರುವ ಹಸ್ತಪ್ರತಿಗಳ ವಿವರ

ಹೆಸರು	ಸಂಖ್ಯೆ	ಹೆಸರು	ಸಂಖ್ಯೆ
ಮೈಸೂರಿನ ಪುರಾತತ್ವ ಸಂಗ್ರಹಾಲಯ	214	ಶಿವಮೊಗ್ಗದ ಕೆಳದಿ ಸಂಗ್ರಹಾಲಯ	1,600
ಮೈಸೂರು ವಿವಿಯ ಒಆರ್‌ಐ	70,000	ಕುಕ್ಕೆಯ ಸುಬ್ರಹ್ಮಣ್ಯ ಮಠ	1,500
ಮೈಸೂರು ವಿ.ವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ	7,350	ಬೆಂಗಳೂರಿನ ಬೇಂದ್ರೆ ಸ್ಮಾರಕ ಪ್ರತಿಷ್ಠಾನ	1,463
ಧರ್ಮಸ್ಥಳ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ	7,000	ಬೆಂಗಳೂರಿನ ಪೂರ್ಣಪ್ರಜ್ಞ ಸಂಶೋಧನಾ ಮಂದಿರ	1,200
ಕನ್ನಡ ವಿಶ್ವವಿದ್ಯಾಲಯ, ಹಂಪಿ	6,000	ಉಡುಪಿಯ ಪಲಿಮಾರು ಮಠ	670
ಮಂಡ್ಯದ ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸ್ಥೆ	5,180	ಉಡುಪಿಯ ಸೋದೆ ವಾದಿರಾಜ ಮಠ	520
ಉಡುಪಿಯ ಪುತ್ತಿಗೆ ಮಠ	4,000	ಹುಬ್ಬಳ್ಳಿಯ ಮೂರುಸಾವಿರ ಮಠ	400
ಕರ್ನಾಟಕ ವಿ.ವಿಯ ಕೆಆರ್‌ಐ	4,000	ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು	336
ಬೆಂಗಳೂರು ವಿಶ್ವವಿದ್ಯಾಲಯ	3,500	ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ	200
ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ	2,687	ಉಡುಪಿಯ ಅದಮಾರು ಮಠ	170
ಬೆಂಗಳೂರಿನ ವ್ಯಾಸ ಮಾಧವ ಸಂಶೋಧನಾ ಪ್ರತಿಷ್ಠಾನ	2,000	ಮೈಸೂರು ಸಂಸ್ಕೃತ ಶಾಲೆ	150
		ಹನಸೋಗೆ ಮಾಧವ ಮಠ	120
		ಮಂಗಳೂರಿನ ಚಿತ್ರಾಪುರ ವಿದ್ಯಾಪೀಠ ಮಠ	45
		ಕುವೆಂಪು ವಿಶ್ವವಿದ್ಯಾಲಯ	10
		ಒಟ್ಟು	1,20,835

ಕರ್ನಾಟಕದ ಬಸ್‌ಗಳಲ್ಲಿ ಕಳ್ಳತನ: ಸೆರೆ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಬಸ್ ಪ್ರಯಾಣಿಕರಿಂದ 10 ಕೆ.ಜಿ ಬೆಳ್ಳಿ ಮತ್ತು ₹3 ಲಕ್ಷ ನಗದು ಕದ್ದು, ಪರಾರಿಯಾಗಿದ್ದ ವ್ಯಕ್ತಿಯನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ರಾಜ್ಯ ಪೊಲೀಸರ ಮನವಿ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಗಿದೆ ಎಂದು ದೆಹಲಿ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಬಂಧಿತನನ್ನು ಉತ್ತರ ಪ್ರದೇಶದ ಆಜೀಂಗಢ ನಿವಾಸಿ ಮೊಹಮ್ಮದ್ ಫರ್ಮಾನ್ ಎಂದು ಗುರುತಿಸಲಾಗಿದ್ದು, ಈತ ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯು ಕರ್ನಾಟಕ ಮತ್ತು ಆಂಧ್ರಪ್ರದೇಶದಾದ್ಯಂತ ಚಲಿಸುವ ಬಸ್‌ಗಳಲ್ಲಿ ಕಳ್ಳತನ ಮಾಡುವ ಸಂಘಟಿತ ಅಂತರರಾಜ್ಯ ಗ್ಯಾಂಗ್‌ನ ಸಕ್ರಿಯ ಸದಸ್ಯ. ಪ್ರಯಾಣಿಕರ ಅಥವಾ ಬಸ್ ಸಿಬ್ಬಂದಿಯ ಸೋಗಿನಲ್ಲಿರುವ ಈ ಗ್ಯಾಂಗ್ ಸದಸ್ಯರು, ಪ್ರಯಾಣಿಕರು ನಿದ್ರಿಸುವಾಗ ಕಳ್ಳತನ ಮಾಡುತ್ತಿದ್ದರು.

ಬಂಧಿತ ಆರೋಪಿಯ ವಿರುದ್ಧ ಅನೇಕ ರಾಜ್ಯಗಳಲ್ಲಿ ದೂರು ದಾಖಲಾಗಿವೆ. ಗ್ಯಾಂಗ್‌ನ ಇತರ ಸದಸ್ಯರನ್ನು ಪತ್ತೆಹಚ್ಚಲು ಮತ್ತು ಕದ್ದ ವಸ್ತುಗಳನ್ನು ವಶಪಡಿಸಿಕೊಳ್ಳಲು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಕಡಲಾಮೆಯ 94 ಮೊಟ್ಟೆಗಳ ಗೂಡು ಪತ್ತೆ, ರಕ್ಷಣೆ



ಕುಮಟಾ (ಉತ್ತರಕನ್ನಡ): ಸಮುದ್ರ ತೀರದಲ್ಲಿ 'ಆಲಿವ್ ರಿಡ್ಲೆ' ಜಾತಿಯ ಕಡಲಾಮೆಯ 94 ಮೊಟ್ಟೆಗಳ ಗೂಡನ್ನು ಅರಣ್ಯ ಇಲಾಖೆ ಸಿಬ್ಬಂದಿ ಸಂಗ್ರಹಿಸಿದ್ದು, ತಾಲ್ಲೂಕಿನ ಧಾರೇಶ್ವರದ ರಾಮನಗಿಂಡಿ ಬಳಿ ಆಮೆಮರಿ ಕೇಂದ್ರದಲ್ಲಿ ಇರಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಕುಮಟಾ ಆರ್‌ಎಫ್‌ಒ ಪ್ರವೀಣ ನಾಯಕ, 'ಶುಕ್ರವಾರ ರಾತ್ರಿ 11ಕ್ಕೆ ಬಂದ ಕಡಲಾಮೆ ಗೂಡು ಕೊರೆದು 94 ಮೊಟ್ಟೆಗಳಿಟ್ಟಿದೆ. ಅವುಗಳನ್ನು ಸುರಕ್ಷಿತವಾಗಿ ಮುಚ್ಚಿ ವಾಪಸು ಹೊರಟು ಹೋಗಲು ಬೆಳಗಿನ ಜಾವ ಐದು ಗಂಟೆ ಆಗಿರಬಹುದು' ಎಂದರು.

'ಇನ್ನು 45 ದಿನಗಳಲ್ಲಿ ಈ ಮೊಟ್ಟೆಗಳಿಂದ ಮರಿಗಳು ಹೊರ ಬರಲಿವೆ. ಇದು ಈ ವರ್ಷದ ಆಮೆ ಮೊಟ್ಟೆಯ ಮೊದಲ ಗೂಡಾಗಿದೆ. ಸ್ಥಳೀಯ ಮಾಹಿತಿದಾರರು ಇಲಾಖೆಗೆ ಸಹಕರಿಸಿದ್ದಕ್ಕೆ ಅವರಿಗೆ ಸೂಕ್ತ ಪ್ರೋತ್ಸಾಹಧನ ನೀಡಲಾಗಿದೆ' ಎಂದರು.

ಗರ್ಡರ್ ಅಳವಡಿಕೆ ಕೆಲಸ ಆರಂಭ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಲ್ಲಿ 18ನೇ ಕ್ರೆಸ್ಟ್‌ಗೇಟ್ ಅಳವಡಿಕೆಗೆ ಪೂರಕವಾಗಿ ಶನಿವಾರ ಗರ್ಡರ್ ಅಳವಡಿಸುವ ಕಾರ್ಯ ನಡೆಯಿತು. ಗುರುವಾರ ಎಂಡ್ ಗೇಟ್ ಅಳವಡಿಸಲಾಗಿತ್ತು.

ಹೊಸ ವಿನ್ಯಾಸದ ಗರ್ಡರ್‌ಗಳು ಕೂರುವ ಸ್ಥಳ, ಮತ್ತಿತರ ವಿಷಯಗಳಲ್ಲಿ ಬಹಳ ಲೆಕ್ಕಾಚಾರ ಇದ್ದವು. ಶುಕ್ರವಾರ ವ್ಯವಸ್ಥೆಗೊಳಿಸಿ, ಶನಿವಾರ ಕ್ರೇನ್ ಮೂಲಕ ಗರ್ಡರ್ ತಂದಿಡಲಾಯಿತು. ಮೂರು ಗರ್ಡರ್ ಕೂರಿಸಬೇಕಿದೆ.

'ಒಂದು ಗೇಟ್‌ನಲ್ಲಿ 3 ಗರ್ಡರ್ ಸೇರಿ 12 ಭಾಗಗಳಿದ್ದು, ಪ್ರತ್ಯೇಕವಾಗಿ ಜೋಡಿಸಲಾಗುತ್ತದೆ' ಎಂದು ತುಂಗಭದ್ರಾ ಮಂಡಳಿ ಅಧಿಕಾರಿಯೊಬ್ಬರು ಹೇಳಿದರು. ಆಂಧ್ರಪ್ರದೇಶದ ಮಂಡಳಿಯ ಸದಸ್ಯ ಕೆ.ನರಸಿಂಹಮೂರ್ತಿ ಕಾಮಗಾರಿ ವೀಕ್ಷಿಸಿದರು.

ಗ್ಯಾರಂಟಿ ಯೋಜನೆ ಪರಿಷ್ಕರಿಸಲ್ಲ: ಸಚಿವ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಯಾವುದನ್ನೂ ಪರಿಷ್ಕರಿಸುವುದಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಸಂಪುಟ ಪುನರ್‌ರಚನೆ ಮತ್ತು ಪಕ್ಷದ ಅಧ್ಯಕ್ಷ ಸ್ಥಾನ ಕುರಿತು ವರಿಷ್ಠರೇ ತೀರ್ಮಾನಿಸುವರು. ಬೆಳಗಾವಿ ಜಿಲ್ಲೆ ವಿಭಜನೆ ಕುರಿತು ಸರ್ಕಾರವೇ ನಿರ್ಧರಿಸಲಿದೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಕಲ್ಯಾಣ ಕರ್ನಾಟಕದ ಜನರು ಸವಲತ್ತು, ಅನುದಾನ ಪಡೆಯಲು 40 ವರ್ಷ ಹೋರಾಟ ನಡೆಸಿದರು. ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸದ್ಯ ಅನುದಾನ ನೀಡಲಿಕ್ಕಿಲ್ಲ ಎಂದು ತಿಳಿಸಿದರು.

ಹುಲಿ ದಾಳಿ: ಸಾವು


ಸಣ್ಣ ಹೈದ

ಗುಂಡ್ಲುಪೇಟೆ (ಚಾಮರಾಜನಗರ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬೇಟೆ ತಡೆ ಶಿಬಿರದಲ್ಲಿ ಶನಿವಾರ ಹುಲಿ ದಾಳಿಗೆ ಸಿಲುಕಿ ಗಸ್ತು ಸಿಬ್ಬಂದಿ ಸಣ್ಣ ಹೈದ (55) ಮೃತಪಟ್ಟರು.

ಬಂಡೀಪುರ ವಲಯದ ಮರಳಹಳ್ಳ ಕ್ಯಾಂಪ್ ಬಳಿ ಗಸ್ತಿನಲ್ಲಿದ್ದಾಗ ಅವಘಡ ನಡೆದಿದೆ ಇನ್ನಿಬ್ಬರು ಸಿಬ್ಬಂದಿ ಪಾರಾಗಿದ್ದಾರೆ. 'ದೇಹದ ಮೇಲೆ ಪರಚಿದ ಗಾಯಗಳಿವೆ' ಎಂದು ವಲಯಾರಣ್ಯಾಧಿಕಾರಿ ಮಹದೇವು ಅವರು ತಿಳಿಸಿದ್ದಾರೆ.

'ಸಾಮೂಹಿಕ ಬಹಿಷ್ಕಾರ; ಪರಿಹಾರಕ್ಕೆ ಕ್ರಮ'

ಮರ್ಯಾದೆಗೇಡು ಹತ್ಯೆ; ಗ್ರಾಮಕ್ಕೆ ಸಚಿವ ಲಾಡ್ ಭೇಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಮರ್ಯಾದೆಗೇಡು ಹತ್ಯೆ ಪ್ರಕರಣದಲ್ಲಿ ದೌರ್ಜನ್ಯಕ್ಕೆ ಒಳಗಾದ ಕುಟುಂಬದವರಿಗೆ ಸಾಮೂಹಿಕ ಬಹಿಷ್ಕಾರ ಹಾಕಿದ್ದು ಮೇಲ್ನೋಟಕ್ಕೆ ಕಂಡುಬಂದಿದೆ. ಗ್ರಾಮದಲ್ಲಿ ಜನಪ್ರತಿನಿಧಿಗಳು, ವಿವಿಧ ಮುಖಂಡರು ಮತ್ತು ಅಧಿಕಾರಿಗಳ ಸಭೆ ನಡೆಸಿ, ಪರಿಹರಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಹೇಳಿದರು.

ನಗರದ ವಿವೇಕಾನಂದ ಆಸ್ಪತ್ರೆಯಲ್ಲಿ ದಾಖಲಾಗಿರುವ ಕುಟುಂಬದ ಸದಸ್ಯರನ್ನು ಶನಿವಾರ ಭೇಟಿ ಆಗುವುದರ ಜೊತೆಗೆ ಗ್ರಾಮಕ್ಕೂ ತೆರಳಿದ್ದ ಅವರು ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

'ಆಘಾತಗೊಂಡಿರುವ ಕುಟುಂಬದವರಿಗೆ ಆಪ್ತ ಸಮಾಲೋಚನೆ ನಡೆಸಿ, ಧೈರ್ಯ ತುಂಬಲಾಗುತ್ತಿದೆ. ಇಡೀ ಕುಟುಂಬಕ್ಕೆ ಪುನರ್ವಸತಿ ಅಥವಾ ಪರ್ಯಾಯ ವ್ಯವಸ್ಥೆ ಮಾಡಬಹುದೇ ಎಂಬ ಬಗ್ಗೆಯೂ ಚಿಂತನೆ ಮಾಡಲಾಗುತ್ತಿದೆ' ಎಂದರು.


ಇನಾಂ ವೀರಾಪುರ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಶನಿವಾರ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕಾಂಗ್ರೆಸ್ ಮುಖಂಡ ಅನಿಲ ಪಾಟೀಲ, ಶಾಸಕ ಎನ್‌.ಎಚ್‌. ಕೋನರಡ್ಡಿ ಮತ್ತು ಪ್ರಮುಖರು ಇದ್ದರು

'ಸಮಾನತೆ ಬಗ್ಗೆ ಮಾತನಾಡುವ, ಹೋರಾಡುವ ನಾವು ಕೆಲ ಸಂದರ್ಭಗಳಲ್ಲಿ ಮನುಷ್ಯತ್ವ ಮೀರಿ ವರ್ತಿಸುತ್ತೇವೆ ಎನ್ನಲು ಇದು ಜ್ವಲಂತ ನಿದರ್ಶನ. ಆತಂಕಗೊಂಡಿರುವ ಕುಟುಂಬದ ಜೊತೆ ರಾಜ್ಯ ಸರ್ಕಾರವಿದ್ದು, ಅಗತ್ಯವಿರುವ ಎಲ್ಲ ಸೌಲಭ್ಯ ಹಾಗೂ ಪರಿಹಾರಗಳನ್ನು ವಿತರಿಸಲಾಗುವುದು' ಎಂದು ಹೇಳಿದರು.

ಶಾಸಕ ಎನ್.ಎಚ್. ಕೋನರಡ್ಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಇದ್ದರು.

> ಈಗಾಗಲೇ ಹಲವು ಕಾನೂನುಗಳಿವೆ. ಮರ್ಯಾದೆಗೇಡು ಹತ್ಯೆಯಂತಹ ವಿಶೇಷ ಘಟನೆಗಳ ಕುರಿತು ಕಾನೂನು ಜಾರಿ ಮಾಡುವ ಅಗತ್ಯವಿದೆಯೇ ಎಂಬ ಬಗ್ಗೆ ವಿಚಾರ ಮಾಡಲಾಗುವುದು
> **ಎಚ್.ಕೆ.ಪಾಟೀಲ,** ಕಾನೂನು ಸಚಿವ

ಜೈನ ಪುರೋಹಿತರ ಗೌರವಧನ: ₹3.50 ಕೋಟಿ ಉಳಿಕೆ – ಸಚಿವ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜೈನ ಸಮುದಾಯದ ಪುರೋಹಿತರಿಗೆ ಮಾಸಿಕ ಗೌರವಧನ ನೀಡಲು ಸರ್ಕಾರದಿಂದ ಬಿಡುಗಡೆಯಾಗಿದ್ದ ₹10 ಕೋಟಿ ಅನುದಾನದ ಪೈಕಿ ₹6.5 ಕೋಟಿ ಮಾತ್ರ ಬಳಕೆಯಾಗಿದ್ದು, ₹3.50 ಕೋಟಿ ಉಳಿದಿದೆ' ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಶನಿವಾರ ತಿಳಿಸಿದರು.

ನಗರದಲ್ಲಿ ಸಕಲ ದಿಗಂಬರ ಜೈನ ಸಮಾಜ ಹಾಗೂ ಶ್ರೀ ಮಹಾವೀರ ಸಂಘದಿಂದ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಅವರು, 'ಜೈನ ಸಮುದಾಯದ ಪುರೋಹಿತರಿಗೆ ಮಾಸಿಕ ₹6 ಸಾವಿರ ಗೌರವಧನ ನೀಡಲಾಗುತ್ತಿದೆ. ಇದುವರೆಗೂ ನೋಂದಣಿ ಮಾಡಿಕೊಳ್ಳದವರು, ಕೂಡಲೇ ಹೆಸರು ನೋಂದಾಯಿಸುವ ಮೂಲಕ ಸರ್ಕಾರದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಸಲಹೆ ಮಾಡಿದರು.

'ಜೈನ ಸಮುದಾಯದ ಅಭಿವೃದ್ಧಿಗೆ 2023ರಲ್ಲಿ ₹25 ಕೋಟಿ ಬಿಡುಗಡೆಯಾಗಿತ್ತು. 2024ರಲ್ಲಿ ₹50 ಕೋಟಿ, ಈ ವರ್ಷ ₹100 ಕೋಟಿ ಬಿಡುಗಡೆಯಾಗಿದೆ. ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿ ಮುಂಬರುವ ಬಜೆಟ್‌ನಲ್ಲಿ ₹200 ಕೋಟಿ ನಿಗದಿಗೊಳಿಸಲು ಪ್ರಯತ್ನಿಸುತ್ತೇನೆ' ಎಂದು ಸಚಿವರು ಭರವಸೆ ನೀಡಿದರು.

ಔಷಧ ಜಾಹೀರಾತು ಕಾನೂನು: 'ಸುಪ್ರೀಂ'ನಲ್ಲಿ ಅರ್ಜಿ

ವದೆಹಲಿ (ಪಿಟಿಐ): ನಿರ್ದಿಷ್ಟ ವೈದ್ಯಕೀಯ ಪ್ರಕರಣಗಳಲ್ಲಿ ಔಷಧಗಳ ಜಾಹೀರಾತುಗಳನ್ನು ನಿಯಂತ್ರಿಸುವ 1954ರ ಕಾನೂನಿನ ಷೆಡ್ಯೂಲ್ ಬಗ್ಗೆ ಆತಂಕ ವ್ಯಕ್ತಪಡಿಸಿ, ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಪರಿಶೀಲಿಸಿ, ಸುಧಾರಿಸಲು ತಜ್ಞರ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

ನಿತಿನ್ ಉಪಾಧ್ಯಾಯ ಎಂಬುವರು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಆಯುಷ್ ವೈದ್ಯರನ್ನೂ ಔಷಧಗಳು ಮತ್ತು 'ಮಾಂತ್ರಿಕ ಪರಿಹಾರಗಳ' (ಆಕ್ಷೇಪಾರ್ಹ ಜಾಹೀರಾತುಗಳು) ಕಾಯ್ದೆ– 1954ರ ಸೆಕ್ಷನ್ 2(ಸಿಸಿ) ಅಡಿಯಲ್ಲಿ ತಂದು, 'ನೋಂದಾಯಿತ ವೈದ್ಯಕೀಯ ವೈದ್ಯರು' ಎಂದು ಘೋಷಿಸಲು ಕೇಂದ್ರಕ್ಕೆ ಸೂಚಿಸುವಂತೆ ಕೋರಲಾಗಿದೆ.

ಕೆಲವೊಂದು ಪ್ರಕರಣಗಳಲ್ಲಿ ಮಾಂತ್ರಿಕ ಗುಣಗಳನ್ನು (ಆಕ್ಷೇಪಾರ್ಹ) ವ್ಯಕ್ತಪಡಿಸುವ ಪರಿಹಾರ ಔಷಧಗಳ ಜಾಹೀರಾತುಗಳನ್ನು ನಿಷೇಧಿಸುವ, ನಿರ್ಬಂಧಿಸುವ ಉದ್ದೇಶ 1954ರ ಕಾಯ್ದೆಯಲ್ಲಿದೆ. 2(ಸಿಸಿ) ಸೆಕ್ಷನ್ ನೋಂದಾಯಿತ ವೈದ್ಯಕೀಯ ವೃತ್ತಿಗೆ ಸಂಬಂಧಿಸಿದ್ದಾಗಿದೆ.

'ವಿಮಾನ ನಿಲ್ದಾಣಗಳಿಗೆ ಮಹನೀಯರ ಹೆಸರಿಡಿ'

ಹುಬ್ಬಳ್ಳಿ: 'ವಿಜಯಪುರ, ಬೆಳಗಾವಿ, ಹುಬ್ಬಳ್ಳಿ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳಿಗೆ ಕನ್ನಡನಾಡಿನ ಮಹನೀಯರ ಹೆಸರಿಡುವಂತೆ ಕೇಂದ್ರ ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಲಿಸೋಣ' ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ನಾಲ್ಕು ವಿಮಾನ ನಿಲ್ದಾಣಗಳ ಕನ್ನಡಿಗರ ನಾಮಕರಣ ಸಮಿತಿ ಸೇರಿ ವಿವಿಧ ಸಂಘಟನೆಗಳು ಶನಿವಾರ ಏರ್ಪಡಿಸಿದ್ದ ಸಮಾವೇಶದಲ್ಲಿ ಮಾತನಾಡಿದರು. ' ರಾಜ್ಯ ಸರ್ಕಾರದ ಶಿಫಾರಸಿಗೆ ಜನವರಿ 26ರೊಳಗೆ ಕೇಂದ್ರ ಸ್ಪಂದಿಸದಿದ್ದರೆ, ದೆಹಲಿ ಚಲೋ ಕೈಗೊಳ್ಳೋಣ' ಎಂದರು.

'ವಿಜಯಪುರ ವಿಮಾನ ನಿಲ್ದಾಣಕ್ಕೆ ಜಗಜ್ಯೋತಿ ಬಸವೇಶ್ವರ, ಬೆಳಗಾವಿ ನಿಲ್ದಾಣಕ್ಕೆ ಕಿತ್ತೂರು ರಾಣಿ ಚನ್ನಮ್ಮ, ಹುಬ್ಬಳ್ಳಿ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ ಮತ್ತು ಶಿವಮೊಗ್ಗ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಹೆಸರಿಡಬೇಕು' ಎಂದು ಒತ್ತಾಯಿಸಿದರು.



ಬೆಂಗಳೂರು ಸಮೀಪದ ಆನೇಕಲ್‌ನ ಸೋಲೂರು ಗ್ರಾಮದಲ್ಲಿ ಕಾಣಿಸಿಕೊಂಡಿದ್ದ 34 ಆನೆಗಳ ಹಿಂಡು. ಪ್ರಜಾವಾಣಿ ಸಂಗ್ರಹ ಚಿತ್ರ

ಆನೆ ಕಾರಿಡಾರ್ 'ಕಣ್ಮರೆ'

ಒಂದನೇ ಪುಟದಿಂದ...


ಸಾಮಾನ್ಯವಾಗಿ ಆನೆ ಕಾರಿಡಾರ್ ಪ್ರದೇಶದಲ್ಲಿ ರೈಲುಗಳಿಗೆ ವೇಗದ ಮಿತಿ ಇರುತ್ತದೆ. ಆನೆಗಳು ಹಳಿ ದಾಟುವುದನ್ನು ಗುರುತಿಸುವ ಲೇಸರ್ ಆಧಾರಿತ ತಂತ್ರಜ್ಞಾನ ಅಳವಡಿಸಲಾಗಿರುತ್ತದೆ. ಆದರೆ, ಇದು ಆನೆಗಳು ಸಂಚರಿಸುವ ಪಥ ಕಾರಿಡಾರ್ ಅಲ್ಲ ಎಂಬ ಒಂದೇ ಕಾರಣಕ್ಕೆ ಈ ಮುನ್ನೆಚ್ಚರಿಕೆ ಕ್ರಮಗಳು ಇರಲಿಲ್ಲ. 'ಅಭಿವೃದ್ಧಿ'ಯ ದ್ಯೋತಕವಾಗಿರುವ ರೈಲ್ವೆ ಮಾರ್ಗವು ಎಂಟು ಆನೆಗಳ ಜೀವವನ್ನು ತೆಗೆಯಿತು.

ಅಸ್ಸಾಂ ಏಕೆ? ನಮ್ಮದೇ ರಾಜ್ಯದ ಚಿಕ್ಕಮಗಳೂರಿನ ಉದಾಹರಣೆಯನ್ನೇ ನೋಡಿ. ನವೆಂಬರ್ ತಿಂಗಳ ಆರಂಭದಲ್ಲಿ ಕುದುರೆಮುಖ ವನ್ಯಜೀವಿ ವಿಭಾಗದ ವ್ಯಾಪ್ತಿಗೆ ಬರುವ ಶೃಂಗೇರಿ ತಾಲ್ಲೂಕಿನ ಕೆರೆಕಟ್ಟೆ ವಲಯದಲ್ಲಿ ಅರಣ್ಯ ಇಲಾಖೆ ಪ್ರಯಾಸಪಟ್ಟು ಸಲಗವೊಂದನ್ನು ಸೆರೆ ಹಿಡಿಯಿತು. ಆ ಆನೆಯು ಶಿವಮೊಗ್ಗ ಜಿಲ್ಲೆಯ ಆಗುಂಬೆ ಮತ್ತು ಕೊಡಗು ಜಿಲ್ಲೆಯ ಭಾಗಮಂಡಲದ ನಡುವೆ ಹಿಂದಿನಿಂದಲೂ ಓಡಾಡುತ್ತಿತ್ತು ಎಂಬುದು ಅಧಿಕಾರಿಗಳ ಹೇಳಿಕೆ. ಇತ್ತೀಚಿನ ವರ್ಷಗಳಲ್ಲಿ ಜನ ವಸತಿ ಪ್ರದೇಶಕ್ಕೂ ನುಗ್ಗುತ್ತಿತ್ತು. ಆದರೆ, ಈ ವರ್ಷದವರೆಗೂ ಅದು ಜನರ ಮೇಲೆ ದಾಳಿ ಮಾಡಿದ ಉದಾಹರಣೆ ಇರಲಿಲ್ಲ. ಇದೇ ಮೊದಲ ಬಾರಿಗೆ ಮನುಷ್ಯರ ಮೇಲೂ ದಾಳಿ ನಡೆಸಿದೆ.

ಇದಕ್ಕೆ ಪ್ರಮುಖ ಕಾರಣ, ಅದಕ್ಕೆ ಅಡೆತಡೆ ಇಲ್ಲದೆ ಓಡಾಡುವಂತಹ ದಾರಿ ಇಲ್ಲದೇ ಇದ್ದುದು. ಅರಣ್ಯದ ಪರಿಭಾಷೆಯಲ್ಲಿ ಈ ದಾರಿಯನ್ನು 'ಕಾರಿಡಾರ್' ಎಂದು ಕರೆಯುತ್ತಾರೆ. ಆಗುಂಬೆ ಮತ್ತು ಕೊಡಗಿನ ಭಾಗಮಂಡಲದ ನಡುವೆ ಆನೆಗಳ ಓಡಾಡಕ್ಕಾಗಿಯೇ ಪ್ರತ್ಯೇಕ ಹಾದಿ ಇದ್ದಿದ್ದರೆ ಆನೆಯು ಕೃಷಿ ಜಮೀನಿಗೆ ದಾಂಗುಡಿ ಇಡುತ್ತಿರಲಿಲ್ಲ.

ಕಾಡಾನೆಗಳ ಉಪಟಳವಿರುವ ರಾಜ್ಯದ ಎಲ್ಲ ಕಡೆಗಳಲ್ಲೂ ಇದೇ ಪರಿಸ್ಥಿತಿ ಇದೆ. ಮಾನವ–ಕಾಡಾನೆ ಸಂಘರ್ಷಕ್ಕೆ ಮುಖ್ಯ ಕಾರಣವೇ ಆನೆಗಳ ಕಾರಿಡಾರ್ ಇಲ್ಲದಿರುವುದು. ದಶಕಗಳ ಹಿಂದೆ ಅರಣ್ಯ ಪ್ರದೇಶಗಳ ನಡುವೆ ಪರಸ್ಪರ ಸಂಪರ್ಕ ಬೆಸೆಯುವಂತಹ ಕಾಡಿನ ದಾರಿಗಳಿದ್ದವು. ಆನೆಗಳು ಹಾಗೂ ಇತರ ವನ್ಯಜೀವಿಗಳು ಹೊಸ ಆವಾಸಗಳನ್ನು ಹುಡುಕಿಕೊಂಡು ಅದೇ ಹಾದಿಯಲ್ಲಿ ಸಾಗುತ್ತಿದ್ದವು. ಅಭಿವೃದ್ಧಿಯ ಆರ್ಭಟ, ಕೃಷಿ ಪ್ರದೇಶದ ವಿಸ್ತರಣೆ, ಗಣಿಗಾರಿಕೆ, ಪ್ರವಾಸೋದ್ಯಮದಂತಹ ವಾಣಿಜ್ಯ ಚಟುವಟಿಕೆಗಳು ಕಾಡಿನ ಹಾದಿಗಳನ್ನು ಆಪೋಶನ ತೆಗೆದುಕೊಂಡಿವೆ.

ರಾಜ್ಯದಲ್ಲಿ ಆನೆಗಳ ಅಸಹಜ ಸಾವು



ಅಸಹಜ ಸಾವಿನ ಕಾರಣಗಳು


ವರ್ಷ	ವಿದ್ಯುತ್ ಆಘಾತ	ಗುಂಡೇಟು	ಅಪಘಾತ
2021*	11	2	1
2022	12	2	2
2023	14	1	
2024	13	-	-
2025**	6	-	-

* 2021ರಲ್ಲಿ ಒಂದು ಆನೆ ಉರುಳಿಗೆ ಸಿಕ್ಕಿ ಮೃತಪಟ್ಟಿದೆ

** ಜುಲೈ 15ರವರೆಗೆ

ಆನೆಗಳು ತಮ್ಮ ಹಿಂದಿನ ತಲೆಮಾರಿನವರು ಶತಮಾನಗಳಿಂದಲೂ ಕ್ರಮಿಸಿದ ದಾರಿಯ ಜಾಡನ್ನೇ ಹಿಡಿದು ಈಗ ಅದೇ ದಾರಿಯಲ್ಲಿ ಸಾಗುತ್ತಿವೆ. ಆದರೆ, ಈಗ ಅಲ್ಲಿ ಮರಗಿಡಗಳು ಇಲ್ಲ. ಕಟ್ಟಡಗಳು, ಹೋಟೆಲ್, ರೆಸಾರ್ಟ್‌ಗಳಿವೆ. ಗಜಗಳು ಅನಿವಾರ್ಯವಾಗಿ ಆ ಹಾದಿಯಲ್ಲೇ ಸಂಚರಿಸಬೇಕಾಗಿದೆ. ಆಗಲೇ ಈ ಸಂಘರ್ಷಗಳು ನಡೆಯುವುದು. ಈ ಸಂಘರ್ಷದಲ್ಲಿ ಜನರೂ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಆನೆಗಳೂ ಸಾಯುತ್ತಿವೆ. ನಾಲ್ಕೂವರೆ ವರ್ಷಗಳಲ್ಲಿ ರಾಜ್ಯದಲ್ಲಿ ಸಂಘರ್ಷದಲ್ಲಿ 65 ಆನೆಗಳು ಮೃತಪಟ್ಟಿವೆ. ಈ ಪೈಕಿ ವಿದ್ಯುತ್ ತಂತಿ ತಗುಲಿ ಸತ್ತ ಆನೆಗಳದ್ದೇ ಸಿಂಹಪಾಲು. ಇದೇ ಅವಧಿಯಲ್ಲಿ ಕಾಡಾನೆಗಳ ದಾಳಿಗೆ ಸಿಲುಕಿ 153 ಜನರು ಅಸುನೀಗಿದ್ದಾರೆ.

ಆನೆ ದಾಳಿಯಲ್ಲಿ ಮೃತಪಟ್ಟವರು



ದೇಶದಲ್ಲೇ ಅತಿ ಹೆಚ್ಚು ಆನೆಗಳಿರುವ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕದ್ದು. ಇರುವ ಆನೆಗಳಿಗೆ ಅಡ್ಡಿ ಆತಂಕಗಳಿಲ್ಲದೆ ಓಡಾಡಲು ಜಾಗವೇ ಇಲ್ಲ. ಕರ್ನಾಟಕ, ಕೇರಳ, ತಮಿಳುನಾಡು ಮಹಾರಾಷ್ಟ್ರಗಳಲ್ಲಿ ಹರಡಿರುವ ಪಶ್ಚಿಮ ಘಟ್ಟಗಳಲ್ಲಿ ಆನೆಗಳ ಸಂಖ್ಯೆ ಹೆಚ್ಚಿದೆ. ಆದರೆ, ಹಿಂದಿನ ಅಂಕಿ ಅಂಶಗಳಿಗೆ ಹೋಲಿಸಿದರೆ, ಇತ್ತೀಚಿನ ವರ್ಷಗಳಲ್ಲಿ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. 'ಪಶ್ಚಿಮ ಘಟ್ಟದ ಅರಣ್ಯದಲ್ಲಿ ಆಶ್ರಯ ಪಡೆದಿರುವ ಆನೆಗಳಿಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಓಡಾಡಲು ಕಾರಿಡಾರ್ ಇಲ್ಲದಂತೆ ಆಗಿದೆ. ಕಾಫಿ, ಚಹಾ ತೋಟಗಳು ವಿಸ್ತರಣೆಯಾಗುತ್ತಿವೆ. ಮಾನವನ ಹಸ್ತಕ್ಷೇಪ, ಒತ್ತುವರಿ, ಅಭಿವೃದ್ಧಿ ಯೋಜನೆಗಳು ಆನೆಗಳಿಗೆ ಮಾರಕವಾಗುತ್ತಿದೆ' ಎಂದು ಇತ್ತೀಚೆಗೆ ಬಿಡುಗಡೆಯಾಗಿರುವ 'ಆನೆಗಳ ಸ್ಥಿತಿಗತಿ ವರದಿ–2025' ಕಳವಳ ವ್ಯಕ್ತಪಡಿಸಿದೆ.

ರಾಜ್ಯದ ಬಹುಪಾಲು ಅರಣ್ಯ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿದೆ. ಅತಿ ಹೆಚ್ಚು ಆನೆಗಳನ್ನು ಹೊಂದಿರುವ ಮೈಸೂರು ಆನೆ ಸಂರಕ್ಷಿತ ವಲಯ ಈ ಪ್ರದೇಶದಲ್ಲೇ ಇದೆ. ಇದರ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ರಾಮನಗರ, ಹಾಸನ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಿದೆ. ಉತ್ತರದ ದಾಂಡೇಲಿ ಆನೆ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲೂ ಮಾನವ ವನ್ಯಜೀವಿ ಸಂಘರ್ಷಗಳು ವರದಿಯಾಗುತ್ತಲೇ ಇರುತ್ತವೆ. ಈ ಪ್ರದೇಶದಲ್ಲಿರುವ ಆನೆಗಳು ಶಿರಸಿ, ಬೆಳಗಾವಿ, ಹಳಿಯಾಳ, ಯಲ್ಲಾಪುರ, ಧಾರವಾಡ ವ್ಯಾಪ್ತಿಯಲ್ಲಿ ಹಾವಳಿ ಸೃಷ್ಟಿಸುತ್ತಿವೆ.

ಬೇಕಿದೆ ಕಾರಿಡಾರ್‌ಗಳು: ಕಾಡಾನೆಗಳ ಕಾಟ ತಡೆಗೆ ಅರಣ್ಯ ಇಲಾಖೆಯು ಅವುಗಳನ್ನು ಸೆರೆ ಹಿಡಿಯುವುದು, ಸೋಲಾರ್ ಬೇಲಿ, ರೈಲು ಕಂಬಿ ಬೇಲಿ, ಕಂದಕ ನಿರ್ಮಾಣದಂತಹ ಪರಿಹಾರಗಳನ್ನೇನೋ ಕಂಡುಕೊಂಡಿದೆ. ಆದರೆ, ಇದು ತಾತ್ಕಾಲಿಕವಷ್ಟೇ. ಇದಕ್ಕೆ ಹೆಚ್ಚು ಪರಿಣಾಮಕಾರಿಯಾದಂತಹ ಪರಿಹಾರ ಇದ್ದರೆ ಅದು ಆನೆ ಕಾರಿಡಾರ್‌ಗಳ ನಿರ್ಮಾಣ ಅಥವಾ ಈಗಿರುವ ಕಾರಿಡಾರ್‌ಗಳ ಸಂರಕ್ಷಣೆ ಮಾತ್ರ ಎಂಬುದು ಅರಣ್ಯ ಇಲಾಖೆಯೇ ಕಂಡುಕೊಂಡಿದೆ. ಆದರೆ, ಇದು ಜಾರಿಯಾಗಿಲ್ಲ.

ರಾಜ್ಯದಲ್ಲಿರುವ ಅಧಿಕೃತ ಆನೆ ಕಾರಿಡಾರ್‌ಗಳು ಒಂಬತ್ತು ಮಾತ್ರ. ಇವುಗಳೆಲ್ಲವೂ ಇರುವುದು ದಕ್ಷಿಣದ ಜಿಲ್ಲೆಗಳಲ್ಲಿ. ಚಾಮರಾಜನಗರ ಜಿಲ್ಲೆಯಲ್ಲಿ ಐದು ಕಾರಿಡಾರ್‌ಗಳಿದ್ದರೆ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮೂರು ಇವೆ. ಇನ್ನೊಂದು ಕೊಡಗು ಜಿಲ್ಲೆಯಲ್ಲಿದೆ. ರಾಜ್ಯವು ಐದು ಕಾರಿಡಾರ್‌ಗಳನ್ನು ನೆರೆಯ ತಮಿಳುನಾಡು ಮತ್ತು ಎರಡು ಕಾರಿಡಾರ್‌ಗಳನ್ನು ಕೇರಳದೊಂದಿಗೆ ಹಂಚಿಕೊಂಡಿದೆ. ಈ ಕಾರಿಡಾರ್‌ಗಳು ಆನೆಗಳ ಬಳಕೆಗೆ ಸಂಪೂರ್ಣವಾಗಿ ಸಿಗುತ್ತಿಲ್ಲ. ಎರಡು ಕಾರಿಡಾರ್‌ಗಳನ್ನು ಸಂರಕ್ಷಿಸಲು ಮಾತ್ರ ಅರಣ್ಯ ಇಲಾಖೆಗೆ ಸಾಧ್ಯವಾಗಿದೆ.

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಧಾಮ ಮತ್ತು ಬಿಳಿಗಿರಿರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ನಡುವೆ ಸಂಪರ್ಕ ಕಲ್ಪಿಸುವ ಎಡೆಯಾರಹಳ್ಳಿ–ದೊಡ್ಡಸಂಪಿಗೆ ಆನೆ ಕಾರಿಡಾರ್ ಅನ್ನು ಖಾಸಗಿಯವರಿಂದ 25.37 ಎಕರೆ ಜಮೀನು ಖರೀದಿ ಮಾಡಿ ಪುನರುಜ್ಜೀವನಗೊಳಿಸಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕಣಿಯನಪುರ–ಮೊಯಾರ್ ಆನೆ ಕಾರಿಡಾರ್ ಕೂಡ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿದೆ. ಕಾರಿಡಾರ್ ವ್ಯಾಪ್ತಿಯಲ್ಲಿ ಮೂರು ಕಂದಾಯ ಗ್ರಾಮಗಳು, ಕೃಷಿ ಜಮೀನುಗಳು, ರೆಸಾರ್ಟ್‌ನಂತಹ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿವೆ. ಬಿಳಿಗಿರಿರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ಮತ್ತು ತಮಿಳುನಾಡಿನ ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದ ನಡುವೆ ಸಂಪರ್ಕ ಕಲ್ಪಿಸುವ ಮೂಡಹಳ್ಳಿ–ತಲಮಲೆ ಕಾರಿಡಾರ್ ಅನ್ನು ಸಂರಕ್ಷಿಸುವ ಪ್ರಯತ್ನ ಸರ್ಕಾರೇತರ ಸಂಸ್ಥೆಗಳಿಂದ ನಡೆದಿದೆ.

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಆನೆ ಸಂರಕ್ಷಣೆ ಕಾರ್ಯಕ್ರಮದ ಅಡಿಯಲ್ಲಿ ದೇಶದಲ್ಲಿರುವ ಆನೆ ಕಾರಿಡಾರ್‌ಗಳ ಸ್ಥಿತಿಗತಿಗಳ ಬಗ್ಗೆ 2023ರಲ್ಲಿ ವರದಿ ಬಿಡುಗಡೆ ಮಾಡಿದೆ. ರಾಜ್ಯದ ಒಂಬತ್ತು ಕಾರಿಡಾರ್‌ಗಳ ಪರಿಸ್ಥಿತಿಗಳನ್ನು ಅದರಲ್ಲಿ ವಿವರಿಸಲಾಗಿದೆ. ಕಾರಿಡಾರ್ ವ್ಯಾಪ್ತಿಯಲ್ಲಿ ಜನವಸತಿ, ಕೃಷಿ ಭೂಮಿ, ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವುದನ್ನು ವರದಿ ಉಲ್ಲೇಖಿಸಿದೆ. ಅರಣ್ಯ ಇಲಾಖೆಯು ಆ ಪ್ರದೇಶವು ಕಾರಿಡಾರ್ ಎಂದು ಅಧಿಕೃತವಾಗಿ ಅಧಿಸೂಚನೆ ಹೊರಡಿಸಿ ಸಂರಕ್ಷಿಸಬೇಕು ಎಂದು ವರದಿ ಶಿಫಾರಸು ಮಾಡಿದೆ.

ಉತ್ತರದಲ್ಲಿ ಪಥಗಳೇ ಇಲ್ಲ: ರಾಜ್ಯದ ದಕ್ಷಿಣಕ್ಕಿರುವ ಕೆಲವು ಜಿಲ್ಲೆಗಳಲ್ಲಿ ಹೇಳುವುದಕ್ಕಾದರೂ ಕಾರಿಡಾರ್‌ಗಳಿವೆ. ಆದರೆ, ಕಡಿಮೆ ಸಂಖ್ಯೆಯ ಆನೆಗಳಿದ್ದರೂ, ಅವುಗಳ ಹಾವಳಿ ಹೆಚ್ಚಾಗಿರುವ ರಾಜ್ಯದ ಮಧ್ಯ ಭಾಗ ಮತ್ತು ಉತ್ತರದ ಕೆಲವು ಜಿಲ್ಲೆಗಳಲ್ಲಿ ಗಜ ಪಥಗಳೇ ಇಲ್ಲ.

ಉದಾಹರಣೆಗೆ, ಆನೆ–ಮಾನವ ಸಂಘರ್ಷ ತೀವ್ರವಾಗಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಘೋಷಿತ ಆನೆ ಕಾರಿಡಾರ್ ಇಲ್ಲ. ಜಿಲ್ಲೆಯ ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಮತ್ತು ಸುತ್ತಮುತ್ತಲ ಪ್ರದೇಶ ಮೈಸೂರು ಆನೆ ವಿಸ್ತರಿತ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. 2002ರಲ್ಲಿ ಈ ಅಧಿಸೂಚನೆ ಹೊರಡಿಸಲಾಗಿದ್ದು, ಆನೆಗಳ ವಾಸಸ್ಥಾನ ವಿಸ್ತರಣೆಗೊಳ್ಳುತ್ತಿರುವ ಪ್ರದೇಶ ಎಂದು ಹೇಳಲಾಗಿದೆ. 2002ಕ್ಕೆ ಹೋಲಿಸಿದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿದೆ. ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಆನೆಗಳು ಮೂಡಿಗೆರೆ, ನರಸಿಂಹರಾಜಪುರ, ಕೊಪ್ಪ, ಶೃಂಗೇರಿ ತನಕ ಓಡಾಡುತ್ತವೆ. ಆನೆ ಮತ್ತು ಮಾನವ ಸಂಘರ್ಷ ಆಗಾಗ ಸಂಭವಿಸುತ್ತಿವೆ.

ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳನ್ನು ಬೆಸೆಯುವ ಭದ್ರಾ, ಶೆಟ್ಟಿಹಳ್ಳಿ, ಶರಾವತಿ ಅಭಯಾರಣ್ಯಗಳು, ಸೋಮೇಶ್ವರ ಹಾಗೂ ಮೂಕಾಂಬಿಕಾ ವನ್ಯಜೀವಿಧಾಮಗಳ ನಡುವೆ ಮೊದಲು ಆನೆ ಪಥ ಇತ್ತು. 1972ರಲ್ಲಿ ಗಾಜನೂರು ಬಳಿ ತುಂಗಾ ಜಲಾಶಯ ನಿರ್ಮಾಣದ ನಂತರ ಭದ್ರಾ ಹಾಗೂ ಶೆಟ್ಟಿಹಳ್ಳಿ ಅಭಯಾರಣ್ಯದ ನಡುವಿನ ಕಾರಿಡಾರ್ ಬಹುತೇಕ ಮುಚ್ಚಿ ಹೋಗಿದೆ. ಮಳೆಗಾಲದಲ್ಲಿ ಸಂಪರ್ಕ ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಿತ ಅರಣ್ಯ ಮತ್ತು ಬೆಳಗಾವಿ ಜಿಲ್ಲೆಯ ಭೀಮಗಡ ಅಭಯಾರಣ್ಯ ವ್ಯಾಪ್ತಿಯಿಂದ ಮಳೆಗಾಲ ಮುಗಿದೊಡನೆ ಹೊರಡುವ ಕಾಡಾನೆಗಳ ಹಿಂಡುಗಳು ಜಿಲ್ಲೆಯಲ್ಲಿ ಸಾಗುತ್ತವೆ. ಹೀಗೆ ಸಾಗುವ ಹಿಂಡು, ಕಬ್ಬು, ಭತ್ತದ ಗದ್ದೆ ನಾಶಪಡಿಸುವ ಘಟನೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ.

ಪ್ರಸ್ತಾವಿತ ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗಲಿದೆ. ಇಲ್ಲಿ ಘೋಷಿತ ಆನೆ ಕಾರಿಡಾರ್ ಇಲ್ಲ. ಆದರೆ, ಆನೆಗಳ ಓಡಾಟ ಇದೆ. ರೈಲು ಮಾರ್ಗ ನಿರ್ಮಾಣವಾದರೆ, ಆನೆಗಳು ಸೇರಿದಂತೆ ವನ್ಯಪ್ರಾಣಿಗಳ ಓಡಾಟಕ್ಕೆ ಅಡಚಣೆಯಾಗಲಿದೆ.

ವಿಳಂಬ ಧೋರಣೆ: ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಹಲವು ತಿಂಗಳುಗಳಿಂದ ಕಾರಿಡಾರ್‌ಗಳ ರಕ್ಷಣೆಯ ಬಗ್ಗೆ ಮಾತನಾಡುತ್ತಿದ್ದಾರೆ. ರಾಜ್ಯದಲ್ಲಿ 52 ಆನೆ ಕಾರಿಡಾರ್‌ಗಳನ್ನು ಗುರುತಿಸಲಾಗಿದೆ ಎಂದೂ ಹೇಳಲಾಗುತ್ತಿದೆ. ಆದರೆ, ಸಂರಕ್ಷಣೆಯ ಕೆಲಸ ಕಣ್ಣಿಗೆ ಕಾಣುವಂತೆ ಶುರುವಾಗಿಲ್ಲ ಎನ್ನುವುದು ಪರಿಸರವಾದಿಗಳ ಆರೋಪ.

ರಾಜ್ಯದಲ್ಲಿ ಹಿಂದೆ ನಡೆದಿದ್ದ ಕಾರಿಡಾರ್ ಪುನರುಜ್ಜೀವನ ಪ್ರಯತ್ನವೇ ಸಾಕಾರಗೊಂಡಿಲ್ಲ. ಇದಕ್ಕೆ ಹಾಸನ ಜಿಲ್ಲೆಯೇ ತಾಜಾ ಉದಾಹರಣೆ.

ಸಕಲೇಶಪುರ ತಾಲ್ಲೂಕಿನಲ್ಲಿ ಕಾರಿಡಾರ್ ರಚಿಸಬೇಕು ಎಂದು ಕಾಡಾನೆಗಳ ಕಾಟದಿಂದ ನೊಂದಿರುವ ಹೆತ್ತೂರು ಹೋಬಳಿಯ ಅರಣಿ, ಬಟ್ಟೆಕುಮರಿ, ಬಾಜಿಮನೆ, ಬಾಳೆಹಳ್ಳ, ಮಂಕನಹಳ್ಳಿ, ಬೋರನಮನೆ, ಯತ್ತಹಳ್ಳ, ಯಡಕುಮರಿ ಗ್ರಾಮಗಳ ಜನರು ದಶಕದಿಂದಲೂ ಹೇಳುತ್ತಾ ಬಂದಿದ್ದಾರೆ. 'ರಕ್ಷಿತಾರಣ್ಯ ವಿಸ್ತರಿಸಿ, ಕಾಡಾನೆ ಸಮಸ್ಯೆ ಕೊನೆಗಾಣಿಸಿ. ಅಗತ್ಯ ಜಮೀನನ್ನು ಸ್ವಯಂಪ್ರೇರಿತವಾಗಿ ಬಿಟ್ಟು ಕೊಡುತ್ತೇವೆ' ಎಂದೂ ಅವರು ಹೇಳಿದ್ದಾರೆ. 2012ರಿಂದಲೇ ಸಚಿವರು ಹಾಗೂ ಅಧಿಕಾರಿಗಳಿಗೆ ಪತ್ರ ಬರೆಯುತ್ತಲೇ ಇದ್ದಾರೆ. 2013ರಲ್ಲಿ ಆಗಿನ ಜಿಲ್ಲಾಧಿಕಾರಿಯು ಗ್ರಾಮಸ್ಥರ ಸಭೆ ನಡೆಸಿ ಜಮೀನು ಬಿಟ್ಟುಕೊಡುವ ನಿರ್ಣಯವನ್ನು ಸರ್ಕಾರಕ್ಕೂ ಕಳುಹಿಸಿದ್ದರು. ಬೇಲೂರು, ಸಕಲೇಶಪುರ ತಾಲ್ಲೂಕಿನ 7 ಮೀಸಲು ಅರಣ್ಯಕ್ಕೆ ಹೊಂದಿಕೊಂಡಂತೆ ಇರುವ 30 ಗ್ರಾಮಗಳ ವ್ಯಾಪ್ತಿಯ ಒಟ್ಟು 25,424 ಎಕರೆ ಅರಣ್ಯ ಲಕ್ಷಣ ಹೊಂದಿರುವ ಸರ್ಕಾರಿ ಜಮೀನು ಹಾಗೂ ರೈತರ ಹಿಡುವಳಿಯ 2,500 ಎಕರೆ ಪ್ರದೇಶವನ್ನೂ ಸೇರಿಸಲು ಹಾಗೂ ಖಾಸಗಿ ರೈತರ ಜಮೀನು ಸ್ವಾಧೀನ ಪಡಿಸಿಕೊಂಡು, ಅರಣ್ಯ ಇಲಾಖೆಗೆ ವರ್ಗಾಯಿಸಲು ತೀರ್ಮಾನಿಸಲಾಗಿತ್ತು. ಆದರೆ, ಖಾಸಗಿ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಗೆ ಒಪ್ಪಿಗೆ ದೊರೆಯದೇ 2014ರಲ್ಲಿ ಆನೆ ಕಾರಿಡಾರ್ ಯೋಜನೆ ಕೈಬಿಡಲಾಗಿತ್ತು.

ಕಾಡಾನೆ–ಮಾನವ ಸಂಘರ್ಷ ಹೆಚ್ಚಾಗುತ್ತಿರುವುದು, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಒತ್ತಡಕ್ಕೆ ದೂಡಿದೆ. ಕಾರಿಡಾರ್‌ಗಳ ಪುನರುಜ್ಜೀವನ ಸುಲಭದ ಕೆಲಸವಲ್ಲ ಎಂದು ಹೇಳುತ್ತಾರೆ ಅವರು. ಒತ್ತುವರಿ ಮಾಡಿಕೊಂಡವರು, ಅದರ ಆಸುಪಾಸಿನಲ್ಲಿ ವಾಣಿಜ್ಯ ಚಟುವಟಿಕೆ ಮತ್ತು ತೋಟಗಳನ್ನು ವಿಸ್ತರಿಸಿಕೊಂಡವರು, ಗಣಿಗಾರಿಕೆ ನಡೆಸುತ್ತಿರುವವರು ಎಲ್ಲರೂ ಪ್ರಭಾವಿಗಳು ಮತ್ತು ರಾಜಕಾರಣಿಗಳೇ ಆಗಿರುತ್ತಾರೆ. ಕ್ರಮಕ್ಕೆ ಮುಂದಾದರೆ ಒತ್ತಡ ಹಾಕಿಸಿ ಕಾರ್ಯಾಚರಣೆಯನ್ನು ತಡೆಯುತ್ತಾರೆ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಹೀಗಾಗಿ ಕಾರಿಡಾರ್ ರಚನೆ ಮತ್ತು ಒತ್ತುವರಿ ತೆರವು ಎನ್ನುವುದು ಅಸಾಧ್ಯವೇ ಆಗುತ್ತಿದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.
ಪೂರಕ ಮಾಹಿತಿ: ಉಮೇಶ ಭಟ್ಟ ಪಿ.ಎಚ್., ಚಿದಂಬರ ಪ್ರಸಾದ, ಬಾಲಚಂದ್ರ ಜಿ.ಎಚ್., ಓದೇಶ ಸಕಲೇಶಪುರ, ಕೆ.ಎಸ್.ಗಿರೀಶ, ಗಣಪತಿ ಹೆಗಡೆ, ಸಂತೋಷ ಈ. ಚಿನಗುಡಿ, ವಿಜಯಕುಮಾರ್ ಎಸ್.ಕೆ., ವೆಂಕಟೇಶ್ ಜಿ.ಎಚ್

ರಾಜ್ಯದಲ್ಲಿರುವ ಆನೆ ಕಾರಿಡಾರ್‌ಗಳು

1. **ಕರಡಿಕ್ಕಲ್– ಮಾದೇಶ್ವರ** (ರಾಗಿಹಳ್ಳಿ ಕಾರಿಡಾರ್)(ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ) (ಬೆಂಗಳೂರು ದಕ್ಷಿಣ ಜಿಲ್ಲೆ)
2. **ತಾಳ್ಳಿ –ಬಿಳಿಕಲ್** (ಕರ್ನಾಟಕ–ತಮಿಳುನಾಡು) (ಬೆಂಗಳೂರು ದಕ್ಷಿಣ ಜಿಲ್ಲೆ)
3. **ಬಿಳಿಕಲ್–ಜವಳಗಿರಿ** (ಕರ್ನಾಟಕ–ತಮಿಳುನಾಡು) (ಬೆಂಗಳೂರು ದಕ್ಷಿಣ ಜಿಲ್ಲೆ)
4. **ಎಡೆಯಾರಹಳ್ಳಿ–ಗುತ್ತಿಯಾಲತ್ತೂರು** (ಕರ್ನಾಟಕ–ತಮಿಳುನಾಡು) (ಚಾಮರಾಜನಗರ ಜಿಲ್ಲೆ)
5. **ಎಡೆಯಾರಹಳ್ಳಿ–ದೊಡ್ಡಸಂಪಿಗೆ** (ಮಲೆ ಮಹದೇಶ್ವರ ವನ್ಯಧಾಮ ಮತ್ತು ಬಿಆರ್‌ಟಿ ಹುಲಿಸಂರಕ್ಷಿತ ಪ್ರದೇಶ) (ಚಾಮರಾಜನಗರ ಜಿಲ್ಲೆ)
6. **ಪುಣಜನೂರಿನಲ್ಲಿರುವ ಚಾಮರಾಜನಗರ–ತಲಮಲೆ** (ಕರ್ನಾಟಕ–ತಮಿಳುನಾಡು) (ಚಾಮರಾಜನಗರ ಜಿಲ್ಲೆ)
7. **ಮೂಡಹಳ್ಳಿಯಲ್ಲಿರುವ ಚಾಮರಾಜನಗರ–ತಲಮಲೆ** (ಕರ್ನಾಟಕ–ತಮಿಳುನಾಡು) (ಚಾಮರಾಜನಗರ ಜಿಲ್ಲೆ)
8. **ಕಣಿಯನಪುರ–ಮೊಯಾರ್** (ಬಂಡೀಪುರ) (ಚಾಮರಾಜನಗರ ಜಿಲ್ಲೆ)
9. **ಬೇಗೂರು- ಬ್ರಹ್ಮಗಿರಿ** (ಕರ್ನಾಟಕ–ಕೇರಳ) (ಕೊಡಗು ಜಿಲ್ಲೆ)

ತಮಿಳುನಾಡಿನ ಸಿಗೂರು ಕಾರಿಡಾರ್ ರೆಸಾರ್ಟ್‌ಗಳ ತೆರವಿಗೆ ಸೂಚನೆ

ತಮಿಳುನಾಡಿನ ಮುದುಮಲೆ ಮತ್ತು ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಸಿಗೂರು ಆನೆ ಕಾರಿಡಾರ್‌ನಲ್ಲಿ ನಿರ್ಮಿಸಿರುವ ಹೋಟೆಲ್, ರೆಸಾರ್ಟ್‌ನಂತಹ ವಾಣಿಜ್ಯ ಕಟ್ಟಡಗಳನ್ನು ತೆರವುಗೊಳಿಸಬೇಕು ಎಂದು ಮದ್ರಾಸ್ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೆಪ್ಟೆಂಬರ್‌ನಲ್ಲಿ ಸೂಚಿಸಿದೆ.

ಕಾರಿಡಾರ್‌ಗೆ ಸೇರಿದ ಪ್ರದೇಶದಲ್ಲಿ ಜಮೀನು ಖರೀದಿ ಅಕ್ರಮ ಎಂದು ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಸಮಿತಿ ಹೇಳಿತ್ತು. ಸಮಿತಿಯ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

39 ರೆಸಾರ್ಟ್‌ಗಳು, 390 ಮನೆಗಳು, 27 ಸಾಮಾನ್ಯ ಕಟ್ಟಡಗಳು, ಒಂಬತ್ತು ಎಸ್ಟೇಟ್‌ಗಳು, 77 ಕೃಷಿ ಜಮೀನುಗಳು, 9 ಇತರ ಕಟ್ಟಡಗಳು ಸೇರಿದಂತೆ 821 ಕಟ್ಟಡಗಳು ಸಿಗೂರು ಆನೆ ಕಾರಿಡಾರ್‌ನಲ್ಲಿವೆ ಎಂದು ನೀಲಗಿರಿ ಜಿಲ್ಲಾಧಿಕಾರಿಯವರ ವರದಿ ಹೇಳಿದೆ. ಇದು ಕರ್ನಾಟಕಕ್ಕೆ ಮಾದರಿಯಾಗಬೇಕು.

ಪಥ ಸಂರಕ್ಷಣೆಗೆ ಎನ್‌ಜಿಒ ಪ್ರಯತ್ನ



ಜಿ.ಮಲ್ಲೇಶಪ್ಪ

ನಾಲ್ಕು ಸಂರಕ್ಷಿತ ಅರಣ್ಯವನ್ನು ಹೊಂದಿರುವ ಚಾಮರಾಜನಗರ ಜಿಲ್ಲೆಯಲ್ಲಿ ಐದು ಆನೆ ಕಾರಿಡಾರ್‌ಗಳಿವೆ. ಇವುಗಳಲ್ಲಿ ಮೂರನ್ನು ನೆರೆಯ ತಮಿಳುನಾಡಿನೊಂದಿಗೆ ಹಂಚಿಕೊಂಡಿದೆ. ಜಿಲ್ಲೆಯಲ್ಲಿ ಎರಡು ಕಾರಿಡಾರ್‌ಗಳನ್ನು ಸಂರಕ್ಷಿಸಲಾಗಿದೆ. ಎಡೆಯಾರಳ್ಳಿ–ದೊಡ್ಡ ಸಂಪಿಗೆ ಕಾರಿಡಾರ್ ಪೂರ್ಣವಾಗಿ ಸಂರಕ್ಷಿಸಲಾಗಿದ್ದು ಮತ್ತು ಕಣಿಯನಪುರ–ಮೊಯಾರ್ ಕಾರಿಡಾರ್‌ಗಳು ಸ್ವಲ್ಪ ಮಟ್ಟಿಗೆ ಸುಸ್ಥಿತಿಯಲ್ಲಿದೆ. ಉಳಿದ ಕಾರಿಡಾರ್‌ಗಳನ್ನು ಸಂರಕ್ಷಿಸುವ ಪ್ರಯತ್ನಗಳೂ ಜಾರಿಯಲ್ಲಿದೆ. ಇದಕ್ಕೆ ಸರ್ಕಾರೇತರ ಸಂಸ್ಥೆಗಳು ಪ್ರಯತ್ನಿಸುತ್ತಿವೆ.

ಬಿಳಿಗಿರಿರಂಗನಬೆಟ್ಟದ ಸ್ವಾಮಿ ವಿವೇಕಾನಂದ ಟ್ರಸ್ಟ್ ದಶಕಗಳಿಂದಲೂ ಆನೆ ಕಾರಿಡಾರ್‌ಗಳ ರಕ್ಷಣೆ ವಿಚಾರವಾಗಿ ಜನಜಾಗೃತಿ ಮೂಡಿಸುತ್ತಿದೆ.

'ವೈಲ್ಡ್ ಲೈಫ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಜಿಲ್ಲೆಯಲ್ಲಿರುವ ಆನೆ ಕಾರಿಡಾರ್‌ಗಳನ್ನು ಉಳಿಸುವ ಕೆಲಸ ನಡೆಯುತ್ತಿದೆ' ಎಂದು ಹೇಳುತ್ತಾರೆ ಟ್ರಸ್ಟ್ ಸಂಸ್ಥಾಪಕ, ಬಿಳಿಗಿರಿರಂಗನ ಬೆಟ್ಟದಲ್ಲಿರುವ ಪರಿಸರವಾದಿ ಜಿ.ಮಲ್ಲೇಶಪ್ಪ.


'ಜಿಲ್ಲೆಯಲ್ಲಿರುವ ಮೂಡಹಳ್ಳಿ ಹಾಗೂ ಎಡೆಯಾರಹಳ್ಳಿ ಆನೆ ಕಾರಿಡಾರ್‌ಗಳ ವ್ಯಾಪ್ತಿಯಲ್ಲಿಯೇ ಹಿಂದೆ ಸರ್ಕಾರದಿಂದ ಸ್ಥಳೀಯರಿಗೆ ಭೂಮಿ ಹಂಚಿಕೆ ಮಾಡಲಾಗಿತ್ತು. ಪರಿಣಾಮ ಕಾರಿಡಾರ್ ವ್ಯಾಪ್ತಿಯಲ್ಲಿ ಆನೆಗಳ ಮುಕ್ತ ಸಂಚಾರಕ್ಕೆ ಅಡ್ಡಿಯಾಗಿ ಮಾನವ ಪ್ರಾಣಿ ಸಂಘರ್ಷ ಹೆಚ್ಚಾಗಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಟ್ರಸ್ಟ್ ವತಿಯಿಂದ ಕಾರಿಡಾರ್‌ಗಳ ವ್ಯಾಪ್ತಿಯಲ್ಲಿ ಸರ್ಕಾರದಿಂದ ಭೂಮಿ ಮಂಜೂರಾತಿ ಪಡೆದುಕೊಂಡಿರುವ ರೈತರನ್ನು ಸಂಪರ್ಕಿಸಿ, ಅವರಿಗೆ ಆನೆ ಕಾರಿಡಾರ್ ಮಹತ್ವವನ್ನು ತಿಳಿಸಲಾಯಿತು. ರೈತರ ಮನವೊಲಿಸಿ ಅಂದಿನ ಮಾರುಕಟ್ಟೆ ಬೆಲೆ ನೀಡಿ ಅವರಿಂದ 100 ಎಕರೆಯಷ್ಟು ಭೂಮಿಯನ್ನು ಖರೀದಿಸಿ ಅರಣ್ಯ ಇಲಾಖೆಯ ಸುಪರ್ದಿಗೆ ಒಪ್ಪಿಸಲಾಗಿದೆ' ಎಂದು ವಿವರಿಸುತ್ತಾರೆ ಅವರು.

'ಆನೆಗಳ ಪಥ ರಕ್ಷಣೆ ಮಾಡುವ ಮೂಲಕ ಮುಕ್ತ ಓಡಾಟಕ್ಕೆ ಪೂರಕ ವಾತಾವರಣ ಸೃಷ್ಟಿಸಬೇಕು. ಕಾರಿಡಾರ್‌ನೊಳಗೆ ಜನರ ಓಡಾಟ ತಗ್ಗಿಸಬೇಕು, ರೆಸಾರ್ಟ್ ಸೇರಿದಂತೆ ವಾಣಿಜ್ಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು. ಆನೆ ಕಾರಿಡಾರ್ ಸುತ್ತಮುತ್ತ ಅವೈಜ್ಞಾನಿಕ ಹಾಗೂ ನಿಯಮಬಾಹಿರವಾಗಿ ಭೂಮಿ ಹಂಚಿಕೆ ಮಾಡಿದ್ದರೆ ಕಾನೂನಾತ್ಮಕವಾಗಿ ಹಿಂಪಡೆಯಬೇಕು. ಸೋಲಾರ್ ಬೇಲಿ, ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಸಮಸ್ಯೆಗೆ ತಾತ್ಕಾಲಿಕ ಪರಿಹಾರವೇ ಹೊರತು ಶಾಶ್ವತ ಪರಿಹಾರವಲ್ಲ' ಎನ್ನುವುದು ಅವರ ಅಭಿಪ್ರಾಯ.



ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಮಗ್ಗೆರಾಯರಕೊಪ್ಪಲು ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಗದ್ದೆಯಲ್ಲಿ ಮೃತಪಟ್ಟ ಎರಡು ಆನೆ ಮರಿಗಳ ನಡುವೆ ತಾಯಿ ಆನೆ ರೋದಿಸುತ್ತಿರುವುದು (ಸಂಗ್ರಹ ಚಿತ್ರ).

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 28-12-2000

● **ರೊಚ್ಚಿಗೆದ್ದ ರೈತರು ಅವಳಿನಗರ ಉದ್ವಿಗ್ನ**

ಧಾರವಾಡ, ಡಿ.27– ಹುಬ್ಬಳ್ಳಿ ಹಾಗೂ ಧಾರವಾಡ ಕೃಷಿ ಮಾರುಕಟ್ಟೆಯಲ್ಲಿ ಯಾವುದೇ ಮುನ್ಸೂಚನೆ ನೀಡದೆ, ದಿಢೀರನೆ ಖರೀದಿ ಪ್ರಕ್ರಿಯೆಯನ್ನು ಜಿಲ್ಲಾ ಆಡಳಿತ ಸ್ಥಗಿತಗೊಳಿಸಿದ್ದನ್ನು ಪ್ರತಿಭಟಿಸಿ ರೊಚ್ಚಿಗೆದ್ದ ರೈತರು, ಆಲೂಗಡ್ಡೆ ತುಂಬಿದ ಟ್ರ್ಯಾಕ್ಟರ್‌ಗಳನ್ನು ರಸ್ತೆ ಮಧ್ಯೆ ನಿಲ್ಲಿಸಿ, ಮಧ್ಯಾಹ್ನದಿಂದ ಸಂಜೆವರೆಗೆ ಚಳವಳಿ ನಡೆಸಿದ್ದರಿಂದ ಧಾರವಾಡದಲ್ಲಿ ಪರಿಸ್ಥಿತಿ ಇಂದು ಉದ್ವಿಗ್ನಗೊಂಡಿತ್ತು.

ಮಧ್ಯಾಹ್ನ 3.30ರ ಸಮಯದಲ್ಲಿ ರೈತರು ಜ್ಯೂಬಿಲಿ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಪ್ರದರ್ಶನ ನಡೆಸಿದರು.

75 ವರ್ಷಗಳ ಹಿಂದೆ

ಗುರುವಾರ, 28-12-1950

● **ಕೆಂಪು ಚೀಣದ ಮೇಲೆ ಆರ್ಥಿಕ ಬಹಿಷ್ಕಾರ**

ವಾಷಿಂಗ್‌ಟನ್, ಡಿ.27– ಕೊರಿಯಾ ಬಿಕ್ಕಟ್ಟನ್ನು ಎದುರಿಸಲು ಮುಂದಿನ ಪ್ರಯತ್ನವಾಗಿ, ಸ್ವತಂತ್ರ ರಾಷ್ಟ್ರಗಳು ಕಮ್ಯುನಿಸ್ಟ್ ಚೀಣದ ಮೇಲೆ ಆರ್ಥಿಕ ಬಹಿಷ್ಕಾರ ಹಾಕುವ ಸಲಹೆಯೊಂದನ್ನು ಅಮೆರಿಕಾ ಪರಿಶೀಲಿಸುತ್ತಿದೆ ಎಂದು ವರದಿಯಾಗಿದೆ.

'ಯುದ್ಧಸ್ತಂಭನ'ದ ಮನವಿಗೆ ಪೀಕಿಂಗ್ ಸರ್ಕಾರವು ನಕಾರವೆತ್ತಿದೆಯಷ್ಟೆ. ತತ್ಫಲವಾಗಿ, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಅಮೆರಿಕಾ ನಿರ್ದಿಷ್ಟ ಸಲಹೆಗಳನ್ನು ಕೊಡಲಿದೆಯೆಂದು ಹೇಳಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

28 ಡಿಸೆಂಬರ್ 2025 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು **ತಿಥಿ:** ಪೌಷ ಶುಕ್ಲ ಅಷ್ಟಮಿ ಗಂ 12-00, **ನಕ್ಷತ್ರ:** ಉತ್ತರಾಭಾದ್ರ ಗಂ 8-44, **ಯೋಗ:** ವರಿಯಾನ್ ಗಂ. 10-14, **ಕರಣ:** ಬವ ಗಂ. 12-00, ಧನು ಮಾಸದ 13 ನೇ ದಿನ. **ಮಳೆ ನಕ್ಷತ್ರ:** ಮೂಲ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-55, **ಸೂರ್ಯಾಸ್ತ:** 06-09, **ಮುಸ್ಲಿಂ ದಿನಾಂಕ:** 07 ರಜಬ್, **ಅದೃಷ್ಟ ಸಂಖ್ಯೆ:** 3, 2

ಮೇಷ: ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಗುಣವನ್ನು ವೃದ್ಧಿಸಿಕೊಳ್ಳಿ. ಹೊಸ ವಾಹನ ಖರೀದಿಸುವ ನಿಮ್ಮ ಬಯಕೆ ಈಡೇರುವ ಸಾಧ್ಯತೆ ಇದೆ.

ವೃಷಭ: ಪಾಲುದಾರರೊಂದಿಗೆ ಮಾತುಕತೆ ನಡೆಸುವ ಅನಿವಾರ್ಯತೆ ಎದುರಾಗಲಿದೆ. ತರಕಾರಿ, ಸೊಪ್ಪು ಬೆಳೆಗಾರರಿಗೆ ಅಧಿಕ ಲಾಭ. ಅನ್ಯರ ಭಾವನೆಗಳಿಗೆ ಬೆಲೆ ಕೊಡುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಮಿಥುನ: ಮದುವೆಯ ವಿಚಾರದಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡಬೇಡಿ. ಮನರಂಜನೆ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಂತೋಷವಾಗುವುದು.

ಕರ್ಕಾಟಕ: ಮಡದಿ ಮತ್ತು ಮಕ್ಕಳೊಂದಿಗಿನ ಬಿಡುವಿನ ಸಮಯ ಕಳೆಯುವಿರಿ. ಮನೆ ಕಟ್ಟುವ ನಿಮ್ಮ ಆಸೆಗೆ ಸಹೋದರರಿಂದ ಪ್ರೋತ್ಸಾಹ ಸಿಗುವುದು. ವೃತ್ತಿ ಹಾಗೂ ವೈಯಕ್ತಿಕ ಜೀವನ ಎರಡೂ ತೃಪ್ತಿತರಲಿದೆ.

ಸಿಂಹ: ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೆ ಹೊಸ ಯೋಜನೆಗಳಿಗೆ ಸಹಕಾರಿ. ಪ್ರಯಾಣದಲ್ಲಿನ ಒಂಟಿತನ ಸಮಾನ ಮನಸ್ಕರ ಭೇಟಿಯಿಂದಾಗಿ ನಿವಾರಣೆಯಾಗುವುದು. ಪುಣ್ಯಕ್ಷೇತ್ರಗಳಿಗೆ ಹೋಗಿಬರುವಂತಹ ಯೋಗವಿದೆ.

ಕನ್ಯಾ: ಶೀಘ್ರವಾಗಿ ನಿರ್ದಿಷ್ಟವಾದ ಕಾರ್ಯವೊಂದನ್ನು ಪೂರೈಸಲೇಬೇಕೆಂಬ ನಿಮ್ಮ ಯೋಚನೆಯು ಕನಸಾಗಿಯೇ ಉಳಿಯುವುದು. ಕುಟುಂಬದಲ್ಲಿ ಅಥವಾ ನೆರೆಯವರೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ.

ತುಲಾ: ರಫ್ತು ವ್ಯಾಪಾರಗಳಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಎದುರಾಗದಂತೆ ವ್ಯವಹರಿಸಿ. ರಬ್ಬರ್ ಅಥವಾ ಪ್ಲಾಸ್ಟಿಕ್ ವ್ಯವಹಾರದಲ್ಲಿರುವವರು ಉತ್ತಮ ಲಾಭವನ್ನು ಹೊಂದುವಿರಿ. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ.

ವೃಶ್ಚಿಕ: ವಿನೂತನ ಕೆಲಸವನ್ನು ಸ್ಟಾರ್ಟಪ್‌ನ ರೀತಿಯಲ್ಲಿ ಪಾಲುದಾರಿಕೆಯೊಂದಿಗೆ ಪ್ರಾರಂಭಿಸಲು ಸ್ನೇಹಿತರಿಂದ ಒತ್ತಾಯ ಬರಲಿದೆ. ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ಆ ವಿಚಾರದ ಬಗ್ಗೆ ವಿಮರ್ಶಿಸಿ.

ಧನು: ಕೃಷಿಯಲ್ಲಿ ಸಣ್ಣ ಉಳಿತಾಯ ಮಾಡುವಿರಿ. ಇದರಿಂದಾಗಿ ಭವಿಷ್ಯದ ಚಿಂತೆಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗಲಿದೆ. ಉನ್ನತ ವ್ಯಾಸಂಗಕ್ಕೆ ವಿದೇಶಯಾನ ಮಾಡುವ ತಯಾರಿ ನಡೆಸುವಿರಿ.

ಮಕರ: ಶ್ರಮಜೀವಿಗಳಾದ ನಿಮಗೆ ಹಿರಿಯರ ಆಶೀರ್ವಾದವಿದ್ದರೆ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಅಪೇಕ್ಷಿಸಬಹುದು. ನಿಮ್ಮಲ್ಲಿ ಸಾಲ ಮಾಡಿದ ವ್ಯಕ್ತಿಗಳು ಬಾಕಿ ಬಾಬ್ತು ಹಿಂದಿರುಗಿಸುವರು. ರಾಜಕೀಯದಲ್ಲಿ ಜಯವನ್ನು ಸಾಧಿಸುವಿರಿ.

ಕುಂಭ: ನಾಯಕರಾಗಿ ನೀವು ನೀಡುವ ಸಲಹೆ ಸೂಚನೆಯಂತೆಯೇ ನಡೆದುಕೊಳ್ಳಲು ನಿಮ್ಮ ಸಹೋದ್ಯೋಗಿಗಳಿಗೆ ತಿಳಿಸಿ. ವಾತಾವರಣಕ್ಕೆ ಪೂರಕವಾದ ಆಹಾರ ಸೇವನೆಯಿಂದಾಗಿ ಅನಾರೋಗ್ಯದಿಂದ ಪಾರಾಗುವಿರಿ.


ಮೀನ: ನೂತನ ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬದ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ. ಆದರೆ ಅದಕ್ಕಾಗಿ ವಿವಿಧ ರೀತಿಯ ವೈಯಕ್ತಿಕ ಖರ್ಚುಗಳನ್ನೆಲ್ಲಾ ನಿಲ್ಲಿಸಬೇಕಾದಂತಹ ಪರಿಸ್ಥಿತಿ ಎದುರಿಸುವಿರಿ.

ಪದಬಂಧ 6267

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅರವತ್ತು ಸಂವತ್ಸರದಲ್ಲಿ ಮೊದಲನೆಯದು (3)
5.ಮಾಸ್ತಿ ವೆಂಕಟೇಶ ಐಯ್ಯಂಗಾರ್‌ರ ಕಾವ್ಯನಾಮ (4)
6.ಡಮರುಗ ಹಿಡಿದಿರುವ ಪುತ್ರ (2)
9.ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ (8)
12.ಕುಮಾರವ್ಯಾಸ ಎನ್ನುವ ಕಾವ್ಯನಾಮವುಳ್ಳ ಕವಿ (8)
15.ಪ್ರಾಣಿ ಪಕ್ಷಿಗಳನ್ನು ಹಿಡಿಯುವ ಸಾಧನವಿಲ್ಲಿ ತಿರುವುಮುರುವಾಗಿದೆ (2)
17.ವಿನಾಯಕ ಕೃಷ್ಣ ಗೋಕಾಕರವರ ಕಾವ್ಯನಾಮ (4)
20.ಸರಸದ ಮಾತುಕತೆ (3)

ಮೇಲಿಂದ ಕೆಳಕ್ಕೆ
1.ಪ್ರಯಾಣದಲ್ಲಿ ಸಲ್ಲಿಸಿದ ವಂದನೆ (3)
2.ನವರತ್ನಗಳಲ್ಲಿ ಅತ್ಯಂತ ಕಠಿಣವಾದುದು (2)
3.ಉಚ್ಚಾರಣಾಂಗಗಳಿಂದ ಉತ್ಪಾದಿತವಾಗಿ ಭಾಷೆಯಲ್ಲಿ ಬಳಕೆಯಾಗುವ ಸದ್ದು (2)
4.ಕವಿ, ನಾಟಕಕಾರರಾಗಿದ್ದ ಸ್ವಾಮಿ ವೆಂಕಟಾದ್ರಿ ಐಯ್ಯರ್‌ರವರು ಈ ಹೆಸರಿನಿಂದ ಪ್ರಸಿದ್ಧಿಯಾಗಿದ್ದಾರೆ (2)
5.ಧನಿಕ ಇಲ್ಲಿದ್ದಾನೆ (3)
7.ದೇಹದ ಭಾಗವಿಲ್ಲಿ ಉಲ್ಟಾ ಕಾಣುತ್ತಿದೆ (2)
8.ಹಾವಿನ ವಾಸಸ್ಥಾನ (2)
10.ಅರಣ್ಯವನ್ನು ಹೀಗೂ ಹೇಳುತ್ತಾರೆ (3)
11.ಹಾಳಗುವಂಥದ್ದು ನರನಲ್ಲಿದೆ! (3)
12.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ (2)
13.ನಾವೆಯನ್ನು ನಡೆಸುವವನು (3)
14.ತಪ್ಪಲೆಯಲ್ಲಿನ ಬಳಿಯುವ ವಸ್ತು ಉಲ್ಟಾ ಕಾಣುತ್ತಿದೆ (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
17.ರೀತಿಗೊಂದು ಪರ್ಯಾಯ ಪದ (2)
18.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವವನು (2)
19. ವಂಚನೆಗೊಂದು ಪರ್ಯಾಯ ಪದ (2)



6266ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೋಉರುಬೆರಳು 3.ಭವಿಷ್ಯ 5.ತಲೆಬರಹ 7.ಸುಪಥ 9.ಸಂವಾದ 11.ವಿವಾಹ 13.ವಿಮಾನಯಾನ 15.ಜವಳಿ 16.ವರದಿಗಾರ

ಮೇಲಿಂದ ಕೆಳಕ್ಕೆ:
1.ತೋರ್ಪಡಿಸು 2.ರಹಿತ 4.ವಿದ್ರೋಹ 6.ಬಲ್ಲಿದ 8ಪಪ್ಪು 9.ಸಂಧಾನ 10.ಗ್ರೀವಾ 12.ಹಸ್ತಾಂತರ 13.ವಿಪ್ಲವ 14.ನಗರ

ಸುಡೊಕು 6651

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

6650 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete.

ತ.ನಾಡು: 97 ಲಕ್ಷ ಮತದಾರರ ಇಳಿಕೆ

ಎಸ್‌ಐಆರ್: ಮತದಾರರ ಪಟ್ಟಿಗೆ ಸೇರ್ಪಡೆ ಕೋರಿ 1.85 ಲಕ್ಷ ಹೊಸ ಅರ್ಜಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮೊದಲ ಹಂತ ಪೂರ್ಣಗೊಂಡಿದ್ದು, ಚುನಾವಣಾ ಆಯೋಗವು ಇತ್ತೀಚೆಗೆ ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಿದೆ. ಒಟ್ಟು ಮತದಾರರ ಸಂಖ್ಯೆ 97.37 ಲಕ್ಷದಷ್ಟು ಇಳಿಕೆಯಾಗಿದೆ. ಇದರ ಬೆನ್ನಲ್ಲೇ ಸುಮಾರು 1.85 ಲಕ್ಷದಷ್ಟು ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆ ಕೋರಿ ಹೊಸದಾಗಿ ಅರ್ಜಿ ಸಲ್ಲಿಸಿದ್ದಾರೆ.



ಎಸ್‌ಐಆರ್ ವಿರುದ್ಧ ಆಡಳಿತಾರೂಢ ಡಿಎಂಕೆ ಸೇರಿದಂತೆ ಹಲವು ಪಕ್ಷಗಳು ಆಕ್ಷೇಪಣೆ ಸಲ್ಲಿಸುವುದನ್ನು ಮುಂದುವರಿಸಿವೆ. ಈ ನಡುವೆಯೇ ನಮೂನೆ -6 ಸಲ್ಲಿಸುವವರ ಸಂಖ್ಯೆಯೂ (ಮತದಾರರ ಪಟ್ಟಿಗೆ ಸೇರ್ಪಡೆ ಕೋರಿ ಹೊಸ ಅರ್ಜಿ) ಹೆಚ್ಚುತ್ತಿದೆ.

ಹೊಸ ನೋಂದಣಿಗೆ, ದಾಖಲೆಗಳನ್ನು ಹೊಂದಿಸುವುದು ಜನರಿಗೆ ಸಮಸ್ಯೆಯಾಗಿದ್ದು, ಈ ಸಮಸ್ಯೆ ಪರಿಹಾರಕ್ಕಾಗಿ ತಮಿಳುನಾಡು ಸರ್ಕಾರ, ಆನ್‌ಲೈನ್ ಬದಲು ಭೌತಿಕ ರೂಪದಲ್ಲಿ ಜನನ ಪ್ರಮಾಣಪತ್ರಗಳನ್ನು ವಿತರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಜನರು ಡಿ. 26ರಿಂದ 2026ರ ಜನವರಿ 25ರವರೆಗೆ ₹60 ಪಾವತಿಸಿ, ತಹಶೀಲ್ದಾರ್ ಕಚೇರಿಯಿಂದ ಈ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬಹುದು.

ನವೆಂಬರ್ 4ರಿಂದ ತಮಿಳುನಾಡಿನಲ್ಲಿ ಎಸ್‌ಐಆರ್‌ಗೆ ಚಾಲನೆ ಲಭಿಸಿತ್ತು. ಅದಕ್ಕೂ ಮುನ್ನ ರಾಜ್ಯದ ಒಟ್ಟು ಮತದಾರರ ಸಂಖ್ಯೆ 6.41 ಲಕ್ಷ ಇತ್ತು. ಡಿ.19ರಂದು ಕರಡು ಪಟ್ಟಿ ಪ್ರಕಟಗೊಂಡಾಗ ಈ ಸಂಖ್ಯೆ 5.43 ಲಕ್ಷಕ್ಕೆ ಇಳಿಕೆಯಾಗಿತ್ತು. ಮೃತಪಟ್ಟವರು, ಸ್ಥಳಾಂತರಗೊಂಡವರು, ಬಹು ನೋಂದಣಿ ಸೇರಿದಂತೆ 97.37 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿತ್ತು.

ಮತದಾರರ ಪಟ್ಟಿಗೆ ಸೇರ್ಪಡೆ ಕೋರಿ ಚುನಾವಣಾ ಆಯೋಗಕ್ಕೆ ಡಿಎಂಕೆ ಇದುವರೆಗೆ 24 ಅರ್ಜಿಗಳನ್ನು ಸಲ್ಲಿಸಿದೆ. ಎಐಎಡಿಎಂಕೆ ಸೇರ್ಪಡೆಗಾಗಿ 22 ಹಾಗೂ ಮತದಾರರ ಪಟ್ಟಿಯಿಂದ ತೆಗೆದು ಹಾಕುವಂತೆ 52 ಮನವಿಗಳನ್ನು ಸಲ್ಲಿಸಿದೆ.

ಮತದಾರರ ಅಂತಿಮ ಪಟ್ಟಿ 2026ರ ಫೆಬ್ರುವರಿ 17ರಂದು ಪ್ರಕಟಗೊಳ್ಳಲಿದೆ.

ಅಸ್ಸಾಂ: 10.56 ಲಕ್ಷ ಮತದಾರರಿಗೆ ಕೊಕ್



ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ನಡೆಸಿದ್ದ ಕೇಂದ್ರ ಚುನಾವಣಾ ಆಯೋಗವು ಮತದಾರರ ಸಮಗ್ರ ಕರಡು ಪಟ್ಟಿಯನ್ನು ಶನಿವಾರ ಬಿಡುಗಡೆ ಗೊಳಿಸಿದೆ.

2.51 ಕೋಟಿ
ಒಟ್ಟು ಮತದಾರರು ('ಡಿ-ವೋಟರ್'ಗಳನ್ನು ಹೊರತುಪಡಿಸಿ)

10.56 ಲಕ್ಷ
ಮತದಾರರ ಪಟ್ಟಿಯಿಂದ ಕೈಬಿಡಲಾದ ಹೆಸರುಗಳು

93,021
ಡಿ-ವೋಟರ್‌ಗಳು

61.03 ಲಕ್ಷ
ಪರಿಷ್ಕರಣೆ ನಡೆಸಲಾದ ಮನೆಗಳು

ಎಸ್‌ಐಆರ್ ನಡೆದ ಅವಧಿ; ನವೆಂಬರ್ 22ರಿಂದ ಡಿಸೆಂಬರ್ 20	ಮರಣ, ಸ್ಥಳಾಂತರ ಮತ್ತು ದ್ವಿನೋಂದಣಿ ಹೊಂದಿದ್ದವರ ಹೆಸರುಗಳನ್ನು ಕರಡು ಪಟ್ಟಿಯಲ್ಲಿ ಕೈಬಿಡಲಾಗಿದೆ	2026 ಜನವರಿ 12ರೊಳಗಾಗಿ ಆಕ್ಷೇಪಣೆ ಸಲ್ಲಿಸಲು ಅವಕಾಶ	ಫೆಬ್ರುವರಿ 10ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ



ಡಿ-ವೋಟರ್: ಅಸ್ಸಾಂನಲ್ಲಿ ಪೌರತ್ವಕ್ಕೆ ಸೂಕ್ತ ದಾಖಲೆಗಳನ್ನು ಸಲ್ಲಿಸದ ಕಾರಣಕ್ಕೆ ಮತದಾನದ ಅರ್ಹತೆಯನ್ನು ಕಳೆದುಕೊಂಡವರನ್ನು 'ಡಿ-ವೋಟರ್'ಗಳೆಂದು ಎಂದು ಪರಿಗಣಿಸಲಾಗುತ್ತದೆ. 'ಡಿ-ವೋಟರ್'ಗಳನ್ನು ವಿದೇಶಾಂಗ ಕಾಯ್ದೆ ಅಡಿಯಲ್ಲಿನ ವಿಶೇಷ ನ್ಯಾಯಮಂಡಳಿಯು ನಿರ್ಧರಿಸುತ್ತದೆ ಮತ್ತು ಮತದಾರರ ಗುರುತಿನ ಚೀಟಿಯನ್ನು ನೀಡಲಾಗುವುದಿಲ್ಲ.


ಕೇರಳ: ನೆರವು ಕೇಂದ್ರ ಸ್ಥಾಪನೆಗೆ ಸೂಚನೆ

ತಿರುವನಂತಪುರ: ಎಸ್‌ಐಆರ್ ಭಾಗವಾಗಿ ಪ್ರಕಟಿಸಿರುವ ಮತದಾರರ ಕರಡು ಪಟ್ಟಿಯಿಂದ ಹೊರಗುಳಿದಿರುವ ಅರ್ಹ ಮತದಾರರನ್ನು ಪಟ್ಟಿಗೆ ಸೇರ್ಪಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಕೇರಳ ಸರ್ಕಾರ ನಿರ್ದೇಶನ ನೀಡಿದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಇರಲೇಬೇಕು. ಒಬ್ಬರೇ ಒಬ್ಬರು ಅರ್ಹ ಮತದಾರರ ಹೆಸರೂ ಪಟ್ಟಿಯಿಂದ ಹೊರಗುಳಿಯಬಾರದು ಎಂದು ಸರ್ಕಾರ ಆದೇಶಿಸಿದೆ.

ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ನೆರವು ಕೇಂದ್ರವನ್ನು ಸ್ಥಾಪಿಸಬೇಕು. ಗ್ರಾಮ ಕಚೇರಿಗಳಲ್ಲಿಯೇ ನೆರವು ಕೇಂದ್ರವನ್ನು ಸ್ಥಾಪಿಸಬೇಕು. ಅಲ್ಲಿ ಅಗತ್ಯ ಸೌಲಭ್ಯ ಇಲ್ಲದಿದ್ದಲ್ಲಿ ಸಮೀಪದಲ್ಲಿಯೇ ಸ್ಥಾಪಿಸಬೇಕು ಎಂದು ತಿಳಿಸಿದೆ.

ಅಲ್ಲು ಅರ್ಜುನ್ ಸೇರಿ 23 ಮಂದಿ ವಿರುದ್ಧ ದೋಷಾರೋಪ ಪಟ್ಟಿ



ಹೈದರಾಬಾದ್ (ಪಿಟಿಐ): 'ಪುಷ್ಪ-2' ಸಿನಿಮಾ ಪ್ರದರ್ಶನದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ನಟ ಅಲ್ಲು ಅರ್ಜುನ್ ಸೇರಿದಂತೆ 23 ಮಂದಿಯ ವಿರುದ್ಧ ಪೊಲೀಸರು ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.

ಇಲ್ಲಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಚಿತ್ರಮಂದಿರದ ಆಡಳಿತ ಮಂಡಳಿಯನ್ನು ಪ್ರಮುಖ ಆರೋಪಿಯನ್ನಾಗಿಸಲಾಗಿದೆ ಮತ್ತು ಅಲ್ಲು ಅರ್ಜುನ್ ಅವರನ್ನು 11ನೇ ಆರೋಪಿಯನ್ನಾಗಿಸಲಾಗಿದೆ.

ಕಳೆದ ವರ್ಷ ಡಿಸೆಂಬರ್ 4ರಂದು ಸಂಧ್ಯಾ ಚಿತ್ರಮಂದಿರದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 35 ವರ್ಷದ ಮಹಿಳೆ ಮೃತಪಟ್ಟಿದ್ದರು. ಘಟನೆಯ ಬಳಿಕ ಅಲ್ಲು ಅರ್ಜುನ್, ಅವರ ಭದ್ರತಾ ತಂಡ ಮತ್ತು ಸಂಧ್ಯಾ ಚಿತ್ರಮಂದಿರದ ಆಡಳಿತ ಮಂಡಳಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದರು.

ನಂತರ ಡಿಸೆಂಬರ್ 13ರಂದು ಅಲ್ಲು ಅರ್ಜುನ್ ಅವರನ್ನು ಬಂಧಿಸಿ, ಡಿಸೆಂಬರ್ 14ರಂದು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಬಳಿಕ ಅವರಿಗೆ ಜಾಮೀನು ಸಹ ದೊರೆತಿತ್ತು.

ತನಿಖಾಧಿಕಾರಿ ವಿರುದ್ಧ ದೂರು

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಆಗಿನ ತನಿಖಾಧಿಕಾರಿಯ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸಂತ್ರಸ್ತೆಯು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ದೂರು ನೀಡಿದ್ದಾರೆ. ಪ್ರಕರಣದ ಅಪರಾಧಿ, ಬಿಜೆಪಿಯ ಮಾಜಿ ಶಾಸಕ ಕುಲದೀಪ್ ಸಿಂಗ್ ಸೆಂಗಾರ್ ಜೊತೆ ತನಿಖಾಧಿಕಾರಿ ಕೈ ಜೋಡಿಸಿದ್ದಾರೆ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

ನನಗೆ ಮತ್ತು ನನ್ನ ಕುಟುಂಬಕ್ಕೆ ಬೆದರಿಕೆಗಳು ಬರುತ್ತಿವೆ ಎಂದು ಸಂತ್ರಸ್ತೆ ಹೇಳಿದ್ದಾರೆ.

'ತನಿಖಾಧಿಕಾರಿಯು ಅಪ್ರಾಮಾಣಿಕ ಮತ್ತು ದುರುದ್ದೇಶಪೂರಿತವಾಗಿ ತನಿಖೆ ನಡೆಸಿದ್ದಾರೆ. ಕುಲದೀಪ್ ಹಾಗೂ ಇತರ ಆರೋಪಿಗಳೊಂದಿಗೆ ಕೈ ಜೋಡಿಸಿ, ಅವರಿಗೆ ಅನುಕೂಲವಾಗುವ ರೀತಿ ತನಿಖೆಯ ಫಲಿತಾಂಶ ಬರುವಂತೆ ಮಾಡಲಾಗಿದೆ. ಆರೋಪಪಟ್ಟಿಯಲ್ಲಿ ನಕಲಿ ದಾಖಲೆ ಬಳಸಲಾಗಿದೆ. ನನ್ನ ಜನ್ಮ ದಿನಾಂಕ ತಪ್ಪಾಗಿ ನಮೂದಿಸಲಾಗಿದೆ. ಅಲ್ಲದೇ ನಾನು ಹೋಗದೇ ಇರುವ ಶಾಲೆಯಲ್ಲಿ ವ್ಯಾಸಾಂಗ ಮಾಡಿರುವುದಾಗಿ ನಕಲಿ ಪ್ರಮಾಣಪತ್ರ ಸೃಷ್ಟಿಸಲಾಗಿದೆ' ಎಂದು ದೂರು ನೀಡಿದ್ದಾರೆ.

ಚಿಟಿಕೆ ಸುದ್ದಿ

ದೆಹಲಿ: 966 ಜನರ ಬಂಧನ

ನವದೆಹಲಿ (ಪಿಟಿಐ): ಹೊಸ ವರ್ಷಾಚರಣೆಗೂ ಮುನ್ನ ದೆಹಲಿ ಪೊಲೀಸರು ಕೈಗೊಂಡ 'ಆಪರೇಷನ್ ಆಘಾತ್ 3.0' ಕಾರ್ಯಾಚರಣೆಯಲ್ಲಿ 966 ಜನರನ್ನು ಬಂಧಿಸಿದ್ದಾರೆ. ಅವರಿಂದ ಪಿಸ್ತೂಲ್ ಸೇರಿದಂತೆ ಶಸ್ತ್ರಾಸ್ತ್ರಗಳು, ಮಾದಕ ವಸ್ತುಗಳು, ಅಕ್ರಮ ಮದ್ಯ, ಮೊಬೈಲ್ ಮತ್ತು ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ವರ್ಷಾಂತ್ಯದ ಹಬ್ಬಗಳ ಸಂದರ್ಭದಲ್ಲಿ ಹೆಚ್ಚಿದ ಸಾರ್ವಜನಿಕ ಸಂಚಾರವನ್ನು ಗಮನದಲ್ಲಿಟ್ಟುಕೊಂಡು ಸಂಘಟಿತ ಅಪರಾಧ, ಬೀದಿ ಅಪರಾಧ ಚಟುವಟಿಕೆ ನಿಗ್ರಹಿಸಲು ಪೊಲೀಸರು ಈ ಕಾರ್ಯಾಚರಣೆ ಕೈಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ಮಾಹಿತಿ ನೀಡಿದರು.

ದೆಹಲಿ ಅಬಕಾರಿ ಕಾಯ್ದೆ, ಎನ್‌ಡಿಪಿಎಸ್ ಕಾಯ್ದೆ ಮತ್ತು ಸಾರ್ವಜನಿಕ ಜೂಜಾಟ ಕಾಯ್ದೆ ಅಡಿ 331 ಆರೋಪಿಗಳನ್ನು ಹಾಗೂ ವಿವಿಧ ಅಪರಾಧ ತಡೆಗಟ್ಟುವ ನಿಬಂಧನೆಗಳ ಅಡಿಯಲ್ಲಿ 504 ಜನರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಮಣಿಪುರ: ಎಂಟು ಉಗ್ರರ ಬಂಧನ



ಇಂಫಾಲ್ (ಪಿಟಿಐ): ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷದ (ಕೆಸಿಪಿ) ವಿವಿಧ ಗುಂಪುಗಳಿಗೆ ಸೇರಿದ 8 ಮಂದಿ ಉಗ್ರರನ್ನು ಪೂರ್ವ ಇಂಫಾಲ್ ಹಾಗೂ ಪಶ್ಚಿಮ ಇಂಫಾಲ್ ಜಿಲ್ಲೆಗಳಲ್ಲಿ ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ.

ಕೆಸಿಪಿಯ ಪೀಪಲ್ಸ್ ವಾರ್ ಗ್ರೂಪ್‌ನ ನಾಲ್ವರು ಉಗ್ರರನ್ನು ಪೂರ್ವ ಇಂಫಾಲ್‌ನ ಆ್ಯಂಡ್ರೊ ಲೀತಾನ್‌ಪೋಕ್ಪಿ ಎಂಬಲ್ಲಿ ಗುರುವಾರ ಬಂಧಿಸಲಾಗಿದೆ. ಬಂಧಿತರಿಂದ ಒಂದು .32 ಪಿಸ್ತೂಲ್ ಹಾಗೂ ಒಂದು ಮ್ಯಾಗಜಿನ್, ಮೂರು .32 ಜೀವಂತ ಗುಂಡು ಮತ್ತು ಎರಡು ರೇಡಿಯೊ ಸೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೆಸಿಪಿಯ ಮತ್ತೊಂದು ಘಟಕ ತೈಬಾಂಗಾನ್ಬಾದ ಮೂವರು ಉಗ್ರರನ್ನು ಪಶ್ಚಿಮ ಇಂಫಾಲ್‌ನ ಲ್ಯಾಂಗೋಲ್ ಗ್ರಾಮದಲ್ಲಿ ಬಂಧಿಸಲಾಗಿದೆ.

ಬ್ಲೂಬರ್ಡ್ ಬ್ಲಾಕ್–2: ಮುಂದಿನ ವಾರ ಕಾರ್ಯಾರಂಭ ?



ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಎಲ್‌ವಿಎಂ3–ಎಂ6 ರಾಕೆಟ್ ನಭಕ್ಕೆ ಚಿಮ್ಮಿತ್ತು (ಸಾಂದರ್ಭಿಕ ಚಿತ್ರ)

ಚೆನ್ನೈ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೊ) ಬಾಹುಬಲಿ ರಾಕೆಟ್ ಎಲ್‌ವಿಎಂ3–ಎಂ6 ಉಡಾವಣೆ ವಾಹಕದ ಮೂಲಕ ಯಶಸ್ವಿಯಾಗಿ ನಭಕ್ಕೆ ಸೇರಿದ್ದ 'ಬ್ಲೂಬರ್ಡ್ ಬ್ಲಾಕ್-2' ಸಂವಹನ ಉಪಗ್ರಹವು ಮುಂದಿನ ವಾರದಿಂದ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ ಎಂದು ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್ ಸಂಸ್ಥೆ ತಿಳಿಸಿದೆ.

ಹೊಸ ತಲೆಮಾರಿನ ಸಂವಹನ ಉಪಗ್ರಹವನ್ನು ಎಎಸ್‌ಟಿ ಸ್ಪೇಸ್‌ಮೊಬೈಲ್ ಸಂಸ್ಥೆ ಅಭಿವೃದ್ಧಿಪಡಿಸಿದೆ. ಎಲ್‌ವಿಎಂ3 ರಾಕೆಟ್ ಇದೇ ಮೊದಲ ಬಾರಿಗೆ 6,100 ಕೆ.ಜಿ ತೂಕದ ಪೇಲೋಡ್‌ಗಳನ್ನು ಡಿ.24ರಂದು ನಭಕ್ಕೆ ಸೇರಿಸಿತ್ತು.

ಭೂ ಮೇಲ್ಮೈನಿಂದ 600 ಕಿ.ಮೀ. ಎತ್ತರದಲ್ಲಿ ವಾಣಿಜ್ಯ ಉದ್ದೇಶದ ಉಪಗ್ರಹವನ್ನು ಸೇರಿಸುವ ಮಹತ್ವದ ಯೋಜನೆ ಇದು.

ನಿರ್ಲಕ್ಷ್ಯ: ವೈದ್ಯರ ವಿರುದ್ಧ ಎಫ್‌ಐಆರ್

ನೋಯಿಡಾ (ಪಿಟಿಐ): ಮಹಿಳೆಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ, ಅವರ ಹೊಟ್ಟೆಯೊಳಗೆ ಬಟ್ಟೆಯನ್ನು ಹಾಗೆಯೇ ಬಿಟ್ಟ ಗ್ರೇಟರ್ ನೋಯ್ಡಾದ ಖಾಸಗಿ ಆಸ್ಪತ್ರೆಯ ವೈದ್ಯರು ಮತ್ತು ಹಿರಿಯ ಆರೋಗ್ಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಶನಿವಾರ ಪೊಲೀಸರು ತಿಳಿಸಿದ್ದಾರೆ.

ಗ್ರೇಟರ್ ನೋಯ್ಡಾದ ಸೆಕ್ಟರ್ ಡೆಲ್ಟಾ ಒನ್ ನಿವಾಸಿ ಅನ್ಸುಲ್ ವರ್ಮಾ ಸಂತ್ರಸ್ತ ಮಹಿಳೆ. ಜೀವನೋಪಾಯಕ್ಕಾಗಿ ಮನೆಗೆಲಸ ಮತ್ತು ಹೊಲಿಗೆ ಕೆಲಸ ಮಾಡುವ ಅವರು, 2023ರ ನವೆಂಬರ್ 14ರಂದು ತುಘಲಕ್‌ಪುರದ ಬಕ್ಸನ್ ಆಸ್ಪತ್ರೆಯಲ್ಲಿ ಹೆರಿಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಶಸ್ತ್ರಚಿಕಿತ್ಸೆಯ ನಂತರ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಿರಂತರ ಹೊಟ್ಟೆ ನೋವನ್ನು ಅನುಭವಿಸಿದ್ದಾರೆ. 2025ರ ಏಪ್ರಿಲ್‌ನಲ್ಲಿ ಗ್ರೇಟರ್ ನೋಯ್ಡಾದ ಕೈಲಾಶ್ ಆಸ್ಪತ್ರೆಯು ಅವರ ಹೊಟ್ಟೆಯಲ್ಲಿ ಗಡ್ಡೆಯನ್ನು ಪತ್ತೆಹಚ್ಚಿ, ಅವರನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿತ್ತು. ಈ ವೇಳೆ ವೈದ್ಯರು ಅವರ ಹೊಟ್ಟೆಯಿಂದ ಬಟ್ಟೆಯನ್ನು ಹೊರತೆಗೆದಿದ್ದಾರೆ.

'ನಾನು ಸುಮಾರು ಒಂದೂವರೆ ವರ್ಷಗಳ ಕಾಲ ತೀವ್ರ ನೋವನ್ನು ಅನುಭವಿಸಿದ್ದೇನೆ' ಎಂದು ಮಹಿಳೆ ಆರೋಪಿಸಿದ್ದಾರೆ.

'ಹೈಕೋರ್ಟ್ ಸಿ.ಜೆಗಿದೆ ಅಧಿಕಾರ'

ನವದೆಹಲಿ: ನ್ಯಾಯಾಂಗದ ವ್ಯವಹಾರ, ಕಲಾಪಗಳನ್ನು ಸುಗಮವಾಗಿ ನಡೆಸಲು ಹೆಚ್ಚುವರಿ ಪೀಠಗಳನ್ನು ಸ್ಥಾಪಿಸುವ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಅಧಿಕಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ಕೊಲ್ಹಾಪುರದಲ್ಲಿ ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಗಳು ಮತ್ತು ವಿಭಾಗೀಯ ಪೀಠ ಕಾರ್ಯನಿರ್ವಹಿಸಲು ಆಗಸ್ಟ್ 1ರಂದು ಹೊರಡಿಸಿದ್ದ ಅಧಿಸೂಚನೆಯನ್ನು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಎನ್.ವಿ. ಅಂಜಾರಿಯಾ ಅವರನ್ನೊಳಗೊಂಡ ಪೀಠವು ಎತ್ತಿಹಿಡಿದಿದೆ.



ಈ ನಿರ್ಧಾರವನ್ನು ಪ್ರಶ್ನಿಸಿ ರಂಜೀತ್ ಬಾಬುರಾವ್ ನಿಂಬಾಳ್ಕರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿದ ಪೀಠವು, 'ನ್ಯಾಯಾಂಗ ಕೆಲಸದ ಹಂಚಿಕೆಯು ಮುಖ್ಯ ನ್ಯಾಯಮೂರ್ತಿಗಳ ವಿಶೇಷ ಹಕ್ಕು. ಆದರೆ, ಇದಕ್ಕಾಗಿ ರಾಜ್ಯಪಾಲರ ಅನುಮೋದನೆ ಪಡೆಯಬೇಕು' ಎಂದು ಹೇಳಿದೆ.

ಮೂಲಸೌಕರ್ಯಗಳ ಸಾಧ್ಯತೆ ಮತ್ತು ಲಭ್ಯತೆಯನ್ನು ಪರಿಗಣಿಸಿ ಕೊಲ್ಹಾಪುರವನ್ನು ಹೆಚ್ಚುವರಿ ಪೀಠದ ಸ್ಥಳವಾಗಿ ನಿಗದಿಪಡಿಸಿ ಹೈಕೋರ್ಟ್ ಪ್ರಸ್ತಾವ ಸಿದ್ಧಪಡಿಸಿರುವುದನ್ನು ಪೀಠವು ಗಮನಿಸಿತು.

ಕೊಲ್ಹಾಪುರ, ಸಾಂಗ್ಲಿ, ಸತಾರಾ, ರತ್ನಗಿರಿ ಮತ್ತು ಸಿಂಧುದುರ್ಗ ಜಿಲ್ಲೆಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ಮುಖ್ಯ ನ್ಯಾಯಮೂರ್ತಿಗಳ ಆಡಳಿತಾತ್ಮಕ ನಿರ್ದೇಶನಗಳಿಗೆ ಅನುಗುಣವಾಗಿ ಕೊಲ್ಹಾಪುರ ಪೀಠಕ್ಕೆ ವಹಿಸಲಾಗುತ್ತದೆ ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ.

ಭಾರತ ವಿರೋಧಿ ಕೂಟದಲ್ಲಿ 'ಕೈ': ಬಿಜೆಪಿ

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷವು ಭಾರತ ವಿರೋಧಿ ಜಾಗತಿಕ ಮೈತ್ರಿಕೂಟದ ಭಾಗವಾಗಿದೆ ಎಂಬುದನ್ನು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೊಡಾ ಬಹಿರಂಗಪಡಿಸಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇದಕ್ಕಾಗಿಯೇ ಪದೇ ಪದೇ ವಿದೇಶಗಳಿಗೆ ಭೇಟಿ ನೀಡುತ್ತಾರೆ ಎಂದು ದೂರಿದೆ.

ಪಿತ್ರೊಡಾ ಅವರು ಸುದ್ದಿ ವಾಹಿನಿಯೊಂದಕ್ಕೆ ಶುಕ್ರವಾರ ನೀಡಿದ್ದ ಸಂದರ್ಶನ ಉಲ್ಲೇಖಿಸಿ ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಅವರು ಕಿಡಿಕಾರಿದರು.

ಭಾರತ ವಿರೋಧಿ ಸಂಕಥನಗಳನ್ನು ತೇಲಿ ಬಿಡುವುದರಲ್ಲಿ ತೊಡಗಿರುವ ಜೆಪಿಎ ಜತೆ ಕಾಂಗ್ರೆಸ್ ಕೈಜೋಡಿಸಿರುವುದು ಇದರಿಂದ ಸ್ಪಷ್ಟವಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್‌ನ ಬೆಳಗಾವಿ ಜಿಲ್ಲಾ ಶಾಖೆಯ ನೇತೃತ್ವದಲ್ಲಿ ನಡೆದ ಬೆಳಗಾವಿ ತಾಲ್ಲೂಕಿನ ಹೊನಗಾ ಗ್ರಾಮದ ಬಳಿ 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್–2025'ರಲ್ಲಿ ಐದು ಸಾವಿರಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ

ಎಸ್‌ಐಆರ್: 3,234 ಕೇಂದ್ರಗಳಲ್ಲಿ ಗುರುತಿನ ದಾಖಲೆ ಸಲ್ಲಿಸಿದ ಮತದಾರರು

ಪಶ್ಚಿಮ ಬಂಗಾಳದಲ್ಲಿ ವಿಚಾರಣೆ ಆರಂಭ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ರಾಜ್ಯದ ಹಲವು ಮತದಾರರು 3,234 ಕೇಂದ್ರಗಳ ಎದುರು ಶನಿವಾರ ವಿಚಾರಣೆಗೆ ಹಾಜರಾದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪತ್ತೆಯಾಗದ 32 ಲಕ್ಷ ಮತದಾರರನ್ನು ಮೊದಲ ಹಂತದಲ್ಲಿ ವಿಚಾರಣೆಗೆ ಕರೆಯಲಾಗುತ್ತದೆ. ಬೆಳಿಗ್ಗೆ 11ರಿಂದ ಪ್ರಕ್ರಿಯೆ ಆರಂಭವಾಗಿದ್ದು, 4,500 ಮಂದಿ ಮೈಕ್ರೊ ಅಬ್‌ಸರ್ವರ್‌ಗಳು ವಿಚಾರಣೆ ನಡೆಸಿದರು ಎಂದರು.

ಮತದಾರರು ಆಧಾರ್ ಸೇರಿದಂತೆ ಗುರುತಿಸಲಾದ 12 ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ತಮ್ಮ ಗುರುತು ಮತ್ತು ವಿಳಾಸದ ಸಾಕ್ಷ್ಯವಾಗಿ ಸಲ್ಲಿಕೆ ಮಾಡಬಹುದು ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ತಿಳಿಸಿದರು.

85 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟ ವಯೋಮಾನದವರು ದೈಹಿಕವಾಗಿ ವಿಚಾರಣೆಗೆ ಹಾಜರಾಗುವ ಅಗತ್ಯವಿಲ್ಲ. ಆಯೋಗದ ಅಧಿಕಾರಿಗಳು ಅವರ ನಿವಾಸಕ್ಕೇ ತೆರಳಿ ಮಾಹಿತಿಯನ್ನು ಪಡೆಯಲಿದ್ದಾರೆ ಎಂದರು.

'4,500 ಮೈಕ್ರೊ ಅಬ್ಸರ್ವರ್‌ಗಳ ಮೇಲ್ವಿಚಾರಣೆಯಲ್ಲಿ ವಿಚಾರಣಾ ಪ್ರಕ್ರಿಯೆ ನಡೆಯುತ್ತಿದೆ. ಮತದಾರರ ನೋಂದಣಿ ಅಧಿಕಾರಿ (ಇಆರ್‌ಒ) ಸೇರಿದಂತೆ ಸಂಬಂಧಿತ ಅಧಿಕಾರಿಗಳಿಗೆ ಮಾತ್ರ ವಿಚಾರಣಾ ಕೇಂದ್ರದೊಳಗೆ ಪ್ರವೇಶ ನೀಡಲಾಗುತ್ತಿದೆ. ಪ್ರತಿ ಕೇಂದ್ರದ ಎದುರು ದೊಡ್ಡ ಸಂಖ್ಯೆಯ ಜನರು ಸರದಿಯಲ್ಲಿ ನಿಂತಿದ್ದಾರೆ' ಎಂದು ರಾಜ್ಯ ಚುನಾವಣಾ ಆಯೋಗದ ಕಚೇರಿಯು ತಿಳಿಸಿದೆ.

ಆಯೋಗವು ರಾಜ್ಯದ ಮತದಾರರ ಕರಡು ಪಟ್ಟಿಯನ್ನು ಡಿ.16ರಂದು ಪ್ರಕಟಿಸಿದೆ. 58 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸಿಹಾಕಿದೆ.



ವಿಚಾರಣಾ ಕೇಂದ್ರದ ಜನರು ಶನಿವಾರ ಹಾಜರಾಗಿದ್ದರು –ಪಿಟಿಐ ಚಿತ್ರ

ಸರ್ಕಾರಿ ಅಧಿಕಾರಿಗಳ ಸಂಘದಿಂದ ಆಕ್ಷೇಪ

ಎಸ್‌ಐಆರ್ ಭಾಗವಾಗಿ ಕರಡು ಪಟ್ಟಿಯಲ್ಲಿ ಮತದಾರರ ಹೆಸರನ್ನು ಕೈಬಿಟ್ಟಿರುವುದಕ್ಕೆ ಪಶ್ಚಿಮ ಬಂಗಾಳದ ಸರ್ಕಾರಿ ಅಧಿಕಾರಿಗಳ ಸಂಘವು ಆಕ್ಷೇಪ ವ್ಯಕ್ತಪಡಿಸಿದೆ.

ಮತದಾರರ ನೋಂದಣಿ ಅಧಿಕಾರಿಯ (ಇಆರ್‌ಒ) ಶಾಸನಬದ್ಧ ಅಧಿಕಾರವನ್ನು ಮೀರಿ ಕಂಪ್ಯೂಟರ್ ಆಧರಿತ ವ್ಯವಸ್ಥೆಯ ಮೂಲಕ ಕರಡು ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಅದು ಆರೋಪಿಸಿದೆ. ನಮೂನೆ ಅರ್ಜಿಯನ್ನು ವಾಪಸ್ ನೀಡದ ನಿರ್ದಿಷ್ಟ ಸಂಖ್ಯೆಯ ಮತದಾರರನ್ನು ಕರಡು ಪಟ್ಟಿಯಿಂದ ಹೊರಗಿಡಲಾಗಿದೆ. ಸಾವು, ಶಾಶ್ವತ ವಲಸೆ, ಗೈರು ಸೇರಿದಂತೆ ವಿವಿಧ ಕಾರಣ ನೀಡಿ ಮತದಾರರ ಹೆಸರನ್ನು ಕೈಬಿಟ್ಟಿದೆ ಎಂದು ಸಂಘವು ಆರೋಪಿಸಿದೆ.

'ರೋಹಿಂಗ್ಯ, ಬಾಂಗ್ಲಾದೇಶಿಗರ ಸಂಖ್ಯೆ ತಿಳಿಸಿ'

'ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಸಿ, ಹೊರಡಿಸಿದ ಕರಡು ಮತದಾರರ ಪಟ್ಟಿಯಲ್ಲಿ 58.02 ಲಕ್ಷ ಮಂದಿಯ ಹೆಸರು ಕೈಬಿಡಲಾಗಿತ್ತು. ಆ ಹೆಸರುಗಳ ಪೈಕಿ ಬಾಂಗ್ಲಾದೇಶದ ಅಕ್ರಮ ವಲಸಿಗರು, ರೋಹಿಂಗ್ಯಗಳ ಸಂಖ್ಯೆ ಎಷ್ಟಿತ್ತು ಎಂಬುದನ್ನು ಚುನಾವಣಾ ಆಯೋಗ ಬಹಿರಂಗ ಪಡಿಸಬೇಕು' ಎಂದು ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಗುರುವಾರ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಜನಸಂಖ್ಯೆ 10.05 ಕೋಟಿ, ಮತದಾರ ಪಟ್ಟಿಯಿಂದ ತೆಗೆದುಹಾಕಿದ್ದು 58.20 ಲಕ್ಷ ಮಂದಿಯ ಹೆಸರು. ಇದು ಒಟ್ಟು ಜನಸಂಖ್ಯೆಯ ಶೇ 5.79 ಆಗಿರುತ್ತದೆ. ಎಸ್‌ಐಆರ್ ನಡೆದ ಎಲ್ಲಾ ರಾಜ್ಯಗಳ ಪೈಕಿ ಈ ಸಂಖ್ಯೆ ಅತ್ಯಂತ ಕಡಿಮೆ. ಹೀಗಾಗಿ ಹೆಸರು ಕೈಬಿಟ್ಟಿರುವ ಪೈಕಿ ಬಾಂಗ್ಲಾದೇಶಿ ಹಾಗೂ ರೋಹಿಂಗ್ಯಗಳ ಸಂಖ್ಯೆಯನ್ನು ಇ.ಸಿ. ಬಹಿರಂಗ ಪಡಿಸಬೇಕು' ಎಂದಿದ್ದಾರೆ.

ಇದೇ ವೇಳೆ, 2021ರ ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಗೆಲುವು ಸಾಧಿಸಿದ ಬಳಿಕ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳವನ್ನು ಗುರಿಯಾಗಿಸಿಕೊಂಡಿದೆ. ರಾಜ್ಯದ ಜನರಿಗೆ ಕಿರುಕುಳ ನೀಡುವುದು ಅದರ ಕಾರ್ಯಸೂಚಿಯಾಗಿದೆ ಎಂದೂ ದೂರಿದ್ದಾರೆ.

ಇತ್ತ, ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ವಿವಿಧ ನಿಯಮ, ನೀತಿಗಳನ್ನು ಅನುಸರಿಸಲಾಗಿದೆ ಎಂದು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ, ಶಶಿ ಪಾಂಜ, ಅರೂಪ್ ಬಿಸ್ವಾಸ್ ಅವರನ್ನೊಳಗೊಂಡ ಟಿಎಂಸಿ ನಿಯೋಗ ಆರೋಪಿಸಿದೆ. ಬಿಜೆಪಿಗೆ ಅನುಕೂಲ ಮಾಡಿಕೊಡಲು 58 ಲಕ್ಷ ನೈಜ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದಿದೆ.

ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಅವರನ್ನು ಭೇಟಿಯಾದ ನಿಯೋಗ ತಮ್ಮ ಕುಂದುಕೊರತೆ ಪರಿಹರಿಸುವಂತೆ ಮನವಿಯನ್ನೂ ಸಲ್ಲಿಸಿದೆ.

ಗಾನವಿ ಪ್ರಕರಣ: ಪತಿಯೂ ಆತ್ಮಹತ್ಯೆ

ಒಂದನೇ ಪುಟದಿಂದ...

ವಿದ್ಯಾರಣ್ಯಪುರದಲ್ಲಿ ನೆಲಸಿದ್ದ ಸೂರಜ್ ಹಾಗೂ ಬಿ.ಚನ್ನಸಂದ್ರದ ಗಾನವಿ ಅ. 29ರಂದು ವಿವಾಹವಾಗಿದ್ದರು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಶ್ರೀಲಂಕಾಗೆ ಹತ್ತು ದಿನಗಳ ಹನಿಮೂನ್‌ಗೆ ದಂಪತಿ ತೆರಳಿದ್ದರು. ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ, ಭಾನುವಾರ ಮನೆಗೆ ಬಂದಿದ್ದರು. ನಂತರ, ಮನೆಯಲ್ಲೂ ಜಗಳ ನಡೆದಿತ್ತು. ಗಾನವಿ ಅವರನ್ನು ಪೋಷಕರು ಮನೆಗೆ ಕರೆದೊಯ್ದಿದ್ದರು. ಬುಧವಾರ ಮಧ್ಯಾಹ್ನ ಗಾನವಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅವರ ಮಿದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ತಿಳಿಸಿದ್ದರು. ಗುರುವಾರ ರಾತ್ರಿ ಗಾನವಿ ಮೃತಪಟ್ಟಿದ್ದರು. ಮೃತದೇಹವನ್ನು ಶುಕ್ರವಾರ ಮಧ್ಯಾಹ್ನ ವಿದ್ಯಾರಣ್ಯಪುರದ ಸೂರಜ್ ನಿವಾಸಕ್ಕೆ ತಂದು ಪೋಷಕರು ಹಾಗೂ ಕುಟುಂಬಸ್ಥರು ಪ್ರತಿಭಟನೆ ನಡೆಸಿದರು.

ಶ್ರೀಲಂಕಾದಲ್ಲಿ ಇದ್ದಾಗಲೇ ಗಾನವಿ ಹಾಗೂ ಸೂರಜ್ ನಡುವೆ ಮನಸ್ತಾಪ ಉಂಟಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಮೂವರು: ಸೂರಜ್, ಅವರ ಸಹೋದರ ಸಂಜಯ್, ತಾಯಿ ಜಯಂತಿ ವಿರುದ್ಧ ಗಾನವಿ ಪೋಷಕರು ವರದಕ್ಷಿಣೆ ಹಾಗೂ ಕೌಟುಂಬಿಕ ದೌರ್ಜನ್ಯ ಆರೋಪದ ಅಡಿ ದೂರು ನೀಡಿದ್ದರು. ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾದ ಮೇಲೆ ಮೂವರು ತಲೆಮರೆಸಿಕೊಂಡಿದ್ದರು.

ಗಾನವಿ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ಸೂರಜ್, ಜಯಂತಿ, ಸೂರಜ್ ಸಹೋದರ ಸಂಜಯ್ ಮಹಾರಾಷ್ಟ್ರದ ನಾಗ್ಪುರಕ್ಕೆ ತೆರಳಿ ರಾಯಲ್ ವಿಲ್ಲಾ ಹೋಟೆಲ್‌ನಲ್ಲಿ ತಂಗಿದ್ದರು. ಗಾನವಿ ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆ, ಸೂರಜ್, ಜಯಂತಿ ಹೋಟೆಲ್‌ನಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಸೂರಜ್ ಮೃತಪಟ್ಟರೆ, ಜಯಂತಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

'ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಮರಣ ಪತ್ರ ಸಿಕ್ಕಿಲ್ಲ. ಮೊಬೈಲ್ ಪರಿಶೀಲನೆ ನಡೆಸಲಾಗಿದ್ದು ಅದರಲ್ಲೂ ಯಾವುದೇ ಸಂದೇಶಗಳು ಇಲ್ಲ. ನಾಗ್ಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಸೂರಜ್ ಮರಣೋತ್ತರ ಪರೀಕ್ಷೆ ನಡೆದಿದೆ. ಅಲ್ಲಿನ ಸ್ಥಳೀಯ ಠಾಣೆಯಲ್ಲಿ ಯುಡಿಆರ್ ದಾಖಲಾಗಿದೆ' ಎಂದು ಮೂಲಗಳು ಹೇಳಿವೆ.

ಭೀತಿಯಿಂದ ಆತ್ಮಹತ್ಯೆ?

ಸೂರಜ್ ಕುಟುಂಬವು ಶುಕ್ರವಾರ ಮುಂಜಾನೆ ನಾಗ್ಪುರಕ್ಕೆ ಬಂದಿತ್ತು. ಬೆಂಗಳೂರಿನಲ್ಲಿ ಪ್ರಕರಣ ದಾಖಲಾಗಿದ್ದರಿಂದ ಮೂವರು ಭಯಗೊಂಡಿದ್ದರು. ಭಯದಿಂದಲೇ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ ಎಂದು ನಾಗ್ಪುರ ಪೊಲೀಸರು ಮಾಧ್ಯಮಗಳಿಗೆ ತಿಳಿಸಿದರು.

ಗವಿಮಠದ ಜಾತ್ರೆಗೆ ಕನಿಷ್ಠ 15 ಲಕ್ಷ ಜೋಳದ ರೊಟ್ಟಿ ಸಂಗ್ರಹದ ನಿರೀಕ್ಷೆ

ಹಳ್ಳಿಗಳಲ್ಲಿ ಮೇಳೈಸಿದ ರೊಟ್ಟಿಹಬ್ಬದ ಸಂಭ್ರಮ

ಪ್ರಮೋದ ಕುಲಕರ್ಣಿ

ಕೊಪ್ಪಳ: ಮೈ ಕೊರೆಯುವ ಚಳಿಯ ನಡುವೆಯೂ ಇಲ್ಲಿನ ಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವಕ್ಕೆ ಭರದ ಸಿದ್ಧತೆ ನಡೆದಿದೆ. ಜಿಲ್ಲೆ ಹಾಗೂ ನೆರೆ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ 'ರೊಟ್ಟಿ ಹಬ್ಬ'ದ ಸಂಭ್ರಮ ಮನೆ ಮಾಡಿದೆ.

ಮಹಾರಥೋತ್ಸವಕ್ಕೂ ಮೊದಲು ರೊಟ್ಟಿಯ ಸದ್ದು ಮಾರ್ದನಿಸುತ್ತದೆ. ಗವಿಮಠದ ಜಾತ್ರೆ ಎಂದರೆ ಸುತ್ತಲಿನ ಹಳ್ಳಿಗಳ ಜನರಿಗೆ ತಮ್ಮೂರ ಹಬ್ಬ ಎನ್ನುವ ಸಂಭ್ರಮವಿದೆ. ಗ್ರಾಮದ ದೇವಸ್ಥಾನ ಅಥವಾ ವಿಶಾಲ ಸ್ಥಳಗಳಲ್ಲಿ ಕಟ್ಟಿಗೆ ಒಲೆ ಬಳಸಿ ಜೋಳದ ರೊಟ್ಟಿಗಳನ್ನು ತಯಾರಿಸುತ್ತಿದ್ದಾರೆ. ಈ ಬಾರಿ ಜನವರಿ 5ರಂದು ಮಹಾರಥೋತ್ಸವ ನಡೆಯಲಿದೆ. ಇದಕ್ಕೂ ಮೊದಲು ಗವಿಮಠದಲ್ಲಿ ಜೋಳದ ರೊಟ್ಟಿಗಳ ರಾಶಿಯೇ ಸಂಗ್ರಹವಾಗುತ್ತದೆ. ಪ್ರತಿವರ್ಷ ಕನಿಷ್ಠ 15 ಲಕ್ಷ ರೊಟ್ಟಿಗಳು ಭಕ್ತರಿಂದಲೇ ಬರುತ್ತಿದ್ದು, ಈ ಬಾರಿ ಹಿಂದಿನ ವರ್ಷಕ್ಕಿಂತಲೂ ಹೆಚ್ಚು ರೊಟ್ಟಿ ಸಂಗ್ರಹವಾಗುವ ನಿರೀಕ್ಷೆ ಗವಿಮಠದ್ದಾಗಿದೆ.



ಗವಿಸಿದ್ಧೇಶ್ವರ ಮಠದ ಜಾತ್ರೆಗೆ ಜೋಳದ ರೊಟ್ಟಿ ತಯಾರಿಸುವ ಕಾರ್ಯದಲ್ಲಿ ಕೊಪ್ಪಳ ತಾಲ್ಲೂಕಿನ ಹಟ್ಟಿ ಗ್ರಾಮದ ಮಹಿಳೆಯರು ತೊಡಗಿದ್ದ ಚಿತ್ರಣ –ಚಿತ್ರ: ಭರತ್ ಕಂದಕೂರ

ಕೊಪ್ಪಳ ತಾಲ್ಲೂಕಿನ ಕಿನ್ನಾಳ, ಹಟ್ಟಿ, ಇರಕಲ್ಲಗಡ ಹೀಗೆ ಅನೇಕ ಊರುಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ದುಡಿದು, ದಣಿದು ಬಂದರೂ ಜಾತ್ರೆಗೆ ರೊಟ್ಟಿ ತಟ್ಟುವ ಸೇವೆಗೆ ಮಾತ್ರ ಮಹಿಳೆಯರಿಗೆ ಯಾವ ದಣಿವೂ ಆಗುವುದಿಲ್ಲ. ಪ್ರತಿ ಊರಿನಿಂದ ಕನಿಷ್ಠ 10ರಿಂದ 15 ಸಾವಿರ ರೊಟ್ಟಿಗಳು ತಯಾರಾಗಿ ಅವುಗಳನ್ನು ಮೆರವಣಿಗೆ ಮೂಲಕ ಗವಿಮಠಕ್ಕೆ ನೀಡಲಾಗುತ್ತದೆ.

ಹಟ್ಟಿ ಗ್ರಾಮದಲ್ಲಿ 2013ರಿಂದ ಸಾರ್ವಜನಿಕವಾಗಿ ರೊಟ್ಟಿ ತಯಾರಿಸುವ ಪರಂಪರೆ ಆರಂಭವಾಗಿತ್ತು. ಕೋವಿಡ್ ಕಾಲದಲ್ಲಿ ನಿಂತಿದ್ದು, ಮಹಿಳೆಯರು ಮನೆಗಳಲ್ಲಷ್ಟೇ ರೊಟ್ಟಿ ತಯಾರಿಸಿ ಬಳಿಕ ಮಠಕ್ಕೆ ತಂದುಕೊಡುತ್ತಿದ್ದರು. ಆ ಗ್ರಾಮದಲ್ಲಿ ಮೂರು ವರ್ಷದ ಬಳಿಕ ರಾತ್ರಿ ವೇಳೆ ರೊಟ್ಟಿ ತಟ್ಟುವ ಕಾಯಕ ನಡೆಯಿತು. ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯೇ ಗ್ರಾಮಕ್ಕೆ ಭೇಟಿ ನೀಡಿ ರೊಟ್ಟಿ ತಟ್ಟುವ ಮಹಿಳೆಯರ ಕಾಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.



ಹಟ್ಟಿ ಗ್ರಾಮದಲ್ಲಿ ರೊಟ್ಟಿ ತಟ್ಟುವುದು ಶುರುವಾದರೆ ಜಾತ್ರೆ ಆರಂಭವಾದಂತೆ. ಭಕ್ತರ ಪ್ರೀತಿ, ಮಠದ ಮೇಲಿನ ಅವರ ಭಕ್ತಿಗೆ ಏನು ಹೇಳಿದರೂ ಕಡಿಮೆ
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ
ಗವಿಮಠ, ಕೊಪ್ಪಳ

ಜಾತ್ರೆ ಸಮೀಪಿಸುತ್ತಿದ್ದರೆ ಹಳ್ಳಿಗಳಲ್ಲಿ ರೊಟ್ಟಿ ಹಬ್ಬದ ಸಂಭ್ರಮ ಜೋರಾಗುತ್ತದೆ. ನಮ್ಮೂರಿನಿಂದಲೇ ಸುಮಾರು 10ರಿಂದ 15 ಸಾವಿರ ರೊಟ್ಟಿ ನೀಡುತ್ತೇವೆ
ರಾಮಣ್ಣ ಚೌಡ್ಕಿ
ಹಟ್ಟಿ ಗ್ರಾಮದ ಮುಖಂಡ

ಹಣ ಹೊಂದಿಕೆ ಹೇಗೆ?: ಗ್ರಾಮಸ್ಥರು ಸಾಧ್ಯವಾದಷ್ಟು ಹಣ ಸಂಗ್ರಹಿಸಿ ರೊಟ್ಟಿ ತಯಾರಿಸಲು ಸಾಮಗ್ರಿ ಖರೀದಿಸುತ್ತಾರೆ. ಅನುಕೂಲಸ್ಥರು ಕ್ವಿಂಟಲ್ ಲೆಕ್ಕದಲ್ಲಿ ಜೋಳ ಕೊಡುತ್ತಾರೆ. ಈ ವರ್ಷ ಹಟ್ಟಿಯಲ್ಲೇ ಎರಡೂವರೆ ಕ್ವಿಂಟಲ್‌ನಷ್ಟು ಜೋಳದ ರೊಟ್ಟಿ ತಯಾರಿಸಲಾಗಿದೆ.

ಜಾತ್ರೆ ನೆಪದಲ್ಲಿ ಎಲ್ಲ ಸಮುದಾಯಗಳ ಜನರು ಒಂದಾಗಿ ರೊಟ್ಟಿ ತಯಾರಿಸಿ ಭಾವೈಕ್ಯದ ಸಂದೇಶವನ್ನು ಸಾರುತ್ತಿದ್ದಾರೆ. ಇದು ಊರ ಜನರ ನಡುವಿನ ಬಾಂಧವ್ಯವನ್ನೂ ಗಟ್ಟಿಗೊಳಿಸಿದೆ. ಗ್ರಾಮದ ಅಭಿವೃದ್ಧಿಗೂ ವೇದಿಕೆ ಒದಗಿಸುತ್ತಿದೆ.

'ದೇಗುಲಕ್ಕೆ ಶ್ರೀಗಂಧ: ನಿಯಮ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವಾಲಯಗಳು ತಮ್ಮ ಧಾರ್ಮಿಕ ಕೈಂಕರ್ಯಗಳಿಗೆ ಅಗತ್ಯವಿರುವ ಶ್ರೀಗಂಧವನ್ನು ತಾವೇ ಬೆಳೆದುಕೊಳ್ಳಬಹುದೇ ಎಂಬುದರ ಬಗ್ಗೆ ಪರಿಶೀಲಿಸಿ' ಎಂದು ಹೈಕೋರ್ಟ್, ರಾಜ್ಯ ಅರಣ್ಯ ಇಲಾಖೆಗೆ ನಿರ್ದೇಶಿಸಿದೆ.

ಮಠಕ್ಕೆ ಅಗತ್ಯವಿರುವ ಶ್ರೀಗಂಧ ಪೂರೈಕೆ ಮಾಡದ ಉಡುಪಿ ಜಿಲ್ಲಾಡಳಿತದ ಕ್ರಮವನ್ನು ಪ್ರಶ್ನಿಸಿ ಉಡುಪಿ 'ಶ್ರೀ ಕೃಷ್ಣ ಮಠ'ದ ಪರ್ಯಾಯ ಸ್ವಾಮೀಜಿ ರಿಟ್ ಅರ್ಜಿ ಸಲ್ಲಿಸಿದ್ದರು. ಅದನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಶ್ರೀಗಂಧದ ಪೂರೈಕೆ ಪ್ರಮಾಣದಲ್ಲಿ ಕೊರತೆ ಉಂಟಾಗಿರುವ ಕಾರಣ ಶ್ರೀ ಮಠವು ತನಗೆ ಅಗತ್ಯವಿರುವ ಶ್ರೀಗಂಧವನ್ನು ತಾನೇ ಸ್ವತಃ ಬೆಳೆಯುವುದಕ್ಕೆ ಅವಕಾಶ ಕಲ್ಪಿಸಬಹುದೇ ಎಂಬ ಬಗ್ಗೆ ಸೂಕ್ತ ನಿಯಮಗಳನ್ನು ರೂಪಿಸಬಹುದಾಗಿದೆ' ಎಂದೂ ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪುತ್ತಿಗೆ ಆರ್.ರಮೇಶ್ ಅವರ ವಾದವನ್ನು ನ್ಯಾಯಪೀಠ ಆಲಿಸಿತು. ಈ ಸಂಬಂಧ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುವ ನ್ಯಾಯಪೀಠ, 10 ಕೆ.ಜಿ. ಶ್ರೀಗಂಧಕ್ಕಾಗಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಶ್ರೀ ಮಠಕ್ಕೆ ಅವಕಾಶ ಕಲ್ಪಿಸಿದೆ. 'ಶ್ರೀ ಮಠ ಅರ್ಜಿ ಸಲ್ಲಿಸಿದ 30 ದಿನಗಳಲ್ಲಿ 10 ಕೆ.ಜಿ. ಶ್ರೀಗಂಧವನ್ನು ಪೂರೈಸಬೇಕು' ಎಂದು ತಿಳಿಸಿದೆ.

ಪ್ರಕರಣವೇನು?: ಉಡುಪಿ ಶ್ರೀ ಕೃಷ್ಣ ಮಠದ ಪೂಜಾ ಕೈಂಕರ್ಯಕ್ಕೆ ಸರ್ಕಾರ ಹಲವು ವರ್ಷಗಳಿಂದ 1,087 ಕೆ.ಜಿ ಶ್ರೀಗಂಧ ಒದಗಿಸುತ್ತಿತ್ತು. ಆದರೆ, 2004-05ನೇ ಸಾಲಿನಲ್ಲಿ 1,087 ಶ್ರೀಗಂಧ ನೀಡುವ ಸಂಬಂಧ ಚಲನ್ ಸಿದ್ಧಪಡಿಸಿದ್ದರೂ 239 ಕೆ.ಜಿ ಮಾತ್ರ ನೀಡಲಾಗಿತ್ತು. ಬಳಿಕ 2007ರಲ್ಲಿ 100 ಕೆ.ಜಿ. ಶ್ರೀಗಂಧ ನೀಡಲಾಗಿತ್ತು. ಇನ್ನುಳಿದ ಪ್ರಮಾಣವನ್ನು ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ 2007ರಲ್ಲಿ ಶ್ರೀ ಮಠ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಏತನ್ಮಧ್ಯೆ, ಅರ್ಜಿ ವಿಚಾರಣೆ ಸಂದರ್ಭದಲ್ಲಿ ಅಲ್ಪ ಪ್ರಮಾಣದ ಶ್ರೀಗಂಧವನ್ನು ಮಂಜೂರು ಮಾಡಲಾಗಿತ್ತು. ಹಾಗಾಗಿ, ಅರ್ಜಿದಾರರು ತಮ್ಮ ಅರ್ಜಿ ಹಿಂಪಡೆದಿದ್ದರು.

ನಂತರ 2009 ಮತ್ತು 2010ರಲ್ಲಿ ಶ್ರೀಗಂಧ ಬಿಡುಗಡೆಗೆ ಕೋರಲಾಗಿತ್ತು. ಆದರೆ, ದೇವಾಲಯವನ್ನು ಮುಜರಾಯಿ ಇಲಾಖೆಯಿಂದ ಕೈಬಿಡಲಾಗಿತ್ತು. ಅಂತೆಯೇ, 2011ರಲ್ಲಿ ಶ್ರೀಗಂಧ ಒದಗಿಸುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನೂ ಪರಿಗಣಿಸಿರಲಿಲ್ಲ. ಇದನ್ನು ಪ್ರಶ್ನಿಸಿ ಶ್ರೀಮಠ ಪುನಃ ಹೈಕೋರ್ಟ್ ಮೆಟ್ಟಿಲೇರಿತ್ತು

ಚಿಟಿಕೆ ಸುದ್ದಿ

'ಡಿಸೆಂಬರ್‌ನಲ್ಲೂ ಪೂರ್ಣಗೊಳ್ಳದ 'ಕವಚ್' ಅಳವಡಿಕೆ'

ನವದೆಹಲಿ (ಪಿಟಿಐ): ನವದೆಹಲಿ–ಮುಂಬೈ ಮತ್ತು ನವದೆಹಲಿ–ಹೌರಾ ನಡುವಿನ ರೈಲು ಮಾರ್ಗಗಳಲ್ಲಿ ಪ್ರಸಕ್ತ ಸಾಲಿನ ಡಿಸೆಂಬರ್ ಒಳಗಾಗಿ ಸ್ವಯಂಚಾಲಿತ ರಕ್ಷಣಾ ವ್ಯವಸ್ಥೆ 'ಕವಚ್' ಅನ್ನು ಅಳವಡಿಸಲು ರೈಲ್ವೆ ಸಚಿವಾಲಯ ವಿಫಲವಾಗಿದ್ದು, 2026ರ ವೇಳೆ ಈ ಕಾರ್ಯವನ್ನು ಪೂರ್ಣಗೊಳಿಸುವ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

'ಕವಚ್' ಅಳವಡಿಕೆಯ ಶೇ 25ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಭಾಗಗಳಲ್ಲಿ ಬಹುತೇಕ ಬಿಡಿಭಾಗಗಳು ಮತ್ತು ಉಪಕರಣಗಳನ್ನು ತಂದಿರಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನವದೆಹಲಿ–ಮುಂಬೈ–ಹೌರಾ ಮಾರ್ಗಗಳಲ್ಲಿ 'ಕವಚ್' ಅಳವಡಿಕೆ ಕಾರ್ಯ 2025 ಮಾರ್ಚ್‌ನಲ್ಲಿ ಪೂರ್ಣಗೊಳ್ಳಲಿದೆ ಎಂದು ರೈಲ್ವೆ ಸಚಿವಾಲಯವು 2024 ಆಗಸ್ಟ್‌ನಲ್ಲಿ ತಿಳಿಸಿತ್ತು. ಬಳಿಕ ಈ ಗಡುವನ್ನು ಡಿಸೆಂಬರ್‌ಗೆ ವಿಸ್ತರಿಸಿತ್ತು. ಆದರೆ ಕಾಮಗಾರಿ ಇನ್ನು ಪೂರ್ಣಗೊಂಡಿಲ್ಲ

ಅಡಿಕೆ ಧಾರಣೆ

ತೀರ್ಥಹಳ್ಳಿ	
ಇಡಿ	37219-58200
ಗೊರಬಲು	30221-39299
ರಾಶಿ	36699-58200
ಸರಕು	70029-88100

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು		
	100 ಕ್ಕೆ	₹705
	12 ಕ್ಕೆ	₹96
ಮೈಸೂರು:	100 ಕ್ಕೆ	₹706

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹110-755
ದ್ವಿತಳಿ (ಬಿ.ವಿ)	₹355-891

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹162.50

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹26,650
ಎಸಿ	₹14,560
ಆರ್‌ಪಿ	₹16,250
ಆರ್‌ಸಿ	₹9,500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1490 (1495)
ಪಾಮೋಲಿನ್	₹1245 (1250)

2026ರಲ್ಲಿ ಎಫ್‌ಡಿಐ ಏರಿಕೆ ನಿರೀಕ್ಷೆ

ಕಳೆದ ವರ್ಷದ ಎಫ್‌ಡಿಐ ಮೊತ್ತಕ್ಕಿಂತ ಈ ವರ್ಷದಲ್ಲಿ ಜಾಸ್ತಿ ಹೂಡಿಕೆ



ನವದೆಹಲಿ (ಪಿಟಿಐ): ದೇಶದ ಅರ್ಥವ್ಯವಸ್ಥೆಯು ಉತ್ತಮ ರೀತಿಯಲ್ಲಿ ಬೆಳವಣಿಗೆ ಕಾಣುತ್ತಿರುವ ಹಿನ್ನೆಲೆಯಲ್ಲಿ 2026ರಲ್ಲಿ ವಿದೇಶಿ ನೇರ ಹೂಡಿಕೆಯ (ಎಫ್‌ಡಿಐ) ಪ್ರಮಾಣವು ಚೆನ್ನಾಗಿ ಇರಲಿದೆ ಎಂಬ ನಿರೀಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ.

2024–25ರಲ್ಲಿ ಭಾರತಕ್ಕೆ ಹರಿದುಬಂದಿದ್ದ ಒಟ್ಟು ಎಫ್‌ಡಿಐ ಮೊತ್ತವು 80.5 ಬಿಲಿಯನ್ ಡಾಲರ್ ಆಗಿತ್ತು (ಇಂದಿನ ಅಂದಾಜು ₹7.22 ಲಕ್ಷ ಕೋಟಿ). ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ನಡುವೆಯೂ ಈ ಮಟ್ಟದ ಹೂಡಿಕೆ ಭಾರತಕ್ಕೆ ಬಂದಿತ್ತು.

ಕೇಂದ್ರ ಸರ್ಕಾರ ಕೈಗೊಂಡ ಹಲವು ಕ್ರಮಗಳ ಪರಿಣಾಮವಾಗಿ ಕಳೆದ ಹನ್ನೊಂದು ವರ್ಷಗಳಲ್ಲಿ ಭಾರತವು ಗಮನಾರ್ಹ ಮೊತ್ತದ ಹೂಡಿಕೆಯನ್ನು ಆಕರ್ಷಿಸಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಇಲಾಖೆ (ಡಿಪಿಐಐಟಿ) ಕಾರ್ಯದರ್ಶಿ ಅಮರದೀಪ್ ಸಿಂಗ್ ಭಾಟಿಯಾ ಹೇಳಿದ್ದಾರೆ.

'ಈ ವರ್ಷದಲ್ಲಿ (2026ರಲ್ಲಿ) ವಿದೇಶಿ ನೇರ ಹೂಡಿಕೆಯ ಮೊತ್ತವು 2024–25ರ ಮೊತ್ತವನ್ನು ಮೀರಬಹುದು ಎಂಬ ಆಶಾಭಾವನೆ ನಮಗೆ ಇದೆ' ಎಂದು ಸಿಂಗ್ ಹೇಳಿದ್ದಾರೆ.

ನಾಲ್ಕು ದೇಶಗಳ ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟ (ಇಎಫ್‌ಟಿಎ) ಜೊತೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಕೂಡ ಎಫ್‌ಡಿಐ ಆಕರ್ಷಿಸಲು ನೆರವಾಗುತ್ತದೆ ಎಂದು ಕೇಂದ್ರ ನಂಬಿದೆ.

ಅಂತರರಾಷ್ಟ್ರೀಯ ಮಟ್ಟದ ಕೆಲವು ಸಂಸ್ಥೆಗಳು ಸಿದ್ಧಪಡಿಸಿರುವ ವರದಿಗಳು ಕೂಡ ಭಾರತಕ್ಕೆ ಎಫ್‌ಡಿಐ ಹರಿದುಬರುವ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯನ್ನು ಹೇಳಿವೆ.

ದೇಶದಲ್ಲಿ ಎ.ಐ. ಮೂಲಸೌಕರ್ಯ ನಿರ್ಮಾಣಕ್ಕಾಗಿ ಮೈಕ್ರೊಸಾಫ್ಟ್, ಗ್ರಾಹಕ ಬಳಕೆ ವಸ್ತುಗಳನ್ನು ಮನೆಬಾಗಿಲಿಗೆ ತ್ವರಿತವಾಗಿ ತಲುಪಿಸುವ ಹಾಗೂ ಎ.ಐ. ಮೂಲಸೌಕರ್ಯದ ಅಭಿವೃದ್ಧಿಗಾಗಿ ಅಮೆಜಾನ್, ಎ.ಐ. ದತ್ತಾಂಶ ಕೇಂದ್ರ ನಿರ್ಮಾಣಕ್ಕಾಗಿ ಗೂಗಲ್ ಭಾರಿ ಪ್ರಮಾಣದ ಹೂಡಿಕೆ ಮಾಡುವ ಘೋಷಣೆಯನ್ನು ಈಗಾಗಲೇ ಮಾಡಿವೆ.

ಐಫೋನ್ ತಯಾರಿಕಾ ಕಂಪನಿ ಆ್ಯಪಲ್ ಭಾರತದಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಿದೆ. ದಕ್ಷಿಣ ಕೊರಿಯಾ ದೇಶದ ಸ್ಯಾಮ್ಸಂಗ್ ಕೂಡ ಭಾರತದಲ್ಲಿ ತನ್ನ ತಯಾರಿಕಾ ಘಟಕಗಳ ಸಾಮರ್ಥ್ಯ ಹೆಚ್ಚಿಸುತ್ತಿದೆ.

ದೇಶದ ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳು ಗಟ್ಟಿಯಾಗಿ ಇರುವ ಕಾರಣದಿಂದಾಗಿ, ಸುಧಾರಣಾ ಕ್ರಮಗಳು ನಿರಂತರವಾಗಿ ಜಾರಿಗೆ ಬರುತ್ತಿರುವ ಪರಿಣಾಮವಾಗಿ 2026ರಲ್ಲಿ ಎಫ್‌ಡಿಐ ದೊಡ್ಡ ಮಟ್ಟದಲ್ಲಿ ಹೆಚ್ಚಳ ಕಾಣಲಿದೆ ಎಂದು ತಜ್ಞರು ಕೂಡ ಅಂದಾಜಿಸಿದ್ದಾರೆ.

'ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ನಡುವೆ ದೇಶವು ತನ್ನ ಆರ್ಥಿಕ ಸಂಬಂಧಗಳನ್ನು ವಿಸ್ತರಿಸಿಕೊಳ್ಳುತ್ತಿದೆ. ತಯಾರಿಕೆ ಮತ್ತು ಸೇವಾ ವಲಯಗಳಲ್ಲಿ ಸಾಮರ್ಥ್ಯ ಹೆಚ್ಚು ಮಾಡಿಕೊಳ್ಳುತ್ತಿದೆ. ಇವೆಲ್ಲವೂ ಎಫ್‌ಡಿಐ ಹೆಚ್ಚಳಕ್ಕೆ ನೆರವಾಗಲಿವೆ' ಎಂದು ಡೆಲಾಯ್ಟ್ ಇಂಡಿಯಾದ ಅರ್ಥಶಾಸ್ತ್ರಜ್ಞರಾದ ರುಮ್ಕಿ ಮಜುಂದಾರ್ ಹೇಳಿದ್ದಾರೆ.

ಮುಖ್ಯಾಂಶಗಳು

- ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ಹೂಡಿಕೆ ಹೆಚ್ಚಳವಾಗುವ ಸಾಧ್ಯತೆ
- ಬಹುರಾಷ್ಟ್ರೀಯ ಕಂಪನಿಗಳಿಂದ ಹೂಡಿಕೆ ಹೆಚ್ಚಿಸುವ ಪ್ರಕಟಣೆ

ಸುದ್ದಿ 2 ನಿಮಿಷ

ಐಪಿಒಗೆ ದಾಖಲೆ ಸಲ್ಲಿಸಿದ ಜೆಪ್ಟೊ


ನವದೆಹಲಿ (ಪಿಟಿಐ): ದಿನಸಿ ಸಾಮಗ್ರಿಗಳಿಂದ ಆರಂಭಿಸಿ ಎಲೆಕ್ಟ್ರಾನಿಕ್ ಉಪಕರಣಗಳವರೆಗೆ ವಿವಿಧ ಬಗೆಯ ಗ್ರಾಹಕ ಬಳಕೆ ಉತ್ಪನ್ನಗಳನ್ನು ಮನೆಬಾಗಿಲಿಗೆ ತ್ವರಿತವಾಗಿ ತಲುಪಿಸುವ ಜೆಪ್ಟೊ ಕಂಪನಿಯು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ದಾಖಲೆಗಳನ್ನು ಸಲ್ಲಿಸಿದೆ.

ಕಂಪನಿಯು 2026ರಲ್ಲಿ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸುವ ಉದ್ದೇಶ ಹೊಂದಿದೆ. ಇದು ಸಾಧ್ಯವಾದ ನಂತರದಲ್ಲಿ, ದೇಶದ ಷೇರುಪೇಟೆ ಪ್ರವೇಶಿಸಿದ ಅತ್ಯಂತ ಕಿರಿಯ ನವೋದ್ಯಮಗಳ ಸಾಲಿಗೆ ಜೆಪ್ಟೊ ಕೂಡ ಸೇರಲಿದೆ.

ಜೆಪ್ಟೊ ಕಂಪನಿಗೆ ಕ್ವಿಕ್–ಕಾಮರ್ಸ್ ಕ್ಷೇತ್ರದಲ್ಲಿ ಪೈಪೋಟಿ ನೀಡುವ ಎಟರ್ನಲ್, ಸ್ವಿಗ್ಗಿ ಕೂಡ ಷೇರುಪೇಟೆಯಲ್ಲಿ ನೋಂದಾಯಿತವಾಗಿವೆ.

ಜೆಪ್ಟೊ ಕಂಪನಿಯು ಗೋಪ್ಯ ಮಾರ್ಗದ ಮೂಲಕ ದಾಖಲೆಗಳನ್ನು ಸಲ್ಲಿಸಿದೆ. ಇದರಿಂದಾಗಿ ಕಂಪನಿಗೆ ತನ್ನ ದಾಖಲೆಗಳನ್ನು ಸಾರ್ವಜನಿಕರ ಅವಗಾಹನೆಗೆ ಮುಕ್ತವಾಗಿಸದೆಯೇ, ಸೆಬಿ ಜೊತೆ ಸಂವಹನ ನಡೆಸಲು ಸಾಧ್ಯವಾಗುತ್ತದೆ. ಐಪಿಒ ಸಿದ್ಧತೆ ಸಂದರ್ಭದಲ್ಲಿ ಹೆಚ್ಚು ಅನುಕೂಲಗಳು ಇರಲಿ ಎಂಬ ಉದ್ದೇಶದಿಂದ ಬಹಳಷ್ಟು ಕಂಪನಿಗಳು ಈ ಮಾರ್ಗದಲ್ಲಿ ದಾಖಲೆಗಳನ್ನು ಸಲ್ಲಿಸುತ್ತಿವೆ.

ಜೆಪ್ಟೊ ಕಂಪನಿಯು ತಾನು ಆರಂಭವಾದಾಗಿನಿಂದ ಖ್ಯಾತ ಹೂಡಿಕೆದಾರರಿಂದ ₹16 ಸಾವಿರ ಕೋಟಿಯಷ್ಟು ಬಂಡವಾಳ ಸಂಗ್ರಹಿಸಿದೆ. ಈ ವರ್ಷದ ಅಕ್ಟೋಬರ್‌ನಲ್ಲಿ ಕಂಪನಿಯು ₹3,757 ಕೋಟಿ ಬಂಡವಾಳ ಸಂಗ್ರಹಿಸಿದೆ.



ಎ.ಐ. ಕೌಶಲದವರಿಗೆ ಭಾರಿ ಬೇಡಿಕೆ

ಬೆಂಗಳೂರು: ಐ.ಟಿ. ಸೇವಾ ವಲಯದಲ್ಲಿ ವಿಶೇಷವಾದ ಕೌಶಲಗಳನ್ನು ಹೊಂದಿರುವ ಹೊಸಬರಿಗೆ ಈಗ ಐ.ಟಿ. ಕಂಪನಿಗಳು ₹10 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ವೇತನವನ್ನು ನೀಡಲು ಮುಂದಾಗುತ್ತಿವೆ.

ಹೊಸಬರಿಗೆ ತೀರಾ ಈಚಿನವರೆಗೆ ಐ.ಟಿ. ಉದ್ಯಮದಲ್ಲಿ ₹3.5 ಲಕ್ಷದಿಂದ ₹5 ಲಕ್ಷದವರೆಗೆ ಮಾತ್ರ ವಾರ್ಷಿಕ ವೇತನ ಇತ್ತು. ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ವಿಶೇಷ ಕೌಶಲಗಳನ್ನು ಹೊಂದಿರುವವರಿಗೆ ಈಗ ವಾರ್ಷಿಕ ₹21 ಲಕ್ಷದವರೆಗೂ ವೇತನ ನೀಡಲು ಕಂಪನಿಗಳು ಮುಂದೆಬರುತ್ತಿವೆ.

ವಿಶೇಷ ಜವಾಬ್ದಾರಿಗಳನ್ನು ನಿರ್ವಹಿಸುವ ಹುದ್ದೆಗಳಿಗೆ ನೇಮಕಗೊಳ್ಳುವ ನೌಕರರಿಗೆ ವಾರ್ಷಿಕ ₹21 ಲಕ್ಷದವರೆಗೂ ವೇತನ ನೀಡಲು ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಮುಂದೆಬಂದಿದೆ.

ಅಪ್ಲೈಡ್ ಎ.ಐ/ಎಂಎಲ್, ಡೇಟಾ ಎಂಜಿನಿಯರಿಂಗ್, ಕ್ಲೌಡ್ ಪ್ಲಾಟ್‌ಫಾರ್ಮ್ ಎಂಜಿನಿಯರಿಂಗ್, ಸೈಬರ್ ಭದ್ರತೆ ಕೌಶಲಗಳು ಈಗ ಹೆಚ್ಚಿನ ವೇತನವನ್ನು ಆಕರ್ಷಿಸುತ್ತಿವೆ.

ದೊಡ್ಡ ಮಟ್ಟದ ವೇತನವು ಎಲ್ಲರಿಗೂ ಸಿಗುತ್ತಿಲ್ಲ. ಅದು ವಿಶೇಷವಾದ ಕೌಶಲಗಳನ್ನು ಹೊಂದಿರುವ ಕೆಲವರಿಗೆ ಮಾತ್ರ ಸೀಮಿತ. ಹೊಸಬರು ₹10 ಲಕ್ಷಕ್ಕಿಂತ ಹೆಚ್ಚಿನ ಮಟ್ಟದ ವಾರ್ಷಿಕ ವೇತನ ಪಡೆಯುವುದು ಮುಂದಿನ ದಿನಗಳಲ್ಲಿಯೂ ಸೀಮಿತ ಪ್ರಮಾಣದಲ್ಲಿಯೇ ಇರಲಿದೆ ಎಂದು ತಜ್ಞರು ಹೇಳಿದ್ದಾರೆ.

ಫಾಕ್ಸ್‌ಕಾನ್: ಮುಂದುವರಿದ ಜಗಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಮೀಪದ ದೇವನಹಳ್ಳಿಯಲ್ಲಿ ಫಾಕ್ಸ್‌ಕಾನ್‌ನ ಐಫೋನ್ ತಯಾರಿಕಾ ಘಟಕ ಆರಂಭದ ಶ್ರೇಯಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನಡೆಯುತ್ತಿರುವ ಜಗಳ ಶನಿವಾರವೂ ಮುಂದುವರೆದಿದೆ.

ಕರ್ನಾಟಕದಲ್ಲಿನ ಫಾಕ್ಸ್‌ಕಾನ್ ಘಟಕ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, 'ಕೊನೆಗೂ ಕೇಂದ್ರ ಸರ್ಕಾರದ ಸಾಧನೆ ಗುರುತಿಸಿದಿರಲ್ಲ' ಎಂದು ಪ್ರತಿಕ್ರಿಯಿಸಿದ್ದರು. ಇದನ್ನು ಅಲ್ಲಗೆಳೆದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಪೋಸ್ಟ್ ಮಾಡಿದ್ದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಫಾಕ್ಸ್‌ಕಾನ್ ಘಟಕ ಆರಂಭದ ಒಪ್ಪಂದಕ್ಕೆ ಸಹಿ ಹಾಕಿದ್ದು ನನ್ನ ಅವಧಿಯಲ್ಲಿ. ನಮ್ಮ ಸರ್ಕಾರದಲ್ಲಿ 300 ಎಕರೆ ಭೂಮಿ ಮಂಜೂರು ಮಾಡಿದ್ದೆವು. ಡಬ್ಬಲ್ ಎಂಜಿನ್ ಸರ್ಕಾರದ ಸಾಧನೆ ಇದು' ಎಂದು ಶುಕ್ರವಾರ ರಾತ್ರಿ ತಿವಿದಿದ್ದರು. ಶ್ರೇಯಕ್ಕಾಗಿನ ಈ ಜಗಳ ಇನ್ನೂ ಮುಂದುವರೆದಿದೆ.

'ಸಹಿ ಹಾಕಿದ್ದು ನಮ್ಮ ಸರ್ಕಾರ'

ನಮ್ಮ ಪಕ್ಷದ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಫಾಕ್ಸ್‌ಕಾನ್ ಘಟಕ ಒಪ್ಪಂದಕ್ಕೆ ಸಹಿ ಮಾಡಿದ್ದರು. ಕಾಂಗ್ರೆಸ್ ಆಡಳಿತದ ಎರಡೂವರೆ ವರ್ಷಗಳಲ್ಲಿ ಏಥರ್ ಎನರ್ಜಿ, ಟೊಯೋಟಾ, ಫಾಕ್ಸ್‌ಕಾನ್‌ನ ಎರಡನೇ ಘಟಕ ಬೇರೆ ರಾಜ್ಯಗಳಿಗೆ ಹೋಗಿವೆ. ಕಾಂಗ್ರೆಸ್‌ನ ಹೂಡಿಕೆ ವಿರೋಧಿ ನೀತಿಯನ್ನು ಉದ್ಯಮಿಗಳು ಬಹಿರಂಗವಾಗಿಯೇ ಖಂಡಿಸಿದ್ದಾರೆ. ನಾವು ರೂಪಿಸಿದ್ದ ಉದ್ಯಮಸ್ನೇಹಿ ಪರಿಸರವನ್ನು ಕಾಂಗ್ರೆಸ್ ಹಾಳುಗೆಡವಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಕೇಂದ್ರದ ಸಹಕಾರವಿಲ್ಲದೆ ಹೂಡಿಕೆ ಸಾಧ್ಯವೇ?'

ಕೇಂದ್ರ ಸರ್ಕಾರದ ಗಮನಕ್ಕೆ ಬರದೆ ಮತ್ತು ಅದರ ಸಹಕಾರವಿಲ್ಲದೆ ಯಾವುದೇ ಬಹುರಾಷ್ಟ್ರೀಯ ಕಂಪನಿಯು ರಾಜ್ಯಗಳಲ್ಲಿ ಹೂಡಿಕೆ ಮಾಡುತ್ತದೆಯೇ? ಅಂತಹ ಸಾಮಾನ್ಯ ಜ್ಞಾನವೂ ರಾಹುಲ್ ಗಾಂಧಿ ಅವರಿಗೆ ಇಲ್ಲವೇ? ಫಾಕ್ಸ್‌ಕಾನ್ ಹೂಡಿಕೆ ಕುರಿತಾಗಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರತಿಪಾದನೆ ಸರಿಯಾಗಿದೆ.

ಲಹರ್ ಸಿಂಗ್ ಸಿರೋಯ, ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ



'ಭೂಮಿ, ಸವಲತ್ತು ನೀಡಿದವರು ನಾವು'


ಫಾಕ್ಸ್‌ಕಾನ್ ಯಶಸ್ಸಿಗೆ ಕಾಂಗ್ರೆಸ್ ಸರ್ಕಾರವೇ ಕಾರಣ. ಫಾಕ್ಸ್‌ಕಾನ್ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಜತೆಗಿನ ಮಾತುಕತೆಯ ನಂತರವೇ ಆ ಕಂಪನಿಗೆ 300 ಎಕರೆ ಭೂಮಿ ನೀಡಿದ್ದೆವು. ಹೂಡಿಕೆ ಉತ್ತೇಜನ, ಇತರ ಸವಲತ್ತು ನೀಡಿದ ಪರಿಣಾಮವಾಗಿ ಫಾಕ್ಸ್‌ಕಾನ್ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಅವರು ಕರ್ನಾಟಕಕ್ಕೆ ಒಂದಾದರೂ ಸೆಮಿಕಂಡಕ್ಟರ್ ಘಟಕವನ್ನು ನೀಡಿ, ಅದರ ಶ್ರೇಯವನ್ನು ಪಡೆದುಕೊಳ್ಳಲಿ.

ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ

'ಪೋಸ್ಟ್‌ನಿಂದ ಅಭಿವೃದ್ಧಿ ಸಾಧ್ಯವಿಲ್ಲ'

ಅಶ್ವಿನಿ ವೈಷ್ಣವ್ ಅವರೇ, ಹೂಡಿಕೆ ಯೋಜನೆಗಳು ಯಶಸ್ವಿಯಾಗುವಲ್ಲಿ ಹಲವು ವರ್ಷಗಳ ಕಾರ್ಯಯೋಜನೆ, ಸುಧಾರಣೆ ಮತ್ತು ಅನುಷ್ಠಾನದ ಶ್ರಮವಿರುತ್ತದೆ. ಫಾಕ್ಸ್‌ಕಾನ್ ಯಶಸ್ವಿನಲ್ಲಿ ಮಹತ್ತರವಾದ ಶ್ರಮ ಯಾರದ್ದು ಎಂಬುದು ರಾಜ್ಯದ ಜನರಿಗೆ ಗೊತ್ತಿದೆ. ಈ ವಿಚಾರದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾತ್ರವನ್ನು ಗುರುತಿಸಿ, ಒಕ್ಕೂಟ ವ್ಯವಸ್ಥೆಯನ್ನು ಎತ್ತಿಹಿಡಿಯಬೇಕು. ಒಂದು 'ಎಕ್ಸ್' ಪೋಸ್ಟ್‌ನಿಂದ ಅಭಿವೃದ್ಧಿ ಸಾಧ್ಯವಿಲ್ಲ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ



ಸಂಸದ ಕ್ಯಾ. ಬ್ರಿಜೇಶ್ ಚೌಟ ನೇತೃತ್ವದಲ್ಲಿ ಮಂಗಳೂರಿನಲ್ಲಿ ಶನಿವಾರ ನಡೆದ 'ಮಂಗಳೂರು ಕಂಬಳ'ದಲ್ಲಿ ಕೋಣಗಳ ರೋಮಾಂಚನಕಾರಿ ಓಟ –ಚಿತ್ರ: ಫಕ್ರುದ್ದೀನ್ ಎಚ್.

ಮಂಡಲ ಪೂಜೆಗೆ ಸಾಕ್ಷಿಯಾದ ಭಕ್ತರು

ಶಬರಿಮಲೆ(ಪಿಟಿಐ): ಇಲ್ಲಿನ ಅಯ್ಯಪ್ಪ ದೇವಾಲಯದಲ್ಲಿ ಶನಿವಾರ ನಡೆದ ಮಂಡಲ ಪೂಜೆಗೆ ಸಾವಿರಾರು ಭಕ್ತರು ಸಾಕ್ಷಿಯಾದರು. ಈ ಮೂಲಕ 41 ದಿನಗಳಿಂದ ನಡೆದ ವಾರ್ಷಿಕ ತೀರ್ಥಯಾತ್ರೆ ಸಂಪನ್ನಗೊಂಡಿತು.

ಶುಕ್ರವಾರ ಸಂಜೆ ದೇವಾಲಯದ ಸಂಕೀರ್ಣಕ್ಕೆ ಮೆರವಣಿಗೆಯಲ್ಲಿ ತರಲಾದ ಸ್ವರ್ಣವಸ್ತ್ರವನ್ನು ಅಯ್ಯಪ್ಪ ದೇವರ ವಿಗ್ರಹಕ್ಕೆ ಅಲಂಕಾರ ಮಾಡಿ, ಮಂಡಲ ಪೂಜೆ ನೆರವೇರಿಸಲಾಯಿತು. ದೇವಾಲಯದ ತಂತ್ರಿ ಕಂಡರಾರು ಮಹೇಶ್ ಮೋಹನಾರು ಅವರ ನೇತೃತ್ವದಲ್ಲಿ ಶನಿವಾರ ಬೆಳಿಗ್ಗೆ 10.10ರಿಂದ 11.30ರವರೆಗೆ ವಿಧಿವಿಧಾನಗಳನ್ನು ನೆರವೇರಿಸಲಾಯಿತು ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತರು ಹಾಗೂ ಮಾಲೆ ಧರಿಸಿದವರು 'ಇರುಮುಡಿ' ಹೊತ್ತು ದೇವರ ದರ್ಶನಕ್ಕಾಗಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತಿದ್ದರು.

ರಾತ್ರಿ 10 ಗಂಟೆಗೆ 'ಹರಿವರಾಸನಂ' ಪಠಣದ ನಂತರ ಮಂಡಲ ಪೂಜೆ ನೆರವೇರಿಸಲಾಯಿತು. ಬಳಿಕ ಬಾಗಿಲು ಮುಚ್ಚಲಾಯಿತು.

ಹೊರರಾಜ್ಯಕ್ಕೆ ಸ್ಥಗಿತಗೊಂಡ ಸರಬರಾಜು

ಹೆಚ್ಚಿದ ಶೀತ: ಕುಸಿದ ಎಳನೀರು ದರ

• ಜಿ.ಬಿ.ನಾಗರಾಜ್

ದಾವಣಗೆರೆ: ಭಾರಿ ಚಳಿ, ಶೀತದ ವಾತಾವರಣದ ಪರಿಣಾಮವಾಗಿ ಎಳನೀರು ಬೆಲೆ ಕುಸಿದಿದೆ. ₹50ಕ್ಕೆ ಮಾರಾಟವಾಗುತ್ತಿದ್ದ ಎಳನೀರು ಈಗ ಒಂದಕ್ಕೆ ₹30–₹25ಕ್ಕೆ ಇಳಿದಿದೆ. ಹೊರ ರಾಜ್ಯಗಳಿಗೆ ಎಳನೀರು ರವಾನೆ ಬಹುತೇಕ ಸ್ಥಗಿತಗೊಂಡಿದೆ.

ರಾಜ್ಯದಲ್ಲಿ 5.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದ್ದು, 4.73 ಲಕ್ಷ ಹೆಕ್ಟೇರ್ ಪ್ರದೇಶ ಕಪ್ಪುತಲೆ ಹುಳು ಬಾಧೆಯಿಂದ ನಲುಗಿದೆ. ಇಳುವರಿ ಕುಸಿದರೂ ಈಚಿನ ವರ್ಷಗಳಲ್ಲಿ ಎಳನೀರು ಬೆಲೆ ಇಷ್ಟು ಕಡಿಮೆಯಾಗಿರಲಿಲ್ಲ. ಡಿಸೆಂಬರ್‌ನಲ್ಲಿ ತಾಪಮಾನದಲ್ಲಿ ಆಗಿರುವ ಬದಲಾವಣೆ ಎಳನೀರು ದರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಶೀತಗಾಳಿಯಿಂದ ರಾಜ್ಯದಲ್ಲಿ ಚಳಿ ಹೆಚ್ಚಿದೆ. ಮೋಡಕವಿದ ವಾತಾವರಣವಿದ್ದಾಗ ಚಳಿಯ ತೀವ್ರತೆ ಇನ್ನೂ ಹೆಚ್ಚಾಗಿತ್ತು. ಬಿಸಿಲಿನ ತಾಪಮಾನ ಹೆಚ್ಚಿರುವ ಪ್ರದೇಶದಲ್ಲಿಯೂ ಕುಳಿರ್ಗಾಳಿ ಬೀಸುತ್ತಿದೆ. ಇದರಿಂದ ಎಳನೀರಿಗೆ ಬೇಡಿಕೆ ಕುಸಿದಿದೆ. ಆದರೆ, ತೆಂಗಿನ ಕಾಯಿ ಹಾಗೂ ಒಣಕೊಬ್ಬರಿ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ.



ಸಂಗ್ರಹ ಚಿತ್ರ

ದಾವಣಗೆರೆ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ ಸೇರಿದಂತೆ ವಿವಿಧೆಡೆಯ ಎಳನೀರಿಗೆ ಹೊರ ರಾಜ್ಯಗಳಲ್ಲಿ ಬೇಡಿಕೆ ಇದೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಿಗೆ ರವಾನೆ ಆಗುತ್ತದೆ. ಡಿಸೆಂಬರ್ ಮೊದಲ ವಾರದಿಂದ ಈ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಬೆಳೆಗಾರರು 'ಪ್ರಜಾವಾಣಿ'ಗೆ ತಿಳಿಸಿದರು.

ತೆಂಗಿನ ತೋಟಗಳನ್ನು ಗುತ್ತಿಗೆ ಪಡೆದ ಸಗಟು ವ್ಯಾಪಾರಿಗಳು ಎಳನೀರು ಮಾರಲು ಕಷ್ಟಪಡುತ್ತಿದ್ದಾರೆ. ರಸ್ತೆ ಬದಿಯಲ್ಲಿ ಸರಕುಸಾಗಣೆ ವಾಹನ ನಿಲುಗಡೆ ಮಾಡಿ ₹25–₹30ಕ್ಕೆ ಎಳನೀರು ಮಾರುತ್ತಿದ್ದಾರೆ. ತೋಟಗಳನ್ನು ಗುತ್ತಿಗೆ ಪಡೆದ ಇವರು ಪ್ರತಿ ಎಳನೀರನ್ನು ₹15ರಿಂದ ₹20ಕ್ಕೆ ಖರೀದಿಸುತ್ತಿದ್ದಾರೆ. ಸಾಗಣೆ, ಕೂಲಿ ಲೆಕ್ಕಹಾಕಿ ಅಸಲು ದರಕ್ಕೆ ಮಾರುತ್ತಿದ್ದಾರೆ.

ತೆಂಗು ಬೆಳೆಗೆ ಕಪ್ಪುತಲೆ ಹುಳು ಹಾಗೂ ಬಿಳಿ ನೊಣಗಳ ಬಾಧೆ ಕಾಣಿಸಿಕೊಂಡ ಬಳಿಕ ಇಳುವರಿ ಭಾರಿ ಕಡಿಮೆಯಾಗಿದೆ. ಒಂದು ವರ್ಷದಿಂದ ಎಳನೀರು, ಒಣಕೊಬ್ಬರಿ ಹಾಗೂ ತೆಂಗಿನ ಕಾಯಿ ದರ ಏರಿಕೆ ಕಂಡಿತ್ತು. ತೆಂಗು ಬೆಳೆವ ಪ್ರದೇಶದಲ್ಲಿ ಪ್ರತಿ ಎಳನೀರು ₹50ಕ್ಕೆ ಮಾರಾಟವಾಗುತ್ತಿತ್ತು. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ₹40ಕ್ಕೆ ಇಳಿದಿದ್ದ ಬೆಲೆ ನವೆಂಬರ್‌ನಲ್ಲಿ ಮತ್ತೆ ಏರಿಕೆಯಾಗಿತ್ತು.

> ಚಳಿ, ಶೀತದ ವಾತಾವರಣದಿಂದ ಎಳನೀರು ಬೇಡಿಕೆ ಕುಸಿದಿದೆ. ಹೊರರಾಜ್ಯಕ್ಕೆ ರವಾನೆಯಾಗುವುದು ನಿಂತಿದೆ. ಹೀಗಾಗಿ, ಬೆಲೆ ಕಡಿಮೆಯಾಗಿದೆ.
> **ಗಣೇಶ್ ನಾಗನೂರು,** ಎಳನೀರು ವ್ಯಾಪಾರಿ, ದಾವಣಗೆರೆ

'ನರೇಗಾ'ಕ್ಕಾಗಿ ಹೋರಾಟ

ಒಂದನೇ ಪುಟದಿಂದ...

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿಗಳು, ಭಾರತದಲ್ಲಿ ಕ್ರಿಸ್‌ಮಸ್ ಸಮಯದಲ್ಲಿ ಕ್ರೈಸ್ತರ ಮೇಲಿನ ದಾಳಿಗಳು, ಪಕ್ಷದ ಸಾಂಸ್ಥಿಕ ಸಮಸ್ಯೆಗಳು ಮತ್ತು ಮುಂಬರುವ ವಿಧಾನಸಭಾ ಚುನಾವಣೆಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು.

ರಾಹುಲ್ ಗಾಂಧಿ ಜತೆಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಖರ್ಗೆ, 'ಮನರೇಗಾ ರದ್ದು ಮಾಡಿದ್ದಕ್ಕೆ ಜನರು ಕೋಪಗೊಂಡಿದ್ದಾರೆ ಸರ್ಕಾರ ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಬಡವರನ್ನು ಹತ್ತಿಕ್ಕಲು ಹೊಸ ಕಾನೂನು ತರಲಾಗಿದೆ. ಇದರ ವಿರುದ್ಧ ಬೀದಿಗಳಲ್ಲಿ, ಸಂಸತ್ತಿನಲ್ಲಿ ಹೋರಾಟ ನಡೆಸಲಾಗುತ್ತದೆ' ಎಂದರು.

ರಾಜ್ಯಗಳ ಆರ್ಥಿಕ ಸ್ವಾತಂತ್ರ್ಯ ಮೊಟಕುಗೊಳಿಸುವ ಮತ್ತು ಆಯ್ದ ಕೆಲವು ಕಾರ್ಪೊರೇಟ್‌ಗಳಿಗೆ ಲಾಭ ಮಾಡಿಕೊಡುವ ಮೂಲಕ ಅಧಿಕಾರ ಕೇಂದ್ರೀಕರಿಸುವ ಮೋದಿ ಸರ್ಕಾರದ ಹೊಸ ಹುನ್ನಾರ ಇದಾಗಿದೆ ಎಂದು ಖರ್ಗೆ ಕಿಡಿಕಾರಿದರು.

ಉದ್ಯೋಗ ಖಾತರಿ ಯೋಜನೆಯು ಕೇವಲ ಒಂದು ಯೋಜನೆಯಲ್ಲ, ಸಂವಿಧಾನವು ನೀಡಿದ 'ಕೆಲಸದ ಹಕ್ಕು' ಎಂದು ಖರ್ಗೆ ಪ್ರತಿಪಾದಿಸಿದರು.

ಮೋದಿ ಸರ್ಕಾರವು ಮನರೇಗಾ ಕಾಯ್ದೆ ರದ್ದುಗೊಳಿಸಿ ಕೋಟ್ಯಂತರ ಬಡ ಮತ್ತು ದುರ್ಬಲ ಜನರನ್ನು ಅಸಹಾಯಕರನ್ನಾಗಿ ಮಾಡಿದೆ. ಬಡವರ ಬೆನ್ನಿಗೆ ಚೂರಿ ಹಾಕಿದೆ. ಮನರೇಗಾ ರದ್ದುಗೊಳಿಸಿರುವುದು ರಾಷ್ಟ್ರಪಿತ ಮಹಾತ್ಮ ಗಾಂಧಿಗೆ ಮಾಡಿದ ಅವಮಾನ ಎಂದು ಅವರು ಹೇಳಿದರು.

ರಾಜ್ಯಕ್ಕೆ ₹20,000 ಕೋಟಿ ಹೊರೆ

ಒಂದನೇ ಪುಟದಿಂದ...

'ಹೊಸ ಯೋಜನೆಯಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದರೆ ಮಾತ್ರ ಕೆಲಸ ನೀಡಲಾಗುತ್ತದೆ. ಯಾವ ಭಾಗದಲ್ಲಿ ಕೆಲಸ ನೀಡಬೇಕು ಎನ್ನುವುದನ್ನು ಕೇಂದ್ರವೇ ನಿರ್ಧರಿಸುತ್ತದೆ. ಒಬ್ಬ ವ್ಯಕ್ತಿ ಉದ್ಯೋಗ ಖಾತರಿ ಕಾರ್ಡ್ ಹೊಂದಿದ್ದರೆ ಆತ ಎಲ್ಲಿ ಬೇಕಾದರೂ ಕೆಲಸ ಮಾಡುವ ಅವಕಾಶವಿತ್ತು.

ಈಗ ಈ ಅವಕಾಶವನ್ನು ಕಸಿದುಕೊಳ್ಳಲಾಗಿದೆ. ದೇಶದ ಎಲ್ಲ ರಾಜ್ಯಗಳ ಗ್ರಾಮೀಣ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದು, ವಿವಾದಾತ್ಮಕ ಕೃಷಿ ಕಾನೂನುಗಳ ವಿರುದ್ಧ ನಡೆಸಿದ ಹೋರಾಟದಂತೆ ಬೀದಿಗಿಳಿಯಲಿದ್ದಾರೆ' ಎಂದರು.

'ಕೇಂದ್ರ ಸರ್ಕಾರ ಗಾಂಧೀಜಿ ಅವರ ಹೆಸರು ತೆಗೆದಿದೆ ಎಂಬ ಅಂಶವನ್ನಷ್ಟೇ ಕಾಂಗ್ರೆಸ್ ವಿರೋಧ ಮಾಡುತ್ತಿಲ್ಲ. ಬಿಜೆಪಿ, ಆರ್‌ಎಸ್‌ಎಸ್‌ಗೆ ಗಾಂಧೀಜಿ ಮೇಲೆ ದ್ವೇಷ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ದ್ವೇಷವನ್ನು ಗ್ರಾಮೀಣ ಜನರ ಮೇಲೆ ತೀರಿಸಿಕೊಳ್ಳುತ್ತಿರುವುದೇಕೆ? ಬಿಜೆಪಿ, ಸಂಘ ಪರಿವಾರಕ್ಕೆ ನಾಥುರಾಮ್ ಗೋಡ್ಸೆ ಇಷ್ಟವಾದರೆ, ಉದ್ಯೋಗ ಖಾತರಿ ಯೋಜನೆಗೆ 'ವಿಬಿ ಜಿ ರಾಮ್ ಜಿ' ಬದಲು 'ಜಿ ನಾಥುರಾಮ್ ಜಿ' ಅಂತಲೇ ಹೆಸರಿಡಲಿ, ಆದರೆ ಜನರ ಬದುಕನ್ನು ಕಸಿದುಕೊಳ್ಳುವುದು ಬೇಡ' ಎಂದು ಒತ್ತಾಯಿಸಿದರು.

'ನೋಟು ರದ್ದತಿಯಂತೆಯೇ ವಿನಾಶಕಾರಿ ದಾಳಿ'

ಪ್ರಧಾನಿ ನರೇಂದ್ರ ಮೋದಿ ತಮ್ಮ ಸಚಿವ ಸಂಪುಟ ಅಥವಾ ರಾಜ್ಯಗಳೊಂದಿಗೆ ಸಮಾಲೋಚಿಸದೆ ಮತ್ತು ಈ ವಿಷಯವನ್ನು ಅಧ್ಯಯನ ಮಾಡದೆ ಮನರೇಗಾವನ್ನು ಒಬ್ಬಂಟಿಯಾಗಿ ನಾಶಪಡಿಸಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಇದು ಗ್ರಾಮೀಣ ಆರ್ಥಿಕತೆ ಹಾಳುಮಾಡುವ ಪ್ರಜಾಪ್ರಭುತ್ವ ರಚನೆಯ ಮೇಲಿನ ದಾಳಿಯಾಗಿದೆ ಎಂದು ದೂಷಿಸಿದರು.

ಹೊಸ ಕಾಯ್ದೆಯು ದುರ್ಬಲ ವರ್ಗಗಳಿಗೆ, ಆದಿವಾಸಿಗಳಿಗೆ, ದಲಿತರಿಗೆ, ಒಬಿಸಿಗಳಿಗೆ, ಸಾಮಾನ್ಯ ವರ್ಗದ ಬಡವರು ಮತ್ತು ಅಲ್ಪಸಂಖ್ಯಾತರಿಗೆ ಅಪಾರ ನೋವನ್ನುಂಟು ಮಾಡುತ್ತದೆ ಮತ್ತು ಅದಾನಿಗೆ ಪೂರ್ಣ ಪ್ರಮಾಣದಲ್ಲಿ ಪ್ರಯೋಜನ ನೀಡಲಿದೆ ಎಂದು ಅವರು ಎಚ್ಚರಿಸಿದರು. ಬಡ ಜನರಿಂದ ಹಣ ತೆಗೆದುಕೊಂಡು ಅದಾನಿಯಂತಹ ಜನರಿಗೆ ಹಸ್ತಾಂತರಿಸುವುದು ಈ ಕಾಯ್ದೆಯ ಉದ್ದೇಶ ಎಂದರು.

'ವಿಬಿ–ಜಿ ರಾಮ್ ಜಿ' ಕಾಯ್ದೆಯು ರಾಜ್ಯಗಳ ಮೇಲೆ ದಾಳಿಯಾಗಿದೆ. ರಾಜ್ಯಕ್ಕೆ ಸೇರಿದ ಹಣವನ್ನು ಮತ್ತು ರಾಜ್ಯಕ್ಕೆ ಸೇರಿದ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ಕೇಂದ್ರ ಕಸಿದುಕೊಂಡಿದೆ. ಇದು ಆ ರಾಜ್ಯಗಳ ಮೂಲಸೌಕರ್ಯದ ಮೇಲೆ ದಾಳಿಯಾಗಿದೆ. ಏಕೆಂದರೆ, ಮನರೇಗಾ ಯೋಜನೆ ಮೂಲಕ ಮೂಲಸೌಕರ್ಯ ನಿರ್ಮಿಸಲಾಗುತ್ತಿತ್ತು. ನೋಟು ರದ್ದತಿಯ ಮಾದರಿಯಲ್ಲೇ ಮೋದಿ ಅವರು ಏಕಾಂಗಿಯಾಗಿ ಮನರೇಗಾ ಕಾಯ್ದೆ ರದ್ದುಗೊಳಿಸಿ ದೇಶದ ಬಡ ಜನರ ಮೇಲೆ ವಿನಾಶಕಾರಿ ದಾಳಿ ಮಾಡಿದ್ದಾರೆ ಎಂದರು.

ಕಾಯ್ದೆ ವಿರುದ್ಧ ಕಾಂಗ್ರೆಸ್ ಹೋರಾಡುತ್ತದೆ ಮತ್ತು ಮೋದಿ ಕ್ರಮದ ವಿರುದ್ಧ ಇಡೀ ವಿರೋಧ ಪಕ್ಷವು ಒಗ್ಗೂಡುತ್ತದೆ ಎಂಬ ವಿಶ್ವಾಸವಿದೆ ಎಂದು ರಾಹುಲ್ ಹೇಳಿದರು.

'ಸಂಘ'ಕ್ಕೆ ದಿಗ್ವಿಜಯ್ ಶ್ಲಾಘನೆ

ಒಂದನೇ ಪುಟದಿಂದ...

ಇದು 'ಸತ್ಯದ ಬಾಂಬ್'– ಬಿಜೆಪಿ: ಸಿಂಗ್ ಅವರ ಈ ಪೋಸ್ಟ್ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡಿದೆ. ಅದು ನಿರಂಕುಶಾಧಿಕಾರ ಮತ್ತು ಪ್ರಜಾಪ್ರಭುತ್ವ ವಿರೋಧಿ ಕಾಂಗ್ರೆಸ್ ನಾಯಕತ್ವವನ್ನು ಬಹಿರಂಗಪಡಿಸಿದೆ. ದಿಗ್ವಿಜಯ್ ಅವರ ಈ 'ಸತ್ಯದ ಬಾಂಬ್'ಗೆ ರಾಹುಲ್ ಪ್ರತಿಕ್ರಿಯಿಸುವ ಧೈರ್ಯ ತೋರುತ್ತಾರೆಯೇ ಎಂದು ಬಿಜೆಪಿ ವಕ್ತಾರ ಸಿ.ಆರ್.ಕೇಶವನ್ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್‌ನ ಮೊದಲ ಕುಟುಂಬವು ಪಕ್ಷವನ್ನು ಹೇಗೆ ನಿರ್ದಯವಾಗಿ ಸರ್ವಾಧಿಕಾರಿ ರೀತಿಯಲ್ಲಿ ನಡೆಸಿಕೊಂಡಿದೆ ಎಂಬುದನ್ನು ಈ ಪೋಸ್ಟ್ ಬಹಿರಂಗಪಡಿಸಿದೆ ಎಂದು ಅವರು ಹೇಳಿದ್ದಾರೆ.

ಸಿಂಗ್ ಅವರು ತಮ್ಮ ಈ ಪೋಸ್ಟ್ ಅನ್ನು ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಖಾತೆಗಳಿಗೆ, ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ಸಂಸದರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ 'ಟ್ಯಾಗ್' ಮಾಡಿದ್ದಾರೆ. ಈ ಮೂಲಕ ಅವರು ಹೈಕಮಾಂಡ್‌ಗೆ ಸಂದೇಶ ರವಾನಿಸಿದ್ದಾರೆ ಎಂದು ಬಿಜೆಪಿ ಹೇಳಿದೆ.

ಎರಡನೇ ಬಾರಿ ರಾಜ್ಯಸಭಾ ಸದಸ್ಯರಾಗಿರುವ ದಿಗ್ವಿಜಯ್ ಸಿಂಗ್ ಅವರ ಅಧಿಕಾರಾವಧಿ 2026ರ ಆರಂಭದಲ್ಲಿ ಕೊನೆಗೊಳ್ಳಲಿದೆ. ಅವರು ಮೂರನೇ ಅವಧಿಗೆ ಆಯ್ಕೆಯಾಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ಈಗಾಗಲೇ ಕಮಲನಾಥ್ ಮತ್ತು ಮೀನಾಕ್ಷಿ ನಟರಾಜನ್ ಅವರು ಈ ಸ್ಥಾನಕ್ಕಾಗಿ ಪೈಪೋಟಿಯಲ್ಲಿದ್ದಾರೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಿಂಗ್ ಅವರ ನಡೆಯನ್ನು ಗುರುತಿಸಬೇಕಾಗುತ್ತದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದ್ದಾರೆ.



ದಿಗ್ವಿಜಯ್ ಸಿಂಗ್ ಎಕ್ಸ್ ಪೋಸ್ಟ್

ಮೋದಿ ಉದಯ ದಾಖಲಿಸುವ ಚಿತ್ರ

ಸಿಂಗ್ ಅವರು ಹಂಚಿಕೊಂಡಿರುವ ಈ ಫೋಟೊ 1990ರ ದಶಕದಲ್ಲಿ ಗುಜರಾತ್ ರಾಜಕೀಯದಲ್ಲಿ ಮೋದಿ ಅವರ ಉದಯವನ್ನು ದಾಖಲಿಸುವ ಮಹತ್ವದ ದೃಶ್ಯವಾಗಿದೆ. ಅದು 1996ರಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿ ಶಂಕರ್‌ಸಿನ್ಹ ವಘೇಲ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಸೆರೆಹಿಡಿದ ಚಿತ್ರವಾಗಿದೆ ಎಂದು ವರದಿಯಾಗಿದೆ.

'ರಾಹುಲ್ ಮನವೊಲಿಸುವುದು ಸುಲಭವಲ್ಲ'

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಡಿ. 19ರಂದು ಪತ್ರ ಬರೆದಿದ್ದ ದಿಗ್ವಿಜಯ್ ಸಿಂಗ್ ಅವರು ಕಾಂಗ್ರೆಸ್‌ನೊಳಗೆ ಸುಧಾರಣೆಗಳು ಆಗಬೇಕಿವೆ ಎಂದು ಪ್ರತಿಪಾದಿಸಿದ್ದರು. 'ಪಕ್ಷಕ್ಕೆ ಹೆಚ್ಚು ಪ್ರಾಯೋಗಿಕ, ವಿಕೇಂದ್ರೀಕೃತ ಕಾರ್ಯ ನಿರ್ವಹಣೆಯ ಅಗತ್ಯವಿದೆ. ಅದನ್ನು ನೀವು ಮಾಡುತ್ತೀರಿ ಎಂಬ ವಿಶ್ವಾಸವಿದೆ. ಆದರೆ ಸಮಸ್ಯೆ ಏನೆಂದರೆ, ನಿಮ್ಮನ್ನು ಮನವೊಲಿಸುವುದು ಸುಲಭವಲ್ಲ' ಎಂದಿದ್ದರು. ಅದನ್ನು ಅವರು ಪೋಸ್ಟ್‌ನಲ್ಲೂ ಉಲ್ಲೇಖಿಸಿದ್ದಾರೆ.

'ರಾಹುಲ್ ಗಾಂಧಿ ಅವರು ದೇಶದಾದ್ಯಂತ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ, ಆದರೆ ಅವರ ಪಕ್ಷದೊಳಗೆ ಪ್ರಜಾಪ್ರಭುತ್ವ ಎಷ್ಟು ಚಾಲ್ತಿಯಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿದೆ' ಎಂದು ಬಿಜೆಪಿ ಕಿಡಿಕಾರಿದೆ.


ಚುನಾವಣಾ ಆಯೋಗದ ಕಚೇರಿಗೆ ಭೇಟಿ: ಬಯೋಮೆಟ್ರಿಕ್ ವಿವರ ಸಲ್ಲಿಕೆ

ಮತದಾರರ ಪಟ್ಟಿ ಸೇರಿದ ತಾರಿಕ್

ಢಾಕಾ/ನವದೆಹಲಿ (ಪಿಟಿಐ): ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರು ಬಾಂಗ್ಲಾದೇಶದ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಹಾಗೂ ರಾಷ್ಟ್ರೀಯ ಗುರುತಿನ ಚೀಟಿ (ಎನ್‌ಐಡಿ) ಪಡೆಯಲು ಅಗತ್ಯವಿರುವ ಪ್ರಕ್ರಿಯೆಯನ್ನು ಶನಿವಾರ ಪೂರ್ಣಗೊಳಿಸಿದರು.

ಸ್ವಯಂ ಗಡಿಪಾರಾಗಿ 17 ವರ್ಷಗಳ ಬಳಿಕ ಲಂಡನ್‌ನಿಂದ ತವರಿಗೆ ಮರಳಿದ ತಾರಿಕ್, ಎರಡು ದಿನಗಳ ನಂತರ ಢಾಕಾದಲ್ಲಿರುವ ಚುನಾವಣಾ ಆಯೋಗದ (ಇ.ಸಿ) ಕಚೇರಿಗೆ ಭೇಟಿ ನೀಡಿದರು. ಅಲ್ಲಿ ಬಯೋಮೆಟ್ರಿಕ್ ದಾಖಲಾತಿಗಾಗಿ ಬೆರಳಚ್ಚು ಮತ್ತು ಕಣ್ಣಿನ ಪಾಪೆ ಸ್ಕ್ಯಾನ್ ಮಾಡಲಾಯಿತು.

'ತಾರಿಕ್ ಈಗಾಗಲೇ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿದ್ದಾರೆ. ಬಯೋಮೆಟ್ರಿಕ್ ದಾಖಲಿಸುವ ಮೂಲಕ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅವರು ಬಂದಿದ್ದರು. ಅವರಿಗೆ 24 ಗಂಟೆಗಳೊಳಗೆ ಎನ್‌ಐಡಿ ಕಾರ್ಡ್ ನೀಡಲಾಗುವುದು' ಎಂದು ಚುನಾವಣಾ ಆಯೋಗದ ರಾಷ್ಟ್ರೀಯ ಗುರುತಿನ ನೋಂದಣಿ ವಿಭಾಗದ ಮಹಾನಿರ್ದೇಶಕ ಎ.ಎಸ್.ಎಂ ಹುಮಾಯೂನ್ ಕಬೀರ್ ತಿಳಿಸಿದ್ದಾರೆ.



ತಾರಿಕ್ ರೆಹಮಾನ್

ತಾರಿಕ್ ಅವರ ಪುತ್ರಿ ಜೈಮಾ ಕೂಡ ಎನ್‌ಐಡಿ ಕಾರ್ಡ್‌ಗಾಗಿ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು.

ಇ.ಸಿ ಕಚೇರಿ ಆವರಣದ ಸುತ್ತಲೂ ಸೇನಾಪಡೆ, ಕ್ಷಿಪ್ರ ಕಾರ್ಯಪಡೆ ಮತ್ತು ಪೊಲೀಸರನ್ನು ನಿಯೋಜಿಸಲಾಗಿತ್ತು.

ಬಂಗಾಳಿ ದಿನಪತ್ರಿಕೆ 'ಪ್ರೊಥೊಮ್ ಅಲೊ' ವರದಿಯ ಪ್ರಕಾರ, ಬಾಂಗ್ಲಾದೇಶದಲ್ಲಿ 2007–2008ರ ರಾಜಕೀಯ ಬಿಕ್ಕಟ್ಟಿನ ನಂತರ ಫಕ್ರುದ್ದೀನ್ ಅಹ್ಮದ್ ನೇತೃತ್ವದ ಮಿಲಿಟರಿ ಬೆಂಬಲಿತ ಸರ್ಕಾರದ ಅವಧಿಯಲ್ಲಿ ಛಾಯಾಚಿತ್ರ ಮತ್ತು ಬಯೋಮೆಟ್ರಿಕ್ ಒಳಗೊಂಡ ಮತದಾರರ ಪಟ್ಟಿಯನ್ನು 2008ರಲ್ಲಿ ಮೊದಲಿಗೆ ಪರಿಚಯಿಸಲಾಗಿತ್ತು.

ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಆ ಸಮಯದಲ್ಲಿ ರಾಜಕೀಯ ಕೈದಿಯಾಗಿದ್ದರು. ಜೈಲಿನಿಂದ ಬಿಡುಗಡೆಯಾದ ನಂತರ, 2008ರ ಸೆಪ್ಟೆಂಬರ್ 11ರಂದು ಲಂಡನ್‌ಗೆ ತೆರಳಿದ್ದರು. ಹೀಗಾಗಿ, ಮತದಾರರ ಪಟ್ಟಿಗೆ ಹೆಸರು ಸೇರಿಸಿರಲಿಲ್ಲ. ನಂತರದ ಶೇಖ್ ಹಸೀನಾ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅವರು ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಲು ಬಾಂಗ್ಲಾದೇಶಕ್ಕೆ ಹಿಂದಿರುಗಿರಲಿಲ್ಲ.

ಮುಖ್ಯಾಂಶಗಳು

- 17 ವರ್ಷಗಳ ಬಳಿಕ ಲಂಡನ್‌ನಿಂದ ತವರಿಗೆ ಮರಳಿದ್ದ ತಾರಿಕ್
- ಇ.ಸಿ ಕಚೇರಿ ಆವರಣದ ಸುತ್ತಲೂ ಬಿಗಿ ಭದ್ರತೆ
- ಬೊಗುರಾ ಸದರ್ ಕ್ಷೇತ್ರದಿಂದ ತಾರಿಕ್ ಸ್ಪರ್ಧೆ

20 ವಿದ್ಯಾರ್ಥಿಗಳಿಗೆ ಗಾಯ

ಢಾಕಾ (ಪಿಟಿಐ): ಬಾಂಗ್ಲಾದೇಶದ ಶಾಲೆಯೊಂದರಲ್ಲಿ ಪ್ರಸಿದ್ಧ ಗಾಯಕ ಜೇಮ್ಸ್ ಅವರ ಕಾರ್ಯಕ್ರಮಕ್ಕೂ ಮುನ್ನ ನಡೆದ ದಾಳಿಯಲ್ಲಿ 20 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

'ಫರೀದಪುರದಲ್ಲಿನ ಝಿಲ್ಲಾ ಶಾಲೆಯಲ್ಲಿ ಶುಕ್ರವಾರ ರಾತ್ರಿ 185ನೇ ವಾರ್ಷಿಕೋತ್ಸವ ನಡೆಯುತ್ತಿತ್ತು. ಈ ವೇಳೆ ದಾಳಿ ನಡೆದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕಾರ್ಯಕ್ರಮ ಆರಂಭವಾಗುವ ಮೊದಲು ಬಲವಂತವಾಗಿ ಒಳನುಗ್ಗಲು ಬಂದ ಒಂದು ಗುಂಪನ್ನು ತಡೆಯಲಾಗಿತ್ತು. ಬಳಿಕ ಆ ಗುಂಪಿನವರು ಇಟ್ಟಿಗೆ ಮತ್ತು ಕಲ್ಲುಗಳನ್ನು ಎಸೆದು, ವೇದಿಕೆಯತ್ತ ನುಗ್ಗಲು ಮುಂದಾದರು. ಆಗ ಕೆಲ ವಿದ್ಯಾರ್ಥಿಗಳು ಅವರನ್ನು ತಡೆಯಲು ಪ್ರಯತ್ನಿಸಿದ್ದರು. ಈ ವೇಳೆ ಕಲ್ಲು ಮತ್ತು ಇಟ್ಟಿಗೆ ಬಿದ್ದು ಸುಮಾರು 20 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ' ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

ಗಾಯಗೊಂಡವರ ನಿಖರ ಸಂಖ್ಯೆ ತಿಳಿದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾಡಳಿತದ ಆದೇಶದಂತೆ ಜೇಮ್ಸ್ ಅವರ ಗಾಯನ ಕಾರ್ಯಕ್ರಮವನ್ನು ರದ್ದುಗೊಳಿಸಲಾಯಿತು. ಬಾಂಗ್ಲಾದೇಶದಲ್ಲಿ ಸಾಂಸ್ಕೃತಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ನಡೆಸುವ ದಾಳಿಗಳು ಇತ್ತೀಚೆಗೆ ಹೆಚ್ಚಾಗಿವೆ.

ಯಶಸ್ಸಿನ ಓಟ ಮುಂದುವರಿಸುವತ್ತ ಚಿತ್ತ

ವನಿತೆಯರ ಟಿ20 ನಾಲ್ಕನೇ ಪಂದ್ಯ ಇಂದು
ಹರ್ಮನ್‌ಪ್ರೀತ್ ಪಡೆಗೆ ಶ್ರೀಲಂಕಾ ಸವಾಲು

ತಿರುವನಂತಪುರಂ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಸರಣಿಯನ್ನು ಈಗಾಗಲೇ ಕೈವಶ ಮಾಡಿಕೊಂಡಿದೆ. ಇದೀಗ ಕ್ಲೀನ್‌ಸ್ವೀಪ್ ಮಾಡುವತ್ತ ಚಿತ್ತನೆಟ್ಟಿದೆ.

ಅದರಿಂದಾಗಿ ಭಾನುವಾರ ಇಲ್ಲಿ ನಡೆಯಲಿರುವ ನಾಲ್ಕನೇ ಪಂದ್ಯದಲ್ಲಿ ಮತ್ತು 30ರಂದು ನಡೆಯಲಿರುವ ಕೊನೆಯ ಪಂದ್ಯದಲ್ಲಿ ಗೆಲ್ಲುವ ಛಲದಲ್ಲಿ ಆತಿಥೇಯ ಬಳಗವಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಫೀಲ್ಡಿಂಗ್‌ನಲ್ಲಿ ಒಂದಿಷ್ಟು ಲೋಪಗಳನ್ನು ಎಸಗಿದ್ದ ಭಾರತದ ಆಟಗಾರ್ತಿಯರು ನಂತರದ ಪಂದ್ಯಗಳಲ್ಲಿ ಸುಧಾರಣೆ ಮಾಡಿ ಕೊಂಡಿದ್ದಾರೆ. ಬ್ಯಾಟಿಂಗ್‌ನಲ್ಲಿಯೂ ಪಾರಮ್ಯ ಮೆರೆದಿದ್ದಾರೆ. ಸರಣಿಯ ಯಾವುದೇ ಪಂದ್ಯದಲ್ಲಿಯೂ 14.4 ಓವರ್‌ಗಿಂತ ಹೆಚ್ಚು ಬ್ಯಾಟಿಂಗ್ ಮಾಡಿಯೇ ಇಲ್ಲ. ಮೂರಕ್ಕಿಂತ ಹೆಚ್ಚು ವಿಕೆಟ್ ಕೂಡ ಕಳೆದುಕೊಂಡಿಲ್ಲ. 129 ರನ್‌ಗಳ ಗರಿಷ್ಠ ಗುರಿಯನ್ನು ಎದುರಿಸಿ ಗೆದ್ದಿದೆ.

ಅನುಭವಿ ಸ್ಪಿನ್ನರ್ ದೀಪ್ತಿ ಶರ್ಮಾ ಎರಡು ಪಂದ್ಯಗಳಿಂದ ನಾಲ್ಕು ಹಾಗೂ ಮಧ್ಯಮವೇಗಿ ರೇಣುಕಾ ಸಿಂಗ್ ಅವರು ಒಂದೇ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳನ್ನು ಗಳಿಸಿದ್ದಾರೆ. ಕಳೆದೆಲ್ಲ ಪಂದ್ಯಗಳಲ್ಲಿಯೂ ಹರ್ಮನ್‌ಪ್ರೀತ್ ಕೌರ್ ಅವರು ಟಾಸ್ ಗೆದ್ದಿರುವುದು ಕೂಡ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಬೌಲರ್‌ಗಳು ತಮ್ಮ ನಾಯಕಿಯ ನಿರ್ಧಾರವನ್ನು ಸಮರ್ಥಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಶ್ರೀಲಂಕಾದ ಯಾವುದೇ ಬ್ಯಾಟರ್ ಕೂಡ ವೈಯಕ್ತಿಕವಾಗಿ 40ಕ್ಕಿಂತ ಹೆಚ್ಚು ರನ್ ಗಳಿಸಿಲ್ಲ. ಮೊದಲೆರಡು ಪಂದ್ಯಗಳಲ್ಲಿ ಅರುಂಧತಿ ರೆಡ್ಡಿ ಆಡಿದ್ದರು. ನಂತರದ ಪಂದ್ಯದಲ್ಲಿ ರೇಣುಕಾ ಕಣಕ್ಕಿಳಿದು, ಅರುಂಧತಿ ವಿಶ್ರಾಂತಿ ಪಡೆದಿದ್ದರು. ಈ ಪ್ರಯೋಗವು ಫಲ ಕೊಟ್ಟಿದೆ.

ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಮತ್ತು ಮಧ್ಯಮ ಕ್ರಮಾಂಕದ ಜೆಮಿಮಾ ರಾಡ್ರಿಗಸ್ ತಲಾ ಒಂದು ಅರ್ಧಶತಕ ಗಳಿಸಿ ಉತ್ತಮ ಲಯದಲ್ಲಿದ್ದಾರೆ. ಎಡಗೈ ಬ್ಯಾಟರ್ ಸ್ಮೃತಿ ಮಂದಾನ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ಅನುಭವಿ ಆಟಗಾರ್ತಿ ಚಾಮರಿ ಅಟಪಟ್ಟು ನಾಯಕತ್ವದ ಲಂಕಾ ತಂಡಕ್ಕೆ ಸರಣಿ ಗೆಲುವಿನ ಅವಕಾಶ ಕೈತಪ್ಪಿದೆ. ಆದರೆ ಸಮಾಧಾನಕರ ಗೆಲುವಿಗಾಗಿ ಪ್ರಯತ್ನಿಸಲು ಅವಕಾಶವಿದೆ. ತಂಡದ ಪ್ರತಿಭಾನ್ವಿತ ಆಟಗಾರ್ತಿಯರಾದ ಹಾಸಿನಿ ಪೆರೆರಾ, ಕವಿಶಾ ದಿಲ್ಹಾರಿ ಮತ್ತು ಹರ್ಷಿತಾ ಸಮರವಿಕ್ರಮ ಅವರು ಪುಟಿದೆದ್ದರೆ ತಂಡದ ಬಲ ಹೆಚ್ಚಬಹುದು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್



ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಪಿಟಿಐ ಚಿತ್ರ

ಹೈದರಾಬಾದಿನಲ್ಲಿ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್
ಕರ್ನಾಟಕದ ರೇಣುಕಾಚಾರ್ಯ, ಅದಿತಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರೇಣುಕಾಚಾರ್ಯ ಹೊದಮನಿ ಮತ್ತು ಅದಿತಿ ವಿನಾಯಕ ರೆಲೆಕರ್ ಅವರು ಹೈದರಾಬಾದಿನ ಗಚ್ಚಿಬೌಲಿಯಲ್ಲಿ ಶನಿವಾರ ನಡೆದ 36ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಚಿನ್ನಗೆದ್ದರು.

15 ರಿಂದ 17 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ 1500 ಮೀಟರ್ ಫ್ರೀಸ್ಟೈಲ್‌ನಲ್ಲಿ ರೇಣುಕಾಚಾರ್ಯ ಹಾಗೂ ಬಾಲಕಿಯರ ವಿಭಾಗದಲ್ಲಿ ಅದಿತಿ ಪ್ರಥಮ ಸ್ಥಾನ ಗಳಿಸಿದರು. ಎಲ್ಲ ಸ್ಪರ್ಧೆಗಳೂ ಲಾಂಗ್‌ಕೋರ್ಸ್ ಈಜುಕೊಳದಲ್ಲಿ ನಡೆದವು.

ಫಲಿತಾಂಶಗಳು: ಬಾಲಕರು (ಗುಂಪು1):1500 ಮೀ ಫ್ರೀಸ್ಟೈಲ್: ರೇಣುಕಾಚಾರ್ಯ ಹೊದಮನಿ–1, ಅಕ್ಷಜ್ ಪರಿಗಿ (ಇಬ್ಬರೂ ಕರ್ನಾಟಕ)–2, ಸಾಯಿ ಸ್ಮರಣ್ ನೆಲ್ಲೂರಿ (ತಮಿಳುನಾಡು)–3 ಕಾಲ: 17ನಿ,28.98ಸೆ.

400 ಮೀ ಫ್ರೀಸ್ಟೈಲ್ (ಗುಂಪು 2): ಶ್ರೇಯಸ್ ಸುನಿಲ್ (ಕರ್ನಾಟಕ)–1, ಎಸ್. ಚಾರುತಕ್ಷಣ (ತಮಿಳುನಾಡು)–2, ಜಿ.ಡಿ. ರೋಹನ್ (ಕರ್ನಾಟಕ)–3, ಕಾಲ: 4ನಿ,29.70ಸೆ.

200 ಮೀ ಫ್ರೀಸ್ಟೈಲ್ (ಗುಂಪು3): ಎಂ. ಚಿರಂತ್ (ಕರ್ನಾಟಕ)–1, ಲೋಹಿತಾಶ್ವ ನಾಗೇಶ್ (ಕರ್ನಾಟಕ)–2, ಮಾನವ್ ಕೆ ರಾಜೇಶ್ (ಕೇರಳ)–3 ಕಾಲ: 2ನಿ,15.96ಸೆ.

200 ಮೀ ಬ್ರೆಸ್ಟ್‌ಸ್ಟ್ರೋಕ್ (ಗುಂಪು1): ಸಾಯೀಶ್ ಕಿಣಿ (ಕರ್ನಾಟಕ)–1 ಕಾಲ: 2ನಿ,30.10ಸೆ.

200 ಮೀ ಬ್ರೆಸ್ಟ್‌ಸ್ಟ್ರೋಕ್ (ಗುಂಪು2): ಪಿ.ಪಿ. ಅಭಿಜೀತ್ (ಕೇರಳ)–1, ಸಿದ್ಧಾಂತ್ ಸಿಂಗ್ (ಕರ್ನಾಟಕ)–2, ಚಿರಾಯು ಟಿ ಜೀವನ್ (ಕರ್ನಾಟಕ)–3 ಕಾಲ: 2ನಿ,43.42ಸೆ.

50 ಮೀ ಬಟರ್‌ಫ್ಲೈ (ಗುಂಪು2): ಎಸ್. ಕ್ರಿಷ್ (ಕರ್ನಾಟಕ)–1, ಇಶಾನ್ (ಕೇರಳ)–2, ಜಿ.ಲಕ್ಷ್ಯ (ಕರ್ನಾಟಕ)–3 ಕಾಲ: 28.17ಸೆ.

4x100 ಮೆಡ್ಲೆ ರಿಲೆ (ಗುಂಪು 1): ಕರ್ನಾಟಕ–1, ತೆಲಂಗಾಣ–2, ಕೇರಳ–3. ಕಾಲ: 4 ನಿ.09.88ಸೆ.

4x100 ಮೆಡ್ಲೆ ರಿಲೆ (ಗುಂಪು 2): ಕರ್ನಾಟಕ–1, ಕೇರಳ–2, ತಮಿಳುನಾಡು–3. ಕಾಲ: 4 ನಿಮಿಷ 24.75ಸೆ.

ಬಾಲಕಿಯರು (ಗುಂಪು 1): 1500 ಮೀ ಫ್ರೀಸ್ಟೈಲ್: ಅದಿತಿ ವಿನಾಯಕ ರೆಲೆಕರ್ (ಕರ್ನಾಟಕ)–1, ಪ್ರತೀಕ್ಷಾ ಎನ್ ಗೌಡ (ಕರ್ನಾಟಕ)–2, ಲಿಖಿತಾ ಜಿ ಮೆರುಪುಲಾ (ತೆಲಂಗಾಣ)–3 ಕಾಲ: 19ನಿ,09.58ಸೆ.

400 ಮೀ ಫ್ರೀಸ್ಟೈಲ್ (ಗುಂಪು 2): ತನ್ವಿ ಗೌರವ್ (ಕರ್ನಾಟಕ)–1, ಐದಿಕಾ ಭಟ್ (ಕರ್ನಾಟಕ)–2, ಐಒನಾ ಶಿಜು (ತೆಲಂಗಾಣ)–3 ಕಾಲ: 4ನಿ,57.66ಸೆ.

200 ಮೀ ಫ್ರೀಸ್ಟೈಲ್ (ಗುಂಪು 3): ಆರ್. ವಿದುಲಾ (ಕರ್ನಾಟಕ)–1, ಉನ್ನತಿ ರಾವ್ (ಕರ್ನಾಟಕ)–2, ವಿ. ಶ್ರೀಹರಿಣಿ (ತಮಿಳುನಾಡು)–3. ಕಾಲ: 2ನಿ,24.13ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್ (ಗುಂಪು3): ಧ್ರುತಿ ಅಭಿಲಾಶ್ (ಕರ್ನಾಟಕ)–1, ಸಂಯುಕ್ತ ಕಾರ್ತಿಕೇಯನ್ (ತೆಲಂಗಾಣ)–2, ಸಿಂಧುರಾ ಕೊಂಗರಾ (ಆಂಧ್ರ)–3 ಕಾಲ; 1ನಿ,26.75ಸೆ.

50 ಮೀ ಬಟರ್‌ಫ್ಲೈ: ಮಾನ್ಯಾ ಆರ್ ವಾಧ್ವಾ (ಕರ್ನಾಟಕ)–1, ಆದ್ಯಾ ಭಾರದ್ವಾಜ್ (ಕರ್ನಾಟಕ)–2, ದಿತ್ಯಾ ವೆಮುಲಪಲ್ಲಿ (ತೆಲಂಗಾಣ)–3 ಕಾಲ: 31.06ಸೆ.

4x100 ಮೆಡ್ಲೆ ರಿಲೆ (ಗುಂಪು 1): ಕರ್ನಾಟಕ–1, ತೆಲಂಗಾಣ–2, ಕೇರಳ–3. ಕಾಲ: 4 ನಿ. 52.41ಸೆ.

4x100 ಮೆಡ್ಲೆ ರಿಲೆ (ಗುಂಪು 2): ಕರ್ನಾಟಕ–1, ಕೇರಳ–2, ತೆಲಂಗಾಣ–3. ಕಾಲ: 4 ನಿಮಿಷ 50.42ಸೆ.

ರಾಷ್ಟ್ರೀಯ ಶೂಟಿಂಗ್: ಅನುಷ್ಕಾಗೆ ಎರಡು ಪದಕ
ತಿಲೋತ್ತಮಾ ಸೇನ್‌ಗೆ ತ್ರಿವಳಿ ಚಿನ್ನ

ಭೋಪಾಲ್ (ಪಿಟಿಐ): ಬೆಂಗಳೂರಿನ ಹದಿಹರೆಯದ ಶೂಟರ್ ತಿಲೋತ್ತಮಾ ಸೇನ್, ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಏಕಾಗ್ರತೆಯಿಂದ ಶೂಟ್ ಮಾಡಿ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಕೂಟದಲ್ಲಿ ಒಟ್ಟು ಮೂರು ಸ್ವರ್ಣ ತಮ್ಮದಾಗಿಸಿಕೊಂಡರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾದಲ್ಲಿ ಸ್ಥಾನ ಪಡೆದ ಅತಿ ಕಿರಿಯ ಶೂಟರ್ ಎನಿಸಿದ್ದ 17 ವರ್ಷ ವಯಸ್ಸಿನ ತಿಲೋತ್ತಮಾ 466.9 ಸ್ಕೋರ್‌ನೊಡನೆ ಅಗ್ರಸ್ಥಾನ ಪಡೆದರು. ಕೇರಳದ ವಿದರ್ಸಾ ಕೆ.ವಿನೋದ್ (462.9) ಬೆಳ್ಳಿ ಮತ್ತು ರೈಲ್ವೇಸ್‌ನ ಅನುಭವಿ ಅಯೋನಿಕಾ ಪಾಲ್ (451.8) ಮೂರನೇ ಕಂಚಿನ ಪದಕ ಗಳಿಸಿದರು.

ಇದಕ್ಕೆ ಮೊದಲು ಅರ್ಹತಾ ಸುತ್ತಿನಲ್ಲಿ ತಿಲೋತ್ತಮಾ ಅವರು 591 ಸ್ಕೋರ್ ಗಳಿಸಿ ಅಗ್ರಸ್ಥಾನ ಪಡೆದಿದ್ದರು. ನಿಂತು, ಮಂಡಿಯೂರಿ, ಮತ್ತು ಮಕಾಡೆ ಮಲಗಿದ ಸ್ಥಿತಿ– ಈ ಮೂರೂ ವಿಭಾಗಗಳಲ್ಲಿ ಮುನ್ನಡೆ ಸಾಧಿಸಿದರು. ಕರ್ನಾಟಕದವರೇ ಆದ ಅನುಷ್ಕಾ ತೋಕೂರು 588ರ ಸ್ಕೋರ್‌ನೊಡನೆ ಮೂರನೇ ಸ್ಥಾನ ಗಳಿಸಿದ್ದರು. ಫೈನಲ್‌ನಲ್ಲಿ ಅವರು ಸ್ವಲ್ಪದರಲ್ಲೇ ಪದಕ ಕಳೆದು ಕೊಂಡು ನಾಲ್ಕನೇ ಸ್ಥಾನಕ್ಕೆ ಸರಿದರು.

ಆದರೆ ಜೂನಿಯರ್ ಮಹಿಳೆಯರ ವಿಭಾಗದ ಇದೇ ಸ್ಪರ್ಧೆಯಲ್ಲಿ ಅನುಷ್ಕಾ (447.6) ಕಂಚಿನ ಪದಕ ಗೆದ್ದರು. ಸೇನೆಯ ರಿತುಪರ್ಣಾ ದೇಶಮುಖ್ (458.6) ಚಿನ್ನ ಮತ್ತು ಹರಿಯಾಣದ ನಿಶ್ಚಲ್ (458.1) ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದರು.

ಯೂತ್ ವಿಭಾಗದಲ್ಲೂ ವೈಯಕ್ತಿಕ ಚಿನ್ನ ಗೆದ್ದ ತಿಲೋತ್ತಮಾ ಅವರು ಜೂನಿಯರ್ ಮಹಿಳೆಯರ ತಂಡ ವಿಭಾಗದಲ್ಲೂ ಅನುಷ್ಕಾ ಮತ್ತು ವಂಶಿಕಾ ಲಹೋರಿಯಾ ಅವರೊಂದಿಗೆ ಸ್ವರ್ಣಕ್ಕೆ ಕೊರಳೊಡ್ಡಿದ್ದರು. ಕರ್ನಾಟಕ ತಂಡವು 1749 ಸ್ಕೋರ್ ಗಳಿಸಿತು.



ಕೋಚ್ ಮನೋಜ್ ಕುಮಾರ್ ಅವರೊಂದಿಗೆ ತಿಲೋತ್ತಮಾ ಸೇನ್ (ಎಡ), ಅನುಷ್ಕಾ ತೋಕೂರು

ಕರ್ನಾಟಕ ತಂಡಕ್ಕೆ ಕಶ್ವಿ ನಾಯಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಶ್ವಿ ಕಂಡಿಕೊಪ್ಪ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 15 ವರ್ಷದೊಳಗಿನ ಬಾಲಕಿಯರ ತಂಡದ ನಾಯಕಿಯಾಗಿದ್ದಾರೆ.

ಕೋಲ್ಕತ್ತದಲ್ಲಿ ಜನವರಿ 2ರಿಂದ 10ರವರೆಗೆ ನಡೆಯಲಿರುವ ಬಿಸಿಸಿಐ 15 ವರ್ಷದೊಳಗಿನವರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತಂಡವು ಆಡಲಿದೆ ಎಂದು ಕೆಎಸ್‌ಸಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಂಡ ಇಂತಿದೆ: ಕಶ್ವಿ ಕಂಡಿಕೊಪ್ಪ (ನಾಯಕಿ), ನೇಸರಾ ಸಪ್ತಗಿರೀಶ (ಉಪನಾಯಕಿ), ಎಸ್. ಶೀತಲ್ (ವಿಕೆಟ್‌ಕೀಪರ್), ಒವ್ಯೆ ರೋಹಿಣಿ ದೇಚಮ್ಮ, ಆರುಷಿ ಮಿತ್ರಾ, ಅವನಿ, ಯಾಶಿಕಾ ಕೆ ಗೌಡ, ಮರಿಯಾ ಫ್ರಾನ್ಸಿಯಾ ಎಂ. ಕೆ. ಹರ್ಷಿತಾ, ಪಾಟೀಲ ನೈನಿಶಾ ರೆಡ್ಡಿ, ಆರ್. ತನುಶ್ರೀ, ಬಿ.ಎ. ನಿತ್ಯಶ್ರೀ, ಸಂಕೆಪಲ್ಲಿ ಶ್ರೀಕಾ ಚತುರಾ, ಎಚ್.ಆರ್, ಸಾನ್ವಿ, ಎಸ್. ಕಶ್ವಿ. ರಕ್ಷಿತಾ ಕೃಷ್ಣಪ್ಪ (ಕೋಚ್), ವಿ. ಚಂದು (ಕೋಚ್), ಎಸ್.ಕೆ. ಜಾಹ್ನವಿ (ಮ್ಯಾನೇಜರ್), ಪದ್ಮಾವತಿ (ಫಿಸಿಯೊ).

ಯುವ ವಿಶ್ವಕಪ್: ಆಯುಷ್ ಸಾರಥ್ಯ


ಆಯುಷ್

ಮುಂಬೈ (ಪಿಟಿಐ): ಯುವ ಬ್ಯಾಟರ್ ಆಯುಷ್ ಮ್ಹಾತ್ರೆ ಅವರನ್ನು ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ ಮುಂದಿನ ತಿಂಗಳ 15 ರಿಂದ ಫೆಬ್ರುವರಿ 6ರವರೆಗೆ ನಡೆಯಲಿರುವ 19 ವರ್ಷಗೊಳಗಿನವರ ವಿಶ್ವಕಪ್‌ಗೆ ನಾಯಕರನ್ನಾಗಿ ಹೆಸರಿಸಲಾಗಿದೆ. 15 ಆಟಗಾರರ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ.

ಆದರೆ ಇದಕ್ಕೆ ಮೊದಲು ನಡೆಯಲಿರುವ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ವಿಹಾನ್ ಮಲ್ಹೋತ್ರಾ ಜೊತೆ ಮ್ಹಾತ್ರೆ ಅಲಭ್ಯರಾಗಲಿದ್ದಾರೆ. ಇವರಿಬ್ಬರು ಮಣಿಕಟ್ಟಿನ ಗಾಯದಿಂದ ಚಿಕಿತ್ಸೆ ಪಡೆಯುತ್ತಿರುವುದು ಇದಕ್ಕೆ ಕಾರಣ. ಹೀಗಾಗಿ ಈ ಪ್ರವಾಸಕ್ಕೆ ವೈಭವ್ ಸೂರ್ಯವಂಶಿ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಭಾರತ ತಂಡವು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಮೂರು ಏಕದಿನ ಪಂದ್ಯಗಳನ್ನು (ಜನವರಿ 3, 5 ಮತ್ತು 7ರಂದು) ಆಡಲಿದೆ. ಭಾರತ ಐದು ಬಾರಿ (2000, 2008 2012, 2018 ಮತ್ತು 2022ರಲ್ಲಿ) ಚಾಂಪಿಯನ್ ಆಗಿದೆ. ಭಾರತ ಮೊದಲ ಪಂದ್ಯವನ್ನು ಬುಲಾವಯೊದಲ್ಲಿ ಅಮೆರಿಕದ ವಿರುದ್ಧ ಜನವರಿ 15ರಂದು ಆಡಲಿದೆ.

ತಂಡಗಳು: ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ: ವೈಭವ್ ಸೂರ್ಯವಂಶಿ (ನಾಯಕ), ಆರನ್ ಜಾರ್ಜ್ (ಉಪನಾಯಕ), ವೇದಾಂತ್ ತ್ರಿವೇದಿ, ಅಭಿಜ್ಞಾನ್ ಕುಂಡು (ವಿಕೆಟ್ ಕೀಪರ್), ಹರವಂಶ್ ಸಿಂಗ್ (ವಿಕೆಟ್ ಕೀಪರ್), ಆರ್.ಎಸ್.ಅಂಬರೀಶ್, ಕನಿಷ್ಕ್ ಚೌಹಾನ್, ಖಿಲಾನ್ ಎ.ಪಟೇಲ್, ಮೊಹಮ್ಮದ್ ಇನಾನ್, ಹೆನಿಲ್ ಪಟೇಲ್, ಡಿ.ದೀಪೇಶ್, ಕಿಶನ್ ಕುಮಾರ್ ಸಿಂಗ್, ಉಧವ್ ಮೋಹನ್, ಯುವರಾಜ್ ಗೋಹಿಲ್, ರಾಹುಲ್ ಕುಮಾರ್.

19 ವರ್ಷದೊಳಗಿನವರ ವಿಶ್ವಕಪ್‌ಗೆ: ಆಯುಷ್ ಮ್ಹಾತ್ರೆ (ನಾಯಕ), ವಿಹಾನ್ ಮಲ್ಹೋತ್ರಾ (ಉಪ ನಾಯಕ), ವೈಭವ್ ಸೂರ್ಯವಂಶಿ, ಆರನ್ ಜಾರ್ಜ್, ವೇದಾಂತ್ ತ್ರಿವೇದಿ, ಅಭಿಜ್ಞಾನ್ ಕುಂಡು, ಹರವಂಶ್ ಸಿಂಗ್ (ವಿಕೆಟ್ ಕೀಪರ್ಸ್), ಆರ್.ಎಸ್.ಅಂಬರೀಶ್, ಕನಿಷ್ಕ್ ಚೌಹಾನ್, ಖಿಲಾನ್ ಪಟೇಲ್, ಮೊಹಮ್ಮದ್ ಇನಾನ್, ಹೆನಿಲ್ ಪಟೇಲ್, ಡಿ.ದೀಪೇಶ್, ಕಿಶನ್ ಕುಮಾರ್ ಸಿಂಗ್, ಉಧವ್ ಮೋಹನ್

ನೆಟ್‌ಬಾಲ್: ಕ್ವಾರ್ಟರ್‌ಗೆ ಪಂಜಾಬ್

ಪ್ರಜಾವಾಣಿ ವಾರ್ತೆ

ಮಂಗಳೂರು: ಪಂಜಾಬ್, ವಿದ್ಯಾ ಭಾರತಿ, ಛತ್ತೀಸ್‌ಗಢ ಮತ್ತು ಬಿಹಾರ ಬಾಲಕರ ತಂಡಗಳು ಪದವಿಪೂರ್ವ ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ನೆಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಶಾಲಾ ಶಿಕ್ಷಣ ಇಲಾಖೆ ಹಾಗೂ ಮಂಗಳೂರು ತಾಲ್ಲೂಕಿನ ಎಡಪದವು ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜು ಆಶ್ರಯದಲ್ಲಿ ಪಿಲಿಕುಳದಲ್ಲಿ ನಡೆಯುತ್ತಿರುವ ಟೂರ್ನಿಯ 16ರ ಘಟ್ಟದ ಪಂದ್ಯಗಳಲ್ಲಿ ಆಂಧ್ರಪ್ರದೇಶ ತಂಡವನ್ನು ಪಂಜಾಬ್ 35–12ರಲ್ಲಿ ಮಣಿಸಿದರೆ ಛತ್ತೀಸ್‌ಗಢ 39–13ರಲ್ಲಿ ಐಪಿಎಸ್‌ಇ ವಿರುದ್ಧ ಜಯ ಸಾಧಿಸಿತು.

ಹರಿಯಾಣ ವಿರುದ್ಧದ ಪಂದ್ಯದಲ್ಲಿ ವಿದ್ಯಾಭಾರತಿ 37–27ರಲ್ಲಿ ಗೆಲುವು ದಾಖಲಿಸಿದರೆ ತೆಲಂಗಾಣವನ್ನು ಬಿಹಾರ 36–18ರಲ್ಲಿ ಮಣಿಸಿತು. ಲೀಗ್ ಪಂದ್ಯಗಳಲ್ಲಿ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು ಗೆಲುವಿನ ಓಟ ಮುಂದುವರಿಸಿದವು.

ಶನಿವಾರದ ಲೀಗ್ ಪಂದ್ಯಗಳ ಫಲಿತಾಂಶಗಳು: ಬಾಲಕರು: ಕರ್ನಾಟಕಕ್ಕೆ ಪಂಜಾಬ್ ವಿರುದ್ಧ 24–22ರಲ್ಲಿ ಜಯ; ಗುಜರಾತ್‌ಗೆ ತಮಿಳುನಾಡು ವಿರುದ್ಧ 23–19ರಲ್ಲಿ, ಬಿಹಾರಕ್ಕೆ ಜಮ್ಮು ಕಾಶ್ಮೀರ ವಿರುದ್ಧ 23–8ರಲ್ಲಿ, ಆಂಧ್ರಪ್ರದೇಶಕ್ಕೆ ಗುಜರಾತ್ ಎದುರು 23–11ರಲ್ಲಿ, ಐಪಿಎಸ್‌ಸಿಗೆ ತಮಿಳುನಾಡು ಎದುರು 16–11ರಲ್ಲಿ ಗೆಲುವು; ದೆಹಲಿ ಮತ್ತು ಚಂಡೀಗಢ ನಡುವಿನ ಪಂದ್ಯ 21–21ರಲ್ಲಿ ಸಮ.

ಬಾಲಕಿಯರ ಫಲಿತಾಂಶ: ಕರ್ನಾಟಕಕ್ಕೆ ಆಂಧ್ರಪ್ರದೇಶ ವಿರುದ್ಧ 12–4ರಲ್ಲಿ ಗೆಲುವು; ಮಧ್ಯಪ್ರದೇಶಕ್ಕೆ ಗುಜರಾತ್ ವಿರುದ್ಧ 15–11, ಮಹಾರಾಷ್ಟ್ರ ಕ್ಕೆ ತಮಿಳುನಾಡು ವಿರುದ್ಧ 30–2ರಲ್ಲಿ, ಪಂಜಾಬ್‌ಗೆ ರಾಜಸ್ಥಾನ ವಿರುದ್ಧ 20–18ರಲ್ಲಿ, ಕೇರಳಕ್ಕೆ ಮಧ್ಯಪ್ರದೇಶ ವಿರುದ್ಧ 39–3ರಲ್ಲಿ, ಛತ್ತೀಸ್‌ಗಢಕ್ಕೆ ಗೋವಾ ವಿರುದ್ಧ 28–17ರಲ್ಲಿ, ಪಂಜಾಬ್‌ಗೆ ಒಡಿಶಾ ವಿರುದ್ಧ 18–3ರಲ್ಲಿ ಗೆಲುವು.

ಬ್ಯಾಡ್ಮಿಂಟನ್: ಶಿಖಾ–ಅಶ್ವಿನಿ ಫೈನಲ್‌ಗೆ

ವಿಜಯವಾಡ (ಪಿಟಿಐ): ಕರ್ನಾಟಕದ ಜೋಡಿ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಕೆ. ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಮಾಜಿ ಚಾಂಪಿಯನ್ ಶಿಖಾ–ಅಶ್ವಿನಿ ಜೋಡಿಯು 21-11, 21-15ರಿಂದ ವೆನ್ನಲಾ ಕೆ. ಮತ್ತು ರಿಷಿಕಾ ಯು. ಜೋಡಿಯನ್ನು ಹಿಮ್ಮೆಟ್ಟಿಸಿತು. ಪ್ರಶಸ್ತಿ ಸುತ್ತಿನಲ್ಲಿ ಪ್ರಿಯಾ ದೇವಿ ಮತ್ತು ಶ್ರುತಿ ಮಿಶ್ರಾ ಜೋಡಿಯನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಸೂರ್ಯ ಚರಿಷ್ಮಾ ತಮಿರಿ ಮತ್ತು ತನ್ವಿ ಪಾತ್ರಿ ಪ್ರಶಸ್ತಿಗಾಗಿ ಪೈಪೋಟಿ ನಡೆಸುವರು. ಪುರುಷರ ಸಿಂಗಲ್ಸ್‌ನಲ್ಲಿ ರಿತ್ವಿಕ್ ಸಂಜೀವಿ ಮತ್ತು ಭರತ್ ರಾಘವ್ ಮುಖಾಮುಖಿಯಾಗುವರು.

ಎರಡು ಸ್ಪರ್ಧೆ ಗೆದ್ದ ಹೇಮಂತ್



ಚೆನ್ನೈ (ಪಿಟಿಐ): ಬೆಂಗಳೂರಿನ ಹೇಮಂತ್ ಮುದ್ದಪ್ಪ ಅವರು, ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಮೋಟರ್‌ಸೈಕಲ್ ಡ್ರಾಗ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಎರಡು ಗೆಲುವು ಮತ್ತೊಂದು ಪೋಡಿಯಂ ಫಿನಿಷ್ ಸಾಧಿಸಿದರು. ಈ ರೇಸ್‌ನಲ್ಲಿ ತಮ್ಮ ಹಿಡಿತ ಮುಂದುವರಿಸಿದರು.

‘ಮಂತ್ರ ರೇಸಿಂಗ್’ ಪರ ರೈಡಿಂಗ್ ಮಾಡಿದ ಮುದ್ದಪ್ಪ ಅನ್‌ರಿಸ್ಟ್ರಿಕ್ಟೆಡ್ ಸೂಪರ್ ಸ್ಪೋರ್ಟ್ 4–ಸ್ಟ್ರೋಕ್ ಕ್ಲಾಸ್ ಸ್ಪರ್ಧೆಯಲ್ಲಿ 8.269 ಸೆ.ಗಳಲ್ಲಿ ‘ಕ್ವಾರ್ಟರ್ ಮೈಲಿ’ (400 ಮೀ) ದೂರ ಕ್ರಮಿಸಿದರು. ಅವರು ಫಾಸ್ಟ್ ಟ್ರ್ಯಾಕ್ ರೇಸಿಂಗ್ ಇಂಡಿಯಾದ ಹನುಮಾನ್ (8.301 ಸೆ.) ಅವರಿಂದ ಪೈಪೋಟಿ ಎದುರಿಸಿದರು.

ಮುದ್ದಪ್ಪ ಮತ್ತು ಪಾವ್ಯೆ ಅವರು ಈಗ ತಲಾ 55 ಚಾಂಪಿಯನ್‌ಷಿಪ್ ಪಾಯಿಂಟ್ಸ್ ಹೊದಿದ್ದಾರೆ. ಅಲಿಮೊನ್ ಸಾಯಿ ದಲ್ವಿ 53 ಪಾಂಯಿಟ್ಸ್ ಗಳಿಸಿದ್ದಾರೆ. ಮುದಪ್ಪ ಅವರು 1051–1650ಸಿಸಿ ಕೆಟಗರಿಯಲ್ಲೂ ಜಯಶಾಲಿಯಾದರು. 8.541 ಸೆ.ಗಳಲ್ಲಿ ನಿಗದಿ ಅಂತರ ಕ್ರಮಿಸಿದರು. ಮುಜಾಹಿದ್ ಪಾಷಾ (8.629 ಸೆ) ಮತ್ತು ಅಲಿಮೊನ್ ಸಾಯಿ ದಲ್ವಿ (8.694 ಸೆ.) ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದರು. ಮುದ್ದಪ್ಪ ಈಗ ಒಟ್ಟು75 ಪಾಯಿಂಟ್ಸ್ ಹೊಂದಿದ್ದು ಟ್ರೋಫಿ ಗೆಲ್ಲುವುದು ಬಹುತೇಕ ಖಚಿತವಾಗಿದೆ. ಪಾಶಾ (54) ಮತ್ತು ದಲ್ವಿ (38) ಬಹಳ ಹಿಂದೆಯಿದ್ದಾರೆ.

851–1050 ಸಿಸಿ ವಿಭಾಗದಲ್ಲಿ ಮಂಬೈನ ಪಾವ್ಯೆ (8.338 ಸೆ.) ಅಲ್ಪ ಅಂತರದಲ್ಲಿ ಮುದ್ದಪ್ಪ ಅವರನ್ನು ಹಿಂದೆಹಾಕಿದರು. ಆದರೆ 15 ಬಾರಿಯ ಡ್ರ್ಯಾಗ್ ರೇಸ್ ಚಾಂಪಿಯನ್ ಆಗಿರುವ ಮುದ್ದಪ್ಪ ಒಟ್ಟಾರೆ 68 ಪಾಯಿಂಟ್ಸ್ ಗಳಿಸಿದ್ದು ಮುಂದಿದ್ದಾರೆ. ಪಾವ್ಯೆ 53 ಪಾಯಿಂಟ್ಸ್ ಹೊಂದಿದ್ದಾರೆ.

ಸೂಪರ್ ಸ್ಪೋರ್ಟ್ಸ್ 2–ಸ್ಟ್ರೋಕ್ (131–165 ಸಿಸಿ) ವಿಭಾಗದ ಕಿರೀಟ ಬೆಂಗಳೂರಿನ ಪ್ರಶಾಂತ್ ಎಸ್. ಪಾಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Electronic City

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan Call : 70260 13388

Arkavathi Layout

RESIDENTIAL BDA SITE No. 364 for sale in Arkavathi layout, 15th Block measuring 40*60 west facing. 11,500/ sq.ft negotiable. Call: 9986185983.

Airport Road

"SALE SITE 40x60 BIAAPA approved before International Airport close to Defence & Aero park Rs.5900/- P.Sft. 9845286505"

Bannerghatta Road

BANNERAGATTA ROAD NISARGA & NANDANAVANA LAYOUT 30x40, 40x60, 50x80 SALE. 3000/- TO 5000/- PSFT 9449655947

Basaweshwaranagar

BASAVESHWARNAGAR SALE 30x45 North Facing Site, Clear_titles, Nearby Mandovi Motors. Immediate Settlement. Contact. 9060406731.

J P Nagar

"J.P.NAGAR, SRINIDHI_LAYOUT 30x51 Residential Site, East_Facing, BBMP A_Katha, Full White. Direct Owner: 9845249799/ 9845088449"

JPNAGAR 1ST_TO_6TH Phases Sale Sites/Houses 30'x40', 40'x60', 45'x60', 40'x70', 50'x80' Contact: 9448052264

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492



Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

DIRECT OWNER 30x40 BDA Site Sale, KEMPEGWODA LAYOUT 5th 'L' SECTOR, near Mysore Road. ₹8100/-. 9632966556

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

Magadi Road

750 SQFT Vacant Site, WF Herohalli, Sunkadakatte, Magadi Road, E Katha, 53L, Direct Owner 9739957911

Nagarabhavi

"NAGARABHAVI DEEPA COMPLEX MPM Layout 40x60 East North Corner BDA Site Sale 80% White. 9448432633"

BDA SITE SALE Nagarbhavi, 10th Block 3rd Cross South Face Site No.63 Contact: Muthu.R 9880780002

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT. Contact: 9035470616

"AVAILABLE BDA Vishveshwaraiah Layout 3rd Block 50x80 South 60'feet Road and 20x30 South. Contact: 9632788913"

VISHVESHWARAIAH LAYOUT BDA Site SALE 30X40 North Face. 4th & 6th Block East Face: 8970306030

"AVAILABLE VESHVESHWARAIAH -LAYOUT 20x30, 30x40 builder location, Immediate Registration. Contact Genuine Buyers only. 9035444429/ 7259675150"

DIRECT OWNER 30x40 N/F BDA Site Sale, VISHWESHWARAIAH LAYOUT BLOCK-1 near 100ft Road. 9742681666, 9886634578

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 BDA Site Sale, VISHWESHWARAIAH LAYOUT 40ft Road, Full Developed Area, ₹11000/-. 7411994069

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

Konanakunte Cross

KONANAKUNTE 30X50 Site North Attached to Anjanapura 6th_Block and Flat 2BHK 1450sqft East in Akshaynagar near Meenakshi Mall. 9060406731.

Banashankari

BANASHANKARI 6TH Stage 10th Block 40X60 West Facing Price. 2.40 CR. Stlightly Negotiable: 9148914809/ 9993959099

R T Nagar

R.T.NAGAR HMT LAYOUT 40X60 Site Close to CBI MAIN ROAD Excellent Location Call: 9986281337

House

Banashankari

BANASHANKARI 6TH Stage 10th Block 20x30, 4 BHK House Rs. 1.17 Crore. Contact: 9148914809/ 9993959099

Basaweshwaranagar

BASAVESHWARNAGAR KHB COLONY 45X65 OLD HOUSE FOR SALE VERY GOOD LOCATION CONTACT: 9448045601/ 9535811626

J P Nagar

J.P.NAGAR_3RD Semi-Commercial/ Residential 45x75,60' Road, 10,80,00,000/- 2nd, 30x40 Duplex 3 BHK house, 4,00,00,000/- 9739995042

J.P.NAGAR_7TH, BOB`Layout Near Bridge Millenium 40x57_East, 3 BHK Duplex, 4_units 1 BHK house, 4,00,00,000/- 9739995042

Vishweshwariah Layout

"30X40 BDA ONE AND TWO BHK HOUSE FOUR UNITS,- ONE ROOM, PRIME LOCATION 5TH BLOCK VISHVESHWARAIAH LAYOUT RENTAL INCOME HOUSE`SALE- 9845143579"



Shivajinagar

BUILDING-SALE OFF QUEENS ROAD Modi Masjid Road Chick-Bazaar Road 3000sft South`Facing on`40ft-Road 23K Per sft full-Cheque Payment Call:9845922769

Flat

Banashankari

SALE BSK 3rd stage- 3 BHK + 3T, 1651 SF. A- khata. Recently Renovated. Mob- 9801269356 EMail :sfylaptop@gmail.com

Malleshwaram

17TH CROSS Near Cloud-9 Hospital Sale 2BHK (1100sft) Flat West facing, Carparking. Owner: 7013351639/ 9945617455

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to Move, A Khatha, E-swathu, Carparking Lift Vaasthu, Maruthi Layout, Rs.1.10Cr. 9945224058 6363181276.

Whitefield

ONE BHK first floor Athashri Whitefield elders living facility with all amenities available for immediate sale. Contact sampath.pillai@gmail.com

Commercial Land

Bangalore North

KOCHOHALLI-10000(100X100)SQFT COMMERCIAL vacant land for sale-opposite Sri Vani School-South West Corner-100 mts from Magadi Main Road-8000 per/sqft- call-8778666035

Out-Station

OPEN LAND FOR SALE
Approximate:6500sqft (6 Gunta) Land at Vidyanagar, Behind Desai and Company, Beside Reddy Hostel, Prasant Nagar, 200 Mtr for Hubli-Dharwad Main Road Road, HUBBALLI.
8277737025
Suitable for Commercial Ventures. Genuine Buyers only (AGENTS EXCUSE)

Commerical

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Residential/ Commercial

Anjanapura

ANJANAPURA SITE for Sale 3rdA Block 3600 Sqft, Commercial BDA NE CORNER @13K, & 40X60 ADJOINING 80' ROAD @18K Per Sqft CALL OWNER RAJESH 9845167755

Industrial & Factory

Tumkur Road

SALE/ BUILT to suit 10 Acres Industrial Converted Land Suitable for Industry/ Warehouse/ University. 9141326819

BUILDERS ESSENTIAL

Roofing Materials

"WE FIX" LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MORE Classifieds Ads on Subsequent Pages

REAL ESTATE BUYING

Sites

Anjanapura

BDA-SITES WANTED @ Banashankari 6th Stage, Visveshwaraiah Layout, Anjanapura, Kempegowda Layout 30x40,40x60, 50x80 Rajesh: 9945610779

Multiple Locations

REQUIRED FOR genuine buyers, BDA Sites, houses in Jayanagar, J.P.Nagar, South Bangalore any facing, measurement, Suraj Realtors- 9845242711

Mysore

WANTED MUDA SITES Vijayanagara Dattagalli Kuvempunagara Saraspathipuram Ramakrisnanagar Jayalakshmipuram Srirampura, Bhogadi Satagalli Siddharthnagar Rajiv Nagara. 9845608259.

Vishweshwariah Layout

"BUYING/ SELLING" 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF- 300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

Flats

SEMI-FURNISHED 3BHK FLAT 1360 Sqft. in Sumukha Meadows on Vishnu Vardhan Road, Channsandra Bengaluru,with 24hrs`Water Supply, Carpark,&`Lift. No`Brokers. Call:9533339694 9246369439.

"LUXURY 3BHK Flat for Rent/Lease with servant quarter Rent: Rs.1`Lakh, Lease: Rs.1`Crore. "Sri.Ganesh Estate"- 9845286505"



ಕಗ್ಗದಾಸಪುರ ಎಲ್‌ಸಿ: ಕಗ್ಗಂಟಾದ ಸಂಚಾರ

ಲೆವೆಲ್ ಕ್ರಾಸಿಂಗ್ ಬಳಿ ಕಿ.ಮೀ. ದೂರ ಸಾಲುಗಟ್ಟಿ ನಿಲ್ಲುತ್ತಿರುವ ವಾಹನಗಳು

ಭೂಸ್ವಾಧೀನ ಸಮಸ್ಯೆ

ಕಗ್ಗದಾಸಪುರ ಲೆವೆಲ್ ಕ್ರಾಸಿಂಗ್ ಬಳಿ ನೂರು ಮೀಟರ್ ವ್ಯಾಪ್ತಿ ಸಮಸ್ಯೆಯನ್ನು ಉಂಟು ಮಾಡಿದೆ. ಹಳಿ ದ್ವಿಪಥ ಯೋಜನೆಯ ಕಾಮಗಾರಿ ಕೂಡ ಈ ನೂರು ಮೀಟರ್ ಬಿಟ್ಟೇ ನಡೆದಿದೆ. ಅಲ್ಲದೇ ಕೆ–ರೈಡ್ ನಿರ್ಮಿಸುತ್ತಿರುವ ಬೆಂಗಳೂರು ಉಪನಗರ ರೈಲು ಯೋಜನೆಯೂ (ಬಿಎಸ್‌ಆರ್‌ಪಿ) ಇಲ್ಲಿಂದ ಸಾಗುತ್ತಿದ್ದು, ಕೆಲಸವಾಗಿಲ್ಲ. ಭೂಸ್ವಾಧೀನ ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳದೇ ಇದ್ದರೆ ರೈಲ್ವೆ ಮೇಲ್ಸೇತುವೆ, ದ್ವಿಪಥ, ಬಿಎಸ್‌ಆರ್‌ಪಿ ಮೂರೂ ಯೋಜನೆಗಳೂ ಪ್ರಗತಿ ಸಾಧಿಸುವುದಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

• ಬಾಲಕಷ್ಣಪಿ.ಎಚ್.

ಬೆಂಗಳೂರು: ನಗರದ ಕಗ್ಗದಾಸಪುರ–ಮಹದೇವಪುರವನ್ನು ಸಂಪರ್ಕಿಸುವ ಕಗ್ಗದಾಸಪುರ ರೈಲ್ವೆ ಕ್ರಾಸಿಂಗ್ ತೆಗೆದು ರೈಲ್ವೆ ಮೇಲ್ಸೇತುವೆ ಇಲ್ಲವೇ ಕೆಳಸೇತುವೆ ನಿರ್ಮಿಸುವ ಯೋಜನೆ ದಶಕ ಕಳೆದರೂ ಅನುಷ್ಠಾನಗೊಂಡಿಲ್ಲ. ರೈಲು ಸಂಚರಿಸುವ ವೇಳೆ ಎರಡೂ ಕಡೆ ವಾಹನಗಳು ಸಾಲುಗಟ್ಟಿ ನಿಲ್ಲುವುದು ತಪ್ಪಿಲ್ಲ.

ಬೆಳಿಗ್ಗೆ ಮತ್ತು ಸಂಜೆ ವೇಳೆ ದಟ್ಟಣೆ ಅವಧಿಯಲ್ಲಿ ರೈಲು ಬರುವಾಗ ವಾಹನಗಳು ಸಂಚರಿಸದಂತೆ ಗೇಟ್ ಹಾಕಿದಾಗ ಕಿಲೋಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಗೇಟ್ ತೆರೆದಾಗ ಪೊಲೀಸರು ಎಷ್ಟೇ ನಿಯಂತ್ರಿಸಿದರೂ ಎರಡೂ ಕಡೆಯಿಂದ ಒಮ್ಮೆಲೇ ವಾಹನಗಳು ನುಗ್ಗುವುದರಿಂದ ಸರಾಗವಾಗಿ ಸಾಗಲು ಸಾಧ್ಯವಾಗುವುದಿಲ್ಲ. ಅರ್ಧಗಂಟೆಗೂ ಹೆಚ್ಚು ಹೊತ್ತು ದಟ್ಟಣೆ ಉಂಟಾಗುತ್ತದೆ. ವಾಹನಗಳು ಇನ್ನೂ ಪೂರ್ಣವಾಗಿ ದಾಟಿ ಹೋಗಿರುವುದಿಲ್ಲ. ಅಷ್ಟು ಹೊತ್ತಿಗೆ ಇನ್ನೊಂದು ರೈಲು ಬರುವ ಸೂಚನೆ ಬಂದು ಮತ್ತೆ ಗೇಟ್ ಬೀಳುತ್ತದೆ. ವಾಹನಗಳ ಸಾಲು ಮತ್ತೆ ಬೆಳೆಯುತ್ತದೆ.

‘ಪ್ರಯಾಣಿಕರ ರೈಲು ಸಂಚರಿಸುವ ಸಮಯ ಮೊದಲೇ ನಿಗದಿಯಾಗಿರುತ್ತದೆ. ಅದು ಹೇಗೋ ಕಷ್ಟಪಟ್ಟು ನಿರ್ವಹಣೆ ಮಾಡುತ್ತಿರುತ್ತೇವೆ. ಅದರ ನಡುವೆ ಗೂಡ್ಸ್ ರೈಲು ಬರುತ್ತದೆ. ಆಗ ವಾಹನಗಳು ಅಡ್ಡಾದಿಡ್ಡಿ ನಿಂತು ಬಿಡುತ್ತವೆ. ಗೂಡ್ಸ್ ರೈಲುಗಳು ಪ್ರತಿದಿನ ಬೇರೆ ಬೇರೆ ಸಮಯದಲ್ಲಿ ಬರುವುದರಿಂದ ಸಮಸ್ಯೆ ಉಂಟಾಗುತ್ತಿದೆ. ಇಲ್ಲಿ ವಾಹನ ನಿಯಂತ್ರಿಸಲು ಕನಿಷ್ಠ ನಾಲ್ಕು ಜನ ಪೊಲೀಸರು ಬೇಕು. ಆದರೆ, ಮಹದೇವಪುರ ಪೊಲೀಸ್ ಠಾಣೆಯಿಂದ ಒಬ್ಬರು, ಜೀವನ್ ಬಿಮಾ ನಗರ ಪೊಲೀಸ್ ಠಾಣೆಯಿಂದ ಒಬ್ಬರಷ್ಟೇ ಇರುತ್ತೇವೆ’ ಎಂದು ಸಂಚಾರ ವಿಭಾಗದ ಪೊಲೀಸರು ಅಸಹಾಯಕತೆ ತೋಡಿಕೊಂಡರು.

ಡಿಆರ್‌ಡಿಒ, ಎಚ್‌ಎಎಲ್, ಮಾರತ್‌ಹಳ್ಳಿ, ಹೊರ ವರ್ತುಲ ರಸ್ತೆ, ನಾರಾಯಣಪುರ ಮುಂತಾದ ಕೈಗಾರಿಕಾ ಪ್ರದೇಶಗಳಲ್ಲದೇ ಪ್ರಮುಖ ಐಟಿ ಕೇಂದ್ರಗಳು ಈ ರಸ್ತೆಯ ಮೂಲಕವೇ ಸಂಪರ್ಕ ಹೊಂದಿವೆ. ಐಟಿ ಉದ್ಯೋಗಿಗಳು, ಕೈಗಾರಿಕಾ ಉದ್ಯೋಗಿಗಳು ಅಲ್ಲದೇ ಸುತ್ತಮುತ್ತಲಿನ ನಿವಾಸಿಗಳು ಕಾರು, ದ್ವಿಚಕ್ರ ವಾಹನಗಳಲ್ಲಿ ಸಾಗುತ್ತಾರೆ. ಅದೇ ಸಮಯದಲ್ಲಿ ಶಾಲಾ, ಕಾಲೇಜುಗಳ ವಾಹನಗಳೂ ಸಾಗುತ್ತವೆ. ಕಗ್ಗದಾಸಪುರ ಕಡೆಯಿಂದ ರಸ್ತೆ ಸ್ವಲ್ಪ ಅಗಲವಾಗಿ ಇದೆ. ಆದರೆ, ಮಹದೇವಪುರ, ಕೆ.ಆರ್. ಪುರ, ವಿಜ್ಞಾನ ನಗರ ಕಡೆಗೆ ಸಾಗುವ ರಸ್ತೆಗಳು ಕಿರಿದಾಗಿರುವುದರಿಂದ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ ಎಂದು ಸ್ಥಳೀಯರು ತಿಳಿಸಿದರು.

ಕಗ್ಗದಾಸಪುರ ಲೆವೆಲ್ ಕ್ರಾಸಿಂಗ್‌ನಲ್ಲಿ ಉಂಟಾಗುವ ದಟ್ಟಣೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು ಎಂದು ಎರಡು ವರ್ಷಗಳ ಹಿಂದೆ ಆನ್‌ಲೈನ್‌ನಲ್ಲಿ ಸಹಿ ಸಂಗ್ರಹ ಅಭಿಯಾನವನ್ನು ವಿವಿಧ ಉದ್ಯೋಗಿಗಳು ನಡೆಸಿದ್ದರು. ಆದರೂ ಯಾವುದೇ ಪರಿಹಾರ ಕ್ರಮಗಳು ಆಗಿಲ್ಲ ಎಂದು ದೂರಿದರು.



ಕಗ್ಗದಾಸಪುರ ರೈಲ್ವೆಗೇಟ್ ಬಳಿ ವಿಪರೀತ ವಾಹನದಟ್ಟಣೆ ಉಂಟಾಗಿರುವುದು

ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಜನರು ಏನು ಹೇಳುತ್ತಾರೆ?



ಕಗ್ಗದಾಸಪುರದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಿಸಲಾಗುವುದು ಎಂದು ಹತ್ತು ವರ್ಷದಿಂದ ಕಥೆ ಹೇಳುತ್ತಿದ್ದಾರೆ. ಇನ್ನು ಹತ್ತು ವರ್ಷ ಕಳೆದರೂ ನಿರ್ಮಾಣವಾಗುವ ಲಕ್ಷಣ ಕಾಣುತ್ತಿಲ್ಲ. ಶಾಸಕರು, ಸಚಿವರು, ರೈಲ್ವೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕಾರ್ಯಗತಗೊಂಡಿಲ್ಲ. ಮೇಲ್ಸೇತುವೆ ನಿರ್ಮಿಸಿದರೆ ಸಮಸ್ಯೆ ಪರಿಹಾರಗೊಳ್ಳಲಿದೆ.

ಕುಮಾರ್, ನಾರಾಯಣಪುರ



ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಇಚ್ಛಾಶಕ್ತಿಯ ಕೊರತೆ ಇರುವುದರಿಂದ ಸಮಸ್ಯೆ ಹಾಗೇ ಉಳಿದಿದೆ. ನಾವು ಎಷ್ಟೇ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ. ರಾತ್ರಿ 9ರ ನಂತರ ಇಲ್ಲಿ ಸಂಚಾರ ಪೊಲೀಸರು ಕೂಡ ಇರುವುದಿಲ್ಲ. ಆಗ ರೈಲು ಬಂದು ಹೋದ ಮೇಲೆ ವಾಹನಗಳನ್ನು ಯದ್ವಾತದ್ವಾ ನುಗ್ಗಿಸುತ್ತಾರೆ. ಹಲವು ಬಾರಿ ಇದೇ ವಿಚಾರಕ್ಕೆ ಹೊಡೆದಾಟವಾಗಿದೆ.

ಎಂ.ಕೆ. ಸುನೀಲ್ ಕುಮಾರ್, ಕೊಂಡಪ್ಪ ಲೇಔಟ್ ಅಸೋಸಿಯೇಷನ್, ಮಹದೇವಪುರ



ಬೆಳಿಗ್ಗೆ ಮತ್ತು ಸಂಜೆ ಇಲ್ಲಿ ವಿಪರೀತ ಸಂಚಾರ ದಟ್ಟಣೆ ಸಮಸ್ಯೆ ಉಂಟಾಗುತ್ತಿದೆ. ವಾಹನಗಳನ್ನು ನಿಯಂತ್ರಿಸಿ ಒಂದೇ ಪಥದಲ್ಲಿ ಸಾಗುವಂತೆ ಮಾಡಲು, ಇನ್ನೊಂದು ಪಥದಲ್ಲಿ ಎದುರಿನಿಂದ ಬರುವ ವಾಹನಗಳಿಗೆ ಅವಕಾಶ ಮಾಡಿಕೊಡಲು ಪೊಲೀಸರೊಂದಿಗೆ ನಾವೂ ಸೇರಿಕೊಂಡು ಕೆಲಸ ಮಾಡುತ್ತಿದ್ದೇವೆ.

ಶಕ್ತಿವೇಲು, ಕಗ್ಗದಾಸಪುರ ಅಂಗಡಿ ವ್ಯಾಪಾರಿ



ಮೇಲ್ಸೇತುವೆ ನಿರ್ಮಾಣಗೊಂಡರೆ ಸಮಸ್ಯೆ ಬಹುತೇಕ ಪರಿಹಾರ ಆಗುತ್ತದೆ. ಆದರೆ, ಭೂಸ್ವಾಧೀನಕ್ಕೆ ಮುಂದಾದಾಗ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರಿಂದ ಮೇಲ್ಸೇತುವೆ ಯೋಜನೆ ಸ್ಥಗಿತಗೊಂಡಿದೆ. ಇಲ್ಲಿರುವ ಅಂಗಡಿ ವ್ಯಾಪಾರಿಗಳಿಗೆ ಕುತ್ತು ಆಗದಂತೆ ಮೇಲ್ಸೇತುವೆ ನಿರ್ಮಿಸಬೇಕು.

ಮಂಜುನಾಥ್, ಕೆ.ಆರ್.ಪುರ

ಬಸ್ ತಂಗುದಾಣಗಳಲ್ಲಿ ಕಸ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಮನೆ, ಅಪಾರ್ಟ್‌ಮೆಂಟ್ ನಿವಾಸಿಗಳು ತ್ಯಾಜ್ಯ, ಮಿಕ್ಕಿದ ಆಹಾರ, ಹಳಸಿದ ಆಹಾರವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ರಸ್ತೆ ಬದಿ, ಬಸ್ ತಂಗುದಾಣಗಳಲ್ಲಿ ಎಸೆಯುತ್ತಿದ್ದಾರೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಜ್ಞಾನಭಾರತಿ ವಾರ್ಡ್‌ನ ಮುತ್ತುರಾಯ ನಗರ, ಅರಣ್ಯ ಇಲಾಖೆ, ನೌಕರರ ಬಡಾವಣೆ ಶಾಲಾ, ಕಾಲೇಜು, ಬಸ್ ತಂಗುದಾಣ, ವಸತಿ ಪ್ರದೇಶಗಳಲ್ಲಿ ಕಸದ ರಾಶಿ ಬಿದ್ದಿದೆ. ನಗರ ಪಾಲಿಕೆ ವತಿಯಿಂದ ಮನೆ, ವಸತಿ ಸಮುಚ್ಚಯ, ಪಿ.ಜಿ. ಹೋಟೆಲ್‌ಗಳಲ್ಲಿ ಸರಿಯಾಗಿ ಕಸ ಸಂಗ್ರಹಣೆ ಮಾಡದಿರುವುದರಿಂದ ಸಮಸ್ಯೆ ಉಂಟಾಗಿದೆ ಎಂದು ಸ್ಥಳೀಯರು ದೂರಿದರು.

ಕಸವನ್ನು ಪ್ಲಾಸ್ಟಿಕ್ ತೊಟ್ಟೆಯಲ್ಲಿ ತುಂಬಿ ಎಸೆಯುವುದರಿಂದ ಹಸುಗಳು, ಬೀದಿ ನಾಯಿಗಳು, ಕಸದ ರಾಶಿಯಲ್ಲೇ ಇರುತ್ತವೆ. ಹಸುಗಳು ಪ್ಲಾಸ್ಟಿಕ್ ಸಮೇತ ಆಹಾರ ತಿನ್ನುತ್ತಿವೆ. ಬೀದಿ ನಾಯಿಗಳು ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರ ಮೇಲೆ ಎಗರುತ್ತಿವೆ. ಪಾದಚಾರಿ ಮಾರ್ಗದಲ್ಲಿ ತಿರುಗಾಡುವ ವೃದ್ಧರು, ಮಕ್ಕಳು ಎನ್ನದೆ ವಯಸ್ಕರ ಮೇಲೆ ದಾಳಿ ಮಾಡಿ ಕಚ್ಚುತ್ತಿವೆ ಎಂದು ನಾಗರಿಕರು ಹೇಳಿದರು.

‘ಕಸದ ರಾಶಿ ಕೊಳೆತು ನೊಣ, ಸೊಳ್ಳೆ ಹಾವಳಿ ಹೇಳತೀರದಾಗಿದೆ. ಸಂಜೆಯಾಗುತ್ತಿದ್ದಂತೆ ಸೊಳ್ಳೆ ಹಾವಳಿ, ಹಗಲು ವೇಳೆಯಲ್ಲಿ ನೊಣದ ಕಾಟದಿಂದ ಜನರು ಸಂಕಷ್ಟ ಪಡುವಂತಾಗಿದೆ’ ಎಂದು ಸವಿತಾ, ಅಶೋಕ್ ದೂರಿದರು.

ನಗರ ಪಾಲಿಕೆಯ ಘನತ್ಯಾಜ್ಯ ವಿಭಾಗದ ಸಹಾಯಕ ವ್ಯವಸ್ಥಾಪಕಿ ಶಿಲ್ಪಾ ಪ್ರತಿಕ್ರಿಯಿಸಿ, ‘ನಾನು ಈ ವ್ಯಾಪ್ತಿಗೆ ಬಂದು ಕೆಲವೇ ತಿಂಗಳಾಗಿದೆ. ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸುತ್ತೇನೆ’ ಎಂದರು.



ಮುತ್ತರಾಯನಗರ ಮುಖ್ಯ ರಸ್ತೆಯಲ್ಲಿ ಬಿದ್ದಿರುವ ಕಸದ ರಾಶಿ

ಕಾಡಾನೆ ದಾಳಿ: ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಶ್ಯಾನುಭೋಗನಹಳ್ಳಿ ಗ್ರಾಮದ ಜಮೀನುಗಳಿಗೆ ಶುಕ್ರವಾರ ರಾತ್ರಿ ನುಗ್ಗಿದ ಕಾಡಾನೆ ಹಿಂಡೊಂದು ತೆಂಗು, ರಾಗಿ, ಭತ್ತದ ಬೆಳೆಗಳನ್ನು ಸಂಪೂರ್ಣ ನಾಶ ಮಾಡಿವೆ.

ಗ್ರಾಮಕ್ಕೆ ನುಗ್ಗಿದ ಎಂಟು ಕಾಡಾನೆಗಳು 14 ತೆಂಗಿನ ಮರ, ಒಂದು ಎಕರೆಯಲ್ಲಿ ಬೆಳೆದಿದ್ದ ರಾಗಿ, ಒಂದು ಎಕರೆ ಭತ್ತದ ಬೆಳೆಯನ್ನು ನಾಶಪಡಿಸಿವೆ.

ತೆಂಗಿನ ಮರಗಳನ್ನು ಉರುಳಿಸಿ ತೆಂಗಿನ ಕಾಯಿಗಳನ್ನು ಕಿತ್ತು ಬಿಸಾಡಿವೆ. ರಾಗಿ ಹಾಗೂ ಭತ್ತದ ಬೆಳೆ ತಿಂದು, ತುಳಿದು ಧ್ವಂಸ ಮಾಡಿವೆ. ₹2 ಲಕ್ಷಕ್ಕೂ ಹೆಚ್ಚು ಮೌಲ್ಯದ ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಆನೆಗಳನ್ನು ಶಾಶ್ವತವಾಗಿ ಕಾಡಿಗಟ್ಟಬೇಕು. ಬೆಳೆಗಳಿಗೆ ರಕ್ಷಣೆ ನೀಡಬೇಕು. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ ಹಾವಳಿ ನಿಯಂತ್ರಿಸುವತ್ತ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಬೇಕು. ಬೆಳೆನಷ್ಟ ಪರಿಹಾರ ನೀಡಬೇಕು ಎಂದು ಸಂತ್ರಸ್ತ ರೈತರಾದ ಬಸವರಾಜು, ಶಿವಲಿಂಗಯ್ಯ, ದೇಸಯ್ಯ ಒತ್ತಾಯಿಸಿದ್ದಾರೆ.



ಹಾಸನದಲ್ಲಿ ಅತಿ ಹೆಚ್ಚು, ಧಾರವಾಡದಲ್ಲಿ ಅತಿ ಕಡಿಮೆ: ಶಾಲಾ ಶಿಕ್ಷಣ ಸಚಿವ ಮಾಹಿತಿ

ರಾಜ್ಯದಲ್ಲಿ 6,675 ಏಕೋಪಾಧ್ಯಾಯ ಶಾಲೆ

• ರಶ್ಮಿಬೇಲೂರು

ಬೆಂಗಳೂರು: ರಾಜ್ಯದಲ್ಲಿ ಏಕ ಶಿಕ್ಷಕ/ಶಿಕ್ಷಕಿ ಕಾರ್ಯ-ನಿರ್ವಹಿಸುವ ಸರ್ಕಾರಿ ಶಾಲೆಗಳ ಸಂಖ್ಯೆ 6,675ಕ್ಕೆ ಏರಿಕೆಯಾಗಿದೆ. 2024–25ನೇ ಶೈಕ್ಷಣಿಕ ಸಾಲಿಗೆ ಹೋಲಿಸಿದರೆ, ಈ ವರ್ಷದಲ್ಲಿ 1,263 ಶಾಲೆಗಳು ಈ ಪಟ್ಟಿಗೆ ಸೇರ್ಪಡೆಯಾಗಿವೆ.

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ವಿಧಾನಪರಿಷತ್ತಿಗೆ ನೀಡಿದ ಉತ್ತರದಲ್ಲಿ ಈ ಮಾಹಿತಿ ಇದೆ. ಆ ಪ್ರಕಾರ, 2024–25ರಲ್ಲಿ ರಾಜ್ಯದಲ್ಲಿ ಏಕ ಶಿಕ್ಷಕ/ಶಿಕ್ಷಕಿ ಇರುವ 5,412 ಸರ್ಕಾರಿ ಶಾಲೆಗಳಷ್ಟೇ ಇದ್ದವು. ಈಗ ಈ ಸಂಖ್ಯೆ 6,675.

ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ ಕೆ.ಎಸ್. ನವೀನ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಈ ಮಾಹಿತಿ ಇದೆ. ಹಾಸನ ಜಿಲ್ಲೆಯಲ್ಲಿ ಇಂತಹ ಅತಿಹೆಚ್ಚು ಶಾಲೆಗಳಿವೆ (586) ಎಂದು ತಿಳಿಸಿದ್ದರು. ನಂತರದ ಸ್ಥಾನಗಳಲ್ಲಿ ತುಮಕೂರು (426), ಕೋಲಾರ (347) ಮತ್ತು ಚಿಕ್ಕಬಳ್ಳಾಪುರ (334) ಇವೆ.

ಧಾರವಾಡದಲ್ಲಿ ಇಂತಹ ಶಾಲೆಗಳ ಸಂಖ್ಯೆ ಕಡಿಮೆ (26) ಇವೆ. ಏಕ ಶಿಕ್ಷಕ/ಶಿಕ್ಷಕಿ ಶಾಲೆಗಳ ಸಂಖ್ಯೆ ಕಡಿಮೆ ಇರುವ ಜಿಲ್ಲೆಗಳ ಪಟ್ಟಿಯ ನಂತರದ ಸ್ಥಾನಗಳಲ್ಲಿ ಬೆಂಗಳೂರು (39), ವಿಜಯನಗರ (45) ಮತ್ತು ಗದಗ (46) ಜಿಲ್ಲೆಗಳಿವೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವ ಕಾರಣದಿಂದಲೇ ಏಕ ಶಿಕ್ಷಕ/ಶಿಕ್ಷಕಿ ಇರುವ ಶಾಲೆಗಳ ಸಂಖ್ಯೆ ಏರಿಕೆಯಾಗಿದೆ ಎಂಬುದು ಇಲಾಖೆಯ ಅಧಿಕಾರಿಯೊಬ್ಬರು ನೀಡುವ ವಿವರಣೆ. ಈ ಕೊರತೆಯನ್ನು ನೀಗಿಸಲೆಂದೇ 2025–26ನೇ ಸಾಲಿನಲ್ಲಿ ಇಲಾಖೆಯು 51,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದರೆ, 2024–25ನೇ ಸಾಲಿಗೆ ಹೋಲಿಸಿದರೆ ಅತಿಥಿ ಶಿಕ್ಷಕರ ಸಂಖ್ಯೆಯಲ್ಲೂ 6,000ದಷ್ಟು ಏರಿಕೆಯಾಗಿದೆ.

ವಿಧಾನ ಪರಿಷತ್ತಿನಲ್ಲಿ ಈ ಬಗ್ಗೆ ವಿವರಣೆ ನೀಡಿದ್ದ ಮಧು ಬಂಗಾರಪ್ಪ, ‘ಒಳಮೀಸಲಾತಿ ಕಾರಣಕ್ಕೆ ಶಿಕ್ಷಕರ ನೇಮಕಾತಿ ವಿಳಂಬವಾಗಿತ್ತು. ಈಗ ಒಳ ಮೀಸಲಾತಿ ಸಮಸ್ಯೆ ಬಗೆಹರಿದಿದೆ. ಶೀಘ್ರವೇ ನೇಮಕಾತಿ ನಡೆಸಲಾಗುವುದು’ ಎಂದಿದ್ದರು.


‘ಏಕಶಿಕ್ಷಕ/ಶಿಕ್ಷಕಿ ಇರುವ ಶಾಲೆಗಳ ಪೈಕಿ ಬಹುತೇಕವು ಪ್ರಾಥಮಿಕ ಹಂತದವು. ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ 30ಕ್ಕಿಂತಲೂ ಹೆಚ್ಚು ಇದೆ. ಅಂತಹ ಶಾಲೆಗಳಲ್ಲಿ 1ರಿಂದ 5ನೇ ತರಗತಿವರೆಗಿನ ಮಕ್ಕಳನ್ನು ಒಟ್ಟಿಗೇ ಕೂರಿಸಿ ಪಾಠಮಾಡಬೇಕಾದ ಸ್ಥಿತಿ ಇದೆ. ಒಬ್ಬರೇ ಶಿಕ್ಷಕರು ಅಷ್ಟು ಮಕ್ಕಳನ್ನು ನಿರ್ವಹಣೆ ಮಾಡುವುದು ಕಷ್ಟ’ ಎಂಬುದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಕಳವಳ.

ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಲಿ, ‘ಐದು ತರಗತಿಗಳ ಮಕ್ಕಳನ್ನು ಒಂದೆಡೆಯೇ ಕೂರಿಸಿ ಪಾಠ ಮಾಡುವುದರಿಂದ, ಮಕ್ಕಳ ಕಲಿಕೆಗೂ ತೊಡಕಾಗುತ್ತದೆ. ಸರ್ಕಾರವು ಕೂಡಲೇ ಇಂತಹ ಶಾಲೆಗಳಗೆ ಮತ್ತೊಬ್ಬ ಶಿಕ್ಷಕರನ್ನು ನೇಮಕ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

188 ಶಾಲೆಗಳಲ್ಲಿ ಮಕ್ಕಳಿಲ್ಲ



ರಾಜ್ಯದ ವಿವಿಧ ಜಿಲ್ಲೆಗಳ 188 ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಇಲ್ಲ ಎಂಬ ವಿವರವನ್ನು ಮಧು ಬಂಗಾರಪ್ಪ ಅವರು ಸದನದ ಮುಂದೆ ಇರಿಸಿದ್ದರು. 188ರ ಪೈಕಿ 166 ಕಿರಿಯ ಪ್ರಾಥಮಿಕ, 25 ಹಿರಿಯ ಪ್ರಾಥಮಿಕ ಮತ್ತು 3 ಪ್ರೌಢ ಶಾಲೆಗಳು ಸೇರಿವೆ. ಶೂನ್ಯ ದಾಖಲಾತಿಯ ಅತಿಹೆಚ್ಚು ಶಾಲೆಗಳು ತುಮಕೂರು (45), ಕಲಬುರ್ಗಿ (21), ಕೋಲಾರ (20), ಕೊಪ್ಪಳ (18) ಮತ್ತು ಬೀದರ್ (17) ಜಿಲ್ಲೆಗಳಲ್ಲಿ ಇವೆ.



ರಾಜ್ಯ ಮಹಿಳಾ ಕಬಡ್ಡಿ ದ.ಕನ್ನಡಕ್ಕೆ ಟ್ರೋಫಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಜಿಗಣಿ ಸಮೀಪದ ಹರಪನಹಳ್ಳಿ ಬೃಂದಾವನ ಶಾಲೆಯಲ್ಲಿ ನಡೆದ ರಾಜ್ಯಮಟ್ಟದ ಮಹಿಳಾ ಕಬಡ್ಡಿ ಪಂದ್ಯಾವಳಿಯಲ್ಲಿ ದಕ್ಷಿಣ ಕನ್ನಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಕನ್ನಡ ತಂಡವು ಮೈಸೂರು ತಂಡವನ್ನು ಮಣಿಸಿ ಟ್ರೋಫಿ ಎತ್ತಿ ಹಿಡಿಯಿತು. ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಹಾಗೂ ಬೃಂದಾವನ ಶಾಲೆ ಸಹಯೋಗದಲ್ಲಿ ನಡೆದ ಪಂದ್ಯಾವಳಿಯಲ್ಲಿ ಕೋಲಾರ, ಚಿತ್ರದುರ್ಗ, ರಾಯಚೂರು ಸೇರಿದಂತೆ ಒಟ್ಟು 22 ತಂಡಗಳು ಭಾಗವಹಿಸಿದ್ದವು.

ಕರ್ನಾಟಕದಿಂದ ಹೆಚ್ಚು ಮಂದಿ ಕಬಡ್ಡಿ ಆಟಗಾರರು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಬೇಕು ಎಂಬುದು ನಮ್ಮ ಗುರಿಯಾಗಿದೆ. ಈ ನಿಟ್ಟಿನಲ್ಲಿ ತಾಲೂಕಿನ ಜಿಗಣಿಯಲ್ಲಿ ಮಹಿಳಾ ಕಬಡಿಯನ್ನು ಆಯೋಜಿಸಲಾಗಿದೆ ಎಂದು ಕಬಡ್ಡಿ ಪಟು ಶೇಖರ್ ತಿಳಿಸಿದರು.

ಚಿತ್ರಾವಳಿ



ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಸಂಸ್ಥೆಯು ಆಯೋಜಿಸಿದ್ದ ‘ಕೆಐಐಟಿ ನಾನ್ಹಿಪಾರಿ ಲಿಟಲ್ ಮಿಸ್ ಇಂಡಿಯಾ ಸ್ಪರ್ಧೆ’ ಯಲ್ಲಿ ಬೆಂಗಳೂರಿನ ಸಮೃದ್ಧಿ ತ್ರಿಪಾಠಿ ವಿಜೇತರಾಗಿದ್ದಾರೆ. ಸಮೃದ್ಧಿ ನಗರದ ಎಇಸಿಎಸ್ ಮ್ಯಾಗ್ನೋಲಿಯಾ ಮಾರುತಿ ಪಬ್ಲಿಕ್ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ. ಮೊದಲ ಮತ್ತು ಎರಡನೇ ರನ್ನರ್ ಅಪ್ ಆಗಿ ಮಧ್ಯಪ್ರದೇಶದ ಪ್ರಾಂಜಲ್ ಶರ್ಮಾ ಮತ್ತು ತೆಲಂಗಾಣದ ಪಿ. ಪ್ರಾರ್ಥಿನಿ ಆಯ್ಕೆಯಾಗಿದ್ದಾರೆ. ಕೆಐಐಟಿ ನಾನ್ಹಿಪಾರಿ ಲಿಟಲ್ ಮಿಸ್ ಇಂಡಿಯಾವು ರಾಷ್ಟ್ರಮಟ್ಟದ ಪ್ರತಿಭಾ ಪ್ರದರ್ಶನ ಮತ್ತು ಸೌಂದರ್ಯ ಸ್ಪರ್ಧೆಯಾಗಿದೆ. ಮೊದಲ ವಿಜೇತರಿಗೆ ₹28 ಲಕ್ಷ ಬಹುಮಾನ ನೀಡಲಾಯಿತು



ಯಲಹಂಕ ತಾಲ್ಲೂಕಿನ ರಾಜಾನುಕುಂಟೆ ಹಾಗೂ ಯಲಹಂಕ ಪ್ರೌಢಶಾಲೆಗಳಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್.ಯತೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಚರ್ಚಿಸಿದರು. ಜಿಲ್ಲಾಪಂಚಾಯತಿ ಯೋಜನಾ ನಿರ್ದೇಶಕ ಮೋಹನ್ ಕುಮಾರ್, ಸಹಾಯಕ ಕಾರ್ಯದರ್ಶಿ ಹರ್ಷ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಲ್.ಮಧು ಮತ್ತಿತರರು ಉಪಸ್ಥಿತರಿದ್ದರು

ಎಸ್‌ಸಿ, ಎಸ್‌ಟಿಯ ಕುಂದುಕೊರತೆ ಬಗೆಹರಿಸದಿದ್ದರೆ ಕ್ರಮ: ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಗಂಭೀರವಾಗಿ ಪರಿಗಣಿಸದೇ ಇರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಎಚ್ಚರಿಕೆ ನೀಡಿದರು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ನಿಯಂತ್ರಿಸುವ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಜಿಲ್ಲೆಯ 6 ಪಂಚಾಯಿತಿಗಳಲ್ಲಿ ಎಸ್‌ಸಿಎಸ್‌ಪಿ- ಟಿಎಸ್‌ಪಿ ಹಣ ದುರುಪಯೋಗ ಸಂಬಂಧ ತನಿಖಾ ತಂಡಗಳನ್ನು ರಚಿಸಲಾಗಿದ್ದು, ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅಡಿ ಮೀಸಲಾದ ಅನುದಾನ ಆಯಾ ಸಾಲಿನಲ್ಲೇ ವೆಚ್ಚವಾಗಿ ಅರ್ಹರಿಗೆ ಸೌಲಭ್ಯ ತಲುಪಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಪಿಯುಸಿ, ಡಿಪ್ಲೊಮಾ/ಐಟಿಐ, ಡಿಗ್ರಿ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂದರು.

ಪ್ರತಿ ಎರಡನೇ ಭಾನುವಾರ ದಲಿತರ ಸಭೆಯನ್ನು ಠಾಣಾ ಮಟ್ಟದಲ್ಲಿ ನಡೆಸಬೇಕು. ಮುಖಂಡರನ್ನು ಆಹ್ವಾನಿಸಿ ಕುಂದು ಕೊರತೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್. ಯತೀಶ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣ್ ರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ರವೀಂದ್ರನಾಥ್ ಮೇಟಿ ಉಪಸ್ಥಿತರಿದ್ದರು.

ರಾಷ್ಟ್ರೀಯ ರೈತರ ದಿನಾಚರಣೆಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಅಭಿಮತ

‘ರೈತರು ಸುಸ್ಥಿರ ಕೃಷಿಗೆ ಆದ್ಯತೆ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರು ಸಾವಯವ, ಸಮಗ್ರ ಹಾಗೂ ಸುಸ್ಥಿರ ಕೃಷಿಗೆ ಆದ್ಯತೆ ನೀಡಬೇಕು’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಸಮನ್ವಯ ಟ್ರಸ್ಟ್, ಫುಡ್ ಚೈನ್, ಕೃಷಿ ತಂತ್ರಜ್ಞರ ಸಂಸ್ಥೆ (ಐಎಟಿ) ಹಾಗೂ ದಕ್ಷಿಣ ಕನ್ನಡದ ಐಸಿಎಆರ್–ಕೆವಿಕೆಯ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ರೈತರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಪರಿವರ್ತಿಸಲು ಸರ್ಕಾರ ಹಾಗೂ ಕೃಷಿ ವಿಶ್ವವಿದ್ಯಾಲಯಗಳು ರೈತರಿಗೆ ನೆರವಾಗಲಿವೆ. ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು. ಕೃಷಿ ಕ್ಷೇತ್ರದಲ್ಲಿ ನೂತನ ಸಂಶೋಧನೆಗೆ ನೆರವು ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ’ ಎಂದು ತಿಳಿಸಿದರು.

ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಮಾತನಾಡಿ, ‘ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯ (ಪಿಎಂಎಫ್‌ಎಂಇ) ಅಡಿಯಲ್ಲಿ ಕಿರು ಆಹಾರ ಉದ್ದಿಮೆಗಳನ್ನು ಸ್ಥಾಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ₹15 ಲಕ್ಷ ಸಹಾಯಧನ ನೀಡಲಾಗುತ್ತಿದೆ. ಕಿರು ಆಹಾರ ಘಟಕಗಳನ್ನು ಸ್ಥಾಪಿಸಿದ ನಂತರ ರೈತರಿಂದ ಕಚ್ಚಾ ಉತ್ಪನ್ನಗಳನ್ನು ಖರೀದಿಸಿ, ಅದಕ್ಕೆ ಮೌಲ್ಯವರ್ಧನೆ ಮಾಡಿ ಹೆಚ್ಚು ಆದಾಯ ಗಳಿಸಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ಕೆಪೆಕ್ ಕೇಂದ್ರ ಕಚೇರಿಗೆ ಭೇಟಿ ನೀಡಬಹುದು’ ಎಂದು ಸಲಹೆ ನೀಡಿದರು.

ಪ್ರಗತಿಪರ ರೈತ ಎಂ.ಸಿ. ರಂಗಸ್ವಾಮಿ ಮಾತನಾಡಿ, ‘ರಾಜ್ಯ ಸರ್ಕಾರ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಶೀತಲ ಗೃಹ ಸ್ಥಾಪಿಸಬೇಕು. ರೈತರು ಬೆಳೆದ ಹಣ್ಣು–ತರಕಾರಿಗಳನ್ನು ಇದರಲ್ಲಿ ಸಂಗ್ರಹ ಮಾಡಿ, ಉತ್ತಮ ಬೆಲೆಗೆ ಮಾರಾಟ ಮಾಡಲು ಸಹಾಯಕವಾಗುತ್ತದೆ’ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಹರೇಕಳ ಹಾಜಬ್ಬ, ಅಬ್ದುಲ್ ಖಾದರ್ ನಡಕಟ್ಟಿನ್, ಸತ್ಯನಾರಾಯಣ ಬೇಲೇರಿ, ಅಮ್ಮೆ ಮಹಾಲಿಂಗ್ ನಾಯಕ್ ಅವರಿಗೆ ಇದೇ ಸಂದರ್ಭದಲ್ಲಿ ಗ್ರಾಮೀಣ ನಾಯಕತ್ವ ಹಾಗೂ ಕೃಷಿ ಶ್ರೇಷ್ಠತಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಎ.ಬಿ. ಪಾಟೀಲ, ಸಮನ್ವಯ ಟ್ರಸ್ಟ್‌ನ ಸುಮಲತಾ ಕೆ.ಎಚ್., ಎಫ್‌ಕೆಸಿಸಿಐನ ಉಪಾಧ್ಯಕ್ಷ ಟಿ. ಸಾಯಿರಾಮ ಪ್ರಸಾದ್, ಎಫ್‌ಕೆಸಿಸಿಐನ ಅಗ್ರಿಟೆಕ್ ಸಮಿತಿಯ ಅಧ್ಯಕ್ಷೆ ರೂಪಾರಾಣಿ, ತೋಟಗಾರಿಕೆ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಸ್.ವಿ. ಹಿತ್ತಲಮನಿ ಉಪಸ್ಥಿತರಿದ್ದರು.



ನಗರದ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಸತ್ಯನಾರಾಯಣ ಬೇಲೇರಿ, ಹರೇಕಳ ಹಾಜಬ್ಬ, ಅಮ್ಮೆ ಮಹಾಲಿಂಗ ನಾಯಕ್, ಅಬ್ದುಲ್ ಖಾದರ್ ನಡಕಟ್ಟಿನ್ ಅವರಿಗೆ ಗ್ರಾಮೀಣ ನಾಯಕತ್ವ ಮತ್ತು ಕೃಷಿ ಶ್ರೇಷ್ಠತಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮನ್ವಯ ಟ್ರಸ್ಟ್‌ನ ಸಂಸ್ಥಾಪಕಿ ಸುಮಂಗಲ ಕೆ.ಎಚ್, ಟಿ. ಸಾಯಿರಾಮ್ ಪ್ರಸಾದ್, ರೂಪಾರಾಣಿ, ಸಿ.ಎನ್. ಶಿವಪ್ರಕಾಶ್, ಎನ್. ಚಲುವರಾಯಸ್ವಾಮಿ, ಎ.ಬಿ ಪಾಟೀಲ್, ಐಎಟಿ ಪ್ರಧಾನ ಕಾರ್ಯದರ್ಶಿ ಜಿ.ಎಚ್. ಯೋಗೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ಮನಸೂರೆಗೊಳ್ಳುವ ಶಿಕ್ವಾಗಾ
ಅಮೆರಿಕದ ಶಿಕ್ವಾಗಾ ಜಲಪಾತ ಹಾಗೂ ಅದಕ್ಕೆ ಸಮೀಪದಲ್ಲೇ ಇರುವ ವಾಟ್‌ಕಿನ್ಸ್ ಗ್ಲೆನ್ ಸ್ಟೇಟ್ ಪಾರ್ಕ್‌ನಲ್ಲೊಂದು ಸುತ್ತು...

15

ಮಂಗಳೂರಿನ ರಿತುಪರ್ಣ ಪ್ರತಿಭೆ ಮತ್ತು ಪರಿಶ್ರಮದಿಂದ ವಾರ್ಷಿಕ ₹72.5 ಲಕ್ಷ ವೇತನದ ಉದ್ಯೋಗವನ್ನು ವಿಶ್ವದ ಪ್ರತಿಷ್ಠಿತ ಕಂಪನಿಯಲ್ಲಿ ಗಿಟ್ಟಿಸಿಕೊಂಡಿದ್ದಾರೆ. ಕೊಪ್ಪಳ ಸಮೀಪದ ಬೆಟಗೇರಿಯ ರೈತ ಏಳುಕೋಟೇಶ ಯೂಟ್ಯೂಬ್ ಚಾನಲ್ ಆರಂಭಿಸಿ ಯಶ ಕಂಡಿದ್ದಾರೆ. ಹೊಸ ವರ್ಷದ ಹೊಸ್ತಿಲಲ್ಲಿ ಈ ಎರಡು ಪ್ರೇರಣಾದಾಯಕ ಕಥನಗಳು ನಿಮ್ಮ ಓದಿಗಾಗಿ..

ರೋಲ್ಸ್ ರಾಯ್ಸ್‌ನಲ್ಲಿ ರಿತುಪರ್ಣ ಪಯಣ



ರಿತುಪರ್ಣ ಕೆ.ಎಸ್

• ಸಂಧ್ಯಾ ಹೆಗಡೆ

‘ಸೀನಿಯರ್‌ಗಳು ಇಂಟರ್ನ್‌ಷಿಪ್‌ಗಾಗಿ ಕಂಪನಿಗಳಿಗೆ ಅರ್ಜಿ ಸಲ್ಲಿಸುವ ತರಾತುರಿಯಲ್ಲಿದ್ದರು. ನನಗೂ ಇಂಟರ್ನ್‌ಷಿಪ್ ಮಾಡುವ ತುಡಿತ ಹುಟ್ಟಿತು. ಆಗ ನಾನಿನ್ನೂ ಮೂರನೇ ಸೆಮಿಸ್ಟರ್‌ನಲ್ಲಿದ್ದೆ. ಆನ್‌ಲೈನ್‌ನಲ್ಲಿ ತಡಕಾಡಿ, ಹಲವಾರು ಕಂಪನಿಗಳಿಗೆ ಇಂಟರ್ನ್‌ಷಿಪ್‌ಗೆ ಅವಕಾಶ ಕೋರಿ ಮೇಲ್ ಮಾಡುತ್ತಿದ್ದೆ. ಇಮೇಲ್ ತೆರೆದಾಗಲೆಲ್ಲ ಅರ್ಜಿ ತಿರಸ್ಕೃತ ಉತ್ತರಗಳೇ ದಪ್ಪಕ್ಷರಗಳಲ್ಲಿ ಕಾಣುತ್ತಿದ್ದವು. ಇಮೇಲ್ ನೋಡುವುದನ್ನೇ ನಿಲ್ಲಿಸಿದೆ. ಕೆಲ ದಿನ ಬಿಟ್ಟು ಮತ್ತೆ ಪರಿಶೀಲಿಸಿದಾಗ ಅಮೆರಿಕದ ರೋಲ್ಸ್ ರಾಯ್ಸ್ ಕಂಪನಿಯ ಮೇಲ್‌ವೊಂದು ನನಗಾಗಿ ಕಾಯುತ್ತಿತ್ತು. ಅದೃಷ್ಟದ ಅನ್ವೇಷಣೆಗೆ ಮುನ್ನುಡಿ ಬರೆದ ದಿನವದು...’

–ಅಮೆರಿಕದ ಟೆಕ್ಸಾಸ್‌ನಲ್ಲಿರುವ ಪ್ರತಿಷ್ಠಿತ ರೋಲ್ಸ್ ರಾಯ್ಸ್ ಜೆಟ್ ಎಂಜಿನ್ ಕಂಪನಿಯಲ್ಲಿ ₹72.5 ಲಕ್ಷ ವಾರ್ಷಿಕ ವೇತನದ ಉದ್ಯೋಗಕ್ಕೆ ನೇಮಕಗೊಂಡಿರುವ ಮಂಗಳೂರಿನ ಎಂಜಿನಿಯರ್ ರಿತುಪರ್ಣ ಕೆ.ಎಸ್. ಅವರ ಮಾತುಗಳಿವು.

ವೈದ್ಯೆಯಾಗಬೇಕೆಂದು ಕನಸು ಹೊತ್ತ ಯುವತಿ, ಅನಿವಾರ್ಯತೆಯನ್ನು ಒಪ್ಪಿಕೊಂಡು ಎಂಜಿನಿಯರಿಂಗ್ ಸೇರಿ, ಕಠಿಣ ಪರಿಶ್ರಮದಿಂದ ಸವಾಲುಗಳನ್ನೇ ಯಶಸ್ಸಿನ ಮೆಟ್ಟಿಲಾಗಿ ಪರಿವರ್ತಿಸಿಕೊಂಡವರು. ಅವರು ಕಂಪನಿ ನೀಡಿದ ಟಾಸ್ಕ್‌ಗಳನ್ನು ಪೂರ್ಣಗೊಳಿಸುತ್ತಲೇ, ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಕೊಂಡು, ದಣಿವರಿಯದೆ ಹೊಣೆಗಾರಿಕೆಯನ್ನು ನಿರ್ವಹಿಸಿದರು.

‘ನಾನು ಚಿಕ್ಕಂದಿನಿಂದಲೇ ಡಾಕ್ಟರ್ ಆಗಬೇಕೆಂದು ಕನವರಿಸುತ್ತಿದ್ದೆ. ದ್ವಿತೀಯ ಪಿಯುಸಿವರೆಗೂ ಬಿಳಿ ಏಪ್ರಾನ್, ಕೊರಳಲ್ಲಿ ಸೆಥೋಸ್ಕೋಪ್ ಹಾಕಿಕೊಳ್ಳುವ ಕನಸು ತುಂಬಿಕೊಂಡಿದ್ದೆ. ಆಗ, ಕೋವಿಡ್ ದುರಿತ ಕಾಲ. ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದರೂ, ನೀಟ್ ಫಲಿತಾಂಶ ಬಂದಾಗ ನಿರಾಶೆ ಆಯಿತು. ಸರ್ಕಾರಿ ಕೋಟಾದಲ್ಲಿ ಸೀಟ್ ಸಿಗಲಿಲ್ಲ.

ಭರತನಾಟ್ಯ, ಝುಂಬಾ ಡಾನ್ಸ್...

ಬೆಳಿಗ್ಗೆ 9.30 ರಿಂದ ಸಂಜೆ 4.30 ರ ವರೆಗೆ ಕಾಲೇಜಿನ ತರಗತಿಗಳು. ನಂತರ ಮನೆಗೆ ಬಂದು ಟಾಸ್ಕ್ ಪೂರ್ಣಗೊಳಿಸುವ ಧಾವಂತ. ರಾತ್ರಿ 12.30 ದಾಟಿದರೂ ಮುಗಿಯದ ಕೆಲಸ. ಒತ್ತಡವೇ ಜೀವನ ಎಂಬಂತಾದಾಗ, ಯಾಕಿಷ್ಟು ಕಷ್ಟಪಡಬೇಕು ಎಂದು ಒಮ್ಮೊಮ್ಮೆ ಅವರಿಗೆ ಕಾಡಿದ್ದಿದೆಯಂತೆ. ಆ ಸಂದರ್ಭದಲ್ಲಿ ತಲ್ಲಣಗಳ ಹೊರೆ ಕಳಚಿಕೊಳ್ಳಲು ಅವರಿಗೆ ನೆರವಾದದ್ದು ಭರತನಾಟ್ಯ ಮತ್ತು ಝುಂಬಾ.

ಭರತನಾಟ್ಯ ಕಲಾವಿದೆಯಾಗಿರುವ ರಿತುಪರ್ಣ ಕೆಲಸದ ಒತ್ತಡ ತಡೆಯಲು ಸಾಧ್ಯವಾಗದಾಗ, ಭರತನಾಟ್ಯ ಅಥವಾ ಝುಂಬಾಕ್ಕೆ ಮೊರೆಹೋಗುತ್ತಿದ್ದಳು ಎನ್ನುತ್ತಾರೆ ಅವರ ಪಾಲಕರು.



ಭರತನಾಟ್ಯ ಭಂಗಿಯಲ್ಲಿ ರಿತುಪರ್ಣ

ಖಾಸಗಿಯಾಗಿ ಸೀಟ್ ಪಡೆದುಕೊಂಡು ಹೋಗಬಾರದೆಂದು ತೀರ್ಮಾನಿಸಿದೆ. ಅಪ್ಪ–ಅಮ್ಮನ ಸಲಹೆಯಂತೆ, ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ರೊಬೋಟಿಕ್ಸ್ ಆ್ಯಂಡ್ ಆಟೊಮೇಷನ್ ಓದಲು ಸೇರಿಕೊಂಡೆ..’ ಎನ್ನುತ್ತಾರೆ ರಿತುಪರ್ಣ.

ಇಷ್ಟವಿಲ್ಲದ ಎಂಜಿನಿಯರಿಂಗ್ ಕೋರ್ಸ್ ಸೇರಿಕೊಂಡಿದ್ದ ರಿತುಪರ್ಣರಿಗೆ ತರಗತಿಗೆ ಹಾಜರಾಗಲು ಮನಸ್ಸಾಗುತ್ತಿರಲಿಲ್ಲ. ಇನ್ನಷ್ಟು ಶ್ರಮ ಹಾಕಿದ್ದರೆ ವೈದ್ಯಕೀಯ ಸೀಟ್ ಪಡೆಯಬಹುದಿತ್ತು ಎಂಬ ಕೊರಗು ಕಡಿಮೆ ಆಗಿರಲಿಲ್ಲ. ಅಂತಹ ಗಳಿಗೆಯಲ್ಲಿ ಮನೋಬಲ ಅವರ ಕೈಹಿಡಿದು ಮುನ್ನಡೆಸಿತು. ವಾಸ್ತವಕ್ಕೆ ಬಂದು ಅಭ್ಯಾಸದೊಂದಿಗೆ ಅನ್ವೇಷಣೆಯೆಡೆಗೆ ಗಮನ ಕೇಂದ್ರೀಕರಿಸಿದರು.

ಪಠ್ಯ ಚಟುವಟಿಕೆಯ ಭಾಗವಾಗಿ ರಿತುಪರ್ಣ ಸಹಪಾಠಿಗಳೊಡಗೂಡಿ ಅಭಿವೃದ್ಧಿಪಡಿಸಿದ ಅಡಿಕೆ ಔಷಧ ಸಿಂಪರಣೆ ಮತ್ತು ಅಡಿಕೆ ಗೊನೆ ಕೊಯ್ಯುವ ಯಂತ್ರದ ಪ್ರಾತ್ಯಕ್ಷಿಕೆಯು 2022ರಲ್ಲಿ ಗೋವಾದಲ್ಲಿ ನಡೆದ ಐಎನ್‌ಇಎಕ್ಸ್ ಇಂಟರ್‌ನ್ಯಾಷನಲ್ ಎಕ್ಸ್‌ಪೊದ ಅಂತಿಮ ಸ್ಪರ್ಧೆಯಲ್ಲಿ ಒಂದು ಸ್ವರ್ಣ, ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿತು.

ಇದೇ ವೇಳೆ, ಮಂಗಳೂರು ನಗರದ ಜ್ವಲಂತ ಸಮಸ್ಯೆಗಳ ಅಧ್ಯಯನಕ್ಕೆ ಅಂದಿನ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಬೇರೆ ಬೇರೆ ಎಂಜಿನಿಯರಿಂಗ್ ಕಾಲೇಜುಗಳ 20 ಆಯ್ದ ವಿದ್ಯಾರ್ಥಿಗಳ ತಂಡ ರಚಿಸಿದ್ದರು. 2024ರಲ್ಲಿ ರಚನೆಯಾಗಿದ್ದ ತಂಡದಲ್ಲಿ ರಿತುಪರ್ಣ ಕೂಡ ಒಬ್ಬರಾಗಿದ್ದರು. ಮನೆ–ಮನೆ ಕಸ ಕೊಂಡೊಯ್ಯುವ ಸಮಸ್ಯೆಗೆ ಪರಿಹಾರವಾಗಿ, ಕಸ ವಾಹನದ ಚಲನೆಯನ್ನು ಗುರುತಿಸುವ ಆ್ಯಪ್‌ವೊಂದನ್ನು ಅವರು ತಮ್ಮ ಸ್ನೇಹಿತರೊಡಗೂಡಿ ಅಭಿವೃದ್ಧಿಪಡಿಸಿದರು.

ಹೀಗೆ, ಪಠ್ಯದೊಂದಿಗೆ ಪ್ರಾಜೆಕ್ಟ್‌ಗಳ ಮೇಲೆ ಗಮನ ಕೇಂದ್ರೀಕರಿಸಿದ್ದ ರಿತುಪರ್ಣ, ಮೂರನೇ ಸೆಮಿಸ್ಟರ್‌ನಲ್ಲಿರುವಾಗಲೇ ಇಂಟರ್ನ್‌ಷಿಪ್ ಆರಂಭಿಸಿದರು.

‘ನಿದ್ದೆಯಲ್ಲಿ ಕಾಣುವುದು ಕನಸಲ್ಲ, ನಿದ್ದೆಗೆಡುವಂತೆ ಮಾಡುವುದು ನಿಜವಾದ ಕನಸು ಎಂಬ ಅಬ್ದುಲ್ ಕಲಾಂ ಅವರ ಪ್ರೇರಣೆಯ ನುಡಿಯಂತೆ, ಬಾನೆತ್ತರದ ಗುರಿಗಳಲ್ಲೇ ದೃಷ್ಟಿ ನೆಟ್ಟಿತ್ತು. ರೋಲ್ಸ್ ರಾಯ್ಸ್ ಕಂಪನಿಯಿಂದ ಮೇಲ್ ಬಂದಿತ್ತು. ‘ಇಂಟರ್ನ್‌ಷಿಪ್ ಮಾಡಲು ನಿಮಗೆ ಅರ್ಹತೆ ಇದೆಯೇ’ ಎಂಬ ಅರ್ಥ ಕೊಡುವಂತಿತ್ತು. ಅದು ನನ್ನ ಆತ್ಮಾಭಿಮಾನವನ್ನು ಕೆಣಕಿತು. ಯಾವುದೇ ರೀತಿಯ ಟಾಸ್ಕ್ ಕೊಟ್ಟರೂ ಸ್ವೀಕರಿಸಬಲ್ಲೆನೆಂಬ ವಿಶ್ವಾಸದೊಂದಿಗೆ ಪ್ರತಿಕ್ರಿಯಿಸಿದೆ..’

‘ನಿರೀಕ್ಷೆ ಹುಸಿಯಾಗಲಿಲ್ಲ. ಸುಮಾರು 25 ದಿನಗಳ ನಂತರ ಟಾಸ್ಕ್‌ನೊಂದಿಗೆ ಕಂಪನಿಯಿಂದ ಮರು ಮೇಲ್ ಬಂದಿತು. ಟಾಸ್ಕ್ ಪೂರ್ಣಗೊಳಿಸಲು ನಾಲ್ಕು ವಾರಗಳನ್ನು ನಿಗದಿ ಪಡಿಸಲಾಗಿತ್ತು. ಆದರೆ, ನಾನು ಎರಡು ವಾರದಲ್ಲಿ ಅದನ್ನು ಪೂರ್ಣಗೊಳಿಸಿದೆ. ಒಂದರ ಬೆನ್ನಿಗೆ ಇನ್ನೊಂದರಂತೆ ಕಂಪನಿ ನೀಡಿದ ಆರು ಟಾಸ್ಕ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಆಮೇಲೆ, ರೋಲ್ಸ್ ರಾಯ್ಸ್‌ನಲ್ಲಿ ಇಂಟರ್ನ್‌ಷಿಪ್‌ಗೆ ಅರ್ಹತೆ ಪಡೆದುಕೊಳ್ಳಲು ಸಾಧ್ಯವಾಯಿತು. ಮೂರು ತಿಂಗಳು ನಿರಂತರ ಟಾಸ್ಕ್‌ಗಳು, ಎರಡು ತಿಂಗಳ ಇಂಟರ್ನ್‌ಷಿಪ್‌ನಲ್ಲಿ ನಾನು ಕಲಿತಿದ್ದು ಅಗಾಧ’ ಎನ್ನುವಾಗ ರಿತುಪರ್ಣ ಮಾತಿನಲ್ಲಿ ಸಂತೃಪ್ತಿ ಇತ್ತು.

‘ಇಂಟರ್ನ್‌ಷಿಪ್ ಮುಗಿಸಿದ ಮೇಲೆ ಮೂರ್ನಾಲ್ಕು ಸುತ್ತಿನಲ್ಲಿ ಸಂದರ್ಶನ ನಡೆದವು. ಎಲ್ಲವೂ ನಡೆದಿದ್ದು ಆನ್‌ಲೈನ್‌ನಲ್ಲೇ. ಕಬ್ಬಿಣದ ಕಡಲೆಯಂತಹ ಟಾಸ್ಕ್ ನಿಭಾಯಿಸಿದ ಕಾರಣಕ್ಕೆ ಸಂದರ್ಶನ ಅಷ್ಟೊಂದು ಕಷ್ಟ ಅನ್ನಿಸಲಿಲ್ಲ. ಇದಾಗಿ ಕೆಲವೇ ದಿನಗಳಲ್ಲಿ ವಾರ್ಷಿಕ ₹39.58 ಲಕ್ಷ ಪ್ಯಾಕೇಜ್‌ನ ನೇಮಕಾತಿ ಆದೇಶ ಬಂತು. ಇಲ್ಲಿಂದ ಇನ್ನೊಂದು ಸವಾಲು ಎದುರಾಯಿತು. ನೇಮಕಗೊಂಡ ಮೇಲೆ ಆನ್‌ಲೈನ್ ತರಬೇತಿ ಆರಂಭವಾಯಿತು. ಅಮೆರಿಕದ ಸಮಯಕ್ಕೆ ಅನುಗುಣವಾದ ತರಬೇತಿ ಅದು. ಇಲ್ಲಿನ ಸಮಯ ರಾತ್ರಿ 12ಕ್ಕೆ ಶುರುವಾಗುವ ತರಬೇತಿ ಬೆಳಿಗ್ಗೆ 6.30ಕ್ಕೆ ಮುಕ್ತಾಯವಾಗುತ್ತಿತ್ತು. ನಿದ್ದೆಯಿಲ್ಲದೆ ನಿತ್ರಾಣಗೊಳ್ಳುವ ಪರಿಸ್ಥಿತಿ ಬಂತು. ಎಲ್ಲವನ್ನೂ ನಿಭಾಯಿಸುವ ಬಲ ಕೊಟ್ಟಿದ್ದು ಅಪ್ಪ–ಅಮ್ಮನ ಕಕ್ಕುಲಾತಿ’ ಎಂದು ಧನ್ಯತಾಭಾವದಿಂದ ಹೇಳುತ್ತಾರೆ.

ಇಂಟರ್ನ್‌ಷಿಪ್ ಹಾಗೂ ತರಬೇತಿ ವೇಳೆ ರಿತುಪರ್ಣ ಪರಿಣಾಮಕಾರಿಯಾಗಿದ್ದರು. ಇದನ್ನು ಗಮನಿಸಿದ ಕಂಪನಿ ಪ್ಯಾಕೇಜ್ ಮೊತ್ತವನ್ನು ವಾರ್ಷಿಕ ₹72.5 ಲಕ್ಷಕ್ಕೆ ಹೆಚ್ಚಿಸಿತು. ಪಾಲಕರ ಮನದಲ್ಲಿ ಬೆಟ್ಟದಷ್ಟು ನಿರೀಕ್ಷೆ ಸೃಷ್ಟಿಸಬಾರದೆಂಬ ಸದುದ್ದೇಶದಿಂದ ಇಂಟರ್ನ್‌ಷಿಪ್‌ಗೆ ಅವಕಾಶ ಸಿಗುವವರೆಗೂ, ಎಲ್ಲ ಸವಾಲುಗಳನ್ನು ಏಕಾಂಗಿಯಾಗಿ ಎದುರಿಸಿದರು. ನಂತರ ಮಗಳ ಸಾಧನೆ ಕಂಡ ಪಾಲಕರ ಸಂತೋಷಕ್ಕೆ ಪಾರವೇ ಇಲ್ಲ.

ಸ್ವದೇಶದಲ್ಲಿ ಆರು ತಿಂಗಳ ಇಂಟರ್ನ್‌ಷಿಪ್ ಪೂರ್ಣಗೊಳಿಸಿ, ಉದ್ಯೋಗ ಸೇರಲು ಬರುವ ಏಪ್ರಿಲ್‌ನಲ್ಲಿ ಅಮೆರಿಕಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಕುಡ್ಲದ ಈ ಕುವರಿ ಮಂಗಳೂರಿನಲ್ಲಿ ಸೀನಿಯರ್ ಕೆಮಿಸ್ಟ್ ಆಗಿರುವ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕೋದೂರು ಗ್ರಾಮದ ಸುರೇಶ್ ಕೆ.ಎನ್ ಮತ್ತು ಗೀತಾ ಸುರೇಶ್ ದಂಪತಿಯ ಪುತ್ರಿ.

ತುಂಬಾ ಸಲ ಬದುಕಿನಲ್ಲಿ ಅಂದುಕೊಂಡಂತೆ ನಡೆಯುವುದಿಲ್ಲ. ಬಯಸಿದ್ದು ಒಂದು, ಆಗುವುದು ಮತ್ತೊಂದು. ಆದರೆ, ರಿತುಪರ್ಣ ಆಗಬಯಸಿದ್ದು ವೈದ್ಯೆ, ಆಗಿದ್ದು ಎಂಜಿನಿಯರ್. ಆದರೂ ಅವರ ಸಮರ್ಪಣಾ ಮನೋಭಾವ ಯಶಸ್ಸಿನ ತುತ್ತತುದಿಗೆ ತಲುಪಿಸಿದೆ. ಇಷ್ಟವಿಲ್ಲದನ್ನು, ಇಷ್ಟವಾಗಿಸಿಕೊಂಡಿದ್ದರ ಫಲ ಇದು. ❖



ನಮಸ್ತೆ, ನಾನು ನಿಮ್ಮ ಅಗ್ರಿಬ್ರ್ಯಾಂಡ್‌ನ...

> ಯೂಟ್ಯೂಬ್ ಚಾನಲ್‌ನಿಂದಾಗಿ ರೈತರ ಸಾಧನೆ ಕಥನವನ್ನು ಜನರ ಮುಂದಿಡಲು ಸಾಧ್ಯವಾಗಿದೆ. ನಿತ್ಯ ಕನಿಷ್ಠ ಒಂದು ವಿಡಿಯೊವನ್ನಾದರೂ ಮಾಡಿದರೆ ಉತ್ತಮ ಆದಾಯ ಗಳಿಸಲು ಸಾಧ್ಯವಿದೆ.
>
> **ಏಳುಕೋಟೇಶ ಕೋಮಲಾಪುರ,** ಯೂಟ್ಯೂಬರ್



ಅಗ್ರಿಬ್ರ್ಯಾಂಡ್ ಯೂಟ್ಯೂಬ್ ವಾಹಿನಿ ಹೀಗಿದೆ ನೋಡಿ... ಚಿತ್ರಗಳು: ಭರತ್ ಕಂದಕೂರ

• ಪ್ರಮೋದ ಕುಲಕರ್ಣಿ

‘ನಮಸ್ತೆ, ಅಗ್ರಿಬ್ರ್ಯಾಂಡ್ ಯೂಟ್ಯೂಬ್ ಚಾನಲ್‌ಗೆ ಸ್ವಾಗತ. ನಮ್ದು ರೈತರಿಗಾಗಿ ರೈತನೇ ವಿಡಿಯೊ ಮಾಡ್ತಿರೊ ಚಾನಲ್ ಇದು’.

–ಹೀಗೆ ಏಳುಕೋಟೇಶ ಕೋಮಲಾಪುರ ತಮ್ಮನ್ನು ಪರಿಚಯಿಸಿಕೊಳ್ಳುತ್ತಾರೆ. ಉತ್ತರ ಕರ್ನಾಟಕದ ಅಪ್ಪಟ ಗ್ರಾಮೀಣ ಸೊಗಡಿನ ಭಾಷೆಯಲ್ಲಿ ಆತ್ಮೀಯತೆಯ ಹದಬೆರೆತ ಮಾತಿನೊಂದಿಗೆ ಕೃಷಿಕರ ಸಾಹಸಗಾಥೆಗಳು, ಕೃಷಿ ಚಟುವಟಿಕೆಗಳ ವಿಭಿನ್ನ ಆಯಾಮಗಳು, ತಂತ್ರಜ್ಞಾನದ ಬಳಕೆ, ರೈತರಿಗೆ ಸರ್ಕಾರದಿಂದ ಸಿಗುವ ಯೋಜನೆಗಳ ಬಗ್ಗೆ ತಮ್ಮ ‘ಅಗ್ರಿಬ್ರ್ಯಾಂಡ್’ನಲ್ಲಿ ಪರಿಚಯಿಸುತ್ತಲೇ ಹೋಗುತ್ತಾರೆ.

ಬದುಕಿನ ಬಂಡಿ ಸಾಗಿಸಲು ತಮ್ಮ ನಾಲ್ಕು ಎಕರೆ ಮಸಾರಿ ಮಣ್ಣಿನ ಕೃಷಿ ಭೂಮಿಯನ್ನು ಆಸರೆಯಾಗಿಸಿಕೊಂಡಿರುವ ಅವರು, ಕೊಪ್ಪಳ ಜಿಲ್ಲಾ ಕೇಂದ್ರದಿಂದ 25 ಕಿ.ಮೀ. ದೂರದಲ್ಲಿರುವ ಬೆಟಗೇರಿಯವರು. ಅವರಿಗೆ 53 ವರ್ಷ ವಯಸ್ಸು. ಪತ್ನಿ, ಮೂವರು ಮಕ್ಕಳು ಹಾಗೂ ಇಬ್ಬರು ಮೊಮ್ಮಕ್ಕಳಿದ್ದಾರೆ. ಆದರೂ ನಿತ್ಯ ತಮ್ಮೂರು, ಹೋಬಳಿ, ಜಿಲ್ಲೆ ಮತ್ತು ಹಲವು ಬಾರಿ ನೆರೆ ಜಿಲ್ಲೆಗಳಿಗೆ ತೆರಳಿ ಕೃಷಿ ಕ್ಷೇತ್ರದ ಹೊಸ ಹೊರಳು ನೋಟಗಳನ್ನು ತಮ್ಮ ಚಾನಲ್ ಮೂಲಕ ಜನರ ಮುಂದಿಡುತ್ತಾರೆ.

ಬೆಳಗಿನ ಜಾವ ನಾಲ್ಕು ಗಂಟೆಗೆಲ್ಲ ಹೊಲಕ್ಕೆ ಹೋಗಿ ನೀರು ಹರಿಸಿ ಮಧ್ಯಾಹ್ನದ ಹೊತ್ತಿಗೆ ಕೃಷಿ ಸಂಬಂಧಿತ ಕೆಲಸಗಳನ್ನು ಮುಗಿಸಿಕೊಳ್ಳುತ್ತಾರೆ. ಜೇನು ಕೃಷಿ, ನುಗ್ಗೇಕಾಯಿ, ಔಡಲ, ಮೆಕ್ಕಜೋಳ, ಸೂರ್ಯಕಾಂತಿ, ಮೆಣಸಿನಕಾಯಿ, ಹಾಗಲಕಾಯಿ, ಟೊಮೆಟೊ... ಹೀಗೆ ತರಹೇವಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಮಧ್ಯಾಹ್ನದ ಬಳಿಕವೇ ‘ಅಗ್ರಿಬ್ರ್ಯಾಂಡ್’ ಚಾನಲ್‌ಗೆ ಬೇಕಾದ ವಿಷಯಗಳನ್ನು ಹುಡುಕುತ್ತ ಊರೂರು ಅಲೆದಾಡಿ ಕೃಷಿಕರ ನೋವು, ನಲಿವಿಗೆ ಧ್ವನಿಯಾಗುತ್ತಿದ್ದಾರೆ. ರೈತರು ಮಾಡಿದ ಸಾಹಸದ ಕೆಲಸಗಳಿಗೆ ಇವರ ಚಾನಲ್ ಮೂಲಕ ಜನರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಯುವ ರೈತರು ಮಾಡುತ್ತಿರುವ ಪ್ರಯೋಗಗಳು ಇವರಿಂದಾಗಿ ಹೆಚ್ಚು ಪ್ರಚಾರ ಪಡೆದುಕೊಂಡಿವೆ. ಸರ್ಕಾರದ ಕೃಷಿ ಸಂಬಂಧಿತ ಯೋಜನೆಗಳು ರೈತರ ಮನೆಬಾಗಿಲು ಮುಟ್ಟಿವೆ. ಆರಂಭದ ವರ್ಷಗಳಲ್ಲಿ ತಮ್ಮೂರು ಹಾಗೂ ಸುತ್ತಮುತ್ತಲಿನ ರೈತರ ಬಗ್ಗೆ ವಿಡಿಯೊಗಳನ್ನು ಮಾಡಿದ್ದರಿಂದ ಸ್ಥಳೀಯವಾಗಿ ಹೆಚ್ಚು ವೀಕ್ಷಕರು ಸಿಕ್ಕಿದ್ದಾರೆ.

ಕೋವಿಡ್ ಕಾಲದಲ್ಲಿ...

ಹದಿನೆಂಟು ವರ್ಷದವರಿದ್ದಾಗ ಕೃಷಿ ಕಾಯಕ ಆರಂಭಿಸಿದ ಏಳುಕೋಟೇಶ ಅವರಿಗೆ ಕೃಷಿಯಲ್ಲಿ ಸದಾ ಹೊಸತು ಮಾಡುವ ತುಡಿತ. ಕೋವಿಡ್ ಕಾರಣಕ್ಕಾಗಿ ಐದು ವರ್ಷಗಳ ಹಿಂದೆ ಮೊದಲ ಬಾರಿಗೆ ಲಾಕ್‌ಡೌನ್ ಆದಾಗ ಹೆಚ್ಚು ಕೆಲಸವೂ ಇಲ್ಲದಂತಾಗಿತ್ತು. ಆದಾಯವೂ ಖೋತಾ ಆಗಿತ್ತು.

ಅದೊಂದು ದಿನ ಹೊಲದಲ್ಲಿ ಬೆಳೆದಿದ್ದ ಹುತ್ತದ ಜೇನು ಬಿಡಿಸುವ ಸಾಹಸಕ್ಕೆ ಮಗ ಶಿವಕುಮಾರ್ ಜೊತೆ ಮುಂದಾಗಿದ್ದರು. ಮಗನ ಮುಖ ಹಾಗೂ ಕೈಗಳ ಮೇಲೆ ಜೇನುಹುಳುಗಳು ಮುತ್ತಿಕೊಂಡವು. ಹಿಂದೆ ಅನೇಕರು ಇಂಥ ಸಾಹಸದ ವಿಡಿಯೊ ಮಾಡಿದ್ದನ್ನು ಏಳುಕೋಟೇಶ ಸೋಷಿಯಲ್ ಮೀಡಿಯಾಗಳಲ್ಲಿ ನೋಡಿದ್ದರು. ಆಕಸ್ಮಿಕವಾಗಿ ಮಗನ ಮೇಲೆ ಜೇನುಹುಳು ಮುತ್ತಿಕೊಂಡಿದ್ದ 40 ಸೆಕೆಂಡ್‌ಗಳ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡರು. ಕೆಲವೇ ದಿನಗಳಲ್ಲಿ ಲಕ್ಷಾಂತರ ಜನ ವೀಕ್ಷಿಸಿದರು. ಬಳಿಕ ಯೂಟ್ಯೂಬ್‌ಗೂ ಅಪ್ಲೋಡ್ ಮಾಡಿದರು. ಐದು ವರ್ಷಗಳ ಹಿಂದೆ ಮಾಡಿದ ಈ ವಿಡಿಯೊವನ್ನು ಈಗ 1.4 ಮಿಲಿಯನ್ ಜನ ನೋಡಿದ್ದಾರೆ.

ಇದಾದ ಬಳಿಕ ಯಾವ ವಿಡಿಯೊಗಳ ಗೊಡವೆಯಿಲ್ಲದೆ ಎರಡು ವರ್ಷ ತಮ್ಮ ಪಾಡಿಗೆ ಕೃಷಿ ಕೆಲಸದಲ್ಲಿ ತೊಡಗಿಕೊಂಡಿದ್ದರು. ಬಳಿಕ ಮಗನ ಸಲಹೆಯಂತೆ ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಕೃಷಿ ಸಂಬಂಧಿತ ಸಣ್ಣ ವಿಡಿಯೊಗಳನ್ನು ಮಾಡಿ ಪ್ರಚಾರ ಮಾಡತೊಡಗಿದರು. ಜೇನು ಕೃಷಿಯ ಬಗ್ಗೆಯೇ ಹೆಚ್ಚು ವಿಡಿಯೊಗಳನ್ನು ಸಿದ್ಧಪಡಿಸಿದರು. ಆಡುಭಾಷೆಯಲ್ಲಿ ಸರಳವಾದ ಮಾತು, ಆಡಂಬರಕ್ಕೆ ಅವಕಾಶವಿಲ್ಲದಂತೆ ವಿಷಯ ಪ್ರಸ್ತುತಿ, ರೈತರ ಸಾಂಪ್ರದಾಯಿಕ ಉಡುಪು ಲುಂಗಿ, ತಲೆಗೆ ಟವಲ್ ಸುತ್ತಿಕೊಂಡು ವಿಡಿಯೊಗಳನ್ನು ಮಾಡುತ್ತಿರುವುದು ಸಾಮಾನ್ಯ ಜನ, ರೈತರ ಹಾಗೂ ಕೃಷಿ ಪ್ರಿಯರ ಆಸಕ್ತಿ ಅರಳಿಸಿದೆ. ಇದುವರೆಗೆ 921 ವಿಡಿಯೊಗಳನ್ನು ತಯಾರಿಸಿದ್ದಾರೆ. 57 ಸಾವಿರ ಜನ ‘ಅಗ್ರಿಬ್ರ್ಯಾಂಡ್’ನ ಚಂದಾದಾರರಾಗಿದ್ದಾರೆ.

14ನೇ ಪುಟಕ್ಕೆ...

ಪಹಲ್ಗಾಮ್‌ನಲ್ಲಿ ಕನ್ನಡ ಕಲರವ

ಉಗ್ರರ ದಾಳಿಯಿಂದ ಕಾಶ್ಮೀರದ ಪಹಲ್ಗಾಮ್‌ನ ಜನರ ಬದುಕು ದುಸ್ತರವಾಗಿದೆ. ಅಲ್ಲಿನ ಆತಂಕದ ಪರಿಸರದಲ್ಲಿ ಕನ್ನಡಿಗರು ಕರ್ನಾಟಕ ರಾಜ್ಯೋತ್ಸವ ಆಚರಿಸಿ ಒಂದಿಷ್ಟು ಭರವಸೆ ತುಂಬಿದ್ದಾರೆ.



ಡೊಳ್ಳು ಕುಣಿತದ ಝಲಕ್

• ಆರ್. ಮಂಜುನಾಥ್

ಉತ್ತರದ ತುತ್ತತುದಿಯಲ್ಲಿ ಕನ್ನಡದ ಬೃಹತ್ ಬಾವುಟ ಹಾರಾಡಿತು. ಡೊಳ್ಳು ಕುಣಿತ, ಯಕ್ಷಗಾನದ ಪ್ರದರ್ಶನದಿಂದ ಕರ್ನಾಟಕದ ಸಂಸ್ಕೃತಿ ಅನಾವರಣಗೊಂಡಿತು. ಮೈಕೊರೆಯುವ ಚಳಿಯಲ್ಲೂ ಕನ್ನಡ ಸಂಸ್ಕೃತಿಯ ಸೊಗಡು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಸರಿಸಿತು. ರಾಷ್ಟ್ರಗೀತೆಯೊಂದಿಗೆ ನಾಡಗೀತೆ ‘ಜಯಭಾರತ ಜನನಿಯ ತನುಜಾತೆ...’ಯೂ ಮೊಳಗಿತು. ಕನ್ನಡ ಡಿಂಡಿಮವೂ ಮಾರ್ದನಿಸಿತು. ಇದಕ್ಕೆ ವಿಶೇಷ ಕಾರಣವೂ ಇತ್ತು.

ಕರ್ನಾಟಕ ರಾಜ್ಯೋತ್ಸವವನ್ನು ಹೊರ ರಾಜ್ಯ, ವಿದೇಶಗಳಲ್ಲಿರುವ ಕನ್ನಡ ಸಂಘ–ಸಂಸ್ಥೆಗಳು ಆಚರಿಸುವುದು ಮಾಮೂಲಿ. ಆದರೆ, ಕನ್ನಡದ ಗಂಧ–ಗಾಳಿಯೇ ಇಲ್ಲದ ಪಹಲ್ಗಾಮ್‌ನಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿದ್ದು ಸಾಹಸವೇ ಸರಿ. ಪಹಲ್ಗಾಮ್ ಎಂದ ಕೂಡಲೇ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ಅಟ್ಟಹಾಸವೇ ನೆನಪಾಗುತ್ತದೆ. ಅಲ್ಲಿ ಇನ್ನೂ ಆತಂಕದ ಛಾಯೆ ಮಾಯವಾಗಿಲ್ಲ. ಅಂತಹ ಪರಿಸ್ಥಿತಿಯಲ್ಲೂ, ಮೂರು ಸಾವಿರ ಕಿಲೋಮೀಟರ್ ಪಯಣಿಸಿದ ಬೆಂಗಳೂರಿನ ಕನ್ನಡಿಗರು ಕನ್ನಡದ ಕಂಪನ್ನು ಅಲ್ಲಿ ಹರಡಿದರು.

ಕಾಶ್ಮೀರದಲ್ಲಿ ಡಿಸೆಂಬರ್ ಮಧ್ಯಭಾಗದಿಂದ ಹಿಮ ಬೀಳುವುದಕ್ಕೆ ಆರಂಭವಾಗುತ್ತದೆ. ಆದರೆ, ನವೆಂಬರ್‌ನಲ್ಲಿ ಅದಕ್ಕೆ ವೇದಿಕೆ ಸಿದ್ಧವಾಗಿರುತ್ತದೆ. ಇಷ್ಟಾದರೂ, ಪಹಲ್ಗಾಮ್‌ನಲ್ಲಿ 2 ಡಿಗ್ರಿ ಸೆಲ್ಸಿಯಸ್ ವಾತಾವರಣವಿತ್ತು. ಇಂಥ ಸ್ಥಳದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಗರ ಪಾಲಿಕೆಗಳ ಅಧಿಕಾರಿ–ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿದರು.

‘ಉಗ್ರರ ದಾಳಿಯಲ್ಲಿ ಮಡಿದವರಿಗೆ ಆ ಜಾಗದಲ್ಲೇ ಶ್ರದ್ಧಾಂಜಲಿ ಸಲ್ಲಿಸಬೇಕು ಎಂಬುದು ನಮ್ಮ ಆಶಯವಾಗಿತ್ತು. ಅಲ್ಲದೆ, ಕರ್ನಾಟಕ ರಾಜ್ಯೋತ್ಸವ ಆಚರಿಸುವ ಜೊತೆಗೆ ಕನ್ನಡದ ಸಂಸ್ಕೃತಿಯನ್ನು ಇಲ್ಲಿ ಬಿಂಬಿಸುವ ಉದ್ದೇಶವೂ ಇತ್ತು. ಹೀಗಾಗಿಯೇ 450ಕ್ಕೂ ಹೆಚ್ಚು ಜನ ಬೆಂಗಳೂರಿನಿಂದ ಪಹಲ್ಗಾಮ್‌ಗೆ ಹೋಗಿ ಕಾರ್ಯಕ್ರಮ ಮಾಡಿದೆವು. ಉಗ್ರರ ದಾಳಿಗೆ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಜೊತೆಗೆ, ಹಳದಿ–ಕೆಂಪು ಬಾವುಟ ಹಾರಿಸಿ, ಸಿಂಧೂರ ಕಾರ್ಯಾಚರಣೆಯನ್ನು ಅಭಿನಂದಿಸಿದೆವು. ಸ್ಥಳೀಯ ಆಡಳಿತ, ಪೊಲೀಸರು, ಸೈನ್ಯದ ಅಧಿಕಾರಿಗಳ ಬೆಂಬಲದಿಂದ ಕಾರ್ಯಕ್ರಮ ಅದ್ಭುತ ಯಶಸ್ಸು ಕಂಡಿತು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳುವಾಗ ಅವರ ಮುಖದಲ್ಲಿ ಧನ್ಯತಾಭಾವವಿತ್ತು.

‘ನಮಗೆ ಕನ್ನಡ ಭಾಷೆ ಅರ್ಥವಾಗದಿದ್ದರೂ, ಎರಡೂವರೆ ತಾಸಿನ ಕಾರ್ಯಕ್ರಮವನ್ನು ವೀಕ್ಷಿಸಿದೆವು.



ಜಿಬಿಎ ಸಂಘದಿಂದ ಕರ್ನಾಟಕ ರಾಜ್ಯೋತ್ಸವ

ಮೃತರಿಗೆ ಶ್ರದ್ಧಾಂಜಲಿ, ಸೈನಿಕರಿಗೆ ಅಭಿನಂದನೆ ಹಾಗೂ ಇಲ್ಲಿ ಪ್ರವಾಸೋದ್ಯಮ ವೃದ್ಧಿಯಾಗಲು ಕನ್ನಡಿಗರು ಮಾಡುತ್ತಿರುವ ಕೆಲಸ ಮನಸ್ಸಿಗೆ ತಟ್ಟಿತು’ ಎಂದು ಪಹಲ್ಗಾಮ್‌ನ ಡಿವೈಎಸ್ಪಿ ಫಾರೂಕ್ ಅಹಮದ್, ಇನ್‌ಸ್ಪೆಕ್ಟರ್ ಪರ್ವೇಜ್ ಅಹಮದ್ ಅವರು ಕಾರ್ಯಕ್ರಮದ ಕೊನೆಯಲ್ಲಿ ಹೇಳಿದರು. ಸೈನಿಕರು ಸೇರಿದಂತೆ ಸ್ಥಳೀಯರು ಮಾಡಿದ ಕರತಾಡನ, ಕನ್ನಡಿಗರ ಕಾರ್ಯಕ್ರಮದ ಯಶಸ್ಸನ್ನು ಸಾರಿ ಹೇಳಿತು.

2025ರ ಏಪ್ರಿಲ್ 22 ರಂದು ಉಗ್ರರು 26 ಪ್ರವಾಸಿಗರನ್ನು ಹತ್ಯೆ ಮಾಡಿದ ಬೈಸರನ್ ಕಣಿವೆಯಿಂದ ಮೂರು ಕಿಲೋಮೀಟರ್ ದೂರವಿರುವ ಪಹಲ್ಗಾಮ್ ಕ್ಲಬ್ ಆ್ಯಂಡ್ ಕನ್ವೆಂಷನ್ ಸೆಂಟರ್‌ನಲ್ಲಿ ರಾಜ್ಯೋತ್ಸವ ನಡೆಯಿತು. ಬೈಸರನ್ ಕಣಿವೆಯಲ್ಲಿ ಹತ್ಯೆಯಾದ ಅಷ್ಟೂ ಮಂದಿಯ ದೇಹವನ್ನು ಈ ಕ್ಲಬ್‌ನಲ್ಲೇ ಇರಿಸಲಾಗಿತ್ತು. ಆ ಸ್ಥಳದಲ್ಲಿಯೇ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಜಿಬಿಎ ಸಿಬ್ಬಂದಿ, ಸಾಂತ್ವನ–ಭರವಸೆಯ ಮಾತುಗಳನ್ನಾಡಿದರು.

ಉಗ್ರರ ಅಟ್ಟಹಾಸದ ಘಟನೆಯಿಂದ ಪಹಲ್ಗಾಮ್ ಇನ್ನೂ ಹೊರಬಂದಿಲ್ಲ. ಪ್ರವಾಸಿಗರು ಇಲ್ಲಿಗೆ ಬರಲು ಹೆದರುತ್ತಿದ್ದಾರೆ. ಪ್ರವಾಸೋದ್ಯಮವನ್ನೇ ಅವಲಂಬಿಸಿರುವ ಇಲ್ಲಿನ ನಿವಾಸಿಗಳು ನೇಯುವ ಶಾಲು, ಸ್ವೆಟರ್‌ಗಳನ್ನು ಖರೀದಿಸಲು ಜನ ಬಾರದ್ದರಿಂದ ಅವರ ಆರ್ಥಿಕ ಸ್ಥಿತಿ ಕುಸಿದಿದೆ. ‘ಆರು ತಿಂಗಳಿಂದ ಸಾಕಷ್ಟು ಕಷ್ಟ ಪಡುತ್ತಿದ್ದೇವೆ. ನಾವು ನೇಯ್ದಿರುವ ಶಾಲುಗಳೆಲ್ಲ ಮನೆಯಲ್ಲೇ ಇವೆ. ಉಗ್ರರ ಕೃತ್ಯ ನಮ್ಮನ್ನು ದುಃಸ್ಥಿತಿಗೆ ದೂಡಿದೆ. ಪ್ರವಾಸಿಗರು ಯಾವಾಗ ಹಿಂದಿನಂತೆಯೇ ಬರುತ್ತಾರೋ ಗೊತ್ತಿಲ್ಲ’ ಎಂದು ಶಾಲು ಮಾರಾಟಗಾರ ಶಾಜ್ಜಿದ್ ಹೇಳುವಾಗ ಕಣ್ಣಂಚು ತೇವಗೊಂಡಿತ್ತು.

‘ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ನಂತರ ಶ್ರೀನಗರಕ್ಕೆ ವಿಮಾನದಲ್ಲಿ ಬಂದಿಳಿಯುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ನವೆಂಬರ್ 19 ರಿಂದ ಇಲ್ಲಿಗೆ ಬರುವ ಮೂರ್ನಾಲ್ಕು ವಿಮಾನಗಳಲ್ಲಿ ನೂರಕ್ಕೂ ಹೆಚ್ಚು ಪ್ರವಾಸಿಗರು ಬಂದರು. ಇದಕ್ಕೆ ಕಾರಣ ಮೊದಲಿಗೆ ಗೊತ್ತಾಗಲಿಲ್ಲ. ಆಮೇಲೆ ಪರಿಶೀಲಿಸಿದಾಗ, ಪಹಲ್ಗಾಮ್‌ನಲ್ಲಿ ಕರ್ನಾಟಕದವರು ಬಂದು ಕಾರ್ಯಕ್ರಮ ಮಾಡುತ್ತಿದ್ದಾರೆ ಎಂಬುದು ಗೊತ್ತಾಯಿತು. ಶ್ರೀನಗರ ವಿಮಾನ ನಿಲ್ದಾಣ ಅತ್ಯಂತ ಚಿಕ್ಕದು. ಆದರೂ ಪ್ರವಾಸಿಗರ ಕೊರತೆ ಇತ್ತು. ಇನ್ನು ಮುಂದಾದರೂ ಪ್ರವಾಸಿಗರು ಎಂದಿನಂತೆ ಬರುವಂತಾಗಲಿ’ ಎಂದು ವಿಮಾನ ನಿಲ್ದಾಣ ಸಿಬ್ಬಂದಿ ಶೋರಾ ಆಶಿಸಿದರು.

‘ಶ್ರೀನಗರಕ್ಕೆ ಬಂದಿಳಿಯುವ ಪ್ರವಾಸಿಗಳು ಗುಲ್‌ಮಾರ್ಗ್, ಸೋನ್‌ಮಾರ್ಗ್ ಕಡೆಗೆ ಮಾತ್ರ ಪ್ರಯಾಣ ಮಾಡುತ್ತಿದ್ದರು. ಆ್ಯಪಲ್ ವ್ಯಾಲಿಯನ್ನು ಸಮೀಪವೇ ಹೊಂದಿರುವ ಪಹಲ್ಗಾಮ್ ಕಡೆಗೆ ಹೋಗುವವರು ಕಡಿಮೆಯಿದ್ದರು. ಹೀಗಾಗಿ ಬಾಡಿಗೆ ವಾಹನಗಳೆಲ್ಲ ಮನೆಗಳ ಮುಂದೆ ನಿಂತಿದ್ದವು. ಆದರೆ, ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕಾಗಿ, ಸುಮಾರು 200 ವಾಹನಗಳು ನಾಲ್ಕೈದು ದಿನದಿಂದ ಪಹಲ್ಗಾಮ್‌ಗೆ ಸಂಚರಿಸಿವೆ. ನಮಗೆ ಖುಷಿಯಾಗಿದೆ’ ಎಂದು ಟ್ರಾವೆಲ್ಸ್ ಏಜೆನ್ಸಿ ಉಮರ್ ರಂಜಾನ್ ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿದರು.



ಕನ್ನಡಿಗರ ಇಂತಹ ನಡೆ ಕಾಶ್ಮೀರಿಗಳಲ್ಲಿ ಸ್ವಲ್ಪವಾದರೂ ಭರವಸೆಯನ್ನು ಮೂಡಿಸಿತು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇಂಥ ಕಾರ್ಯಕ್ರಮವನ್ನು ಹಮ್ಮಿಕೊಂಡ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಗರ ಪಾಲಿಕೆಗಳ ಅಧಿಕಾರಿ–ನೌಕರರ ಕ್ಷೇಮಾಭಿವೃದ್ಧಿ ಸಂಘ ಅಭಿನಂದಗೆ ಅರ್ಹ. ❖



'ಬಾ ಇಲ್ಲಿ ಸಂಭವಿಸು' ವಾಚನಾಭಿನಯ ದೃಶ್ಯ

ಕುವೆಂಪು ಮನೆ..ಕಾನು.. ನಾಯಿಗುತ್ತಿ..ನೆನಪುಗಳು...

• ಕುಂಸಿ ಉಮೇಶ್

ಕುವೆಂಪು ಹುಟ್ಟಿ ಬೆಳೆದು, ಓಡಾಡಿದ ಜಾಗಗಳೊಂದಿಗೆ ಅವರ ಬರಹಗಳನ್ನು ಮೆಲುಕು ಹಾಕುವ ವಿಶಿಷ್ಟ ಯತ್ನವನ್ನು ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜು ಅಧ್ಯಾಪಕರ ವೇದಿಕೆ ಇತ್ತೀಚೆಗಷ್ಟೇ ಮಾಡಿದೆ. ಅವರ ಕೃತಿಗಳ ವಾಚನ, ಹಾಡು, ಚಾರಣದೊಂದಿಗಿನ ಈ ನಾಯಿಗುತ್ತಿ ಪಯಣ ಕುರಿತು ಲೇಖಕರು ಬರೆದಿದ್ದಾರೆ...

ಭಾರತದ ಬಹುಮುಖಿ ವ್ಯಕ್ತಿತ್ವದ ಲೇಖಕರಾದ ಕುವೆಂಪು ತಮ್ಮ ಕಾಲದ ಸಾಮಾಜಿಕ-ಚಾರಿತ್ರಿಕ ಒತ್ತಡಗಳ ನಡುವೆ ನಿಂತು ಸಾಹಿತ್ಯ ರಚಿಸಿದವರು. ಜಮೀನ್ದಾರಿ ಕುಟುಂಬದಿಂದ ಬಂದರೂ ಕುವೆಂಪು ದಮನಿತ-ಅಲಕ್ಷಿತರ ಪರವಾಗಿ ತುಡಿತದ ಬರಹ ನೀಡಿದ ದಾರ್ಶನಿಕ ಕವಿ ಮಾತ್ರವಲ್ಲ, ವೈಚಾರಿಕ ಮಾನವತಾವಾದಿಯಾಗಿ, ವಿಶ್ವಪ್ರಜ್ಞೆಯನ್ನು ಯುವಕರಿಗೆ ತುಂಬಲು ನಿರಂಕುಶಮತಿತ್ವಕ್ಕೆ ಕರೆಕೊಟ್ಟವರು.

ಇಂತಹ ಕವಿಯ ಮನೆ-ಕಾನು, ನೆನಪುಗಳನ್ನು ಸಜೀವಗೊಳಿಸುವಂತಹ ವಿಭಿನ್ನ ಪ್ರಯೋಗ ಮಾಡಲು ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜು ಅಧ್ಯಾಪಕರ ವೇದಿಕೆ ಬಹುದಿನಗಳಿಂದ ಕನಸು ಕಾಣುತ್ತಿತ್ತು.

ಈ ಸಲುವಾಗಿ ಕುವೆಂಪು ಬರಹದ ಅಜರಾಮರ ಪಾತ್ರಗಳಾದ ಹಸಿರು, ಇಬ್ಬನಿ, ಸರ್ಯೋದಯ, ಜೇಡ, ಮಳೆ-ಮೋಡ, ನವಿಲು, ಗದ್ದೆಕೋಗು, ದೇವರಬನ, ನಿರ್ಜನ ತೋಟ ಕಾಡಿನ ಮೂಲೆಯಿಂದ ಹೊಮ್ಮುವ ಕಾಜಾಣ, ಕಾಮಳ್ಳಿ, ಕುಟ್ರಹಕ್ಕಿ, ಪಿಕ್ಕ, ಬೆಳವೆ, ಗೋಲ್ಡುಹಕ್ಕಿ, ನವಿಲು, ಪೊಂಗುಳಿ, ಸಿಬ್ಬಲುಗುಡ್ಡದ ನೀರವತೆ, ನವಿಲುಕಲ್ಲು ಗುಡ್ಡದ ಚಾರಣ, ನಾಯಿಗುತ್ತಿ-ತಿಮ್ಮಿ, ಬಾಡುಗಳ್ಳ ಸೋಮ, ಜೀವರತ್ನಯ್ಯ, ಬೈಸಿಕಲ್ಲು ಬಯಲು, ಕೆಳಕಾನೂರು, ಸಿಂಬಾವಿ, ಇಂಗ್ಲಾದಿ, ಹಿರೇಕೂಡಿಗೆ, ಕವಿಶೈಲ ಮುಂತಾದ ಓದಿದ ಅನುಭವಕ್ಕಿಂತ ಕಾಣುವ-ಕೇಳುವ ಲೋಕಾನುಭವಕ್ಕೆ ಕರೆದೊಯ್ಯುವ ನೀಲನಕ್ಷೆಯನ್ನು ಸಿದ್ಧಪಡಿಸಿಕೊಳ್ಳಲಾಯಿತು.

ಸಾಮಾಜಿಕ ಸವಾಲುಗಳೊಂದಿಗೆ, ಸೃಜನಶೀಲ ಒಡನಾಟದಿಂದ ಒಂಟಿಕೊಪ್ಪಲಿನಲ್ಲಿ ಕೂತು, 'ಹೋಗುವೆನು ನಾ... ನನ್ನ ಮಲೆಯ ನಾಡಿಗೆ.....' ಎಂದು ತಮ್ಮ ಬರಹದಲ್ಲಿ ಸಾಂಸ್ಕೃತಿಕ ಅಸ್ಮಿತೆಯನ್ನು ಪ್ರತಿಪಾದಿಸಿದ ಕುವೆಂಪು ಅವರಿಂದ ಲೋಕಮಾನ್ಯವಾದ 'ನಾಯಿಗುತ್ತಿ' ಪಯಣವನ್ನು ರೂಪಿಸಿಕೊಂಡು ಮೂವತ್ತೇಳು ಅಧ್ಯಾಪಕರು, ನಿವೃತ್ತ ಅಧ್ಯಾಪಕರಿಬ್ಬರು, 'ನೇಟಿವ್ ಥಿಯೇಟಿಕ್'ನ ನಟರು ಪಯಣ ಆರಂಭಿಸಿದೆವು.

ಆಧುನಿಕ ವಿದ್ಯಮಾನಗಳೊಂದಿಗೆ, ವಿಚಾರ ಸಂಕಿರಣ, ಸಂವಾದ ಕಾರ್ಯಕ್ರಮಕ್ಕೆ ಚಿಂತಕರಾದ ರಹಮತ್ ತರೀಕೆರೆ ಹಾಗೂ ರಾಜಕಾರಣಿ ವೈ.ಎಸ್.ವಿ. ದತ್ತರವರನ್ನು ಆಹ್ವಾನಿಸಿ ಮೊದಲ ದಿನ ಚಾರಣ-ಕುವೆಂಪು ಓದು-ದರ್ಶನ, ಪುಸ್ತಕ ಮಾರಾಟದ ಅನುಭವಗಳೊಂದಿಗೆ ನಮ್ಮ ಸಂವಾದ ನಡೆಯಿತು.

ಸಂಜೆ ಕವಿಶೈಲ-ತೇಜಸ್ವಿ ಮಲಗಿದ ಜಾಗದಲ್ಲಿ ಕೂತು ಹಾಡು-ಮಾತು, ಓದು, ಪ್ರಸಂಗಗಳನ್ನು ಹಂಚಿಕೊಂಡ ಗೆಳೆಯರು, ಕುವೆಂಪು ಗುಂಗಿನಲ್ಲೇ 'ಬಾ ಇಲ್ಲಿ ಸಂಭವಿಸು' ಎಂಬ ವಾಚನಾಭಿನಯವನ್ನು ಅನುಭವಿಸಿದರು. ಅದಾದ ಬಳಿಕ, ಬೆಳಗಿನ ಸೂರ್ಯೋದಯಕ್ಕೆ ನವಿಲುಕಲ್ಲಿಗೆ ಚಾರಣ ಹೊರಡುವ ಕನವರಿಕೆಯಲ್ಲೇ ಮಲಗಿದೆವು.

ಬೆಳಿಗ್ಗೆ ನವಿಲುಕಲ್ಲು ಗುಡ್ಡದ ಸೂರ್ಯೋದಯದ ಸಂಭ್ರಮವನ್ನು ಹಕ್ಕಿಗಳಿಂಚರದ ಸವಿಯೊಳಗೆ ತೇಲಿಸುತ್ತಾ ಹೊರಡಲು ಅವಸರಿಸಿದೆವು. ಅಲ್ಲಿಂದ ಬಸ್ಸೇರಿ ಮುಖ್ಯರಸ್ತೆ ತಲುಪಿ; ಕೈಯಲ್ಲಿನ ಕೋಲೂರಿ ಗುಡ್ಡವೇರತೊಡಗಿದವರಿಗೆ ಕೊರಕಲು, ಕಡಜ, ಕಾಡುಜೇಡದ ಬಲೆ, ಇಂಬ್ಲಗಳ ಪರಿಚಯಿಸುತ್ತಾ ಸುತ್ತಮುತ್ತಲ ಮುಳ್ಳು-ಕಂಟಿ-ಮರದಿಂದ ಇಳಿಬಿದ್ದ ಬಿಳಲು, ದೊಡ್ಡದೊಡ್ಡ ಮರಗಳನ್ನು ತೋರಿಸುತ್ತಾ ಸಹ್ಯಾದ್ರಿ ಶ್ರೇಣಿಯ ಪರಿಚಯ ಮಾಡಿಸಿದೆವು. ಹಾಡು-ಕುವೆಂಪು ಗೀತೆ ಹಾಡುತ್ತಾ, ರಾಮೋಜಿಯೊಡನೆ ಗುಂಪು-ಗುಂಪಾಗಿ ಹೆಜ್ಜೆ ಹಾಕಿ ಹಾಸುಬಂಡೆಯ ಮೇಲೇರಿ, ಸೂರ್ಯೋದಯದ ಆಗಮನಕ್ಕೆ ಕಾದೆವು. ಹಕ್ಕಿಗಳಿಂಚರವು ಕೇಳುವ ಮೊದಲೇ ಮಾತಿಲ್ಲಿ ಮೌನದ ಬೆನ್ನೇರಿದಂತೆ ಮಕಾಡೆ ಮಲಗಿ ಕಿವಿ ತೆರೆದೆವು.

ಒಂದೊಂದೆ ಹಕ್ಕಿಯ ಇಂಚರ ಕಿವಿಗಿಂಪು ನೀಡುತ್ತಿದ್ದರೆ ಪೊಂಗುಳಿ, ಕಾಜಾಣದ-ಕಾಡುಕೋಳಿಯ ಝೇಂಕಾರಕ್ಕೆ ಮಾರ್ದನಿಯಿಡುವಂತೆ ನವಿಲುಗಳ ಕೇಕೆ, ಪುರ್ಲೆ, ಮಿಟ್ಟೆ, ಹೊಂಬಂಡ, ಕುಟ್ರ, ಪಿಕ್ಕ ಮೊದಲಾದ ಪಕ್ಷಿಗಳ ಕಲರವ ಕೇಳಿಸಿಕೊಂಡು ಪುಲಕಿತರಾದೆವು. ಎಲ್ಲರ ನಿರೀಕ್ಷೆ ಸೂರ್ಯನ ಉದಯಕ್ಕೆ 'ಆನಂದಮಯ ಈ ಜಗಹೃದಯ ಏತಕೆ ಭಯ ಮಾಣೋ....' ಗೀತೆಗೆ ಸಜ್ಜಾದ ನಮ್ಮ ತಂಡದ ರಾಜೇಂದ್ರ, ಭಾರತಿದೇವಿಯರಿಗೆ ನಿರಾಸೆ ಉಂಟು ಮಾಡಲೇಬೇಕೆಂದು ಹಟತೊಟ್ಟ ಇಬ್ಬನಿ ಮೋಡ ಸೂರ್ಯನನ್ನು ತನ್ನ ಸೆರಗ ಮರೆಯಲ್ಲಿ ಅಡಗಿಸಿಕೊಂಡಿತ್ತು. ಎಷ್ಟು ಹೊತ್ತಾದರೂ ಸೂರ್ಯೋದಯ ತನ್ನ ಮೋಹಕ ದರ್ಶನ ನೀಡದಿದ್ದರೂ ನಮ್ಮ ಚಾರಣವು ನಾಯಿಗುತ್ತಿ ತಿಮ್ಮಿಯರ ನೆನೆದುಕೊಂಡು ಒಂದಿಷ್ಟು ಹಾಡು-ಕುಣಿತವಾಡಿ ಬಂದ ದಾರಿಯಲ್ಲೆ ವಾಪಾಸಾದೆವು.

ಮುಂದೆ ನಮ್ಮ ಪಯಣ ಇಂಗ್ಲಾದಿಯ ಕುವೆಂಪು ಅವರ ಪತ್ನಿ ಹೇಮಾವತಿಯವರ ಮನೆಯಾಗಿತ್ತು. ಕುವೆಂಪು ಕೈ ಹಿಡಿದ ಆ ತಾಯಿಯ ಮನೆ ಒಂದು ಎಕರೆಗಿಂತಲೂ ಮಿಗಿಲಾಗಿತ್ತು. ಕುವೆಂಪು-ಹೇಮಾವತಿಯವರು ಮದುವೆಯಾದ ಮಂಟಪ ಅಲ್ಲಿನ ಪಡಸಾಲೆಯಲ್ಲಿ ಗತವೈಭವವ ಸಾರುತ್ತಿತ್ತು. ಆ ಮನೆಯ ಹಿರೀಕರು ಹೇಳಿದಂತೆ 'ಈ ಮನೀನ ಗುಡ್ಸಿ ತೊಳ್ದು ಹಮಾ ಮಾಡಾದು ಹೌದೇನ್ರಿ' ಅದಿಕ್ಕೆ ನಮಗೆ ಬೇಕಾದಷ್ಟು ಇಟ್ಕಂಡು ಎಲ್ಲನೂ ಬೀಗ ಹಾಕಿಟ್ಟೀವಿ' ಎಂದರು.

ಅಪಾರ ಮರಳರಾಶಿಯ ಮಧ್ಯೆ ಜುಳುಜುಳು ಹರಿಯುವ ತುಂಗೆ, ಎಡ-ಬಲ ದಂಡೆಯ ಮೇಲೆ ಹಬ್ಬಿದ ಮಳೆಕಾಡು. ಬಯಲುಸೀಮೆಯಿಂದ ನಮ್ಮ ವಿ.ವಿ. ವ್ಯಾಪ್ತಿಗೆ ವರ್ಗವಾಗಿ ಬಂದ ಅಧ್ಯಾಪಕರು ನದಿ-ಕಾಡು-ತೀಡುವ ತಂಗಾಳಿ-ಹರಿವ ನದಿಯ ಕಲರವಕೆ ಮನಸೋತು ಆಸ್ವಾದಿಸಿದರು. ನಮ್ಮ ತಂಡದ ಹಾಡುಗಾರರು ಕುವೆಂಪು ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು. 'ಸೃಷ್ಟಿಯ ರಚನೆಯ ಕುಶಲಕೆ ಚಂದಕೆ ಜಗದಚ್ಚರಿಯ ಅಂದದ ಒಪ್ಪಂದಕ್ಕೆ ಚಿರಚೇತನ ತಾನಿಹೆನೆಂಬಂದದಿ ಬೆಳ್ಳಕ್ಕಿಯ ಹಂತಿಯ ಆ ನೆವದಿ ದೇವರು ರುಜು ಮಾಡಿದನು.... ಗೀತೆ ಎಷ್ಟು ಅರ್ಥಪೂರ್ಣವೆಂದು ಆ ಸ್ಥಳದಲ್ಲಿ ನಿಂತವರಿಗನಿಸಿದ್ದು ಸೋಜಿಗವಲ್ಲ.

ಈ ನಾಯಿಗುತ್ತಿ ಪಯಣದಲ್ಲಿ ಹೇಮಾಂಗಣಕ್ಕೆ ವಾಪಾಸು ಬಂದು ಕುವೆಂಪು ಹುಟ್ಟಿದ ಮನೆ 'ಹಿರೇಕೂಡಿಗೆ'ಗೆ ತೆರಳಲು ಅನುವಾಗಿ, ಒಂದ್ಹತ್ತು ಮೈಲಿ ಪ್ರಯಾಣಿಸಿ ಹಿರೇಕೂಡಿಗೆಗೆ ಬಂದಾಗ, ಮಧ್ಯಾಹ್ನದ ಬಿಸಿಲು ಪ್ರಖರವಾಗುತ್ತಿತ್ತು. ಅದಾಗ್ಯೂ ಹಿರೇಕೂಡಿಗೆ ಮನೆಯನ್ನು ಕುಪ್ಪಳಿಯ ಕವಿಮನೆಯಂತೆ ಕಲ್ಪಿಸಿಕೊಂಡು ಹೋದವರಿಗೆ ತೀವ್ರ ನಿರಾಸೆ ಕಾದಿತ್ತು.

ಯಾವುದೋ ದೇವಾಲಯದ ಗರ್ಭಗುಡಿಯಲ್ಲಿ ಕೂರಿಸಿದ ದೇವರಂತೆ, ಕುರ್ಚಿಯಲ್ಲಿ ವಿರಾಜಮಾನರಾದ ಕುವೆಂಪು ಚಿತ್ರವನ್ನು ಬಿಟ್ಟರೆ ಅಲ್ಲಿ ಇನ್ನಾವುದೇ ಮಲೆನಾಡ ಮನೆಯ ವಾತಾವರಣವಿರಲಿಲ್ಲ. ಪಕ್ಕದ ಮನೆಯವರನ್ನು ಮಾತನಾಡಿಸಿದರೆ, ಅವರು ಆ ಮನೆಯಲ್ಲಿ ಬಾಳಿ-ಬದುಕಿದರ್ಯಾರು ಈಗಿಲ್ಲ, ಈಗಿನ ಪೀಳಿಗೆಯವರು ಪ್ಯಾಟೆ ಸೇರಿದ್ದಾರೆ ಎಂದು ಹೇಳಿದರು.

ನಾವು ಅಲ್ಲಿಂದ ರಸ್ತೆ ಮಧ್ಯೆ ಸಿಗುವ ತೂಗು ಸೇತುವೆಯನ್ನು ನೋಡಿ ತುಂಗಾ ನದಿಯ ನಾದವ ಕಿವಿಗೆ ತುಂಬಿಕೊಂಡು ಗಡಿಕಲ್ಲ ಬಳಿ ಇರುವ ಹಂಪಿ ವಿ.ವಿ.ಯ ಕುವೆಂಪು ಸಂಶೋಧನಾ ಕೇಂದ್ರದ ಮ್ಯೂಸಿಯಂನ್ನು ನಮ್ಮ ಬಯಲುನಾಡ ಗೆಳೆಯರಿಗೆ ಪರಿಚಯಿಸಿಕೊಂಡು ಬಂದೆವು. ನಮಗಾಗಿ ಕುರಿ ಮಾಂಸದ ಸಾರು, ಮಲೆನಾಡ ಕಡುಬು ಕಾಯುತ್ತಿದ್ದವು. ಹಳ್ಳದ ತಿಳಿನೀರಲ್ಲಿ ಕಾಲಾಡಿಸಿದ ಗೆಳೆಯರು ಮಾಂಸದ ಘಮಲಿಗೆ ಮನಸೋತು ಹೊಟ್ಟೆ ತುಂಬಾ ಊಟ ಮಾಡಿ ಕವಳಮೆದ್ದು ಕುಪ್ಪಳಿಗೆ ನಾಯಿಗುತ್ತಿ ಪಯಣಕ್ಕೆ ವಿದಾಯ ಹೇಳಿ ಹೊರಟೆವು.

ನಿಜಕ್ಕೂ ತುಂಬಿದ ತುಂಗೆಯಲ್ಲಿ ನಾಯಿಗುತ್ತಿಯ 'ಗುತ್ತಿ ನಾಯಿ'ಯು ಬಡಿದಾಡಿ ತೇಲಿಹೋದಂತೆ ಭಾವುಕ ಮನಸ್ಸಿನಿಂದ ಊರಕಡೆ ಪಯಣಿಸಿದೆವು. ❖



ಕುಪ್ಪಳಿಯ ಕವಿಮನೆ ಆವರಣದಲ್ಲಿ...

ಲೈಟ್ಸ್ ಆಫ್ ಕತ್ತಲಲ್ಲಿ ಬೆತ್ತಲಾಗುವ ಸತ್ಯಗಳು



• ಕಿರಣ ಭಟ್, ಹೊನ್ನಾವರ

ಮಧ್ಯಮ ವರ್ಗದ ಕನಸುಗಳು, ಅವುಗಳನ್ನು ಸಾಕಾರಗೊಳಿಸಿಕೊಳ್ಳಲು ಅವರು ಪಡುವ ಪಡಿಪಾಟಲು, ಹೇಳುವ ಸುಳ್ಳುಗಳು ತೊಟ್ಟುಕೊಳ್ಳುವ ಮುಖವಾಡಗಳಿಗೆಲ್ಲ ಹಾಸ್ಯದ ಲೇಪ ಹಚ್ಚಿ ಎದುರಿಗಿಟ್ಟವರು ಬ್ರಿಟಿಷ್ ನಾಟಕಕಾರ ಪೀಟರ್ ಶಾಫರ್. ಅವರ ನಾಟಕ 'ಬ್ಲಾಕ್ ಕಾಮಿಡಿ' ಯನ್ನು ಕನ್ನಡಕ್ಕೆ ರೂಪಾಂತರಿಸಿ ರಂಗರೂಪ ನೀಡಿ ರಂಗಕ್ಕೆ ತಂದವರು ಸುರೇಶ್ ಆನಗಳ್ಳಿ. ಅವರ ತಂಡ 'ಅನೇಕ'ಕ್ಕಾಗಿ ಅವರು ಈ ನಾಟಕವನ್ನು ನಿರ್ದೇಶಿಸಿದ್ದಾರೆ.

'ಮುಕುಲ್' ಒಬ್ಬ ಯುವ ಕಲಾವಿದ. 'ಕನಿಷ್ಕಾ' ಆತನ ಹೊಸ ಗೆಳತಿ. ಹೇಗಾದರೂ ಮಾಡಿ ಕಲಾಕೃತಿಗಳನ್ನು ಮಾರಿ ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳಬೇಕೆಂಬುದು ಈ ಜೋಡಿಯ ಆಸೆ. ಇವರ ಮನೆಗೆ 'ಮಲ್ಯ' ಬರಲಿದ್ದಾರೆ. ಅಗರ್ಭ ಶ್ರೀಮಂತ ಕಲಾಸಂಗ್ರಹಕಾರ ಮಲ್ಯರ ಮನ ಗೆಲ್ಲಲು ತನ್ನ ಹರಕು ಮುರುಕು ಮನೆಯನ್ನು ಪಕ್ಕದ 'ಕಲಾಧರನ್'ನ ಮನೆಯಿಂದ ಕದ್ದು ತಂದ ಫರ್ನಿಚರ್, ಕಲಾಕೃತಿಗಳಿಂದ ಸಿಂಗರಿಸಿದ್ದಾರೆ ಮುಕುಲ್. ಇನ್ನೇನು ಮಲ್ಯರು ಬರಲಿದ್ದಾರೆ ಎನ್ನುವಷ್ಟರಲ್ಲಿ ಕರೆಂಟ್ ಹೋಗಿ ಕತ್ತಲಾವರಿಸುತ್ತದೆ. ಕತ್ತಲ ಭಯ ತಪ್ಪಿಸಿಕೊಳ್ಳಲು ಮೇಲಿನ ಮನೆಯ ಪೂರ್ಣಿಮಾ ಕುಮಾರಿ ಇವರ ಜೊತೆಯಾಗುತ್ತಾಳೆ. ಕನಿಷ್ಕಾಳ ಅಪ್ಪ ಕರ್ನಲ್ ಕುಪ್ಪಣ್ಣನೂ ಎಂಟ್ರಿ ಕೊಡುತ್ತಾನೆ. ಎಲ್ಲ ಕತ್ತಲಲ್ಲಿ ತಡವರಿಸುತ್ತ ಓಡಾಡುತ್ತಿರುವಾಗಲೇ ಅದೆಲ್ಲೋ ಹೋಗಿದ್ದ ಕಲಾಧರನ್ ಅಚಾನಕ್ಕಾಗಿ ಇವರ ಮನೆಯನ್ನು ಹೊಕ್ಕಿಬಿಡುತ್ತಾನೆ. ನಿಜ ನಾಟಕ ಶುರುವಾಗುವುದು ಆಗಲೇ. ಕಳ್ಳತನ ಮುಚ್ಚಿಕೊಳ್ಳಲು ಕಲಾಧರನ್‌ನ ಮನೆಯ ವಸ್ತುಗಳನ್ನು ಕತ್ತಲೆಯಲ್ಲೇ ತಿರುಗಿ ಸಾಗಿಸಬೇಕು. ಇನ್ನು ಮಲ್ಯ ಬಂದರೆ? ಎಲ್ಲ ಕಲಸು ಮೇಲೋಗರ. ಇನ್ನಷ್ಟು ತಲೆಬಿಸಿ ಹೆಚ್ಚಿಸುವ ಹಾಗೆ ಮುಕುಲ್‌ನ ಹಳೆಯ ಪ್ರೇಯಸಿ 'ವೀಣಾ' ಇವರನ್ನ ಸೇರಿಕೊಳ್ಳುತ್ತಾಳೆ. ಕತ್ತಲ ಗೋಜಲುಗಳ ಮಧ್ಯೆ ಹುಸಿ ಸಂಬಂಧಗಳು ಅನಾವರಣಗೊಳ್ಳುತ್ತ ಹೋಗುತ್ತವೆ. ಸತ್ಯದ ಬೆಳಕು ಕಾಣತೊಡಗುತ್ತದೆ.

'ನೀನು ಕತ್ತಲಲ್ಲೇ ಇರೋಕೆ ಇಷ್ಟಪಡೋನು. ಬೆಳಕಲ್ಲಿ ನಿನ್ನನ್ನು ಕಾಣೋಕೆ ಇಷ್ಟಪಡಲ್ಲ. ಯಾಕಂದ್ರೆ ಯಾರೂ ನಿನ್ನನ್ನು ಪ್ರೀತಿಸಲಾರರು ಎನ್ನೋ ಭಯ ನಿನಗೆ' ಎನ್ನುವ ಕನಿಷ್ಕಾಳ ಮಾತು ಮಧ್ಯಮ ವರ್ಗದ ಯುವ ಜೀವಗಳ ಆತಂಕವನ್ನು ಎದುರಿಗೆ ತಂದಿಡುತ್ತದೆ.

ಪೀಟರ್ ಶಾಫರ್‌ನ 'ಬ್ಲಾಕ್ ಕಾಮಿಡಿ' ಯನ್ನು ತುಂಬ ನಿಷ್ಠವಾಗಿ ಸುರೇಶ್ ಆನಗಳ್ಳಿ ಕನ್ನಡದ ಸಂದರ್ಭಕ್ಕೊಪ್ಪುವಂತೆ ರೂಪಾಂತರಿಸಿದ್ದಾರೆ. ತುಸು ವಿಸ್ತರಿಸಿಕೊಂಡಿದ್ದಾರೆ ಕೂಡ. ಇದಕ್ಕೆ ಮರುನಾಮಕರಣವೂ ಹುಷಾರಿತನದ್ದೇ. ಪೀಟರ್ ಶಾಫರ್ ನಿಧನರಾದಾಗ 'ಬ್ರಾಡ್ ವೇ' ಥಿಯೇಟರ್ ಅವರ ಗೌರವಾರ್ಥವಾಗಿ ದೀಪಗಳನ್ನು ಅರ್ಧ ಆರಿಸಿತ್ತು. 'ಲೈಟ್ಸ್ ಆಫ್' ಹೆಸರೂ ಅದಕ್ಕೆ ಅನುಗುಣವಾಗಿದೆ. ಇಂಥ ನಾಟಕಗಳ ಮಜಾ ಇರುವುದೇ ಅದರ ಸಂಭಾಷಣೆಗಳ ತೀವ್ರತೆಯಲ್ಲಿ. ಆನಗಳ್ಳಿ ಸಾಕಷ್ಟು ಚುರುಕಾಗಿಯೇ ಸಂಭಾಷಣೆ ಬರೆದಿದ್ದಾರೆ. ಅಪರೂಪದ 'ಪನ್'ನ ಜೊತೆಯಲ್ಲಿ ಅಲ್ಲಲ್ಲಿ ನುಸುಳುವ ಸಣ್ಣಪೋಲಿತನ ಕಚಗುಳಿಯಿಡುತ್ತದೆ.

ಈ ನಾಟಕ ಬೇರೆಲ್ಲ ನಾಟಕಗಳಿಗಿಂತ ತುಂಬ ವಿಭಿನ್ನವಾಗಿರುವುದು ಅದರ 'ರಿವರ್ಸ್ ಲೈಟಿಂಗ್' ನಿಂದ. ಮೂಲದಲ್ಲೇ ಶಾಫರ್ ಅದನ್ನು ಹೇಳಿಬಿಟ್ಟಿದ್ದಾನೆ. ಅದು ಹೇಗೆಂದರೆ, ಕೋಣೆಯಲ್ಲಿ ಕತ್ತಲು ಆವರಿಸಿದ ಸಂದರ್ಭದಲ್ಲಿ ರಂಗದಲ್ಲೆಲ್ಲ ಪ್ರಖರ ಬೆಳಕು. ಕೋಣೆ ಬೆಳಗಿದಾಗ ರಂಗದ ತುಂಬ ಕತ್ತಲು. ಬೆಳಕಿನ ಆಕರಗಳು ಕೋಣೆಗೆ ಹೊಕ್ಕಿದವೆಂದರೆ ರಂಗದಲ್ಲಿ ಮಂದ ಬೆಳಕು. ಇದೊಂಥರಾ 'ಬೆಳಕಿನಾಟ'. ಒಂದು ರೀತಿಯಲ್ಲಿ ಬೆಳಕೇ ಈ ನಾಟಕದ ಹೀರೊ. ಇಂಥ ಬೆಳಕಿನಾಟವನ್ನು, ಅದರ ಸಮಯ ನಿಯಂತ್ರಣವನ್ನು ಅಪೂರ್ವ ಆನಗಳ್ಳಿ ಸಮರ್ಥವಾಗಿ ನಿಭಾಯಿಸಿದ್ದಾರೆ.

ಇದೊಂದು 'ಆಂಗಿಕ ಹಾಸ್ಯ'ದ ನಾಟಕ. ಹಾಗಾಗಿಯೇ ಇದು 'ನಟ'ರ ನಾಟಕ ಕೂಡ. ಬೆಳಗಿದ ರಂಗದಲ್ಲೇ ಕತ್ತಲೆಯನ್ನು ಅನುಭವಿಸುತ್ತ, ಪರಿಕರಗಳಿಂದ ತುಂಬಿಹೋದ ರಂಗದಲ್ಲಿ, ಬೇರೆ ಬೇರೆ ಅಂತಸ್ತುಗಳನ್ನು ನಿಭಾಯಿಸುತ್ತ ಅಭಿನಯಿಸುವುದು ಮುಖ್ಯವಾಗಿ ಶರೀರವನ್ನು ದುಡಿಸಿಕೊಳ್ಳುವುದು ಸುಲಭದ ಮಾತಲ್ಲ. ಪ್ರತಿ ಕ್ಷಣದ ಎಚ್ಚರ ಕಾಪಿಟ್ಟುಕೊಂಡು, ತಡವರಿಸುತ್ತ, ಬೀಳುತ್ತ, ಏಳುತ್ತ ಭಾವಗಳನ್ನು ಅಭಿವ್ಯಕ್ತಿಸುವುದು ನಿಜಕ್ಕೂ ಸವಾಲು. ಇಂಥ ಸವಾಲನ್ನು ಎಲ್ಲ ನಟರೂ ಎದುರಿಸಿ ಗೆದ್ದಿದ್ದಾರೆ. ವಿವರವಾದ, ಹಲವು ಅಂತಸ್ತುಗಳ ರಂಗಸಜ್ಜಿಕೆ ನಾಟಕಕ್ಕೆ ಬಹು ಆಯಾಮ ಒದಗಿಸಿದೆ.

ಮುದ್ರಿತ ಸಂಗೀತ ಹಿತವಾಗಿದೆ. ನಾಟಕದಲ್ಲಿ ಬಳಸಿಕೊಂಡ 'ಮಗುವಿನ ಗಾಡಿ' ಕವನ ನೆಪಿನಲ್ಲಿ ಉಳಿಯುತ್ತದೆ.

ನಾಟಕ ಎಲ್ಲೂ ಬೇಸರ ತರಿಸುವುದಿಲ್ಲವಾದರೂ ಇನ್ನೊಂದಿಷ್ಟು ಟ್ರಿಮ್ ಮಾಡಿದ್ದರೆ ಇನ್ನೂ ಮಜಾ ಬರುತ್ತಿತ್ತೇನೋ ಅನಿಸದಿರದು. ❖



ನಾಟಕದ ದೃಶ್ಯ

ಮುನ್ನೋಟ 28-12-2025 ರಿಂದ 03-01-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹೊಸ ಹೊಸ ಆಲೋಚನೆಗಳು ನಿಮ್ಮಲ್ಲಿ ಇರುತ್ತವೆ. ಆದಾಯವು ಕಡಿಮೆ ಇರುತ್ತದೆ. ಉತ್ತಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳು ಶ್ರಮಪಟ್ಟು ಓದಬೇಕು. ನರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ವಾಹನ ಚಾಲನೆಯನ್ನು ಮಾಡುವಾಗ ಹೆಚ್ಚು ಜಾಗರೂಕರಾಗಿರುವುದು ಉತ್ತಮ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಾರದ ಆರಂಭದಲ್ಲಿ ಜಡತ್ವ ತುಂಬಿರುತ್ತದೆ. ಆದಾಯವು ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಅಲ್ಪ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ವ್ಯವಹಾರಕ್ಕೆ ತಾಯಿಯಿಂದ ಮಾರ್ಗದರ್ಶನದ ಜತೆಗೆ ಸ್ವಲ್ಪ ಹಣ ಸಹಾಯವೂ ದೊರೆಯುವುದು. ಮನೆಯ ಹಿರಿಯರ ಆರೋಗ್ಯದ ಬಗ್ಗೆ ಬಹಳ ಕಾಳಜಿಯನ್ನು ವಹಿಸಬೇಕಾದೀತು. ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಹೆಚ್ಚಿನ ಹಣ ಬೇಕಾಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಎಲ್ಲರಿಂದಲೂ ಗೌರವವನ್ನು ನಿರೀಕ್ಷೆ ಮಾಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಸಮಾಜ ಸೇವೆ ಮಾಡುವವರಿಗೆ ಜನರಿಂದ ಸಹಕಾರ ಸಿಗುತ್ತದೆ. ಆಸ್ತಿ ಖರೀದಿ ಮಾಡುವಾಗ ಎಚ್ಚರವಹಿಸಿ. ಗಣಿತ ವಿದ್ಯಾರ್ಥಿಗಳಿಗೆ ಫಲಿತಾಂಶ ಕಡಿಮೆಯಾಗಬಹುದು. ರಕ್ತ ಪರಿಚಲನೆಯಲ್ಲಿ ಕೆಲವರಿಗೆ ಏರುಪೇರಾಗಬಹುದು. ನೆರೆಹೊರೆಯವರೊಂದಿಗೆ ಇದ್ದ ಮುನಿಸುಗಳು ದೂರವಾಗುತ್ತವೆ. ನ್ಯಾಯ ಸಂಬಂಧಿ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಕೆಲಸಗಳಲ್ಲಿ ಹಿರಿಯರ ಛಾಯೆಯನ್ನು ಕಾಣಬಹುದು. ಆದಾಯವು ಕಡಿಮೆ ಇರುತ್ತದೆ. ಧಾರ್ಮಿಕ ಕೆಲಸಗಳನ್ನು ಮಾಡುವವರ ಆದಾಯ ಹೆಚ್ಚುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಲಾಭ ಇರುವುದಿಲ್ಲ. ಉನ್ನತ ಹುದ್ದೆಯಲ್ಲಿರುವವರಿಗೆ ಜನರಿಂದ ಅಭಿಮಾನದ ಮಾತುಗಳು ಕೇಳಿಬರುತ್ತವೆ. ಮಹಿಳೆಯರ ಕೆಲವು ಇಷ್ಟಾರ್ಥಗಳು ಪೂರ್ಣಗೊಂಡು ಸಂತಸಪಡುವರು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಉದಾಸೀನತೆ ನಿಮಗೆ ತೊಂದರೆ ತರುತ್ತದೆ. ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾಗುತ್ತದೆ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಅನಗತ್ಯ ಸುತ್ತಾಟದಿಂದ ದೇಹಾಲಸ್ಯವಾಗಬಹುದು. ಕೆಲವು ಅರೆಕಾಲಿಕ ನೌಕರರಿಗೆ ನೌಕರಿ ಖಾಯಂ ಆಗಬಹುದು. ತಾಂತ್ರಿಕ ಶಿಕ್ಷಣವನ್ನು ಪಡೆಯುತ್ತಿರುವವರಿಗೆ ಹೆಚ್ಚು ಯಶಸ್ಸು ಇರುತ್ತದೆ. ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಸಾಮಾನ್ಯ ಮಟ್ಟದಲ್ಲಿರುತ್ತದೆ. ನಯವಾಗಿ ಮಾತನಾಡಿ ಜನರನ್ನು ಒಲಿಸಿಕೊಳ್ಳಲು ಪ್ರಯತ್ನಪಡುವಿರಿ. ಅಧ್ಯಯನದಲ್ಲಿ ಆಸಕ್ತಿಯು ಸ್ವಲ್ಪ ಕಡಿಮೆಯಾಗುವ ಸಂದರ್ಭವಿದೆ. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಪ್ರತಿಭೆಗೆ ಗೌರವ ದೊರೆಯುತ್ತದೆ. ಕೃಷಿಕರು ಬೆಳೆಗೆ ಉತ್ತಮ ಬೆಲೆಯನ್ನು ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ಸಾಕಷ್ಟು ವ್ಯಾವಹಾರಿಕತೆ ತುಂಬಿರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಈಗ ಅವಕಾಶಗಳು ದೊರೆಯುತ್ತವೆ. ಕಣ್ಣಿನ ಸೋಂಕುಗಳು ಕೆಲವರನ್ನು ಕಾಡಬಹುದು. ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪಗಳು ಎದುರಾಗುವ ಸಂದರ್ಭವಿದೆ. ಅಪೇಕ್ಷಿಸಿದ್ದ ಸಾಲ ದೊರೆಯುತ್ತದೆ. ಸಂಸಾರದಲ್ಲಿ ಮೌನವಾಗಿರುವುದು ಒಳ್ಳೆಯದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬುದ್ಧಿವಂತಿಕೆಯೇ ನಿಮ್ಮ ಆಸ್ತಿಯಾಗಿರುತ್ತದೆ. ಸ್ಥಿರಾಸ್ತಿಯ ಬೆಲೆಯಲ್ಲಿ ಏರಿಕೆಯನ್ನು ಕಾಣಬಹುದು. ಹೂವುಗಳ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ, ಆದಾಯ ಹೆಚ್ಚುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಮಕ್ಕಳಿಗಾಗಿ ಹೆಚ್ಚಿನ ಹಣವನ್ನು ಖರ್ಚುಮಾಡಬೇಕಾಗುತ್ತದೆ. ರಾಜಕಾರಣಿಗಳಿಗೆ ಆಪಾದನೆಗಳಿಂದ ಮಾನಸಿಕ ಒತ್ತಡ ಹೆಚ್ಚಬಹುದು. ಒಡಹುಟ್ಟಿದವರು ವಿನಾಕಾರಣ ನಿಮ್ಮ ಮೇಲೆ ಕೂಗಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ಚೇತನಾಶೀಲರಾಗಿರುವಿರಿ. ಆದಾಯವು ಸ್ವಲ್ಪ ಚೇತರಿಸಿಕೊಳ್ಳುತ್ತದೆ. ಬಂಧುಗಳು ನಿಮ್ಮ ಸಾತ್ವಿಕತೆಯನ್ನು ದುರುಪಯೋಗ ಮಾಡಿಕೊಳ್ಳಬಹುದು. ಕೃಷಿ ಭೂಮಿ ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಪಾದದ ನೋವು ಕೆಲವರಿಗೆ ಕಾಡಬಹುದು. ಹಿರಿಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ದೊರೆಯುವ ಸಂದರ್ಭವಿದೆ. ಚಿನ್ನದ ವ್ಯಾಪಾರಿಗಳಿಗೆ ಆದಾಯ ಹೆಚ್ಚಾಗುವುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶ್ರಮಪಟ್ಟು ಕೆಲಸ ಮಾಡಲು ಇಷ್ಟಪಡುವಿರಿ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಶತ್ರುಗಳನ್ನು ಸರಿಯಾಗಿ ಗುರುತಿಸಿ ಮಟ್ಟ ಹಾಕುವಿರಿ. ಕಟ್ಟಡ ನಿರ್ಮಾಣಕಾರರಿಗೆ ಸ್ವಲ್ಪ ನಷ್ಟವಾಗುವ ಸಂದರ್ಭವಿದೆ. ಕೆಲಸಗಾರರ ಕೊರತೆಯಿಂದಾಗಿ ಉದ್ದಿಮೆಗಳಲ್ಲಿ ತಯಾರಿಕೆಗೆ ಬಹಳ ಅಡಚಣೆ ಉಂಟಾಗುತ್ತದೆ. ಕೃಷಿ ಕ್ಷೇತ್ರದಲ್ಲಿನ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಸ್ವಲ್ಪ ಚೇತರಿಕೆಯನ್ನು ಕಾಣುತ್ತದೆ. ಕೃಷಿಯಿಂದ ಆದಾಯವಿರುತ್ತದೆ. ಸರ್ಕಾರಿ ಕೆಲಸಕಾರ್ಯಗಳಲ್ಲಿ ಲಾಭವಿರುತ್ತದೆ. ಸ್ಥಿರಾಸ್ತಿ ಮಾಡುವ ಕಾರ್ಯ ವಿಳಂಬವಾಗುತ್ತದೆ. ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವವರಿಗೆ ಜನರಿಂದ ಸಹಾಯ ದೊರೆಯುತ್ತದೆ. ಪ್ರೀತಿಪಾತ್ರರ ಭೇಟಿಯಿಂದ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವಿರಿ. ಮಕ್ಕಳಿಂದ ಹಿರಿಯರಿಗೆ ಬೇಸರ ಉಂಟಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಆಲಸಿತನ ನಿಮ್ಮಲ್ಲಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚುಚ್ಚು ಮಾತುಗಳು ನಿಮಗೇ ಮುಳುವಾಗಬಹುದು. ದೃಢ ನಿರ್ಧಾರಗಳಿಲ್ಲದೆ ಪರದಾಡುವಿರಿ. ಸಂಸಾರದಲ್ಲಿ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ತಿಂಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ಹೊಟ್ಟೆಯೊಳಗೆ ತೊಂದರೆ ಕಾಣಿಸಿಕೊಳ್ಳಬಹುದು.


ಪದಬಂಧ 2924

ಮೇಲಿನಿಂದ ಕೆಳಕ್ಕೆ

1. ನಾನು ನಾನೇ ನನ್ನದೇ ಎನ್ನುವ ಮಹಾ ಪೊಗರು 4
2. ಅಲೆಗಳ ಅಂತರಂಗದಲ್ಲಿ ಅಡಗಿರುವ ಅಲೆಗಳು 6
3. ಮತ್ತೆ ಮರುಕಳಿಸುವ ಸ್ಮೃತಿ 3
4. ಒಂಟಿಯಾಗಿ ಸಿಗುವ ಆನೆ 3
5. ರಘುಕುಲ ಸೋಮನ ಜನನ ಹಾಡಿನಲ್ಲಿ ಹೀಗೆ 6
7. ರಾಜ್ಯಕ್ಕೆ ಸೇರಿದ ಅರಸನ ಹಣ 4
9. ಒಟ್ಟಾಗುವ ನಮ್ಮ ಸುತ್ತಮುತ್ತಲಿನ ಮಂದಿ 3
10. ವಂದನೆಗೆ ಪಾತ್ರರಾದ ಎಷ್ಟೋ ಮಂದಿ ಉತ್ತಮರು 5
11. ವೇಷಧರಿಸಿದ ಮಂದಿಯ ಆಕ್ರೋಷ 4
13. ಎಲ್ಲೋ ಕಾಡಿನಲ್ಲೋ ಕಮಲದಿಂದಲೋ ಹುಟ್ಟಿ ಸೃಷ್ಟಿ ಮಾಡುವ ಬ್ರಹ್ಮನೇ ಈತ? 6
16. ಕರ್ನಾಟಕದ ಕಡಲಿನ ತೀರದಲ್ಲಿ ಅಲ್ಪಖಾರದ ಸಪ್ತಾಹ ಸಿಗುವುದು 4
18. ವಾಹನ ಚಲಿಸುವಾಗ ಪ್ರಧಾನ ಗತಿ 3
19. ದಿನದಲ್ಲಿ ಸಿಗುವ ಹಿಂದಿ ಪ್ರೇಮಿ 3

ಎಡದಿಂದ ಬಲಕ್ಕೆ

1. 'ಎಂದೆಂದೂ ನಮಸ್ಕಾರ' ಎಂದು ವೇದಿಕೆಯ ಮೇಲೆ ಹೇಳುವ ಕೃತಜ್ಞತೆ 6
4. ಮೀರಾಳ ಜೊತೆಯಾದ ಪವನಪುತ್ರ 3
6. ಶೋಭನ ಶುಭಮುಹೂರ್ತಗಳಿಗೆ ಮತ್ತೆ ಬರುವುದು 6
8. ಬಿಡುವಿನಲ್ಲಿ ಅಗಸ ಸಿಗುವನೆಂದು ಹೋದರೆ ಬೆಳ್ಳಿ ಸಿಕ್ಕಿತು 3
9. ಯಜ್ಞಕುಂಡದಲ್ಲಿ ಉರಿಯುವ ಅಗ್ನಿಗೆ ಸಂಸ್ಕೃತದ ಸಮಿತ್ತು 3
10. ಅಹಂಕಾರದಿಂದ ಮೆರೆಯುತ್ತಿರುವ ಆನೆ 4
12. ಹೊಸದಾಗಿ ಮಿನುಗುತ್ತಿರುವ ಒಂಭತ್ತು ನಕ್ಷತ್ರ 4
14. ಆದಿಕವಿ ಪಂಪನಿಂದ ಪ್ರೇರಣೆ ಪಡೆದ ಕನ್ನಡ ನಾಡಿನ ಪ್ರಶಸ್ತಿ 3
15. ವಿಧಿ ಸಾಹೇಬನಾಗಿರುವ ಬದುಕಿನ ಬಂಡಿ 3
17. ಪುಟ್ಟ ಕನ್ನಿಕೆಯಂತಿರುವ ಆರು ಪಾದದ ಕಾವ್ಯಪ್ರಕಾರ 6
20. ರೋಗದ ಜೊತೆಯಾಗುವ ವ್ಯಾಧಿ 3
21. ಹೊಸದಾಗಿ ಕಾಲಿಡುತ್ತಿರುವ ಸಂಪೂರ್ಣ ವರುಷ 6



ಪದಬಂಧ ಉತ್ತರ -2923

ಮೇಲಿಂದ ಕೆಳಕ್ಕೆ

1.ಸದ್ವಿಕಾಸ 2.ದಿವ್ಯಚಂದನ 3.ಮಾಸಪತ್ರಿಕೆ 4.ಲಜ್ಜಾನನ 6.ವಿಶ್ವರೂಪ 8.ದಾರುಣಸ್ಥಿತಿ 10.ಯಮನಿಯಮ 12.ವಸ್ತಾವ 13.ತ್ರಿಚಕ್ರ 14.ಜೀರಿಗೆ-ಬೆಲ್ಲ 15.ನವನೀತ 16.ಮರುಪಾವತಿ 17.ಮಿತಾಹಾರ 19.ಯಮದ್ವಾರ

ಎಡದಿಂದ ಬಲಕ್ಕೆ

1. ಸಪ್ತಪದಿ 3.ಮಾಗೀಕಾಲ 5.ವ್ಯಕ್ತಿವಿಕಾಸ 7.ಸದಾನಂದ 9.ತ್ರಿನಯನ 11.ನವಪತ್ರಿಕೆ 14.ಜೀವನಕ್ರಮ 17.ಮಿತಿಮೀರಿ 18.ರುದ್ರಮಯ 20.ಬೆರೆತಜೀವ 21.ರಸಗುಲ್ಲ 22.ತಿರಸ್ಕಾರ

‘ಲೇಖಕಿಯರನ್ನು ಭಿನ್ನವಾಗಿ ಬೆಳೆಸಬೇಕು’

ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷೆಯಾಗಿ ಆರ್. ಸುನಂದಮ್ಮ ಆಯ್ಕೆಯಾಗಿದ್ದಾರೆ. ಸಂಘಟನೆ, ಸಂಶೋಧನೆ, ಚಳವಳಿಯ ನೆಲೆಯಲ್ಲಿ ಮಹಿಳಾ ಅಧ್ಯಯನದ ಅಗತ್ಯವನ್ನು ಅವರು ಗುರುತಿಸುತ್ತಾರೆ. ಸಂಘವನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸುವ ಕುರಿತು ‘ಭಾನುವಾರದ ಪುರವಣಿ’ ಜೊತೆ ಹಂಚಿಕೊಂಡಿದ್ದಾರೆ.

• ರಾಘವೇಂದ್ರ ಕೆ. ತೊಗರ್ಸಿ


ಸುನಂದಮ್ಮ

• ‘ಕರ್ನಾಟಕ ಲೇಖಕಿಯರ ಸಂಘ’ದ ಅಧ್ಯಕ್ಷೆಯಾಗಿ ಅವಲೋಕನ ಮಾಡಿದಾಗ ಗಮನಕ್ಕೆ ಬಂದ ಸಂಗತಿಗಳು ಏನು?

ಸಂಘಕ್ಕೆ 47 ವರ್ಷ ತುಂಬಿದೆ. ಒಂದು ರೂಮಿನ ಮನೆಯೇ ಕಚೇರಿ. ಸಾಕಷ್ಟು ಪುಸ್ತಕಗಳು ಇವೆ. ವ್ಯವಸ್ಥಿತ ಗ್ರಂಥಾಲಯ ಆಗಬೇಕಿದೆ. ಕಾರ್ಯಚಟುವಟಿಕೆಗಳ ನಿರ್ವಹಣೆಗೆ ಸಿಬ್ಬಂದಿ ಇಲ್ಲ. ದತ್ತಿ ಪ್ರಶಸ್ತಿ ಕೊಡುವ ಜವಾಬ್ದಾರಿ ಇದೆ. ಅನ್ಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳನ್ನು ಮಾಡಿದೆ. ‘ಲೇಖ ಲೋಕ’ದ ಒಂಬತ್ತು ಆವೃತ್ತಿಯನ್ನು ಪೂರ್ಣಗೊಳಿಸಿದೆ. 8–9 ಆವೃತ್ತಿಗಳ ಪ್ರಕಟಣೆ ಬಾಕಿ ಇದೆ. ಲೇಖಕಿಯರ ಸಮ್ಮೇಳನ ಮಾಡಿದೆ. ಸಂಘವನ್ನು ಸದೃಢವಾಗಿ ಕಟ್ಟಬೇಕಿದೆ. ಸರ್ಕಾರದ ಅನುದಾನದ ನಿರೀಕ್ಷೆಯಲ್ಲಿದ್ದೇವೆ.

• ಯುವ ಲೇಖಕಿಯರ ದೃಷ್ಟಿಯಲ್ಲಿ ಸಂಘದ ಯೋಜನೆಗಳೇನು?

ಉದಯೋನ್ಮುಖ ಲೇಖಕಿಯರಿಗೆ ಒಳ್ಳೆಯ ವೇದಿಕೆ ಇದಾಗಬೇಕು. ಹೊಸ ಸವಾಲನ್ನು ಎದುರಿಸುತ್ತಾ ನಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಸಾಧ್ಯತೆಗಳ ಬಗ್ಗೆ ಕಾರ್ಯಾಗಾರಗಳನ್ನು ಹೆಚ್ಚು ಮಾಡಬೇಕಿದೆ. ಕಾವ್ಯ–ಕಥಾ, ನಾಟಕ, ವಿಚಾರ ಕಮ್ಮಟಗಳನ್ನು ಏರ್ಪಡಿಸಬೇಕಿದೆ. ಸೈದ್ಧಾಂತಿಕವಾಗಿ ಸ್ತ್ರೀವಾದಿ ಚಿಂತನೆಯನ್ನು ಲೇಖಕಿಯರಲ್ಲಿ ಗಟ್ಟಿಗೊಳಿಸಬೇಕು. ರಾಜ್ಯ ವ್ಯಾಪಿ ಸಂಘದ ಚಟುವಟಿಕೆಯನ್ನು ವಿಸ್ತರಿಸಬೇಕು. ಅವರಿಗಾಗಿ ಕಾರ್ಯಕ್ರಮ ರೂಪಿಸಬೇಕು ಎನ್ನುವುದು ನಮ್ಮ ಇಚ್ಛೆ.

• ತಾಯಂದಿರ ಮರಣ ಅನುಪಾತ ಪ್ರಮಾಣಕ್ಕೆ ಸಂಬಂಧಿಸಿದಂತೆ ಸಂಘ ಏನು ಮಾಡಬಹುದು?

ತಾಯಂದಿರ ಮರಣ ಪ್ರಮಾಣ ದಕ್ಷಿಣ ಭಾರತ ರಾಜ್ಯಗಳಲ್ಲಿ ಕರ್ನಾಟಕದಲ್ಲಿ ಹೆಚ್ಚಿದೆ. ಕಾರಣ ಶಿಕ್ಷಿತ ಮಹಿಳೆಯರ ಪ್ರಮಾಣ. ಅಕ್ಷರ ಬಲ್ಲವರನ್ನೆಲ್ಲ ಶಿಕ್ಷಿತರು ಎಂದು ಗುರುತಿಸುವುದು ಬೇರೆ. ಒಂದು ಪುಸ್ತಕವನ್ನು ಓದಿ ಸ್ವತಂತ್ರವಾಗಿ ವಿವೇಚಿಸುವುದು ಬೇರೆ. ಅಕ್ಷರ ಕಲಿತರೆ ಸಾಕ್ಷರತೆ ಅಲ್ಲ. ಈ ನಿಟ್ಟಿನಲ್ಲಿ ಲೇಖಕಿಯರ ಸಂಘ ಕೆಲಸ ಮಾಡುತ್ತದೆ. ಮಹಿಳಾ ಅಧ್ಯಯನವನ್ನು ಪಠ್ಯದಲ್ಲಿ ಅಳವಡಿಸಬೇಕು. ಅದರ ಅನುಷ್ಠಾನಕ್ಕೆ ನಮ್ಮ ಸಂಘ ಸರ್ಕಾರವನ್ನು ಒತ್ತಾಯಿಸಲಿದೆ. ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ ಬರಬೇಕು. ಮಾಧ್ಯಮಿಕ ಮತ್ತು ಪ್ರೌಢಶಾಲೆಯ ಹಂತದಲ್ಲಿ ಲಿಂಗತ್ವದ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಮೂಡಿಸಬೇಕು. ‘ಸಮತಾ ಅಧ್ಯಯನ ಕೇಂದ್ರ’ದ ಮೂಲಕ ನಾವೂ ಆ ಪ್ರಯತ್ನ ಮಾಡಿದ್ದೇವೆ. ಇದು ಸಮಾಜದ ಎಲ್ಲರ ಜವಾಬ್ದಾರಿ.

• ಜಾತಿ–ಬುಡಕಟ್ಟು, ಗ್ರಾಮೀಣ–ನಗರ ಹೀಗೆ ಮಹಿಳೆಯರಲ್ಲಿಯೂ ವರ್ಗ ಇದೆ. ಆದ್ಯತೆ ವಿಷಯ ಬಂದಾಗ ಈ ಬಗ್ಗೆ ಹೇಗೆ ನಿರ್ಧರಿಸುತ್ತೀರಿ?

ಇದು ಕಾಲದ ಒತ್ತಾಸೆ ಕೂಡ ಆಗಬೇಕಾಗುತ್ತದೆ. ಎಲ್ಲ ಮಹಿಳೆಯರು ಒಂದೇ ಎಂದು ಯೋಚನೆ ಮಾಡುವ ಜೊತೆಗೆ ಅದು ಲಿಂಗ, ಪ್ರದೇಶ, ಭಾಷೆ, ವರ್ಗ, ಜಾತಿ, ಧರ್ಮ ಎಲ್ಲವನ್ನೂ ಒಳಗೊಳ್ಳಬೇಕು. ಸಂವಿಧಾನದ 15ನೇ ವಿಧಿ ಎಲ್ಲ ರೀತಿಯ ಅಸಮಾನತೆ ಹೋಗಲಾಡಿಸಬೇಕು ಎನ್ನುತ್ತದೆ. ಈ ಬಗ್ಗೆ ಸಮಗ್ರವಾಗಿ ‘ಪಿತೃ ಪ್ರಧಾನತೆ’ಗೆ ಅಡ್ರೆಸ್ ಮಾಡಬೇಕಿದೆ. ಅದನ್ನು ಅಧಿಕಾರ ಎಂದು ನೋಡಬೇಕಿದೆ. ಅದನ್ನು ಹೆಣ್ಣು–ಗಂಡು ಒಂದೇ ರೀತಿ ನೋಡುತ್ತದೆ. ಮಹಿಳೆ ಅಧಿಕಾರ ಹಿಡಿದರೆ ಗಂಡಿನಂತೆಯೇ ಆಳ್ವಿಕೆ ಮಾಡುತ್ತಾಳೆ. ಅವಳಿಗೆ ಇರುವ ಮಾದರಿ ಅದು. ಹೆಣ್ಣಿನಂತೆ ಆಳುವುದು ಹೇಗೆ? ಅದನ್ನು ಹೆಣ್ತನ ಎನ್ನುತ್ತೇನೆ. ತಾಯ್ತನ ಹೇರಿದ ಮೌಲ್ಯ ಎನ್ನುವುದು ನನ್ನ ಅಭಿಮತ. ಹೆಣ್ಣಾಗಿ ನಮ್ಮ ಅಸ್ಮಿತೆಯನ್ನು ಆಡಳಿತದಲ್ಲಿ ತರಲು ನಡೆಸಬೇಕಾದ ಹೋರಾಟವೇ ಭಿನ್ನವಾದುದು. ತಾರತಮ್ಯ ಪಾತ್ರಗಳ ರಚನಾ ಕ್ರಮವನ್ನು ನಿರಚನೆ ಮಾಡಬೇಕು ಎಂದು ನಂಬಿದ್ದೇನೆ. ನನ್ನ ಜೊತೆ ಕೆಲಸ ಮಾಡುವ ಎಲ್ಲರು ಒಟ್ಟುಗೂಡಿ ಕಾರ್ಯಯೋಜನೆಯನ್ನು ಸಾಧಿಸುತ್ತೇವೆ ಎನ್ನುವುದರ ಮೇಲೆ ಇದಕ್ಕೆ ಉತ್ತರ ಕಂಡುಕೊಳ್ಳಬಹುದು.

ನಾವೆಲ್ಲ ಬೇರೆ ಬೇರೆ ಕಾರಣಕ್ಕೆ ವರ್ಗೀಕರಣಗೊಂಡಿದ್ದೇವೆ. ಗ್ರಂಥಸ್ಥ ಕನ್ನಡವನ್ನು ಚೆನ್ನಾಗಿ ಮಾತನಾಡುವವರು ಶ್ರೇಷ್ಠ ಎನ್ನುವುದು ಎಷ್ಟು ಚೆನ್ನ? ಚೆನ್ನಾಗಿ ಅನ್ನುವುದು ಯಾವುದೂ ಇಲ್ಲ. ಕೋಲಾರದವರಿಗೆ ಕೋಲಾರ ಕನ್ನಡ ಚೆನ್ನ. ಬೀದರ್‌ನವರಿಗೆ ಅವರ ಭಾಷೆ ಚೆನ್ನ. ತಾರತಮ್ಯ ಮಾಡುವಾಗ ನಮ್ಮ ಮನಸ್ಥಿತಿ ಹೇಗೆ ಕೆಲಸ ಮಾಡುತ್ತದೆ ಎನ್ನುವುದು ಮುಖ್ಯ.

• ವಿಜ್ಞಾನ ವಿದ್ಯಾರ್ಥಿನಿಯಾದ ನಿಮಗೆ ಸಾಹಿತ್ಯದ ಒಲವು ಮೂಡಿದ್ದು ಹೇಗೆ?

ನನಗೆ ಓದುವ ಹಂಬಲ ಇತ್ತು. ಎಂಎಸ್‌ಸಿಗೆ ಸೀಟು ಸಿಗಲಿಲ್ಲ. ಆಗ ಎಲ್‌ಎಲ್‌ಬಿ ಸೇರುವ ಆಸೆ ಇತ್ತು. ತಂದೆಗೆ ಅದು ಇಷ್ಟ ಇರಲಿಲ್ಲ. ಬೆಂಗಳೂರು ವಿವಿಯಲ್ಲಿ ಎಂಎಯಲ್ಲಿ ಕನ್ನಡ ಭಾಷಾ ಅಧ್ಯಯನಕ್ಕೂ ಅವಕಾಶ ಇದ್ದಿದ್ದರಿಂದ ಅರ್ಜಿ ಹಾಕಿದೆ. ಆಗ ಜಿ.ಎಸ್.ಶಿವರುದ್ರಪ್ಪ ಪ್ರಾಧ್ಯಾಪಕರಾಗಿದ್ದರು. ದಲಿತ ಬಂಡಾಯ ಚಳವಳಿ ಉತ್ತುಂಗದಲ್ಲಿತ್ತು. ಅದು ನಮ್ಮ ಯೋಚನೆಗೆ ಸ್ಪಷ್ಟತೆಯನ್ನು ನೀಡಿತು. ಮೊದಲ ಯತ್ನದಲ್ಲಿಯೇ ಎನ್‌ಇಟಿ ಪರೀಕ್ಷೆಯಲ್ಲಿ ಸಂಶೋಧನಾ ಫೇಲೋಷಿಪ್ ಅರ್ಹತೆ ಪಡೆದೆ. ಮೈಸೂರಿನಲ್ಲಿ ಸಂಶೋಧನೆ ಮಾಡಿದೆ. ಅಲ್ಲೇ ಸಂಶೋಧಕ ಸಹಾಯಕಿಯಾಗಿ ಕೆಲಸಕ್ಕೆ ಸೇರಿದೆ. ಆಗಲೇ ವಿಜಯಾ ದಬ್ಬೆ ಅವರ ಮೂಲಕ ಲೇಖಕಿಯರ ಸಂಘದ ಜೊತೆ ಸಂಬಂಧ ಬೆಳೆಯಿತು. ಮಹಿಳೆಯರ ಸಬಲೀಕರಣ ಚಟುವಟಿಕೆ, ಚಳವಳಿ, ಸಾಹಿತ್ಯ ಒಟ್ಟಿಗೆ ಸಾಗಿಬಂತು.

• ಸಂಘ–ಸಂಸ್ಥೆಗಳು ಪಾರದರ್ಶಕತೆಯನ್ನು ಹೇಗೆ ಕಾಪಾಡಬೇಕು?

‘ಕರ್ನಾಟಕ ಮಹಿಳಾ ದೌರ್ಜನ್ಯ ಒಕ್ಕೂಟ’ದಲ್ಲಿಯೂ ಸಕ್ರಿಯವಾಗಿದ್ದೇನೆ. ಅದು ನೋಂದಾಯಿತ ಸಂಸ್ಥೆಯಲ್ಲ. ಜನರಿಂದಲೇ ಹಣ ಸಂಗ್ರಹಿಸುತ್ತೇವೆ. ಲೆಕ್ಕ ಕೊಡುವ ಅಗತ್ಯ ಇಲ್ಲ. ಆದರೂ ನಮ್ಮ ನಡುವೆ ಖರ್ಚು ವೆಚ್ಚ ಕಾಣುವಂತೆ ಇರುತ್ತದೆ. ಸಂಗ್ರಹ ಖರ್ಚು ಉಳಿಕೆಯ ವಿವರವನ್ನು ಪ್ರತಿ ಕಾರ್ಯಕ್ರಮದ ನಂತರ ಕೊಡುತ್ತೇವೆ. ಇಲ್ಲೂ ಅಷ್ಟೇ. ಇರುವ ಸಂಪನ್ಮೂಲವನ್ನು ಕಾರ್ಯಕಾರಿ ಸಮಿತಿಯ ಗಮನಕ್ಕೆ ತರಬೇಕು. ಸಮಿತಿಯ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಯಕ್ರಮದ ಖರ್ಚು ವೆಚ್ಚದ ಅಂದಾಜು ಮಾಡುವುದೂ ಪಾರದರ್ಶಕತೆ. ಕಾರ್ಯಕಾರಿ ಸಮಿತಿ ಸಮ್ಮುಖದಲ್ಲಿಯೇ ಎಲ್ಲ ಕಾರ್ಯಸ್ವರೂಪ ನೆರವೇರುತ್ತದೆ. ನಮ್ಮಲ್ಲಿ ದತ್ತಿ ಪ್ರಶಸ್ತಿಗಳು ಇವೆ. ಅದಕ್ಕೆ ಸಮಿತಿಯನ್ನು ಮಾಡುತ್ತೇವೆ. ಅದಕ್ಕೆ ಲಿಖಿತ ಸೂಚನೆಗಳು ಇವೆ. ಅದನ್ನು ಪಾಲಿಸುತ್ತೇವೆ.

• ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಬಗ್ಗೆ ಏನು ಹೇಳುತ್ತೀರಿ?

ಸ್ಥಳೀಯ ಸಂಸ್ಥೆಗಳ ಮಾದರಿಯಲ್ಲೇ ವಿಧಾನಸಭೆ–ಲೋಕಸಭೆಯಲ್ಲಿ ಮೀಸಲು ನಿರೀಕ್ಷೆ ಇದೆ. ಎಂತಹ ಮಹಿಳೆಯರಿಗೆ ರಾಜಕೀಯ ಪಕ್ಷಗಳು ಆದ್ಯತೆ ಕೊಡುತ್ತವೆ ಎನ್ನುವ ಪ್ರಶ್ನೆ ಕಾಡುತ್ತದೆ. ರಾಜಕೀಯ ಶಕ್ತಿಯಾಗಿ ಮಹಿಳೆ ಯೋಚಿಸಬೇಕು. ನಮ್ಮ ಪ್ರತಿ ಪ್ರತಿಕ್ರಿಯೆ ಕೂಡ ರಾಜಕೀಯ. ನಮ್ಮ ಮನೆಯೊಳಗಿನಿಂದ ಸಮಾಜದ ಎಲ್ಲ ಹಂತವೂ ರಾಜಕೀಯ ಇರುವುದು ಮನವರಿಕೆ ಆಗಬೇಕು. ಈ ನಿಟ್ಟಿನಲ್ಲಿ ನಿರಂತರ ಚರ್ಚೆಗಳನ್ನು ನಾವು ಮಾಡಿದ್ದೇವೆ. ಪಂಚಾಯತ್ ರಾಜ್‌ನಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ಅಧ್ಯಯನವನ್ನೂ ಮಾಡಿದ್ದೇವೆ. ಮನೆ ಮತ್ತು ಸಮಾಜವನ್ನು ಸಮತೋಲನ ಮಾಡುವ ಶಕ್ತಿ ಆಕೆಗೆ ಬರಬೇಕಿದೆ ಎಂದು ಅರಿತಿದ್ದೇನೆ. ಆ ಬದಲಾವಣೆ ಕುಟುಂಬದಿಂದಲೇ ಆಗಬೇಕು.

• ನಿಮ್ಮ ಆಶಯ ಅನುಷ್ಠಾನಕ್ಕೆ ಎದುರಾಗುವ ಸವಾಲುಗಳು...

ಸಂಪನ್ಮೂಲದ ಕೊರತೆ ತುಂಬ ಇದೆ. ಅದನ್ನು ಹೊಂದಿಸಿಕೊಳ್ಳಬೇಕಿದೆ. ಸಹಯೋಗದ ಕಾರ್ಯಕ್ರಮ ಮಾಡುವ ಉತ್ಸಾಹ ನಮ್ಮಲ್ಲಿ ಇದೆ. ಸ್ಥಳದ ಅಗತ್ಯ ಇದೆ. ಪ್ರಶಸ್ತಿ ಪ್ರದಾನ ಮಾಡುವುದರಿಂದ ಆಚೆ ಬೇರೆ ಇನ್ನೇನಾದರೂ ಮಾಡಬೇಕಿದೆ. ಆರ್ಥಿಕ ಮಿತಿಯನ್ನು ಮೀರಲು ಸಾಧ್ಯ ಎನ್ನುವುದನ್ನು ನೋಡಬೇಕಿದೆ. ಲೇಖಕಿಯರನ್ನು ಭಿನ್ನವಾಗಿ ಬೆಳೆಸಬೇಕು. ಸೈದ್ಧಾಂತಿಕ ಅರಿವು ಮೂಡಿಸುವ ಕೆಲಸವೂ ಆಗಬೇಕಿದೆ. ❖

ಕೊಂಕಣಿಯ ಅನನ್ಯ ಸಾಹಿತಿ ಮಹಾಬಳೇಶ್ವರ ಸೈಲ್

• ಶಾ.ಮಂ. ಕೃಷ್ಣರಾಯ


ಮಹಾಬಳೇಶ್ವರ ಸೈಲ್

ಮಹಾಕವಿ ಕುವೆಂಪು ಅವರ ಹುಟ್ಟೂರಾದ ಕುಪ್ಪಳಿಯಲ್ಲಿ ಸ್ಥಾಪಿತವಾಗಿರುವ ಕುವೆಂಪು ಪ್ರತಿಷ್ಠಾನವು ಕುವೆಂಪು ಹೆಸರಿನಲ್ಲಿ ಪ್ರತಿವರ್ಷ ಒಂದೊಂದು ಭಾಷೆಯ ಸಾಹಿತಿಗಳಿಗೆ ಪ್ರಶಸ್ತಿ ನೀಡುತ್ತ ಬಂದಿದೆ. 2025ನೇ ಸಾಲಿನ ಈ ಪ್ರಶಸ್ತಿಯು ಕೊಂಕಣಿ ಭಾಷೆಯ ಪ್ರಸಿದ್ಧ ಕಾದಂಬರಿಕಾರ ಮಹಾಬಳೇಶ್ವರ ಸೈಲ್ ಅವರಿಗೆ ಲಭಿಸಿದೆ. ಡಿ.29ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಮಹಾಬಳೇಶ್ವರ ಸೈಲ್ ಕಾರವಾರದ ಮಾಜಾಳಿಯವರು. ಇವರ ತಂದೆ ಸೈನ್ಯದಲ್ಲಿದ್ದರು. ತಾಯಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಕಡುಬಡತನದಲ್ಲಿ ಬೆಳೆದ ಇವರು ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಕ ಶಿಕ್ಷಣ ಮುಗಿಸಿದರು. ಊರಿನಲ್ಲಿಯೇ ಬೇಸಾಯ, ಮನೆಗೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಕುಟುಂಬ ನಡೆಸಲು ಆದಾಯ ಸಾಕಾಗುತ್ತಿರಲಿಲ್ಲ. ಹೀಗಾಗಿ ಬದುಕಿನಲ್ಲಿ ಬೇರೆ ಏನಾದರೂ ಮಾಡಬೇಕೆಂಬ ಆಲೋಚನೆ ಸೈಲ್ ಅವರಿಗಿತ್ತು.

ತಂದೆ ಯುದ್ಧ ಕೈದಿಯಾಗಿ ಮನೆಯವರ ಸಂಪರ್ಕದಲ್ಲಿ ಇರಲಿಲ್ಲ. ಹೀಗಾಗಿ ಮನೆಯಲ್ಲಿ ಆತಂಕವಿತ್ತು. ಜತೆಗೆ ಸೈನ್ಯವೆಂದರೆ ಸೈಲ್ ಅವರ ತಾಯಿಗೆ ಒಂದು ರೀತಿ ಭಯವೂ ಇತ್ತು. ಬಹುಬೇಗ ತಂದೆಯನ್ನು ಕಳೆದುಕೊಳ್ಳುತ್ತಾರೆ. ತಾಯಿಯನ್ನು ನೋಡಿಕೊಂಡು ಮನೆಯಲ್ಲಿದ್ದ ಸೈಲ್ ಅವರಿಗೆ ಕಾರವಾರದಲ್ಲಿ ಸೈನ್ಯಕ್ಕೆ ನೇಮಕಾತಿ ನಡೆಯುತ್ತಿರುವುದು ಗೆಳೆಯನಿಂದ ತಿಳಿಯುತ್ತದೆ. ಮನೆಯಲ್ಲಿ ಹೇಳದೆ ಆ ನೇಮಕಾತಿಗೆ ಹಾಜರಾಗುತ್ತಾರೆ. ಅಲ್ಲಿ ಆಯ್ಕೆಗೊಂಡು, ವಿಷಯವನ್ನು ತಾಯಿಗೂ ತಿಳಿಸದೆ ಸೈನ್ಯ ಸೇರಿಕೊಳ್ಳುತ್ತಾರೆ. ತಾಯಿಗೆ ಸುಳ್ಳು ಹೇಳಿ ಮನೆಯಿಂದ ಹೊರಬರುವ ಅವರು ಡಾರ್ಜಿಲಿಂಗ್‌ನಲ್ಲಿ ತರಬೇತಿ ಪಡೆದು ಪ್ಯಾಲೆಸ್ತೀನ್‌ನಲ್ಲಿ ನಿಯುಕ್ತಿಗೊಳ್ಳುತ್ತಾರೆ. ಅಲ್ಲಿಂದ ಬಂದ ಬಳಿಕ ರಾಜಸ್ಥಾನ ಮರುಭೂಮಿಯಲ್ಲಿ ಗಡಿ ಕಾಯುವ ಕೆಲಸಕ್ಕೆ ನಿಯುಕ್ತಿಗೊಳ್ಳುತ್ತಾರೆ.

1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ತಮ್ಮ ಜತೆಗಿದ್ದ ಹದಿನೆಂಟು ಸಂಗಾತಿಗಳನ್ನು ಕಳೆದುಕೊಂಡ ಇವರು, ಸೈನ್ಯ ತಮಗೆ ಸೂಕ್ತ ಜಾಗವಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಅದೇ ವೇಳೆಗೆ ತಾಯಿ ಕೂಡ ತೀರಿಕೊಳ್ಳುತ್ತಾರೆ. ಇದಾಗಿ ವರ್ಷಗಳ ಬಳಿಕ ಇವರು ಸೇನೆಯನ್ನು ಬಿಟ್ಟು ಹುಟ್ಟೂರಿಗೆ ಮರಳುತ್ತಾರೆ. ಊರಿನಲ್ಲಿ ಕೃಷಿ ಮಾಡುತ್ತ, ಖುಷಿಗೆ ಸಾಹಿತ್ಯ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಅಲ್ಲಿಯೂ ಹೆಚ್ಚು ಕಾಲ ನಿಲ್ಲುವುದಿಲ್ಲ. 1967ರಲ್ಲಿ ಗೋವಾಕ್ಕೆ ಬರುವ ಇವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಪಡೆಯುತ್ತಾರೆ. ಅತ್ಯುತ್ತಮ ಸೇವೆಗಾಗಿ ಅಂದಿನ ಗೋವಾ ಮುಖ್ಯಮಂತ್ರಿ ದಯಾನಂದ ಬಾಂದೋಡ್ಕರ ಅವರಿಂದ ಐದು ಪದಕಗಳನ್ನು ಪಡೆಯುತ್ತಾರೆ. ಶಿಕ್ಷಣ ವಂಚಿತರಾದ ಇವರು ಬಾಹ್ಯವಾಗಿ ಎಸ್ಸೆಸ್ಸೆಲ್ಸಿ ಪಾಸು ಮಾಡುತ್ತಾರೆ. ಬಳಿಕ ಪೊಲೀಸ್ ಕೆಲಸ ತ್ಯಜಿಸಿ, ಅಂಚೆ ಇಲಾಖೆ ಸೇರುವ ಅವರು 31 ವರ್ಷ ಅಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗುತ್ತಾರೆ.

ಪುಣೆಗೆ ಅಂಚೆ ಇಲಾಖೆ ತರಬೇತಿಗೆ ಹೋಗುವ ಇವರು ಅಲ್ಲಿನ ಗ್ರಂಥಾಲಯದಲ್ಲಿ ಮರಾಠಿ ಸಾಹಿತ್ಯ ಓದಲು ಪ್ರಾರಂಭಿಸುತ್ತಾರೆ. ಮೊದಲಿಗೆ ‘ಕೊಂಡಮಾರಾ’ ಎಂಬ ಮರಾಠಿ ಕಥೆಯನ್ನು ಬರೆಯುತ್ತಾರೆ. ಅದು ನವಯುಗ ಪತ್ರಿಕೆಯಲ್ಲಿ ಪ್ರಕಟಗೊಂಡು ಸಾರಸ್ವತ ಪ್ರಪಂಚಕ್ಕೆ ಪರಿಚಿತರಾಗುತ್ತಾರೆ. ನಂತರ ಇವರ ಕಥೆಗಳನ್ನು ಅಂದಿನ ಮರಾಠಿ ಪ್ರಸಿದ್ಧ ಪತ್ರಿಕೆಗಳಾದ ‘ಹಂಸ’, ‘ಸತ್ಯಕಥಾ’, ‘ಸ್ವರಾಜ್ಯ’ ಮುಂತಾದ ಪತ್ರಿಕೆಗಳು ಪ್ರಕಟಿಸುತ್ತವೆ. ಜತೆಗೆ ಸೈಲ್ ಅವರ ಹೆಸರೂ ಜನಪ್ರಿಯವಾಗುತ್ತದೆ.

ಬಳಿಕ ಇವರು ‘ನಕೊ ಜಾಳೂ ಮಾಝು ಘರಟಂ’, ‘ಚರಿತ್ರಹೀನ’, ‘ಶರಣಾಗತಿ’, ‘ಯಾತನಾಚಕ್ರ’ ನಾಟಕಗಳನ್ನು ಬರೆಯುತ್ತಾರೆ. ಇವು ನೂರಾರು ಪ್ರದರ್ಶನಗಳನ್ನು ಕಂಡವು. ಪೋಸ್ಟ್ ಮಾಸ್ಟರ್ ಆಗಿ ಗೋವಾದ ಮಾಜೋರ್ಡಾ ಗ್ರಾಮಕ್ಕೆ ಬಂದ ಇವರು ಕೊಂಕಣಿಯ ಪ್ರಸಿದ್ಧ ಲೇಖಕರಾದ ದಾಮೋದರ ಮಾವ್‌ಜೊ ಅವರ ಸಂಪರ್ಕಕ್ಕೆ ಬಂದರು. ಕೊಂಕಣಿಯಲ್ಲಿ ‘ಪಲ್ತಡಚೆ ತಾರೂ’ ಎಂಬ ಮೊದಲ ಕಥಾ ಸಂಕಲನವನ್ನು 1980ರಲ್ಲಿ ಪ್ರಕಟಿಸಿದರು. 1991ರಲ್ಲಿ ‘ತರಂಗಾಂ’ ಎಂಬ ಎರಡನೇ ಕಥಾ ಸಂಕಲನವನ್ನು ಪ್ರಕಟಿಸಿದರು. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು.

ಮುಂದೆ ಇವರು ‘ಕಾಳಗಂಗಾ’ ಎಂಬ ಕಾದಂಬರಿ ಬರೆದರು. ಹದಿನಾರನೇ ಶತಮಾನದಲ್ಲಿ ಗೋವಾದಲ್ಲಿ ನಡೆದ ಧರ್ಮಾಂತರದ ಕುರಿತು ‘ಯುಗಸಂಹಾರ’ ಎಂಬ ಕಾದಂಬರಿ ಬರೆದರು. ಅವರೇ ಅದನ್ನು ‘ತಾಂಡವ’ ಎಂಬ ಹೆಸರಿನಲ್ಲಿ ಮರಾಠಿಗೆ ಅನುವಾದಿಸಿದರು. ಇದನ್ನು ಕುವೆಂಪು ಭಾಷಾ ಭಾರತಿಯವರು ‘ಚಂಡಮಾರುತ’ ಎಂಬ ಹೆಸರಿನಲ್ಲಿ ಕನ್ನಡದಲ್ಲಿಯೂ ಪ್ರಕಟಿಸಿದ್ದಾರೆ.

ಪಲ್ತಡಚೆ ತಾರೂ, ಬಯೋನೆಟ್ ಫೈಟಿಂಗ್, ನಿಮಣೊ ಅಶ್ವತ್ಥಾಮಾ, ದೋನ ಮುಳಾಚೆಂ, ಝೂಡ ಅವರ ಇತರ ಕಥಾ ಸಂಕಲನಗಳು. ಅದೃಷ್ಟ, ಯುಗ ಸಂವಾರ, ಖೋಲ ಖೋಲ ಮುಳಾಂ, ಹಾವಠಣ, ವಿಖಾರ ವಿಳಖೊ, ಮಾತಿ ಆನಿ ಮಳಬ, ಅಗ್ರದೂತ, ಸಿಂಸ್ರಭೋಗ ಮೊದಲಾದ ಕಾದಂಬರಿಗಳನ್ನು ಕೊಂಕಣಿ ಭಾಷೆಯಲ್ಲಿ ಬರೆದಿದ್ದಾರೆ. ಅವರ ಹಾವಠಣ ಕಾದಂಬರಿಗೆ ಸರಸ್ವತಿ ಸಮ್ಮಾನ ಪುರಸ್ಕಾರ ಲಭಿಸಿದೆ. ಇದನ್ನು ‘ಆವಿಗೆ’ ಎಂಬ ಹೆಸರಿನಲ್ಲಿ ಮಂಗಳೂರಿನ ವಿಶ್ವ ಕೊಂಕಣಿ ಕೇಂದ್ರದವರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

ಇದಲ್ಲದೆ ಅವರ ಅದೃಷ್ಟ ಕಾದಂಬರಿ ಆಧಾರಿತ ‘ಪಲ್ತಡಚೆ ಮನಿಸ್’ ಚಲನಚಿತ್ರಕ್ಕೂ ಅಪಾರ ಮೆಚ್ಚುಗೆ ವ್ಯಕ್ತವಾಗಿತ್ತು. ಇವರ ಕೆಲವು ಕಾದಂಬರಿಗಳು ಕನ್ನಡ, ಇಂಗ್ಲಿಷ್ ಹೊರತಾಗಿ ತಮಿಳು, ಮರಾಠಿ, ಮಲಯಾಳ ಭಾಷೆಗಳಿಗೆ ಅನುವಾದಗೊಂಡಿವೆ. ಇಷ್ಟು ದೊಡ್ಡ ಲೇಖಕರು ನಮ್ಮ ಕನ್ನಡನಾಡಿನವರು ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ.

‘ಮನುಷ್ಯನೇ ನನ್ನ ಸಾಹಿತ್ಯದ ಕೇಂದ್ರಬಿಂದು. ನಾನು ನನ್ನ ಸಾಹಿತ್ಯದಲ್ಲಿ ಪ್ರಕೃತಿ, ಪ್ರೇಮ ಮತ್ತು ಮಿಲಿಟರಿ ಅನುಭವಗಳನ್ನು ಸೇರಿಸಿದ್ದೇನೆ. ಗಂಡು–ಹೆಣ್ಣಿನ ಪ್ರೀತಿ–ಪ್ರಣಯ ಕೇವಲ ಕಾಮತೃಪ್ತಿಯ ದಿಶೆಯಲ್ಲಿ ಸಾಗುತ್ತಿದ್ದುದರಿಂದ ನನ್ನನ್ನು ಆಕರ್ಷಿಸಲಿಲ್ಲ’ ಎನ್ನುತ್ತಾರೆ ಸೈಲ್.

ಅವರ ‘ಅರಣ್ಯಕಾಂಡ’, ‘ಅದೃಷ್ಟ’, ‘ಕಾಳಿಗಂಗಾ’ ಕಾದಂಬರಿಗಳನ್ನು ಗೀತಾ ಶೆಣೈ ಕನ್ನಡಕ್ಕೆ ಅನುವಾದಿಸಿದ್ದಾರೆ. ಮಹಾಬಳೇಶ್ವರರ ಸಾಹಿತ್ಯ ಅವರ ಅನುಭವಗಳ ಮೇಲೆ ನಿರ್ಮಿತವಾದ ಗಟ್ಟಿಯಾದ ಮನೆ. ಅವರು ಕಾಡಿನಲ್ಲಿ ಕಳೆದ ದಿನಗಳು, ಬೇಸಾಯದಲ್ಲಿ ಪಟ್ಟ ಕಷ್ಟಗಳು, ಸೈನ್ಯದಲ್ಲಿನ ನೆನಪು, ಅಂಚೆ ಇಲಾಖೆಯಲ್ಲಿನ ಅನುಭವಗಳು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಅವರ ಕೃತಿಗಳಲ್ಲಿ ಕಾಣಿಸುತ್ತವೆ. ಇಂದು ದೇವನಾಗರಿಯಲ್ಲಿ ಬರೆಯುವ ಕೊಂಕಣಿ ಲೇಖಕರಲ್ಲಿ ಮಹಾಬಳೇಶ್ವರರ ಸ್ಥಾನ ಅತ್ಯುನ್ನತ ಮಟ್ಟದ್ದು. ಇವರಿಗೆ ಸ್ಥಳೀಯ ಸಂಘ, ಸಂಸ್ಥೆಗಳಿಂದ ಹಿಡಿದು ಗೋವಾ ಕೊಂಕಣಿ ಅಕಾಡೆಮಿಯಿಂದ, ಗೋವಾ ಸಂಸ್ಕೃತಿ ನಿರ್ದೇಶನಾಲಯದಿಂದ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ. ❖

ಕಥೆ
ತೆಲುಗು ಮೂಲ: ಡಾ. ವೇಂಪಲ್ಲಿ ಗಂಗಾಧರ್ ಕನ್ನಡಕ್ಕೆ: ಶಿವಕುಮಾರ್ ಕಂಪ್ಲಿ ಅವರ **ಏಳು ಕಂದೀಲುಗಳ ವೃತ್ತ**
prajavani.net/short-story

ಕವನ
ಸಂತೆಬೆನ್ನೂರು ಫೈಜ್ನಟ್ರಾಜ್ ಅವರ **ನಿಂತ ಮರಕ್ಕೆ ಹಕ್ಕಿಗಳು ಸಾವಿರ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ನಮಸ್ತೆ, ನಾನು ನಿಮ್ಮ ಅಗ್ರಿಬ್ರ್ಯಾಂಡ್...

12ನೇ ಪುಟದಿಂದ...

ಒಂದೆಡೆ ಕೃಷಿ ಪ್ರೀತಿ, ಮತ್ತೊಂದೆಡೆ ಚಾನಲ್ ನೆರವು ಇವುಗಳಿಂದ ಏಳುಕೋಟೇಶ ಅವರ ಬದುಕು ಚೆಂದವಾಗಿ ರೂಪುಗೊಂಡಿದೆ. ಹಿರಿಯ ಮಗಳು ಬಿಎಸ್‌ಸಿ ಪೂರ್ಣಗೊಳಿಸಿದ ಬಳಿಕ ಮದುವೆ ಮಾಡಿಕೊಟ್ಟಿದ್ದಾರೆ. ಎರಡನೇ ಮಗಳು ಕೃಷಿ ವಿಷಯದಲ್ಲಿ ಬಿಎಸ್‌ಸಿ ಓದುತ್ತಿದ್ದು, ಅಂಗವಿಕಲನಾಗಿರುವ ಮಗ ಶಿವಮೊಗ್ಗದ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಮೂರೂವರೆ ದಶಕಗಳಿಂದ ಕೃಷಿ ಕಾಯಕದಲ್ಲಿ ತೊಡಗಿಕೊಂಡಿರುವ ಏಳುಕೋಟೇಶ ಅವರ ಮಕ್ಕಳು ಹಾಸ್ಟೆಲ್‌ನಲ್ಲಿದ್ದುಕೊಂಡು ಓದುತ್ತಿದ್ದಾರೆ. ಅವರ ಖರ್ಚಿನ ನಿರ್ವಹಣೆಗೆ ಯೂಟ್ಯೂಬ್ ಮೂಲಕ ಗಳಿಸುತ್ತಿರುವ ಆದಾಯ ಆಸರೆಯಾಗಿದೆ.

ತಮಗೆ ಪದವಿ ಪೂರ್ಣಗೊಳಿಸಲು ಆಗದಿದ್ದರೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುತ್ತಿದ್ದಾರೆ. ಕೃಷಿ ಪರ ವಿಡಿಯೊಗಳನ್ನು ಮಾಡಿ ಅನ್ನದಾತರ ಪಾಲಿಗೆ ‘ಅಗ್ರಿಬ್ರ್ಯಾಂಡ್’ ಆಗಿದ್ದಾರೆ. ಅವರ ಪ್ರೇರಣೆಯ ಕಥನದ ಹಿಂದೆ ಅವಮಾನದ ಘಟನೆಗಳೂ ಇವೆ. ‘ಸರಿಯಾಗಿ ಮೊಬೈಲ್ ಹಿಡಿದುಕೊಳ್ಳಲು ಕೂಡ ಆಗದವನು ಅದೇನು ವಿಡಿಯೊ ಮಾಡುತ್ತಾನೊ’ ಎನ್ನುವ ಮೂದಲಿಕೆಗಳನ್ನು ಎದುರಿಸಿದ್ದಾರೆ. ಅವರು ಪ್ರತಿ ವಿಡಿಯೊದ ಆರಂಭದಲ್ಲಿ ಹೇಳುವ ‘ನಮಸ್ತೆ, ಅಗ್ರಿಬ್ರ್ಯಾಂಡ್ ಯೂಟ್ಯೂಬ್ ಚಾನಲ್‌ಗೆ ಸ್ವಾಗತ’ ಎನ್ನುವ ಮಾತುಗಳನ್ನೇ ವ್ಯಂಗ್ಯವಾಗಿ ಹೇಳಿದವರೂ ಇದ್ದಾರೆ. ಇದಕ್ಕೆ ಕಿವಿಗೊಡದೆ ವಾರ್ಷಿಕವಾಗಿ ಕೋಟ್ಯಂತರ ರೂಪಾಯಿ ಆದಾಯ ಗಳಿಸುವ ರೈತರು, ಕೃಷಿ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಕೃಷಿ ಅಧಿಕಾರಿಗಳ ಸಂದರ್ಶನಗಳನ್ನು ಮಾಡಿ ಸಾಕಷ್ಟು ರೈತರ ಹೊಸ ಪ್ರಯೋಗಗಳಿಗೆ ತಮ್ಮ ಚಾನಲ್ ಮೂಲಕ ನೆರವಾಗಿದ್ದಾರೆ. ತಾವು ಮಾಡುವ ಕಾಯಕದ ಮೇಲೆ ಅತೀವ ಪ್ರೀತಿ ಇದ್ದಾಗ ಇದೆಲ್ಲ ಸಾಧ್ಯವಾಗುತ್ತದೆ ಎನ್ನುವುದಕ್ಕೆ ಏಳುಕೋಟೇಶ ಉದಾಹರಣೆಯಾಗಿದ್ದಾರೆ. ❖

ವಿಡಿಯೊ ಎಡಿಟಿಂಗ್ ಕಲಿತರು...


ಏಳುಕೋಟೇಶ ಅವರಿಗೆ ಎಡಿಟಿಂಗ್ ಗೊತ್ತಿರಲಿಲ್ಲ. ಐದಾರು ತಿಂಗಳ ಹಿಂದೆಯಷ್ಟೇ ಮಗನ ನೆರವಿನಿಂದ ವಿಡಿಯೊ ಎಡಿಟ್ ಮಾಡುವುದನ್ನು ಕಲಿತುಕೊಂಡಿದ್ದಾರೆ. ವಿಡಿಯೊ ರೆಕಾರ್ಡಿಂಗ್ ಮಾಡಲು ಇತ್ತೀಚೆಗಷ್ಟೇ ಸ್ಟಿಕ್ ಬಳಕೆ ಆರಂಭಿಸಿ ವೃತ್ತಿಪರ ಸ್ಪರ್ಶ ನೀಡಲು ಮುಂದಾಗಿದ್ದಾರೆ.

ಅಲ್ಪ ಕೃಷಿಭೂಮಿಯಲ್ಲಿ ಸಂಪೂರ್ಣವಾಗಿ ಲಾಭ ಗಳಿಸಲಾಗದೆ, ಪರ್ಯಾಯ ಆದಾಯ ಮೂಲವಿಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದ್ದ ಸಂಕಷ್ಟದ ಕಾಲದಲ್ಲಿ ಏಳುಕೋಟೇಶ ಅವರಿಗೆ ಯೂಟ್ಯೂಬ್ ಆದಾಯ ಗಳಿಕೆಗೆ ನೆರವಾಗಿದೆ. ತಮ್ಮ ಚಾನಲ್‌ನಿಂದಾಗಿ ಅವರಿಗೆ ತಿಂಗಳಿಗೆ ಕನಿಷ್ಠ 100 ಡಾಲರ್‌ನಷ್ಟು ಆದಾಯ ಬರುತ್ತಿದ್ದು, ಕೃಷಿಯ ಜೊತೆಗೆ ಕೃಷಿ ತಂತ್ರಜ್ಞಾನದ ಗ್ರಾಮೀಣ ರೈತರ ಸಂಶೋಧನೆಗಳ ವಿಡಿಯೊಗಳನ್ನು ತಯಾರಿಸುತ್ತಿರುವುದರಿಂದ ವೀಕ್ಷಕರ ಸಂಖ್ಯೆ ಹೆಚ್ಚಾಗುತ್ತಿದೆ.

ಇವರ ಫೇಸ್‌ಬುಕ್‌ನಲ್ಲಿ 42 ಸಾವಿರ ಜನ ಫಾಲೊವರ್ಸ್‌ಗಳಿದ್ದಾರೆ. ಸೋಷಿಯಲ್ ಮೀಡಿಯಾ ಕಾಲ ಇದಾಗಿದ್ದರಿಂದ ಇನ್‌ಸ್ಟಾಗ್ರಾಂನಲ್ಲಿಯೂ ಖಾತೆ ತೆರೆದರೆ ಅಲ್ಲಿಯೂ ಆದಾಯ ಗಳಿಸಲು ಸಾಧ್ಯವಾಗುತ್ತದೆ ಎನ್ನುವ ಸ್ನೇಹಿತರ ಸಲಹೆಯಂತೆ ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿಯೂ ಖಾತೆ ತೆರೆದಿದ್ದಾರೆ.

ಮೊದಲ ಓದು

ಯುದ್ಧೋನ್ಮಾದ ಜಗತ್ತಿಗೆ ವಾಸ್ತವ ಪಾಠ



ಕೃಷ್ಣಯ್ಯನ ಕೊಳಲು
ಲೇ: ಟಿ. ಗೋವಿಂದರಾಜು
ಪ್ರ: ವೀರಲೋಕ
ಸಂ: 7022122121


ಮಹಾಕಾವ್ಯ ‘ಮಹಾಭಾರತ’ ಪೌರಾಣಿಕ ಮತ್ತು ಜನಪದೀಯಗೊಂಡು ನಿತ್ಯ ಬದುಕಿಗೆ ನಿದರ್ಶನವಾಗಿದೆ. ಅಂತಹ ವಸ್ತುವಿನ ಮೇಲೆ ಶೋಧದ ನೋಟವನ್ನು ಬೀರುತ್ತಾ ಹೊಸ ಕಥನವೊಂದು ‘ಕೃಷ್ಣಯ್ಯನ ಕೊಳಲು’ ಕಾದಂಬರಿಯಲ್ಲಿ ಅನಾವರಣಗೊಂಡಿದೆ. ಇಲ್ಲಿ ಕೃಷ್ಣನೇ ಕೇಂದ್ರವಾದರೂ ಆತನನ್ನು ಜನಸಾಮಾನ್ಯಗೊಳಿಸುವ ಕಲೆಯ ನೈಪುಣ್ಯತೆಯನ್ನು ಕಾದಂಬರಿಕಾರ ಟಿ.ಗೋವಿಂದರಾಜು ತೋರಿಸಿದ್ದಾರೆ.

ದ್ವಾರಕೆ ಎಂಬ ರಾಜ ಆಸ್ಥಾನ ನಮ್ಮ ನೆನಪಿನ ಯಾವ ಗ್ರಾಮ ಭಾರತವೂ ಆಗಬಹುದು. ಕುರುಕ್ಷೇತ್ರ ನಂತರದ ‘ಭಾರತ ಕಥೆ’ ವಾಸ್ತವ ನೆಲೆಯಲ್ಲಿ ತೆರೆದುಕೊಳ್ಳುತ್ತದೆ. ಕೊಳಲಿನ ಅಧ್ಯಾತ್ಮಸ್ವರದ ಗಾಯನ ಯುದ್ಧ ವಿನಾಶದ ಪರಿಣಾಮವನ್ನೂ ಹೊರಹೊಮ್ಮಿಸುತ್ತದೆ.

ಕುರುಕ್ಷೇತ್ರದ ಕೃಷ್ಣಯ್ಯ ಇಲ್ಲಿ ‘ನೆನಪುಗಳ ಕಥನ’, ‘ನೊಂದವರ ಕಥನ’, ‘ಬೆಂದವರ ಕಥನ’, ‘ಕೊಳಲ ಗಾನದ ಕಥನ’, ‘ಲೋಕ–ಲೋಕೋತ್ತರ ಕಥನ’ ಎಂಬ ಐದು ಭಾಗದಲ್ಲಿ ಚಿತ್ರಿತನಾಗಿದ್ದಾನೆ. ಪ್ರತಿ ಅಧ್ಯಾಯವೂ ‘ಸ್ವರ’ ಎಂಬ ಉಪ ಅಧ್ಯಾಯಗಳನ್ನು ಒಳಗೊಂಡಿದೆ. ಅವು ಪುಟ್ಟ ಕಥೆಯನ್ನು ಹೇಳುತ್ತವೆ. ಯುದ್ಧೋನ್ಮಾದ ಜಗತ್ತಿನಲ್ಲಿ ಕುರುಕ್ಷೇತ್ರದ ನಂತರದ ಜೀವನ ಪಾಠ ಆಗಬೇಕು ಎನ್ನುವ ಕಾಳಜಿ ಇಲ್ಲಿ ವ್ಯಕ್ತವಾಗುತ್ತದೆ. ಕಾಳಗ ನಂತರದ ಸ್ಮಶಾನ ಚಿತ್ರಣ ಮನುಷ್ಯ ಕುಲದ ವಿನಾಶ ದಾಹವನ್ನು ತೋರಿಸುವಂತಿದೆ. ‘ಕೃಷ್ಣಯ್ಯನ ಕಡಗ ಕಂಕಣ ಭಾಗ್ಯ’ ವಿಭಾಗದಲ್ಲಿ ‘ಯುದ್ಧ ಸಂತ್ರಸ್ತರಿಗೆ, ಸೈನಿಕ ವಿಧವಾ ಪತ್ನಿಯರಿಗೆ ಕೃಷ್ಣಯ್ಯನು ಕೆಲವೊಂದು ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದನು. ಅಂಗ ಊನರಿಗೆ ಜೀವನ ನಿರ್ವಹಣಾ ಭತ್ಯೆಯ ವ್ಯವಸ್ಥೆ ಮಾಡಿದ್ದನು. ನಿರ್ಗತಿಕರಿಗೆ ವಸತಿ ಚಾವಡಿಗಳು, ಗಂಜಿ ಕೇಂದ್ರಗಳು, ಔಷಧಾಲಯಗಳು...’ ಹೀಗೆ ಚಿತ್ರಿಸುವ ಲೇಖಕ ಪ್ರಾಯದ ವಿಧವೆಯರ ಗೋಳನ್ನೂ ತರುತ್ತಾರೆ. ಜನಪದರ ನಂಬಿಕೆ ಮತ್ತು ದ್ವಾಪರದ ರಾಜಕೀಯವನ್ನು ಇವತ್ತಿನ ಕಾಲಘಟ್ಟಕ್ಕೆ ಹೋಲುವಂತೆ ಸಂಕಥನವನ್ನು ನಿರೂಪಿಸಿದ್ದಾರೆ.

ಪುಟ: 224 ₹275

ಬುಡಕಟ್ಟು ಸಮುದಾಯಗಳ ಆಕರ ಗ್ರಂಥ



ಅಸ್ಮಿತೆಯ ಹುಡುಕಾಟ
ಲೇ: ಮಲ್ಲಿಕಾರ್ಜುನ ಬಿ. ಮಾನ್ಪಡೆ
ಪ್ರ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಸಂ: 99162 02298


ನೆಲೆಯೇ ಇಲ್ಲದ ಅಲೆಮಾರಿಗಳ ಜೀವನಗಾಥೆ ಎಂಬುದು ರೋಚಕ ಮತ್ತು ಮನನೀಯವಾದದ್ದು. ಉಡಲು ಬಟ್ಟೆ ಇಲ್ಲದ, ತೊಡಲು ಕುಪ್ಪಸವಿಲ್ಲದ, ಬಹಿರ್ದೆಸೆಗೆ ಸ್ಥಳವಿಲ್ಲದ, ಊರವರ ದೃಷ್ಟಿಯಲ್ಲಿ ಪರದೇಶಿಗಳಂತೆ ರಸ್ತೆ ಪಕ್ಕದಲ್ಲಿ, ಪಾಳು ಬಿದ್ದ ಜಾಗದಲ್ಲಿ, ಕೊಳಚೆ ಪ್ರದೇಶಗಳಲ್ಲಿ ಜೀವನ ಸಾಗಿಸುತ್ತಿರುವ ಅಲೆಮಾರಿಗಳು ಭಿಕ್ಷೆಬೇಡಿ ಬದುಕುವ ಸ್ಥಿತಿಯಲ್ಲಿದ್ದಾರೆ. ಇಂತಹ ಸಮುದಾಯ ಮತ್ತು ಅವರ ಬವಣೆಗಳ ಕುರಿತು ಮಲ್ಲಿಕಾರ್ಜುನ ಬಿ. ಮಾನ್ಪಡೆ ಕೃತಿಯೊಂದನ್ನು ರಚಿಸಿದ್ದಾರೆ.

‘ಅಸ್ಮಿತೆಯ ಹುಡುಕಾಟ’ ಎಂಬ ಈ ಕೃತಿಯಲ್ಲಿ 40 ಸಮುದಾಯಗಳ ಕುರಿತು ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯಗಳಾದ ಬುಡ್ಗಜಂಗಮ, ಚೆನ್ನದಾಸರ್, ದಕ್ಕಲಿಗ, ಡೊಂಬರ, ಗಂಟಿಚೋರ, ಗೊಡ್ಡ, ಗೋಸಂಗಿ, ಹಳ್ಳೇರ್ ಸೇರಿದಂತೆ ಇತರ 18 ಸಮುದಾಯಗಳು, ಪರಿಶಿಷ್ಟ ಪಂಗಡಕ್ಕೆ ಸೇರಿದ ಚೆಂಚು, ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ ಸಮುದಾಯಗಳು, ಹಿಂದುಳಿದ ವರ್ಗಕ್ಕೆ ಸೇರಿದ ಬಾಜಿಗರ್, ಬೈಲ್ ಪತ್ತಾರ್, ಚಪ್ಪರಬಂದ್, ಧನಗರ್ ಗೌಳಿ ಇತರ ಸಮುದಾಯಗಳ ಕುರಿತು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಬ್ರಿಟಿಷರು ಕಾಡು ಕಡಿದು ಕೈಗಾರಿಕೆಗಳು, ರಸ್ತೆಗಳನ್ನು ನಿರ್ಮಿಸುವುದಕ್ಕೆ ಅಲೆಮಾರಿ, ಆದಿವಾಸಿಗಳು ಪ್ರತಿರೋಧ ಒಡ್ಡುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹುದೊಡ್ಡ ಕೊಡುಗೆ ನೀಡಿರುವ ಅಲೆಮಾರಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖಪಾತ್ರ ವಹಿಸಿದ್ದನ್ನು ಇಲ್ಲಿ ದಾಖಲಿಸಲಾಗಿದೆ. ಬುಡಕಟ್ಟು ಸಮುದಾಯಗಳ ಆಚಾರ, ವಿಚಾರ, ಜೀವನ ಕ್ರಮಗಳ ಕುರಿತು ಸಚಿತ್ರ ಸಹಿತ ಮಾಹಿತಿಯಿದೆ. ಕಲೆ, ಸಾಹಿತ್ಯ, ಸಂಗೀತ ಹಾಗೂ ಸಂಸ್ಕೃತಿಗೆ ಈ ಸಮುದಾಯಗಳು ನೀಡಿರುವ ಕೊಡುಗೆಯೂ ದಾಖಲಾಗಿದೆ. ಕೃತಿಯಲ್ಲಿ ಬುಡಕಟ್ಟು ಸಮುದಾಯದ ಅಸ್ಮಿತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸಂಶೋಧಕರಿಗೆ ಇದು ಆಕರ ಗ್ರಂಥದಂತಿದೆ.

ಪುಟ: 308 ₹356

ನೇತಾಜಿ ಹುಟ್ಟು–ಸಾವಿನ ಕಥೆ



ಮಹಾಕಾಲ
ಲೇ: ಜಿ ಬಿ ಹರೀಶ್
ಪ್ರ: ಅಯೋಧ್ಯ ಪಬ್ಲಿಕೇಷನ್ಸ್
ಸಂ: 9620916996

ಲೇಖಕ ಜಿ ಬಿ ಹರೀಶ್ ‘ವಿಕ್ರಮ’ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರೆಯುತ್ತಿದ್ದ ನೇತಾಜಿ ಬದುಕಿನ ಕಥೆಯೇ ‘ಮಹಾಕಾಲ’. ‘ಸೃಷ್ಟಿ’ ಮತ್ತು ‘ಸ್ಥಿತಿ’ ಎಂಬುದಾಗಿ ಎರಡು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಈ ಕೃತಿ ಸುಭಾಷ್‌ಚಂದ್ರ ಬೋಸ್‌ರ ಬದುಕಿನ ಕಥೆಯನ್ನು ಹೇಳುತ್ತಲೇ, ಆ ಕಾಲಘಟ್ಟದ ದೇಶದ ರಾಜಕೀಯ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಸ್ವತಂತ್ರ್ಯ ಹೋರಾಟದಲ್ಲಿ ಗಾಂಧಿಜೀ ಆಯ್ದುಕೊಂಡಿದ್ದು ಒಂದು ಮಾರ್ಗವಾದರೆ, ನೇತಾಜಿ ಆಯ್ದುಕೊಂಡಿದ್ದು ಇನ್ನೊಂದು ಮಾರ್ಗ. ಕೃತಿಯಲ್ಲಿ ಗಾಂಧಿ ಮತ್ತು ನೇತಾಜಿ ನಡುವಿನ ವೈಚಾರಿಕ ಸಂಘರ್ಷಗಳು ಅಲ್ಲಲ್ಲಿ ಕಾಣಸಿಗುತ್ತವೆ. ಕಾದಂಬರಿಯ ಮೊದಲ ಭಾಗ ‘ಸೃಷ್ಟಿ’ ಕಳೆದ ವರ್ಷ ಪ್ರಕಟಗೊಂಡಿತ್ತು. ಅದರಲ್ಲಿ ಬೋಸ್ ಅವರ ಬಾಲ್ಯದಿಂದ ವಿವಾಹದ ತನಕದ ಕಥೆಯಿತ್ತು. ಅಲ್ಲಿಂದ ಮುಂದುವರಿದು ಸ್ವಾತಂತ್ರ್ಯ ನಂತರವೂ ಬೋಸ್ ಅವರು ಬದುಕಿದ್ದರು ಎಂಬ ಭಾವ ಮೂಡಿಸುವ ತನಕದ ಕಥೆ ‘ಸ್ಥಿತಿ’ಯಲ್ಲಿದೆ.

ಇದೊಂದು ಐತಿಹಾಸಿಕ ಕಾದಂಬರಿ ಎಂಬುದು ಇಲ್ಲಿ ಉಲ್ಲೇಖಿಸಿರುವ ಅನೇಕ ಘಟನೆಗಳಿಂದ ಸ್ಪಷ್ಟವಾಗುತ್ತದೆ. ತಾವು ಈ ಕೃತಿಗೆ ಯಾವ ರೀತಿ ಸಂಶೋಧನೆ ನಡೆಸಿ, ಎಷ್ಟೆಲ್ಲ ಜಾಗಗಳನ್ನು ಸುತ್ತಾಡಿದ್ದೇನೆ ಎಂಬುದನ್ನು ಲೇಖಕ ಪ್ರಸ್ತಾವನೆಯಲ್ಲಿಯೇ ಹೇಳಿಕೊಂಡಿದ್ದಾರೆ. ಇದು ಬೋಸರ ಜೀವನಗಾಥೆಯಾದ್ದರಿಂದ ಬಹುತೇಕ ಕಡೆ ಪಾತ್ರಗಳ ಮೂಲಕ ಗಾಂಧಿಗಿಂತ ಬೋಸ್ ಅವರ ನಿಲುವನ್ನೇ ಲೇಖಕ ಸಮರ್ಥಿಸಿಕೊಂಡಿದ್ದಾರೆ.

‘ನೆಹರು ಕಾಲದಲ್ಲಿ ನೇತಾಜಿ ಬದುಕಿದ್ದೇ ಆಗಿದ್ದರೆ ಭಾರತದಲ್ಲಿ ಎಲ್ಲಿ ವಾಸವಿದ್ದರು?’ ಎಂದು ವಿಶೃಂಖಲಾ ಎನ್ನುವ ಪಾತ್ರ ಕೇಳುತ್ತದೆ.

‘ಇತಿಹಾಸಕಾರರು ಇದರ ಬಗ್ಗೆ ಮೌನ ಮುರಿದಿಲ್ಲ’ ಎಂದು ದತ್ತಾತ್ರೇಯ ಹೇಳುತ್ತಾನೆ. ಬೋಸರು ಸ್ವಾತಂತ್ರ್ಯ ನಂತರವೂ ಬದುಕಿದ್ದರೂ ಎಂಬ ಭಾವ ಮೂಡಿಸುವ ಅಧ್ಯಾಯಗಳು ಕೃತಿಯಲ್ಲಿದ್ದರೂ ಅದಕ್ಕೊಂದು ಸ್ಪಷ್ಟತೆ ನೀಡದೆ ಕಥೆ ಮುಗಿಯುತ್ತದೆ!

ಪುಟ: 360 ₹395

ಮನಸೂರೆಗೊಳ್ಳುವ ಶೆಕ್ವಾಗಾ

ಅಮೆರಿಕದ ಶೆಕ್ವಾಗಾ ಜಲಪಾತ ಹಾಗೂ ಅದಕ್ಕೆ ಸಮೀಪದಲ್ಲೇ ಇರುವ ವಾಟ್‌ಕಿನ್ಸ್ ಗ್ಲೆನ್ ಸ್ಟೇಟ್ ಪಾರ್ಕ್ ಪ್ರವಾಸಿಗರನ್ನು ಸೆಳೆಯುವ ತಾಣ. ಈ ಪ್ರದೇಶದಲ್ಲಿ ನೀರು ರಭಸವಾಗಿ ಹರಿದು ಉಂಟಾಗಿರುವ ಬಂಡೆಗಳಲ್ಲಿನ ವಿನ್ಯಾಸವೇ ಪ್ರಮುಖ ಆಕರ್ಷಣೆ. ಇಲ್ಲಿ ಹೆಜ್ಜೆ ಹಾಕಿದ ಲೇಖಕರ ಅನುಭವ ಇಲ್ಲಿದೆ...

• ಧಾರಿಣಿ ಮಾಯಾ


ಹೀಗಿದೆ ನೋಡಿ ನೀರು ಹರಿಯುವ ಜಾಗ


ಶೆಕ್ವಾಗಾ ಜಲಪಾತದ ವಿಹಂಗಮ ನೋಟ ಚಿತ್ರಗಳು: ಪ್ರೀತಮ್


ನೀರಿನ ರಭಸಕ್ಕೆ ಉಂಟಾದ ಶಿಲಾವಿನ್ಯಾಸ

ಶೆಕ್ವಾಗಾ (Sheh-kwa-ga) 156 ಅಡಿ ಎತ್ತರದ ಬೆರಗುಗೊಳಿಸುವಂಥ ಜಲಪಾತ. ಇದು ನ್ಯೂಯಾರ್ಕ್‌ನ ಮಾಂಟೋರ್ ಫಾಲ್ಸ್‌ನ ಹಳ್ಳಿಯಲ್ಲಿದೆ. ಇದನ್ನು ನೋಡಿದಾಗ ಯಾವುದೋ ಪೋಸ್ಟರ್ ನೋಡಿದ ಅನುಭವವಾಯಿತು.

ದಬದಬನೆ ಧುಮ್ಮಿಕ್ಕುವ ಈ ಜಲಪಾತ ಪ್ರಶಾಂತ ಕೊಳಕ್ಕಿಳಿದು ಮೆಲ್ ಸ್ಟ್ರೀಟ್ ಬ್ರಿಡ್ಜ್‌ನ ಮೂಲಕ ಹಾದು ಸೆನೆಕಾ ಸರೋವರ ಸೇರಿಕೊಳ್ಳುತ್ತದೆ. ಈ ಸೆನೆಕಾ ಸರೋವರದ ದಕ್ಷಿಣ ಭಾಗದಲ್ಲಿ ಹೆಸರಾಂತ ಫಿಂಗರ್ ಲೇಕ್ ಇದೆ. ಈ ಜಲಪಾತ ರಸ್ತೆಬದಿಯ ಆಕರ್ಷಣೀಯ ಕೇಂದ್ರವಾಗಿದೆ.

ಶೆಕ್ವಾಗಾದಿಂದ ಐದು ಮೈಲಿ ಪ್ರಯಾಣಿಸಿದಾಗ ಅಲ್ಲಿ ಮತ್ತೊಂದು ಪ್ರಕೃತಿಯ ಸೊಬಗು ಮನಸೂರೆಗೊಂಡಿತು. ದೂರದಿಂದಲೇ ಕಡಿದಾದ ಬಂಡೆಗಲ್ಲುಗಳ ಬೃಹತ್ ಗಾತ್ರ ನೋಡಿದಾಗ ಆಶ್ಚರ್ಯವಾಯಿತು. ತೊರೆನೊರೆಗಳ ರಭಸದಿಂದಾದ ಬಂಡೆಗಳ ಕೊರೆತ ಸಮ್ಮೋಹನಗೊಳಿಸುವಂತಿತ್ತು. ಈ ಸ್ಥಳವನ್ನು 'ವಾಟ್‌ಕಿನ್ಸ್ ಗ್ಲೆನ್' ಸ್ಟೇಟ್ ಪಾರ್ಕ್ ಎಂದು ಕರೆಯಲಾಗಿದೆ.

ಪ್ರಕೃತಿಯ ಆಕರ್ಷಣೆಗೆ ಒಳಗಾದ ವಿಕ್ಟೋರಿಯನ್ಸ್ ವಾಟ್‌ಕಿನ್ಸ್ ಗ್ಲೆನ್‌ನನ್ನು ರಮಣೀಯ ಪ್ರವಾಸಿ ಸ್ಥಳವಾಗಿ ಪರಿವರ್ತಿಸಿದರು. ಬರವಣಿಗೆಯಲ್ಲಿ ಹಿಡಿದಿಡಲು ಅಸಾಧ್ಯವಾದ ಸೌಂದರ್ಯದ ಗ್ಲೆನ್ ಕಡಿದಾದ ಕಲ್ಲುಗಳಿಂದ ಕೂಡಿವೆ. ಕೆಲವು ಮಾರ್ಗಗಳು, ಸೇತುವೆಗಳು ಹಾಗೂ ಕಲ್ಲಿನ ಮೆಟ್ಟಿಲುಗಳನ್ನು ನಂತರ ನಿರ್ಮಿಸಲಾಯಿತು. ಇಲ್ಲಿ ಸುಮಾರು 19 ಜಲಪಾತಗಳಿದ್ದು, ಸಾವಿರಾರು ವರ್ಷಗಳಿಂದ ಗ್ಲೆನ್ ಕ್ರೀಕ್‌ನಿಂದ ರಚನೆಯಾದ ಇಕ್ಕಟ್ಟಾದ ಕಡಿದಾದ ಮಾರ್ಗದಲ್ಲಿ ಎಷ್ಟು ಏರಿದರೂ ಕೊನೆಯಿಲ್ಲವೆನಿಸುವಷ್ಟು ಎತ್ತರಕ್ಕೆ ಸಾಗಲು (1.5 ಮೈಲು) ಸುಮಾರು 2 ಗಂಟೆಗಳು ಕ್ರಮಿಸಬೇಕಾಗುತ್ತದೆ. ಇದರಲ್ಲಿ ಹೈಕಿಂಗ್ ಮಾರ್ಗ ಇರುವುದರಿಂದ 'ಗಾರ್ಜ್ ಟ್ರೇಲ್' ಎನ್ನಲಾಗುತ್ತದೆ. ಹತ್ತುವ ಮಾರ್ಗದ ಮಧ್ಯದಲ್ಲಿನ ಒಂದು ಸುಂದರ ಜಲಪಾತದ ಬದಿಯಲ್ಲಿ ನಿಂತು ಹಾಲಿನಂತೆ ಚಿಮ್ಮುವ ನೀರಿನ ಮುತ್ತಿನಹನಿಗಳನ್ನು ಬೊಗಸೆಯಲ್ಲಿ ಹಿಡಿಯುವ ಪ್ರಯತ್ನ ವಿಫಲವಾದರೂ ಇದೊಂದು ಅವಿಸ್ಮರಣೀಯ ಅನುಭವ.

ವರ್ಷಗಳು ಉರುಳುತ್ತಿದ್ದ ಹಾಗೆ ಈ ಪ್ರಪಾತದಲ್ಲಿ ಕೊಂಚ ಬದಲಾವಣೆ ಕಂಡುಬಂದಿದೆ. ಈ ಜಲಪಾತ ಹಾಗೂ ಕೊರೆದ ಬಂಡೆಗಳ ವಿನ್ಯಾಸದ ದೃಶ್ಯಾವಳಿಯನ್ನು ಎಷ್ಟು ಕಣ್ತುಂಬಿಕೊಂಡರೂ ಸಾಲದು ಎನಿಸುತ್ತದೆ. ಆಯಾ ಜಾಗ ಕಂಡು ಬಂದ ರೀತಿಗೆ ಅನುಸಾರವಾಗಿ ರೈನ್ ಬೋ ಫಾಲ್ಸ್, ಫ್ರೌನಿಂಗ್ ಕ್ಲಿಫ್ ಎಂದು ಹೆಸರಿಸಲಾಗಿದೆ. ನೀರು ಹಾಗೂ ಹಿಮನದಿಗಳಿಂದ ರಚನೆಯಾದ ಈ ನೈಸರ್ಗಿಕ ಸೌಂದರ್ಯ ಅನನ್ಯ ಅನುಭವ ಕೊಡುತ್ತದೆ.

1871ರಲ್ಲಿ ಸಿವಿಲ್ ವಾರ್ ಹೀರೊ ಹಾಗೂ ಕಲಾವಿದ ಜೇಮ್ಸ್ ಹೋಪ್ ವಾಟ್‌ಕಿನ್ಸ್ ಗ್ಲೆನ್ಸ್‌ಗೆ ಭೇಟಿ ನೀಡಿದನು. ರೇನ್‌ಬೋ ಜಲಪಾತವನ್ನು ಚಿತ್ರಿಸಲು ಈತನನ್ನು ನಿಯೋಜಿಸಲಾಗಿತ್ತು. ಅವನ ಊರಾಗಿದ್ದ ಸ್ಕಾಟ್‌ಲ್ಯಾಂಡಿನಂತೆಯೇ ಇಲ್ಲಿನ ಭೂದೃಶ್ಯ ಅವನ ಮನಸೂರೆಗೊಂಡಿತ್ತು. ಕೆಲವು ವರ್ಷಗಳ ನಂತರ ಕುಟುಂಬ ಸಮೇತ ಗ್ಲೆನ್ಸ್‌ನಲ್ಲಿಯೇ ಮನೆ ಮಾಡಿಕೊಂಡು ಸ್ಟುಡಿಯೊವನ್ನೂ ಸ್ಥಾಪಿಸಿದನು. ಈತ ರಚಿಸಿದ ಅಂದವಾದ ಕಲಾಕೃತಿಗಳು ಪ್ರವಾಸಿಗರನ್ನು ಇಂದಿಗೂ ಆಕರ್ಷಿಸುತ್ತವೆ. ಈತನ ಕಲಾಕೃತಿಗಳು ಗೈಡ್ ಬುಕ್ಸ್ ಹಾಗೂ ಜಾಹೀರಾತುಗಳಲ್ಲಿ ಬಿತ್ತರವಾಗಿ, ವಾಟ್‌ಕಿನ್ಸ್ ಗ್ಲೆನ್ಸ್‌ನ ಮೋಹಕ ಸೌಂದರ್ಯ ಪ್ರಪಂಚಕ್ಕೆ ತೆರೆದುಕೊಂಡಿತು.

ಮಿಲ್ಸ್ ಇನ್ ದಿ ಗಲ್ಲಿ

1830ರಲ್ಲಿ ಸ್ಯಾಮ್ಯುಯೆಲ್‌ನ ವಾಟ್‌ಕಿನ್ಸ್ ಹಿಟ್ಟಿನ ಗಿರಣಿಯನ್ನು ಗಾರ್ಜ್‌ನ ಪ್ರವೇಶದ್ವಾರದಲ್ಲಿ ನಿರ್ಮಿಸಲಾಗಿತ್ತು. ಯೂರೋಪಿಯನ್ನರು ಈ ಸ್ಥಳಕ್ಕೆ ಬಂದಾಗ ಬದುಕಲು ಹೋರಾಟ ನಡೆಸಿದರು. ಈ ಜಾಗದಲ್ಲಿ ಏನೂ ಇಲ್ಲದ್ದರಿಂದ ಇದನ್ನು 'ಗ್ರೇಟ್ ಗಲ್ಲಿ' ಎಂಬ ಅಡ್ಡಹೆಸರಿನಿಂದ ಕರೆಯಲಾಗಿತ್ತು. ವಾಟ್‌ಕಿನ್ಸ್ ಕುಟುಂಬ 1794ರಲ್ಲಿ ಇಲ್ಲಿನ ಜಾಗವನ್ನು ಖರೀದಿಸಿ ಗಿರಣಿಯನ್ನು ಸ್ಥಾಪಿಸಿದನು. ಈ ಜಾಗವನ್ನು ಆನುವಂಶಿಕವಾಗಿ ಪಡೆದ ನಂತರ ಸ್ಯಾಮ್ಯುಯಲ್ ವಾಟ್‌ಕಿನ್ಸ್ ಎಂಬುವನು ಮೇಲ್ಭಾಗದ ಗಾರ್ಜ್ ಅನ್ನು ಅಣೆಕಟ್ಟುಗಳಿಂದ ಕಟ್ಟಿ, ತಳಹದಿಯಲ್ಲಿ ಹೊಸ ಗಿರಣಿಗಳನ್ನು ಕಟ್ಟಿದನು. 1842ರಲ್ಲಿ ಜೆಫರ್ಸನ್ ಪಟ್ಟಣವನ್ನು ಸ್ಥಾಪಿಸಿ, ನಂತರ ಅದನ್ನು ಗೌರವಾರ್ಥವಾಗಿ 'ವಾಟ್‌ಕಿನ್ಸ್ ಗ್ಲೆನ್' ಎಂದು ಮರುನಾಮಕರಣ ಮಾಡಲಾಯಿತು.

ಅಮೆರಿಕನ್ನರು, ನೈಸರ್ಗಿಕ ಸ್ಥಳಗಳನ್ನು ಸಂರಕ್ಷಿಸುವ ಮೌಲ್ಯವನ್ನು ಅರಿತು, ನವೆಂಬರ್ 1906ರಲ್ಲಿ ಸ್ಟೇಟ್ ಆಫ್ ನ್ಯೂಯಾರ್ಕ್ ವಾಟ್‌ಕಿನ್ಸ್ ಗ್ಲೆನ್ ಅನ್ನು ಖರೀದಿ ಮಾಡಿತು. ಇದೀಗ ಇದೊಂದು ಸ್ಟೇಟ್ ಪಾರ್ಕ್ ಆಗಿ ಸಾರ್ವಜನಿಕರಿಗೆ ಮುಕ್ತವಾಗಿದೆ. ಮುಂದಿನ ಹಲವಾರು ವರ್ಷಗಳಲ್ಲಿ ಅಗಲವಾದ ಮಾರ್ಗಗಳು, ಸೇತುವೆ, ರೈಲ್ಲಿಂಗ್, ದಕ್ಷಿಣ ಪ್ರವೇಶ, ಕ್ಯಾಂಪಿಂಗ್ ಸೌಲಭ್ಯಗಳಂಥ ಸುಧಾರಣೆಗಳಾಯಿತು. ರಾಜ್ಯ ನಿಧಿಯ ಸಹಾಯದಿಂದ ವಾಟ್‌ಕಿನ್ಸ್ ಗ್ಲೆನ್ ಅನ್ನು ಇಂದು 500 ಎಕರೆಗಳವರೆಗೆ ವಿಸ್ತರಿಸಲು ಸಾಧ್ಯವಾಗಿದೆ.

ಜುಲೈ 1935ರ ಪ್ರವಾಹದಿಂದ ವಾಟ್‌ಕಿನ್ಸ್ ಗ್ಲೆನ್‌ಗೆ ವ್ಯಾಪಕ ಹಾನಿ ಉಂಟಾಯಿತು. ಇದನ್ನು ಸಿಬ್ಬಂದಿ ದುರಸ್ತಿ ಮಾಡಿದರು. ಅವರ ಶ್ರಮದ ಸಾಕ್ಷಿಯಾಗಿ ಇದೀಗ ವಾಟ್‌ಕಿನ್ಸ್ ಗ್ಲೆನ್‌ನ ಸೊಬಗನ್ನು ನಾವು ಅನುಭವಿಸಬಹುದಾಗಿದೆ. ಚಳಿಗಾಲದಲ್ಲಿ ಈ ಕಮರಿಯನ್ನು ಜಾಡು ಮಂಜುಗಡ್ಡೆ ಹಾಗೂ ಅಪಾಯಕಾರಿ ಸ್ಥಿತಿಯ ಕಾರಣ ಮುಚ್ಚಲಾಗುತ್ತದೆ. ಈ ಜಾಗ ಇದೀಗ ಪ್ರವಾಸಿಗರಿಗಷ್ಟೇ ಅಲ್ಲ, ಚಾರಣಪ್ರಿಯರಿಗೂ ಆಪ್ತಜಾಗವಾಗಿದೆ. ❖


ಶ್ರೀ ನೆಲ್ಲಿತೀರ್ಥ ಸೋಮನಾಥೇಶ್ವರ ಗುಹಾಲಯದೊಳಗೆ ಸಾಗುತ್ತಿರುವ ಭಕ್ತರು ಚಿತ್ರಗಳು: ಫಕ್ರುದ್ದೀನ್ ಎಚ್.

ಸೋಜಿಗದ ಗುಹೆ ನೆಲ್ಲಿತೀರ್ಥ

• ಗಣೇಶ ಚಂದನಶಿವ

ಇಲ್ಲಿರುವ ಗುಹೆಯ ಪ್ರವೇಶಕ್ಕೂ ಮುನ್ನ ಪುಷ್ಕರಣಿ (ನಾಗ ಕೊಳ)ಯಲ್ಲಿ ಸ್ನಾನಮಾಡಬೇಕು. ಒದ್ದೆ ಬಟ್ಟೆಯಲ್ಲಿಯೇ ಸಾಗಬೇಕು. ಗುಹೆಯ ಪ್ರವೇಶಕ್ಕೆ ಅಣಿಯಾಗುತ್ತಿದ್ದಂತೆ ದೇವಸ್ಥಾನದವರೊಬ್ಬರು ಎಣ್ಣೆಯ ದೀಪ ಹಿಡಿದುಕೊಂಡು ಮುಂದೆ ಸಾಗುತ್ತಾರೆ. ಕಡಿದಾದ ಗುಹೆಯಲ್ಲಿ ಮೊದಲು ತೆವಳುತ್ತ ಸಾಗಬೇಕು. ಆ ನಂತರ ಅಂಬೆಗಾಲಿಡುತ್ತ ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಬಾಗಿ ನಡೆಯುತ್ತ, ಕೊನೆಗೆ ಎದ್ದು ನಿಂತು ಹೋಗಬೇಕು. ಮುಂದೆ ಮುಂದೆ ಸಾಗಿದಾಗ ಅಲ್ಲಿ ಸಿಗುವ 'ಸರೋವರ' ಬೆರಗುಗೊಳಿಸುತ್ತದೆ.

ಗುಹೆಯೊಳಗಿನ ಸರೋವರದ ಬಳಿ ಶಿವನ ಮೂರ್ತಿ ಇದೆ. ಸರೋವರದಲ್ಲಿ ಭಕ್ತರು ತೀರ್ಥಸ್ನಾನ ಮಾಡಿ, ಸರೋವರದ ನೀರಿನಿಂದ ಶಿವನ ಮೂರ್ತಿಗೆ ತಮ್ಮ ಕೈಯಿಂದಲೇ ನೀರು ಹಾಕಿ ಅಭಿಷೇಕ ಮಾಡುತ್ತಾರೆ. ಅದೇ ನೀರನ್ನು ತೀರ್ಥದಂತೆ ಸೇವಿಸುತ್ತಾರೆ.

ಹಸಿರು ಹೊದ್ದು ಮಲಗಿರುವ ಮನೋರಮೆಯ ಮಡಿಲಲ್ಲಿರುವ 'ನೆಲ್ಲಿತೀರ್ಥ' (ಶ್ರೀ ನೆಲ್ಲಿತೀರ್ಥ ಸೋಮನಾಥೇಶ್ವರ ಗುಹಾಲಯವು) ಪೌರಾಣಿಕ ಐತಿಹ್ಯ ಸಾರುವ ಪ್ರಮುಖ ಕ್ಷೇತ್ರ. ಇದು ಮಂಗಳೂರು ತಾಲ್ಲೂಕು ನೀರುಡೆ ಬಳಿಯಿದೆ. ಇದರ 'ಗುಹಾ ಯಾನ' ವಿಶಿಷ್ಟ ಅನುಭವ ಕಟ್ಟಿಕೊಡುತ್ತದೆ.

ದೇವಾಲಯದ ಬಲಕ್ಕೆ ಬೃಹತ್ ಮೊಸಳೆಯೊಂದು ಬಾಯ್ತೆರೆದು ಮಲಗಿದಂತೆ ಮೊದಲ ನೋಟಕ್ಕೆ ಕಾಣುವ ಗುಹೆಯು ಪ್ರಾಕೃತಿಕ ವಿಸ್ಮಯ. ಗುಹೆಯ ಒಳಗೆ ಹೋಗುವ ದಾರಿಯು ಸ್ವಲ್ಪ ಕಡಿದಾಗಿದ್ದರೂ, ತೀರ್ಥ ಸರೋವರ ಹಾಗೂ ಶಿವಲಿಂಗ ಇರುವ ಜಾಗವು ನೂರಾರು ಜನರು ಒಟ್ಟಿಗೆ ನಿಂತು ಆನಂದಿಸಬಹುದಾದಷ್ಟು ವಿಶಾಲ ಹಾಗೂ ಎತ್ತರವಿದೆ. ಗುಹೆಯು ಇಲ್ಲಿಗೆ ಕೊನೆಯಾಗುವುದಿಲ್ಲ. ಇನ್ನು ಬಹಳಷ್ಟು ಮುಂದುವರಿಯುತ್ತದಂತೆ. ಆದರೆ, ಸರೋವರದಿಂದಾಚೆಗೆ ಯಾರಿಗೂ ಹೋಗಲು ಅವಕಾಶ ಕೊಡುವುದಿಲ್ಲ.

ಈ ಕ್ಷೇತ್ರದ ಆನುವಂಶಿಕ ಅರ್ಚಕ ಮತ್ತು ವ್ಯವಸ್ಥಾಪನಾ ಕುಟುಂಬದ ಹರಿಪ್ರಸಾದ್ ನೆಲ್ಲಿತೀರ್ಥ ಅವರು ಇದರ ಮಹತ್ವದ ಕುರಿತು ಹೇಳುವುದು ಹೀಗೆ..' ಮಹರ್ಷಿ ಜಾಬಾಲಿಯ ತಪಸ್ಸಿನ ತಾಣವಾದ ಈ ಗುಹೆ ಒಳಭಾಗದಲ್ಲಿ ಸದಾ ನೆಲ್ಲಿಕಾಯಿ ಆಕಾರದಲ್ಲಿ ನೀರು ತೊಟ್ಟಿಕ್ಕುತ್ತಿರುತ್ತದೆ. ಹಾಗಾಗಿ ಈ ಗುಹಾ ದೇವಾಲಯಕ್ಕೆ ನೆಲ್ಲಿತೀರ್ಥ ಎಂಬ ಹೆಸರು ಬಂದಿದೆ. ನೈಸರ್ಗಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆಗೆ ಹೆಸರುವಾಸಿಯಾದ ಈ ದೇವಾಲಯದಲ್ಲಿ ಭಕ್ತರು ಆಧ್ಯಾತ್ಮಿಕತೆ ಮತ್ತು ಪ್ರಕೃತಿಯ ವೈಭವವನ್ನು ಏಕಕಾಲದಲ್ಲಿ ಆನಂದಿಸಬಹುದು'.

ಗುಹಾ ಪ್ರವೇಶ ವರ್ಷದಲ್ಲಿ ಆರು ತಿಂಗಳು ಮಾತ್ರ ಇದ್ದರೆ, ಗುಹೆಯ ಹೊರಗಿರುವ ಮುಖ್ಯ ದೇವಾಲಯದಲ್ಲಿ ಶ್ರೀ ಸೋಮನಾಥನ ಹಾಗೂ ಶ್ರೀ ಮಹಾಗಣಪತಿಯ ದೇವರ ನಿತ್ಯ ಪೂಜೆ, ಆರಾಧನೆ, ಉತ್ಸವಗಳು ನಿತ್ಯ ನಡೆಯುತ್ತವೆ. ಕರ್ನಾಟಕ ಸರ್ಕಾರವು ಇದನ್ನು ಪ್ರಮುಖ ಪ್ರವಾಸಿ ಕೇಂದ್ರವೆಂದು ಗುರುತಿಸಿದೆ. ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಟ್ಟಿದ್ದು, ಸಿ ವರ್ಗದ ದೇವಾಲಯ ಇದಾಗಿದೆ.

ಹೋಗುವುದು ಹೇಗೆ?: ಶ್ರೀ ನೆಲ್ಲಿತೀರ್ಥ ಸೋಮನಾಥೇಶ್ವರ ಗುಹಾಲಯವು (ನೀರುಡೆ, ಕೊಂಪದವು ಗ್ರಾಮ, ಮಂಗಳೂರು ತಾಲ್ಲೂಕು) ಮಂಗಳೂರಿನಿಂದ 25 ಕಿ.ಮೀ. ದೂರ ಇದೆ. ಬಜಪೆ (6ಕಿಮೀ), ಮುಚ್ಚೂರು (3ಕಿಮೀ), ಕಟೀಲು (10 ಕಿ.ಮೀ) ವರೆಗೆ ಬಸ್‌ನಲ್ಲಿ ಹೋಗಿ ಅಲ್ಲಿಂದ ಆಟೊಗಳಲ್ಲಿ ತೆರಳಬಹುದು. ಇಲ್ಲವೇ ಸ್ವಂತ ವಾಹನದಲ್ಲಿ ಸಾಗಬಹುದು. ಗುಹಾ ಪ್ರವೇಶವು ಅಕ್ಟೋಬರ್ 17ರಿಂದ ಆರಂಭಗೊಂಡಿದ್ದು, 2026ರ ಏಪ್ರಿಲ್ 14ರ ವರೆಗೆ (ನಿತ್ಯ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 12.30ರವರೆಗೆ) ಅವಕಾಶ ಇದೆ. ❖


ಗುಹಾಲಯದ ನಾಗ ಕೊಳದಲ್ಲಿ ಭಕ್ತರು


ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಮೊದಲೇ ಬಂದ ಗ್ರಾಹಕ!

majakoora@prajavani.co.in





ಗುಂಡ ನದಿ ದಡದಲ್ಲಿ ಕುಳಿತು ಮೀನಿಗಾಗಿ ಗಾಳ ಹಾಕಿದ್ದ. ಗಾಳ ಹಾಕಿದ ಒಂದೆರಡು ನಿಮಿಷಗಳಲ್ಲೇ ಎಳೆದ ಅನುಭವವಾಯಿತು. ಖುಷಿಯಿಂದಲೇ ಗಾಳವನ್ನು ಮೇಲಕ್ಕೆ ಎಳೆಯತೊಡಗಿದ. ಇದನ್ನು ಪಕ್ಕದ ಮರದಲ್ಲಿ ಕುಳಿತಿದ್ದ ಹಕ್ಕಿಯೊಂದು ನೋಡುತ್ತಿತ್ತು. 'ಕಷ್ಟಪಡದೇ ಇವತ್ತು ಮೀನೊಂದು ಹೊಟ್ಟೆ ಸೇರಲಿದೆ' ಎನ್ನುತ್ತಾ ಹಾರಿಬಂದು ಗಾಳದ ಕೋಲಿನ ಮೇಲೆ ಕುಳಿತು ಮೀನು ಮೇಲೆ ಬರುವುದನ್ನೇ ಕಾಯುತ್ತಿತ್ತು. ಇದನ್ನು ಕಂಡ ಗುಂಡ ಅವಾಕ್ಕಾದ.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಸೀರೆ	+	ಕೆರ	+	ಅ	=	
2	ಮಣ	+	ದರ	+	ಯಾ	=	
3	ಕಾಯ	+	ದಲ	+	ಉ	=	
4	ಬಾಲು	+	ಮುಗಿ	+	ಚ್ಚು	=	
5	ಕಾರ	+	ಹುಳಿ	+	ಋ	=	

ಶಬ್ದಾಟ: ಇಲ್ಲಿರುವ ಪದಕ್ಕೆ ಕೊಟ್ಟ ಅಕ್ಷರ ಸೇರಿಸಿ ಒಂದೇ ಪದ ಮಾಡಿ.
ರವಿಮಾನ + ದ್ದು = ________

ಕೊಂಚತಂತ್ರ

ಕಾಮನಬಿಲ್ಲಿನ ಬಣ್ಣಗಳನ್ನೂ ನೆನಪಿಡಲು ಈ ವಾಕ್ಯ ನೆನಪಿಡಿ.
ಊಟಕ್ಕೆ ನೇರವಾಗಿ ನೀನು ಹತ್ತು ಹಣ್ಣು ಕಿತ್ತರೆ ಕೆಂಡಕಾರನೆ?
ಊ = ಊದಲು, ನೇ = ನೇರಳೆ, ನೀ = ನೀಲಿ, ಹ = ಹಸಿರು, ಹ = ಹಳದಿ, ಕಿ = ಕಿತ್ತಳೆ, ಕೆ = ಕೆಂಪು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

2.ಇಲ್ಲಿ ಕೊಟ್ಟಿರುವ 'ಅನು' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಅ	ನು		
2	ಅ	ನು		
3	ಅ	ನು		
4	ಅ	ನು		
5	ಅ	ನು		

ಅಕ್ಷರ ಪಟ್ಟಿ

ಕ್ತ	ಗ	ರ	ದ	ನ
ಸ್ವಾ	ಷ್ಠಾ	ರ	ರಾ	ವಾ

2026ರ ಲಘು ಕ್ಯಾಲೆಂಡರ್ / ದಿಢೀರ್ ಕ್ಯಾಲೆಂಡರ್

ಯಾವ ಕ್ಯಾಲೆಂಡರ್ ಸಹಾಯವೂ ಇಲ್ಲದೆ 2026ನೇ ಸಾಲಿನ ಯಾವ ದಿನಾಂಕ ಯಾವ ವಾರವೆಂದು ಸುಲಭವಾಗಿ ಹೇಳುವ ತಂತ್ರವಿದು.

ಜ	ಫೆ	ಮಾ	ಏ	ಮೇ	ಜೂ	ಜು	ಆ	ಸೆ	ಅ	ನ	ಡಿ
3	6	6	2	4	0	2	5	1	3	6	1

ಇಲ್ಲಿ 12 ಅಂಕಿಗಳಿದ್ದು, ಕ್ರಮವಾಗಿ ಜನವರಿಯಿಂದ ಡಿಸೆಂಬರ್‌ವರೆಗಿನ ನೆನಪಿಡಬೇಕಾದ ಅಂಕಿಗಳು. ಇವುಗಳನ್ನು ಸುಲಭವಾಗಿ ಮೂರು ಅಂಕಿಗಳ ನಾಲ್ಕು ಗುಂಪು ಮಾಡಿ ನೆನಪಿಟ್ಟುಕೊಳ್ಳಿ. ಈಗ ನಿಮಗೆ ಬೇಕಾದ ತಿಂಗಳಿನ ತಾರೀಕನ್ನು 12 ತಿಂಗಳಿನ ಅಂಕಿಗೆ ಕೂಡಿಸಿ 7ರಿಂದ ಭಾಗಿಸಿ ಉಳಿಯುವ ಶೇಷವನ್ನು ಹೀಗೆ ಲೆಕ್ಕ ಹಾಕಿ. 1 ಶೇಷ = ಸೋಮವಾರ, 2–ಮಂಗಳವಾರ, 3–ಬುಧವಾರ, 4–ಗುರುವಾರ, 5–ಶುಕ್ರವಾರ, 6–ಶನಿವಾರ, 0–ರವಿವಾರ ಎಂದು ತಿಳಿಯುವುದು. ಒಂದು ವೇಳೆ ತಾರೀಕಿಗೆ ನೆನಪಿನ ಅಂಕಿ ಕೂಡಿದರೂ 7ರಿಂದ ಭಾಗವಾಗದಿದ್ದರೆ ಅದನ್ನೇ ಶೇಷವೆಂದು ತಿಳಿದು ವಾರ ಹೇಳುವುದು.

ಉದಾ: ಆಗಸ್ಟ್ 15 ಯಾವ ವಾರ?
ಆಗಸ್ಟ್ ತಿಂಗಳ ಕೆಳಗೆ ಇರುವ ಅಂಕಿ = 5
ಈಗ 15ಕ್ಕೆ (ದಿನಾಂಕ) 5 ಕೂಡಿಸಿ = 20

7ರಿಂದ ಭಾಗಿಸಿದಾಗ
7)20(2
14
______
6–ಶೇಷ ಅಂದರೆ ಶನಿವಾರ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಅಭಿಷೇಕ್ ಎಂ.
ಪುತ್ತೂರು


ಧೃತಿ ಎಚ್.
ಮೈಸೂರು


ಟಿ.ಸ್ನೇಹ
ಸಂಡೂರು


ವಿಸ್ಮಯ
ವಿಜಯಪುರ


ಯಜತ್ ಎಚ್.ಆರ್.
ಹೊಸಕೋಟೆ


ಧೃವಿಕಾ ರಾಜ್ ಜಿ.ಬಿ
ಶಿವಮೊಗ್ಗ

ಮೋಜಿನ ಇಂಗ್ಲಿಷ್

ರೋಮನ್ ಅಂಕಿ ನಿಮಗೆಷ್ಟು ಗೊತ್ತು?

ಇಲ್ಲಿ ಕೊಟ್ಟಿರುವ ಇಂಗ್ಲಿಷ್ ಅಕ್ಷರಗಳ ನಡುವೆ ಕನ್ನಡ ಅಂಕಿಗಳ ಬದಲಾಗಿ ನೀವು ಅವುಗಳಿಗೆ ಸಮಾನವಾಗಿರುವ ರೋಮನ್ ಅಂಕಿಗಳನ್ನು ತುಂಬಿದರೆ ಅವೇ ಇಂಗ್ಲಿಷ್ ಅಕ್ಷರಗಳಾಗಿ ಇಡೀ ಒಂದು ಅರ್ಥಬದ್ಧ ಇಂಗ್ಲಿಷ್ ಪದವಾಗುವುದು. ಪ್ರಯತ್ನಿಸಿ.

1	B	೧	G	=			
2	R	೪	E	R	=		
3	D	R	A	೬	D	=	
4	M	೯	=				
5	B	O	೧೦	E	R	=	
6	T	A	೧೧	=			
7	M	A	T	೧೦೦	H	=	
8	M	A	೫೦	T	=		

ಗಾದೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ

1.ಹೊಟ್ಟೆ ತುಂಬಿದ ಮೇಲೆ ಯಾವುದು ಮುಳ್ಳು ಮುಳ್ಳು?

2.ಯಾರು ಸತ್ತರೆ ಅಮವಾಸೆ ನಿಲ್ಲದು?

3.ಯಾವುದು ಬಿದ್ದರೆ ಆಳಿಗೊಂದು ಕಲ್ಲು?

4.ಯಾವುದಕ್ಕೆ ಹೋದ ಮಾನ ಆನೆ ಕೊಟ್ಟರೂ ಬರದು?

5.ಕದ್ದ ಹೋಳ್ಗಿ ಕೊಟ್ರ ಯಾವುದು ಇಲ್ಲ ಅಂದ್ರು?

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ಗುರು' ಪದಕ್ಕೆ ಅಕ್ಷರ ಪಟ್ಟಿಯಿಂದ ಎರಡು ಅಕ್ಷರ ಆಯ್ದು ತುಂಬಿದರೆ ನಾಲ್ಕಕ್ಷರಗಳ ಅರ್ಥಬದ್ಧ ಪದಗಳಾಗುತ್ತವೆ.

1	ಗು	ರು		
2	ಗು	ರು		
3	ಗು	ರು		
4	ಗು	ರು		
5	ಗು	ರು		
6	ಗು	ರು		
7	ಗು	ರು		
8	ಗು	ರು		

ಅಕ್ಷರ ಪಟ್ಟಿ

ನಾ	ದ
ವಾ	ಯೆ
ಗ್ರ	ಹ್ಮ
ತ	ಲ
ಬ್ರ	ರ
ದ	ಥ
ಪಾ	ರ
ಬ	ಹ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಮಾಯಾಬಜಾರ 2.ಶರಣಮೇಳ 3.ಗಮನಸೆಳೆ 4.ಗುಣಪಡಿಸು 5.ಸರಿಸುಮಾರು **ಹುಡುಕಾಟ:** ಚನ್ನವೀರಕಣವಿ
ಶಬ್ದಾಟ: ಜನಾನುರಾಗಿ **ತಾರ್ಕಿಕ ಗಣಿತ:** 49
ಜಾಣಪದ ಆಟ: 1.ಸಂಗತಿ 2.ಸಂಪ್ರತಿ 3.ಸಂಪದ 4.ಸಂಯೋಗ 5.ಸಂವಾದ 6.ಸಂದಣಿ 7.ಸಂಗೀತ 8.ಸಂಕುಲ 9.ಸಂದೇಶ 10.ಸಂಯಮ 11.ಅಂಗಡಿ 12.ಅಂಬಾರಿ 13.ಅಂಬಲಿ 14.ಅಂಜನ 15.ಅಂಕುರ 16.ಅಂಬರ 17.ಅಂಕಣ 18.ಅಂತರ 19.ಅಂಕುಶ 20.ಅಂದಿನ
ಮೋಜಿನ ಇಂಗ್ಲಿಷ್: 1.BAND 2.FIND 3.HAND 4.KIND 5.LAND 6.MIND 7.SAND 8.WIND

ಎರಡೇ ದಿನದಲ್ಲಿ ಗೆದ್ದ ಇಂಗ್ಲೆಂಡ್

ನಾಲ್ಕನೇ ಟೆಸ್ಟ್: ಆಸ್ಟ್ರೇಲಿಯಾ ನೆಲದಲ್ಲಿ ಗೆಲುವಿಗೆ 15 ವರ್ಷಗಳ ಕಾಯುವಿಕೆ ಅಂತ್ಯ

ಮೆಲ್ಬರ್ನ್ (ಎಪಿ/ ಎಎಫ್‌ಪಿ): ಇಂಗ್ಲೆಂಡ್ ತಂಡ ಸುಮಾರು 15 ವರ್ಷಗಳಲ್ಲಿ ಇದೇ ಮೊದಲ ಬಾರಿ ಆಸ್ಟ್ರೇಲಿಯಾ ನೆಲದಲ್ಲಿ ಟೆಸ್ಟ್ ಗೆಲುವನ್ನು ಸವಿಯಿತು. ಆಸ್ಟ್ರೇಲಿಯಾ ವಿರುದ್ಧ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ ತಂಡ ಶನಿವಾರ ಎರಡೇ ದಿನಗಳಲ್ಲಿ ನಾಲ್ಕು ವಿಕೆಟ್‌ಗಳಿಂದ ಜಯಿಸಿತು.

ಇದು ಆಸ್ಟ್ರೇಲಿಯಾದಲ್ಲಿ 18 ಪಂದ್ಯಗಳ ನಂತರ (16 ಸೋಲು, 2 ಡ್ರಾ) ಇಂಗ್ಲೆಂಡ್ ತಂಡ ಸಂಪಾದಿಸಿದ ಮೊದಲ ಗೆಲುವು ಸಹ. 5468 ದಿನಗಳ ನಂತರ ಆಸ್ಟ್ರೇಲಿಯಾದಲ್ಲಿ ಜಯ ಸಾಧಿಸಿದೆ. ಇದಕ್ಕಿಂತ ಮೊದಲು– 2011ರ ಜನವರಿಯಲ್ಲಿ ಇಂಗ್ಲೆಂಡ್ ಸಿಡ್ನಿಯಲ್ಲಿ ಟೆಸ್ಟ್ ಗೆದ್ದಿತ್ತು.

ಈ ಸರಣಿಯ ಮೊದಲ ಟೆಸ್ಟ್ ಸಹ ಎರಡು ದಿನಗಳ ಒಳಗೆ ಮುಗಿದಿತ್ತು. ಹೀಗಾಗಿ ಇಲ್ಲಿನ ಪಿಚ್ ಕೂಡ ಚರ್ಚೆಗೆ ಒಳಗಾಗಿದೆ.

ವಿಕೆಟ್ ನಷ್ಟವಿಲ್ಲದೇ ನಾಲ್ಕು ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಿದ ಆಸ್ಟ್ರೇಲಿಯಾ ಲಂಚ್ ನಂತರ ಎರಡನೇ ಇನಿಂಗ್ಸ್‌ನಲ್ಲಿ 132 ರನ್‌ಗಳಿಗೆ ಉರುಳಿತು. ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 42 ರನ್ ಮುನ್ನಡೆ ಪಡೆದಿದ್ದು, ಇಂಗ್ಲೆಂಡ್ ಗೆಲುವಿಗೆ 175 ರನ್ ಗಳಿಸಬೇಕಿತ್ತು.

ಆಕ್ರಮಣಕಾರಿಯಾಗಿ ಆಡಿದ ಇಂಗ್ಲೆಂಡ್ ನಾಲ್ಕು ವಿಕೆಟ್ ಉಳಿದಿರುವಂತೆ 32.2 ಓವರುಗಳಲ್ಲಿ 6 ವಿಕೆಟ್‌ಗೆ 178 ರನ್ ಬಾರಿಸಿ ಸಂಭ್ರಮಪಟ್ಟಿತು. ಸರಣಿ ಸೋಲಿನ ಅಂತರ 1–3ಕ್ಕೆ ಇಳಿಸಿತು. ಜೊತೆಗೆ ಮತ್ತೊಂದು 'ವೈಟ್‌ವಾಷ್' ಆತಂಕ ನಿವಾರಿಸಿತು.

ಜಾಕ್ ಕ್ರಾಲಿ (37) ಮತ್ತು ಬೆನ್ ಡಕೆಟ್ (34) ಅವರು ಮೊದಲ ವಿಕೆಟ್‌ಗೆ 7 ಓವರುಗಳಲ್ಲಿ 51 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಈ ಟೆಸ್ಟ್‌ಗೆ ಮರಳಿ ಅವಕಾಶ ಪಡೆದ ಜೇಕಬ್ ಬೆಥೆಲ್ 46 ಎಸೆತಗಳಲ್ಲಿ 40 ರನ್ ಬಾರಿಸಿ ತಾವು ಉಪಯುಕ್ತ ಆಟಗಾರ ಎಂಬುದನ್ನು ತೋರಿಸಿಕೊಟ್ಟರು. ಅವರು ಔಟಾಗುವ ಮೂಲಕ ಈ ಪಂದ್ಯ ಒಂದೂ ಅರ್ಧಶತಕವಿಲ್ಲದೇ ಕೊನೆಗೊಂಡಿತು.

ಬೆಥೆಲ್ ನಿರ್ಗಮನವಾದಾಗ ಮೊತ್ತ 4 ವಿಕೆಟ್‌ಗೆ 137. ನಂತರ ಇಂಗ್ಲೆಂಡ್ ಮತ್ತೆರಡು ವಿಕೆಟ್ ಬೇಗನೇ ಕಳೆದುಕೊಂಡಿತು. ಅನುಭವಿ ಜೋ ರೂಟ್ ಅವರು ಜ್ಯೇ ರಿಚರ್ಡ್‌ಸನ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ಗೆಲುವಿಗೆ 10 ರನ್ ಬೇಕಿದ್ದಾಗ ನಾಯಕ ಬೆನ್ ಸ್ಟೋಕ್ಸ್, ಸ್ಟಾರ್ಕ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿಗೆ ಕ್ಯಾಚಿತ್ತರು. ಆದರೆ ಹ್ಯಾರಿ ಬ್ರೂಕ್ (ಔಟಾಗದೇ 18) ತಂಡ ಗುರಿತಲುಪಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 152; ಇಂಗ್ಲೆಂಡ್: 110; **ಎರಡನೇ ಇನಿಂಗ್ಸ್:** ಆಸ್ಟ್ರೇಲಿಯಾ 34.3 ಓವರುಗಳಲ್ಲಿ 112 (ಟ್ರಾವಿಸ್ ಹೆಡ್ 46, ಸ್ಟೀವ್ ಸ್ಮಿತ್ ಔಟಾಗದೇ 25; ಬ್ರೈಡನ್ ಕಾರ್ಸ್ 34ಕ್ಕೆ4, ಜೋಶ್ ಟಂಗ್ 44ಕ್ಕೆ2, ಬೆನ್ ಸ್ಟೋಕ್ಸ್ 24ಕ್ಕೆ3); ಇಂಗ್ಲೆಂಡ್: 32.2 ಓವರುಗಳಲ್ಲಿ 6 ವಿಕೆಟ್‌ಗೆ 178 (ಜಾಕ್ ಕ್ರಾಲಿ 37, ಬೆನ್ ಡಕೆಟ್ 34, ಜೇಕಬ್ ಬೆಥೆಲ್ 40, ಹ್ಯಾರಿ ಬ್ರೂಕ್ ಔಟಾಗದೇ 18; ಸ್ಟಾರ್ಕ್ 55ಕ್ಕೆ2, ಜ್ಯೇ ರಿಚರ್ಡ್‌ಸನ್ 22ಕ್ಕೆ2, ಸ್ಕಾಟ್ ಬೋಲ್ಯಾಂಡ್ 29ಕ್ಕೆ2); ಪಂದ್ಯದ ಆಟಗಾರ:ಜೋಶ್ ಟಂಗ್ (45ಕ್ಕೆ5, 54ಕ್ಕೆ2).



ವಿಕೆಟ್ ಪಡೆದ ಜೋಶ್ ಟಂಗ್ ಅವರನ್ನು ಅಭಿನಂದಿಸಿದ ಇಂಗ್ಲೆಂಡ್ ತಂಡದ ಸಹ ಆಟಗಾರರು — ಎಎಫ್‌ಪಿ ಚಿತ್ರ

ಅತ್ಯಲ್ಪ ಅವಧಿ: ನಾಲ್ಕನೇ ಬಾರಿ

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಒಂದೇ (ದ್ವಿಪಕ್ಷೀಯ) ಸರಣಿಯಲ್ಲಿ ಒಂದಕ್ಕಿಂತ ಹೆಚ್ಚು ಪಂದ್ಯಗಳು ಎರಡು ದಿನಗಳ ಒಳಗೇ ಮುಗಿದಿರುವುದು ಇದು ನಾಲ್ಕನೇ ನಿದರ್ಶನವಾಗಿದೆ.

1888ರಲ್ಲಿ ಆಸ್ಟ್ರೇಲಿಯಾ ತಂಡದ ಇಂಗ್ಲೆಂಡ್ ಪ್ರವಾಸದಲ್ಲಿ, 1888–89 ಮತ್ತು 1895–96ರ ಇಂಗ್ಲೆಂಡ್ ತಂಡದ ದಕ್ಷಿಣ ಆಫ್ರಿಕಾ ಪ್ರವಾಸಗಳಲ್ಲೂ ಒಂದಕ್ಕಿಂತ ಹೆಚ್ಚು ಟೆಸ್ಟ್‌ಗಳು ಎರಡು ದಿನಗಳ ಒಳಗೇ ಮುಗಿದಿದ್ದವು.

ಎರಡು ದಿನಗಳಲ್ಲಿ ಒಟ್ಟು 1,86,000 ಪ್ರೇಕ್ಷಕರು ಹಾಜರಾಗಿದ್ದರು. ಪಂದ್ಯ ಬಲುಬೇಗ ಮುಗಿದಿದ್ದರಿಂದ ಕ್ರಿಕೆಟ್ ಆಸ್ಟ್ರೇಲಿಯಾಕ್ಕೆ ಆರ್ಥಿಕವಾಗಿ ಸಾಕಷ್ಟು ನಷ್ಟವಾಯಿತು.

'ಇದು ಟೆಸ್ಟ್ ಕ್ರಿಕೆಟ್‌ಗೆ ಸೂಕ್ತ ಮಾದರಿಯಲ್ಲ' ಎಂದು ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಪಿಚ್ ಬಗ್ಗೆ ಪ್ರತಿಕ್ರಿಯಿಸಿದರು.

ರವೀಶ್, ಅಜೇಶ್‌ಗೆ ಜಂಟಿ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ



ಮಂಗಳೂರು: ಅಗ್ರ ಶ್ರೇಯಾಂಕದ ಇಬ್ಬರು ನಿರಾಶೆ ಕಂಡ ರಾಷ್ಟ್ರ ಮಟ್ಟದ ಫಿಡೆ ರೇಟೆಡ್ ಮುಕ್ತ ಚೆಸ್ ಟೂರ್ನಿಯಲ್ಲಿ ಮಂಗಳೂರಿನ ರವೀಶ್ ಕೋಟೆ, ತಮಿಳುನಾಡಿನ ಪ್ರಸನ್ನ ಕಾರ್ತಿಕ್, ವೈಷ್ಣವ್ ಎಸ್ ಮತ್ತು ಕೇರಳದ ಅಜೇಶ್ ಆ್ಯಂಟನಿ ಅಗ್ರಸ್ಥಾನ ಹಂಚಿಕೊಂಡರು.

ಕರ್ನಾಟಕ ತುಳು ಅಕಾಡೆಮಿಯ ಅಮೃತ ಸೋಮೇಶ್ವರ ಸಭಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ನಾಲ್ಕನೇ ಸುತ್ತಿನ ಕೊನೆಗೆ ಈ ನಾಲ್ವರು ತಲಾ 4 ಪಾಯಿಂಟ್ ಕಲೆ ಹಾಕಿದ್ದಾರೆ. ಉತ್ತಮ ಟೈಬ್ರೇಕರ್ ಆಧಾರದಲ್ಲಿ ಅನೀಶ್ ಆ್ಯಂಟನಿ ಅಗ್ರಸ್ಥಾನದಲ್ಲಿದ್ದಾರೆ.

ಅಗ್ರ ಶ್ರೇಯಾಂಕಿತ ಕೇರಳದ ಮಾರ್ತಾಂಡನ್ ಶನಿವಾರ ಮೂರನೇ ಸುತ್ತಿನಲ್ಲಿ ಕರ್ನಾಟಕದ ವೆಂಕಟನಾಗ ಕಾರ್ತಿಕ್ ಜೊತೆ ಡ್ರಾ ಮಾಡಿಕೊಂಡರು. ನಾಲ್ಕನೇ ಸುತ್ತಿನಲ್ಲಿ ಮಹಾರಾಷ್ಟ್ರದ ವಿಹಾನ್ ಎದುರು ಗೆದ್ದು ಚೇತರಿಸಿಕೊಂಡರು. ಎರಡನೇ ಶ್ರೇಯಾಂಕದ ಬಾಲಸುಬ್ರಹ್ಮಣ್ಯಂ ರಾಮನಾಥನ್ (ತಮಿಳುನಾಡು) ಅವರಿಗೆ ಮೂರನೇ ಸುತ್ತಿನಲ್ಲಿ ಕರ್ನಾಟಕದ ಋಷಿಕೇಶ್ ಗಣಪತಿ ಸಮಬಲದ ಪೈಪೋಟಿ ನೀಡಿದರು. ನಾಲ್ಕನೇ ಸುತ್ತಿನಲ್ಲಿ ಜಾರ್ಖಂಡ್‌ನ ಅಭಿಜ್ಞಾ ಪಾಲ್ ವಿರುದ್ಧ ಗೆದ್ದು ಬಾಲಸುಬ್ರಹ್ಮಣ್ಯಂ ಗೆಲುವಿನ ಲಯಕ್ಕೆ ಮರಳಿದರು.

ಮಾರ್ತಾಂಡನ್ ಮತ್ತು ಬಾಲಸುಬ್ರಹ್ಮಣ್ಯಂ ಜೊತೆ ಒಟ್ಟು 14 ಮಂದಿ 3.5 ಪಾಯಿಂಟ್ ಗಳಿಸಿದ್ದಾರೆ. ಕರ್ನಾಟಕದ ಇಶಾಬ್ ಬನ್ಸಾಲಿ, ಸ್ತುತಿ ಪ್ರದೀಪ್, ರಾಘವ್ ಬೂಡೂರು, ಇಂದ್ರಜಿತ್ ಮಜುಂದಾರ್, ಸಂಜಯ್ ಸಿಂಧಿಯಾ ಮತ್ತು ಅರವಿಂದ ಬಿ.ಆರ್ ಈ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ನಾಲ್ಕನೇ ಸುತ್ತಿನ ಪ್ರಮುಖ ಫಲಿತಾಂಶಗಳು: ಪ್ರಸನ್ನ ಕಾರ್ತಿಕ್‌ಗೆ ವಿಹಾನ್ ಶೆಟ್ಟಿ ವಿರುದ್ಧ, ಅಜೇಶ್ ಆ್ಯಂಟನಿಗೆ ಶ್ರೀಹರಿ ವಿರುದ್ಧ, ರವೀಶ್ ಕೋಟೆಗೆ ವಿಶ್ವಜೀತ್ ವಿರುದ್ಧ, ವೈಷ್ಣವ್‌ಗೆ ದಿವ್ಯಶ್ರೀ ಕೊಲ್ಲಿಪಾರ ವಿರುದ್ಧ ಜಯ; ಜೋಶುವಾ ಟೆಲಿಸ್ ಮತ್ತು ಸ್ರಗ್ವಿದಾ, ಸ್ತುತಿ ಪ್ರದೀಪ್ ಮತ್ತು ಇಶಾನ್ ಭನ್ಸಾಲಿ, ಇಂದ್ರಜೀತ್ ಮತ್ತು ರಾಘವ್, ಅಶ್ವಿನಿ ನಾಯರ್ ಮತ್ತು ಜಾಯ್ ಲಾಸರ್ ನಡುವಿನ ಪಂದ್ಯ ಡ್ರಾ.

ಮುನ್ನಡೆಯಲ್ಲಿ ಹಂಪಿ, ಜಿನೆರ್



ಕೋನೇರು ಹಂಪಿ

ದೋಹಾ: ಭಾರತದ ಕೋನೇರು ಹಂಪಿ ಮತ್ತು ಚೀನಾದ ಝು ಜಿನೆರ್ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಎಂಟನೇ ಸುತ್ತಿನ ನಂತರ ತಲಾ ಆರೂವರೆ ಅಂಕಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ. ಭಾನುವಾರ ಟೂರ್ನಿಗೆ ಕೊನೆಯ ದಿನವಾಗಿದ್ದು, ಇನ್ನೂ ಮೂರು ಸುತ್ತುಗಳು ಉಳಿದಿವೆ.

ಹಂಪಿ ಮೊದಲ ಬೋರ್ಡ್‌ನಲ್ಲಿ ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಅವರನ್ನು ಸೋಲಿಸಿದರೆ, ಝು ಝಿನೆರ್ ನಾಲ್ಕನೇ ಬೋರ್ಡ್‌ನಲ್ಲಿ ಭಾರತದ ದಿವ್ಯಾ ದೇಶಮುಖ್ (5.5) ಅವರನ್ನು ಸೋಲಿಸಿದರು. ದ್ರೋಣವಲ್ಲಿ ಹಾರಿಕಾ (6 ಅಂಕ) ಪಂದ್ಯ ಡ್ರಾ ಆಯಿತು.

ಓಪನ್ ವಿಭಾಗದ ಒಂಬತ್ತನೇ ಸುತ್ತಿನ ನಂತರ ರಷ್ಯಾದ ವ್ಲಾಡಿಸ್ಲಾವ್ ಆರ್ಟೆಮಿವ್ ಮತ್ತು ಅಮೆರಿಕದ ಹ್ಯಾನ್ಸ್ ನೀಮನ್ (ತಲಾ 7.5) ಜಂಟಿಯಾಗಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ (7) ಇತರ ಮೂವರೊಂದಿಗೆ ಜಂಟಿಯಾಗಿ ಮೂರನೇ ಸ್ಥಾನದಲ್ಲಿದ್ದಾರೆ. ಭಾರತದ ಡಿ.ಗುಕೇಶ್ (6.5) 12 ಆಟಗಾರರೊಂದಿಗೆ ಜಂಟಿ ಏಳನೇ ಸ್ಥಾನದಲ್ಲಿದ್ದಾರೆ. ಇನ್ನೂ 4 ಸುತ್ತುಗಳು ಉಳಿದಿವೆ.

ಚೆಪ್ಪುಡಿರ, ಕುಲ್ಲೇಟಿರ ತಂಡಗಳಿಗೆ ಗೆಲುವು

ಮಡಿಕೇರಿ: ತಾಲ್ಲೂಕಿನ ಮೂರ್ನಾಡು ಗ್ರಾಮದ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ' ಟೂರ್ನಿಯಲ್ಲಿ ಶನಿವಾರ ಚೆಪ್ಪುಡಿರ, ಕುಲ್ಲೇಟಿರ ತಂಡಗಳು ಗೆಲುವು ಸಾಧಿಸಿದವು.

ಚೆಪ್ಪುಡಿರ ತಂಡವು 9-0 ಗೋಲುಗಳಿಂದ ಮುಕ್ಕಾಟಿರ ತಂಡದ ವಿರುದ್ಧ; ಪರದಂಡ 6-0ರಿಂದ ಕೋಣೇರಿರ ವಿರುದ್ಧ, ಕುಲ್ಲೇಟಿರ 5-0ರಿಂದ ಮಾಚಮಾಡ ವಿರುದ್ಧ ಹಾಗೂ ಕುಪ್ಪಂಡ 3-2ರಿಂದ ಕೂತಂಡ ವಿರುದ್ಧ ಜಯ ಗಳಿಸಿದವು.

ಇನ್ನಷ್ಟು ಕ್ರೀಡಾ ಸುದ್ದಿ 11

ಅಲುಗಾಡುತ್ತಿದೆಯೇ ಗಂಭೀರ್ ಕೋಚ್ ಸ್ಥಾನ?



ಜೈಪುರ (ಪಿಟಿಐ): ಭಾರತ ತಂಡದ ಕೋಚ್ ಆಗಿ ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ ಗೌತಮ್ ಗಂಭೀರ್ ಅವರ ದಾಖಲೆ ಪ್ರಭಾವಶಾಲಿಯಾಗಿದೆ. ಐಸಿಸಿ ಮತ್ತು ಎಸಿಸಿ ಟೂರ್ನಿಗಳ ಎರಡೂ ಮಾದರಿಗಳಲ್ಲಿ ಭಾರತ ಟ್ರೋಫಿಗಳನ್ನು ಗೆದ್ದಿದೆ. ಆದರೆ ಟೆಸ್ಟ್ ಮಾದರಿಗೆ ಬಂದಾಗ ಇದೇ ಮಾತನ್ನು ಹೇಳುವಂತಿಲ್ಲ.

ಗಂಭೀರ್ ಕೋಚ್ ಆಗಿರುವ ಅವಧಿಯಲ್ಲಿ 'ಸೇನಾ' (ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ) ತಂಡಗಳ ವಿರುದ್ಧ ಭಾರತ ಒಟ್ಟು 10 ಟೆಸ್ಟ್‌ಗಳನ್ನು ಸೋತಿದೆ.

ದಕ್ಷಿಣ ಆಫ್ರಿಕಾ ಎದುರು ಸರಣಿಯಲ್ಲಿ 0–2 ಕ್ಲೀನ್‌ಸ್ವೀಪ್‌ಗೆ ಒಳಗಾದ ನಂತರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಪ್ರಭಾವಶಾಲಿ ವ್ಯಕ್ತಿಯೊಬ್ಬರು ವಿ.ವಿ.ಎಸ್.ಲಕ್ಷ್ಮಣ್ ಅವರನ್ನು ಭೇಟಿಯಾಗಿ ಅನೌಪಚಾರಿಕ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ಅವರಿಗೆ ಟೆಸ್ಟ್ ತಂಡದ ಮುಖ್ಯ ಕೋಚ್ ಪಾತ್ರದಲ್ಲಿ ಆಸಕ್ತಿಯಿದೆಯೇ ಎಂದು ಕೇಳಿದ್ದಾರೆ. ಆದರೆ ಬ್ಯಾಟಿಂಗ್ ತಾರೆ ಲಕ್ಷ್ಮಣ್ ಅವರು ತಾವು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಹುದ್ದೆಯಲ್ಲಿ ಸಂತೃಪ್ತಿ ಕಾಣುತ್ತಿರುವುದಾಗಿ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

ಒಪ್ಪಂದದ ಪ್ರಕಾರ ಕೋಚ್ ಆಗಿ ಗಂಭೀರ್ ಅವರ ಅವಧಿ 2027ರ ಏಕದಿನ ವಿಶ್ವಕಪ್‌ವರೆಗೆ ಇದೆ. ಆದರೆ ಫೆಬ್ರುವರಿ– ಮಾರ್ಚ್‌ನಲ್ಲಿ ನಡೆಯುವ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ನೀಡುವ ಪ್ರದರ್ಶನದ ಅಧಾರದಲ್ಲಿ ಅವರ ಸ್ಥಾನ ಎಷ್ಟು ಸಮಯ ಮುಂದುವರಿಯಲಿದೆ ಎಂಬುದರ ನಿರ್ಧಾರವಾಗಲಿದೆ.

2025–27ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆವೃತ್ತಿಯಲ್ಲಿ ಭಾರತಕ್ಕೆ ಇನ್ನೂ ಒಂಬತ್ತು ಟೆಸ್ಟ್‌ಗಳನ್ನು ಆಡಲು ಇದೆ. ಗಂಭೀರ್ ಅಲ್ಲಿಯವರೆಗೆ 'ಟೆಸ್ಟ್' ತಂಡದ ಕೋಚ್ ಆಗಲು ಸೂಕ್ತ ವ್ಯಕ್ತಿಯೇ ಎಂಬ ಪ್ರಶ್ನೆ ಎದುರಾಗಿದೆ. ಬಿಸಿಸಿಐ ಪಡಸಾಲೆಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ.

ಭಾರತ ತಂಡವು ಮುಂದಿನ (2026) ಆಗಸ್ಟ್‌ನಲ್ಲಿ ಶ್ರೀಲಂಕಾ ವಿರುದ್ಧ ಎರಡು ಟೆಸ್ಟ್‌ಗಳನ್ನು ಆಡಲಿದೆ. ಅಕ್ಟೋಬರ್‌ನಲ್ಲಿ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಬೇಕಿದೆ. 2027ರ ಜನವರಿ–ಫೆಬ್ರುವರಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಐದು ಟೆಸ್ಟ್‌ಗಳ ಸರಣಿಗೆ ಆತಿಥ್ಯ ವಹಿಸಲಿದೆ.

'ಭಾರತ ಕ್ರಿಕೆಟ್‌ನ ಶಕ್ತಿಕೇಂದ್ರ ಗಂಭೀರ್ ಅವರ ಬೆನ್ನಿಗಿದೆ. ಭಾರತ ತಂಡವು ಟಿ20 ವಿಶ್ವಕಪ್ ಗೆದ್ದರೆ ಅಥವಾ ಕಡೇಪಕ್ಷ ಫೈನಲ್ ತಲುಪಿದರೆ, ಅವರು ತಮ್ಮ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ. ಆದರೆ ಅವರು ಟೆಸ್ಟ್ ತಂಡಕ್ಕೂ ಕೋಚ್ ಆಗಿ ಮುಂದುವರಿಯುತ್ತಾರೆಯೇ ಎಂಬುದು ಕುತೂಹಲದ ವಿಷಯ' ಎಂದು ಮಂಡಳಿಯ ಮೂಲವೊಂದು ಪಿಟಿಐಗೆ ತಿಳಿಸಿದೆ.

'ಸಾಕಷ್ಟು ಪರ್ಯಾಯಗಳು ಇಲ್ಲದಿರುವುದು ಗಂಭೀರ್ ಅವರಿಗೆ ಇರುವ ಒಂದು ಅನುಕೂಲ. ಸೀನಿಯರ್ ಟೆಸ್ಟ್ ತಂಡಕ್ಕೆ ಕೋಚ್ ಆಗಲು ಲಕ್ಷ್ಮಣ್ ಆಸಕ್ತಿ ತೋರಿಸಿಲ್ಲ' ಎಂದು ಮೂಲ ತಿಳಿಸಿದೆ.

ಇತ್ತೀಚೆಗೆ ಟಿ20 ವಿಶ್ವಕಪ್‌ಗೆ ಶುಭಮನ್ ಗಿಲ್ ಅವರನ್ನು ಕೈಬಿಡಲಾಗಿತ್ತು. ಇದರಲ್ಲಿ ಗಂಭೀರ್ ಕೈವಾಡ ಇದೆ ಎಂಬ ಮಾತುಗಳಿವೆ.